ಹುಬ್ಬಳ್ಳಿ
ಮಂಗಳವಾರ, 31 ಮಾರ್ಚ್ 2026
ಸಂಪುಟ 16, ಸಂಚಿಕೆ 6, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೌಕಾಪಡೆಗೆ 3 ಯುದ್ಧ ನೌಕೆ ಸೇರ್ಪಡೆ | 02
ಆರ್‌ವಿಕೆ ಶಾಲೆ ಲೋಕಾರ್ಪಣೆ | 03
ಒಳನುಸುಳುವಿಕೆ ಕೇವಲ ಚುನಾವಣಾ ವಿಚಾರವಲ್ಲ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪೂರ್ವ

ದಿನದ ಮಾತು

ನಮ್ಮ ಹಿಂದೇನಿದೆ ಮತ್ತು ಮುಂದೇನಿದೆ ಎಂಬವುಗಳು ನಮ್ಮ ಒಳಗೇನಿದೆ ಎಂಬುದರ ಮುಂದೆ ಸಣ್ಣ ಸಂಗತಿಗಳು.

▲ ಸುಭಾಷಿತ

ವಿದ್ಯುತ್ ಕ್ಷೇತ್ರದಲ್ಲಿ ಗೋಸಂಪತ್ತು

ಧರಣಿ ಮಂಡಲ

• ಕೆ.ಎನ್.ಶೈಲೇಶ್ ಹೊಳ್ಳ

• ಪುಟ 6

ಜವಾಬ್ದಾರಿಯನ್ನು ಹಕ್ಕು ಚಲಾಯಿಸಲು ಬಳಸಿದಾಗ...

▸ ಎಸ್. ಸುರೇಶ್‌ಕುಮಾರ್, ಶಾಸಕರು



ಐಪಿಎಲ್ ಟಿಕೆಟ್ ಕುರಿತು ವಿಧಾನಸಭೆಯಲ್ಲಿ ನಡೆದ ಇತ್ತೀಚಿನ ಚರ್ಚೆ ಮತ್ತು ಇದರಿಂದ ರಾಜ್ಯದಲ್ಲಿ ಜನಸಾಮಾನ್ಯರ ನಡುವೆ ಹೊಮ್ಮಿದ ಅಭಿಪ್ರಾಯ ಹಿನ್ನೆಲೆಯಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಓರ್ವ ಜನಪ್ರತಿನಿಧಿಯಾಗಿ ನಾನು ಐಪಿಎಲ್ ಟಿಕೆಟ್ ನಿರಾಕರಿಸಿದ್ದರ ಹಿಂದೆ ಯಾವುದೇ ವೈಯಕ್ತಿಕ ವೈಮನಸ್ಸಾಗಲೀ ಅಥವಾ ನನ್ನ ಅಹಂಕಾರವಾಗಲೀ ಇಲ್ಲ, ಅದು ನನ್ನ ಒಳಮನಸ್ಸಿನ ಒತ್ತಾಯ. ಒಂದು ರೀತಿಯಲ್ಲಿ ನನ್ನ ಸಾರ್ವಜನಿಕ ಜೀವನದ ನಂಬಿಕೆಗಳೊಂದಿಗೆ ನಾನೇ ನಡೆಸಿಕೊಂಡ ಒಂದು ಸಂಭಾಷಣೆಯ ಫಲ.

ಕಳೆದ ವರ್ಷ ಇದೇ ಐಪಿಎಲ್ ಗೆದ್ದ ಸಂದರ್ಭದಲ್ಲಿ,



ಬೆಂಗಳೂರಿನದೇ ಎಂದು ನಾವು ಅಂದುಕೊಳ್ಳುವ ಆರ್‌ಸಿಬಿ ಕಪ್ ಗೆದ್ದ ಸಂಭ್ರಮದಲ್ಲಿ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ದುರ್ಘಟನೆಯಲ್ಲಿ 11 ಜನ ಅಲ್ಲಿಗೆ ಹೋಗಿದ್ದ ಅಮಾಯಕರು ಅವರವರ ಮನೆಗೆ ಮರಳಲೇ ಇಲ್ಲ ಎನ್ನುವ ಆ ಒಂದು ಆಘಾತ ಭಾವ ನನ್ನೊಳಗೆ ಇನ್ನೂ ನೋವಾಗಿಯೇ ಉಳಿದಿದೆ. ರಾಜಕೀಯವೆಂದರೆ ಪ್ರಜೆಗಳ ಹಿತಕ್ಕಾಗಿ ನಾವು ಸೃಷ್ಟಿಸಬೇಕಾದ ಒಂದು ಸ್ವರ್ಗ ಎಂಬುದು ಹಳೆಯ ನಾಣ್ನುಡಿ. ಪ್ರಜಾಪ್ರಭುತ್ವದ ಅರ್ಥವೆಂದರೆ ಜನರಿಂದ, ಜನರಿಗಾಗಿ ಮತ್ತು ಜನರ ವ್ಯವಸ್ಥೆ. ಈ ಎರಡು ಹೇಳಿಕೆಗಳ ಹಿನ್ನೆಲೆಯಲ್ಲಿ,

> ಮೊನ್ನೆ ವಿಧಾನಸಭೆಯಲ್ಲಿ ನಮಗೆ ಐಪಿಎಲ್ ಟಿಕೆಟ್ ಬೇಕೇ ಬೇಕು, ನಮಗೆ ಕನಿಷ್ಠ 5 ಟಿಕೆಟ್ ಆದರೂ ಬೇಕು, ನಾವು ಕ್ಯೂನಲ್ಲಿ ನಿಲ್ಲುವುದು ಸಾಧ್ಯವಿಲ್ಲ, ನಮಗೆ ವಿಶೇಷ ಗ್ಯಾಲರಿ ಬೇಕು ಎನ್ನುವ ಮಾತುಗಳೆಲ್ಲಾ ವಿಧಾನಸಭೆ ಅಧಿವೇಶನದಲ್ಲಿ ಕೇಳಿ ಬಂದಾಗ ಅದನ್ನು ವೀಕ್ಷಿಸಿದವರಿಗೆ 'ಇವರೇನಾ ನಮ್ಮ ಮನೆ ಬಾಗಿಲಿಗೆ ಮತ ಯಾಚಿಸಲು ಬಂದವರು?' ಎಂಬ ಪ್ರಶ್ನೆ ಸುಳಿದಾಡಿದ್ದರೆ ಆಶ್ಚರ್ಯವಿಲ್ಲ.

ಜನಪ್ರತಿನಿಧಿಗೆ ಜನರಿಂದ ನಾನು ಭಿನ್ನ, ಜನರಿಂದ ನನ್ನದು ಮೇಲುಗಡೆಯ ಸ್ಥಾನ ಅಥವಾ ಜನರಿಂದ ನಾನು ಪ್ರತ್ಯೇಕ ಎಂಬ ಭಾವನೆಗೆ ಅವಕಾಶವೇ ಇರಕೂಡದು. ಪ್ರತಿ ಚುನಾಯಿತ ಪ್ರತಿನಿಧಿ ಜನಸಾಮಾನ್ಯರ ಒಂದು ಭಾಗ. ಚುನಾವಣೆಗೆ ಮುನ್ನ ಜನಪ್ರತಿನಿಧಿಯಾಗುವವರು ಹೇಗೆ ಮತದಾರರ ಒಲವನ್ನು ಪಡೆಯಲು ವರ್ತಿಸುತ್ತಾರೋ, ಹಾಗೆಯೇ ಚುನಾವಣೆಯ ನಂತರ ನಾಗರಿಕರ ದೃಷ್ಟಿಯಲ್ಲಿ ತಮ್ಮ ಗೌರವವನ್ನು ಉಳಿಸಿಕೊಳ್ಳಲು ನಡವಳಿಕೆಯನ್ನು ಕಾಪಿಟ್ಟುಕೊಳ್ಳಬೇಕು. ಜನಸಾಮಾನ್ಯರು ಬಯಸುವುದು ಚುನಾಯಿತ ಪ್ರತಿನಿಧಿಗಳು ಸರಳವಾಗಿರಬೇಕು, ಸಿಗುವಂತಿರಬೇಕು ಮತ್ತು ಜನಸಾಮಾನ್ಯರ ಜತೆ ಸದಾ ಬೆರೆಯುವಂತಿರಬೇಕು.

ಇದು ಯಾವಾಗ ಸಾಧ್ಯ ಎಂದರೆ, ಪ್ರಧಾನಮಂತ್ರಿ ಮೋದಿಯವರು ಹೇಳಿದಂತೆ ನಾವು ಸದಾ ಜನಸೇವಕರಂತೆ ವರ್ತಿಸಿದಾಗ ಮಾತ್ರ.

➡ ಪುಟ 4

ಲೋಕಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಣೆ

ನಕ್ಸಲ್‌ಮುಕ್ತ ಭಾರತ

• **ಹೊಸದಿಲ್ಲಿ:** ಮಾವೋವಾದಿಗಳ ಅಗ್ರ ಸಂಸ್ಥೆ ಹಾಗೂ ಕೇಂದ್ರೀಕೃತ ರಚನೆ ಬಹುತೇಕ ಸಂಪೂರ್ಣವಾಗಿ ಧ್ವಂಸಗೊಂಡಿರುವುದರಿಂದ ದೇಶವು ನಕ್ಸಲರಿಂದ ಮುಕ್ತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಲೋಕಸಭೆಯಲ್ಲಿ ಘೋಷಿಸಿದ್ದಾರೆ. ಜತೆಗೆ, ನಕ್ಸಲ್ ಹಿಂಸಾಚಾರದ ದೀರ್ಘ ಅವಧಿಯನ್ನು ಅಂತ್ಯಗೊಳಿಸಲು ಕಾಂಗ್ರೆಸ್ ಏನೂ ಮಾಡಲಿಲ್ಲ ಎಂದು ಆರೋಪಿಸಿದ್ದಾರೆ.




ಎಡಪಂಥೀಯ ಉಗ್ರವಾದದಿಂದ (ಎಲ್‌ಡಬ್ಲ್ಯುಇ) ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಕುರಿತ ಚರ್ಚೆಗೆ ಪ್ರತಿಕ್ರಿಯಿಸಿದ ಶಾ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹಲವು ಬಾರಿ ಸಾರ್ವಜನಿಕವಾಗಿ ನಕ್ಸಲ್ ಸಹಾನುಭೂತಿದಾರರೊಂದಿಗೆ ಕಾಣಿಸಿಕೊಂಡಿದ್ದಾರೆ ಮತ್ತು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಮಾವೋವಾದಿಗಳಿಗೆ 'ಸಹಾನುಭೂತಿ' ತೋರಿಸುವ ವಿಡಿಯೋಗಳನ್ನು ಪೋಸ್ಟ್ ಮಾಡಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ವಿರುದ್ಧ ತೀಕ್ಷ್ಣ ಟೀಕೆ ಮಾಡಿದ ಗೃಹ ಸಚಿವರು, ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು 1970ರ ದಶಕದಲ್ಲಿ ಅಂದಿನ ಏಕೀಕೃತ ಆಂಧ್ರಪ್ರದೇಶದಲ್ಲಿ ನಡೆದ ಚುನಾವಣೆಯಲ್ಲಿ ನಕ್ಸಲರ ಬೆಂಬಲವನ್ನು ಸ್ವೀಕರಿಸಿದ್ದರು ಮತ್ತು ಮಾವೋವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದರು ಎಂದು ಹೇಳಿದರು. ತಜ್ಞರು ಹೇಳುವಂತೆ, ಅಧಿಕಾರದಲ್ಲಿರುವವರ ಬೆಂಬಲವಿಲ್ಲದೆ ರೆಡ್ ಕಾರಿಡಾರ್ ನಿರ್ಮಾಣ ಸಾಧ್ಯವಿರಲಿಲ್ಲ ಎಂದು ಅವರು ಹೇಳಿದರು.

➡ ಪುಟ 4

ಎಐ ಚಿತ್ರ



ಕಾಂಗ್ರೆಸ್ ವಿಫಲ

ಕಾಂಗ್ರೆಸ್ ತನ್ನ 60 ವರ್ಷಗಳ ಆಡಳಿತದಲ್ಲಿ ಈ ಸಮಸ್ಯೆ ಪರಿಹರಿಸಲು ವಿಫಲವಾಗಿದೆ ಎಂದು ಶಾ ಆರೋಪಿಸಿದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ನಕ್ಸಲಿಸಂ ಅನ್ನು ರಾಷ್ಟ್ರೀಯ ಸವಾಲು ಎಂದು ಒಪ್ಪಿಕೊಂಡಿದ್ದರೂ, ಹಿಂದಿನ ಸರ್ಕಾರ ಬುಡಕಟ್ಟು ಜನರಿಗೆ ವಸತಿ, ನೀರು, ಶಾಲೆ ಅಥವಾ ಬ್ಯಾಂಕಿಂಗ್ ಸೌಲಭ್ಯಗಳಂತಹ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಿಲ್ಲ ಎಂದು ಅಮಿತ್ ಶಾ ಹೇಳಿದರು.

ಆಂಧ್ರ ಮಾವೋಮುಕ್ತ ರಾಜ್ಯ

• **ಅಮರಾವತಿ:** ಹಿರಿಯ ನಾಯಕ ಸಿ. ನಾರಾಯಣ ರಾವ್ ಸೇರಿದಂತೆ ಒಂಬತ್ತು ಮಾವೋವಾದಿಗಳು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಆಂಧ್ರಪ್ರದೇಶದ ಡಿಜಿಪಿ ಹರೀಶ್ ಕುಮಾರ್ ಗುಪ್ತಾ ಸೋಮವಾರ ತಿಳಿಸಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಎಡಪಂಥೀಯ ಉಗ್ರವಾದ(ಎಲ್‌ಡಬ್ಲ್ಯುಇ) ಕೊನೆಗೊಂಡಿದೆ ಎಂದೂ ಅವರು ಹೇಳಿದ್ದಾರೆ. ಕೇಂದ್ರ ಸರ್ಕಾರವು 2026ರ ಮಾ.31ರೊಳಗೆ ಎಲ್‌ಡಬ್ಲ್ಯುಇಯನ್ನು ಕೊನೆಗೊಳಿಸುವ ಭರವಸೆ ನೀಡಿದೆ. ರಾಜ್ಯ ಪೊಲೀಸರು ಸಹ ಈ ಗುರಿಯತ್ತ ತಮ್ಮ ಕೊಡುಗೆ ನೀಡಿದ್ದಾರೆ ಎಂದು ಡಿಜಿಪಿ ಹೇಳಿದ್ದಾರೆ. ಗುಪ್ತಾ ಅವರ ಪ್ರಕಾರ, ರಾವ್ ಆಂಧ್ರ, ಒಡಿಶಾ ಗಡಿಯ (ಎಒಬಿ) ಕಾರ್ಯದರ್ಶಿಯಾಗಿದ್ದ. ಮಾವೋವಾದಿ ಚಳವಳಿಯಲ್ಲಿ 36 ವರ್ಷ ಕಾರ್ಯನಿರ್ವಹಿಸಿದ್ದ.

ಒಪ್ಪಂದವಾಗದಿದ್ದರೆ ದಾಳಿ: ಟ್ರಂಪ್ ಎಚ್ಚರಿಕೆ

ಸಂಘರ್ಷ ತೀವ್ರತೆ ಹೆಚ್ಚಳ

• **ದುಬೈ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಇರಾನ್‌ಗೆ ಗಂಭೀರ ಎಚ್ಚರಿಕೆ ನೀಡಿದ್ದು, ಯುದ್ಧ ಕೊನೆಗೊಳಿಸುವ ಒಪ್ಪಂದ ತಕ್ಷಣ ಸಾಧಿಸಲಿಲ್ಲವಾದರೆ, ಇರಾನ್‌ನ ಇಂಧನ ಸಂಪನ್ಮೂಲಗಳು ಮತ್ತು ಮಹತ್ವದ ನಾಗರಿಕ ಮೂಲಸೌಕರ್ಯಗಳನ್ನು ಸಂಪೂರ್ಣವಾಗಿ ನಾಶ ಮಾಡುವುದಾಗಿ ಹೇಳಿದ್ದಾರೆ. ಇದರಲ್ಲಿ ವಿದ್ಯುತ್ ಘಟಕಗಳು, ತೈಲ ಮತ್ತು ಕುಡಿಯುವ ನೀರನ್ನು ಒದಗಿಸುವ ಘಟಕಗಳೂ ಸೇರಿವೆ.



ಈ ಮಧ್ಯೆ, ಮಧ್ಯಪ್ರಾಚ್ಯದಲ್ಲಿ ದಾಳಿಗಳು ಮುಂದುವರಿದಿದ್ದು, ಇರಾನ್ ಕುವೈತ್‌ನ ಪ್ರಮುಖ ನೀರು ಮತ್ತು ವಿದ್ಯುತ್ ಘಟಕದ ಮೇಲೆ ದಾಳಿ ನಡೆಸಿದೆ. ಇಸ್ರೇಲ್‌ನ ತೈಲ ಶುದ್ಧೀಕರಣ ಘಟಕವೂ ದಾಳಿಗೆ ಗುರಿಯಾಗಿದೆ. ಪ್ರತಿಯಾಗಿ, ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ಹೊಸ ದಾಳಿಗಳ ಪ್ರಾರಂಭಿಸಿದ್ದು, ಯುದ್ಧಕ್ಕೆ ಅಂತ್ಯ ಕಾಣುವ ಲಕ್ಷಣಗಳು ಕಾಣಿಸುತ್ತಿಲ್ಲ. ಟ್ರಂಪ್ ಸಾಮಾಜಿಕ ಮಾಧ್ಯಮದ ಮೂಲಕ ಚರ್ಚೆಗಳು ಉತ್ತಮವಾಗಿ ಸಾಗುತ್ತಿವೆ ಎಂದು ಹೇಳಿದರೂ, ಅವರು ತಮ್ಮ ಕಠಿಣ ನಿಲುವನ್ನು ಸ್ಪಷ್ಟಪಡಿಸಿದರು. ಒಪ್ಪಂದ ಶೀಘ್ರವಾಗದಿದ್ದರೆ ಮತ್ತು ಹಾರ್ಮುಜ್ ಜಲಸಂಧಿ ತಕ್ಷಣ ತೆರೆಯದಿದ್ದರೆ, ನಾವು ಇರಾನ್‌ನ ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ.

➡ ಪುಟ 4



ಯುದ್ಧದ ದಿಕ್ಕು ಇನ್ನೂ ಅನಿಶ್ಚಿತ

ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವಿನ ಈ ಸಂಘರ್ಷವು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ರಾಜತಾಂತ್ರಿಕ ಪ್ರಯತ್ನಗಳು ಯಶಸ್ವಿಯಾಗುತ್ತವೆಯೋ ಅಥವಾ ಇನ್ನಷ್ಟು ಹಿಂಸಾಚಾರ ಉಂಟಾಗುತ್ತದೆಯೋ ಎಂಬುದು ಸ್ಪಷ್ಟವಾಗಿಲ್ಲ. ಗಲ್ಫ್ ಪ್ರದೇಶದ ಸ್ಥಿರತೆ, ಜಾಗತಿಕ ಇಂಧನ ಸರಬರಾಜು ಮತ್ತು ಮಾನವೀಯ ಪರಿಸ್ಥಿತಿಗಳು ಎಲ್ಲವೂ ಅಪಾಯದಲ್ಲಿವೆ. ಈ ಸಂದರ್ಭದಲ್ಲಿ, ಶಾಂತಿ ಒಪ್ಪಂದದ ಅಗತ್ಯತೆ ಇನ್ನಷ್ಟು ತುರ್ತಾಗಿದೆ.

ಹಾರ್ಮುಜ್ ತೆರೆಯದಿದ್ದರೆ ಇರಾನ್ ಧ್ವಂಸ!

• ಪುಟ 2

ಕುವೈತ್ ನೀರು ಸ್ಥಾವರ ಮೇಲಿನ ದಾಳಿಯಲ್ಲಿ ಭಾರತೀಯ ಸಾವು

• ಪುಟ 2

ಕಿರುಸುದ್ದಿ

ಹತ್ತು ವರ್ಷದಿಂದ ಸ್ವಂತ ಮಗಳನ್ನೇ ಗೃಹಬಂಧನದಲ್ಲಿ ಇಟ್ಟಿದ್ದ ಪೋಷಕರು!

• **ಬೆಳಗಾವಿ:** ಸ್ವಂತ ಮಗಳ ಕೈಗಳಿಗೆ ಹತ್ತು ವರ್ಷಗಳಿಂದ ಸರಪಳಿ ಹಾಕಿ ಗೃಹಬಂಧನದಲ್ಲಿಟ್ಟ ಅಮಾನವೀಯ ಘಟನೆ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದ್ದು, ನಾಗರಿಕ ಸಮಾಜವೇ ತಲೆ ತಗ್ಗಿಸುವಂತೆ ಮಾಡಿದೆ. ಬೆಳಗಾವಿ ಜಿಲ್ಲೆಯ ಕಾಗವಾಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇದೀಗ ಬೆಳಕಿಗೆ ಬಂದಿದೆ. ಬಾನಾಮತಿ ಭಯದಿಂದ ಹೆತ್ತ ಮಗಳನ್ನೇ ತಂದೆ ಸಿದ್ರಾಯ ಗೃಹ ಬಂಧನದಲ್ಲಿಟ್ಟಿದ್ದಾರೆ. 10 ವರ್ಷಗಳ ಹಿಂದೆ ಮಗಳು ಸ್ನೇಹಾ ಎಲ್ಲರಂತೆ ಕಾಲೇಜಿಗೆ ಹೋಗುತ್ತಿದ್ದಳು. ಕಾಲೇಜಿಗೆ ಹೋಗುತ್ತಿದ್ದಾಗ ಸ್ನೇಹಾಗೆ ಯಾರೋ ಬಾನಾಮತಿ ಮಾಡಿಸಿದ್ದಾರೆ. ಅಂದಿನಿಂದ ಸ್ನೇಹಾ ವಿಚಿತ್ರವಾಗಿ ಡ್ಯಾನ್ಸ್ ಮಾಡೋದು, ಚಿತ್ರ ವಿಚಿತ್ರವಾಗಿ ವರ್ತಿಸಲಾರಂಭಿಸಿದ್ದಾಳೆ. ಇದರಿಂದಾಗಿ ಮಗಳು ಹುಚ್ಚಿಯಂತೆ ವರ್ತಿಸುತ್ತಿರುವುದರನ್ನು ತಡೆಯಲು ಸಾಧ್ಯವಾಗುತ್ತಿಲ್ಲ, ಹಾಗಾಗಿ ಆಕೆಯನ್ನು ಗೃಹ ಬಂಧನದಲ್ಲಿ ಇರಿಸಲಾಗಿದೆ ಎಂದು ಆಕೆಯ ತಂದೆ ತಿಳಿಸಿದ್ದಾರೆ.

➡ ಪುಟ 4

ಲಷ್ಕರ್ ಶಂಕಿತ ಉಗ್ರ ಸೆರೆ, ತಪ್ಪಿದ ದುರಂತ

• **ಹೊಸದಿಲ್ಲಿ:** ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಗುಂಪಿನ ಬಾಂಗ್ಲಾದೇಶದ ಘಟಕವನ್ನು ಬೇಧಿಸಿರುವ ದಿಲ್ಲಿ ಪೊಲೀಸರು, ಎಲ್‌ಇಟಿ ಕಮಾಂಡರ್ ಶಬ್ಬೀರ್ ಅಹ್ಮದ್ ಲೋನ್‌ನನ್ನು ಬಂಧಿಸಿದ್ದಾರೆ. ಆತನನ್ನು ಐದು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

• ಪುಟ 2

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನುಗ್ಗಿದ ಕರಡಿ ಸೆರೆ

• ಪುಟ 3

ನಾಳೆ ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ ಮುರ್ಮು

• ಪುಟ 3

ಸೇತುವೆಗೆ ಬಿದ್ದ ಬಸ್: 30 ಪ್ರಯಾಣಿಕರಿಗೆ ಗಾಯ

• ಪುಟ 3

ಸ್ಟಾಲಿನ್, ವಿಜಯ್, ಸುವೇಂದು ಅಧಿಕಾರಿ ನಾಮಪತ್ರ ಸಲ್ಲಿಕೆ

• ಪುಟ 2

ಬಾಗಲಕೋಟೆಯಲ್ಲಿ ಸಿದ್ದರಾಮಯ್ಯ ಭರವಸೆ

ಕೇಂದ್ರದ ಸಮ್ಮತಿ ಬಳಿಕ ಆಲಮಟ್ಟಿ ಎತ್ತರ ಹೆಚ್ಚಳ



• **ಬಾಗಲಕೋಟೆ:** ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದರೆ ಮಾತ್ರ ಆಲಮಟ್ಟಿ ಜಲಾಶಯ ಎತ್ತರಿಸಲು ಸಾಧ್ಯವಿದೆ. ನೋಟಿಫಿಕೇಶನ್ ಆದ ತಕ್ಷಣವೇ ಆಲಮಟ್ಟಿ ಜಲಾಶಯ ಎತ್ತರಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಲಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ 4 ವರ್ಷ ಆಡಳಿತ ನಡೆಸಿದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆಗೆ 3ನೇ ಹಂತದ ತೀರ್ಪು ಬಂದು 13 ವರ್ಷ ಕಳೆದರೂ ಯಡಿಯೂರಪ್ಪ, ಬೊಮ್ಮಾಯಿ ಸಿಎಂ ಇದ್ದಾಗ ಪ್ರಯತ್ನ ಮಾಡಲಿಲ್ಲ.

➡ ಪುಟ 4

ಗ್ಯಾರಂಟಿ ಮುಂದುವರಿಕೆಗೆ ಕಾಂಗ್ರೆಸ್ ಬೆಂಬಲಿಸಿ

• **ಬಾಗಲಕೋಟೆ:** ಪಂಚ ಗ್ಯಾರಂಟಿ ಯೋಜನೆಯಲ್ಲಿ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದು ಮಹಿಳೆಯರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೆ ಇನ್ನೂ 2 ವರ್ಷ ಗ್ಯಾರಂಟಿ ಯೋಜನೆ ಮುಂದುವರಿಯಲಿವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

➡ ಪುಟ 4



ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪಾದಯಾತ್ರೆ ಮೂಲಕ ಮತಯಾಚನೆ

ಬಿಜೆಪಿ ಬೆಂಬಲ ಕಂಡು ಕಾಂಗ್ರೆಸ್ ಅತಂತ್ರ: ಬಿವೈವಿ

• **ಬಾಗಲಕೋಟೆ:** ಸಿಎಂ ಅಲ್ಲದೆ ಯಾರೇ ಬಂದರೂ ಉಪಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಬಹು ಅಂತರದಲ್ಲಿ ಗೆಲ್ಲಲಿದೆ. ಕಾಂಗ್ರೆಸ್ ಮತ ಬ್ಯಾಂಕ್ ಕುತಂತ್ರ ಅರ್ಥ ಮಾಡಿಕೊಂಡ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ನಗರದ ದೀಪಮ್ ಕಾಲೋನಿಯ ಸತ್ಯನಾರಾಯಣ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ವಾರ್ಡ್ ನಂ.1 ಮತ್ತು 3ರಲ್ಲಿ ವೀರಣ್ಣ ಚರಂತಿಮಠ ಅವರ ಪರವಾಗಿ ಮನೆ ಮನೆಗಳಿಗೆ ತೆರಳಿ ಮತಯಾಚನೆ ಮಾಡಿದರು.

➡ ಪುಟ 4



> ಮತದಾರರು ಕಾಂಗ್ರೆಸ್ ದುರಾಡಳಿತಕ್ಕೆ ಸಂಪೂರ್ಣವಾಗಿ ಬೇಸತ್ತಿದ್ದು, ಇದನ್ನು ಅರ್ಥೈಸಿಕೊಂಡ ಮುಖ್ಯಮಂತ್ರಿಗಳು ಸೋಲುವ ಆತಂಕದಿಂದ ಹಳ್ಳಿಗಳಲ್ಲೂ ವಾಸ್ತವ್ಯ ಹೂಡಲು ಹೊರಟಿದ್ದಾರೆ.
>
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಎಲ್ಲವೂ ನಾಳೆಯಿಂದಲೇ...

ದೇಶದ ಮೊದಲ ಡಿಜಿಟಲ್ ಜನಗಣತಿ

• **ಹೊಸದಿಲ್ಲಿ:** ಜನಸಂಖ್ಯಾ ಮಾಹಿತಿ ಸಂಗ್ರಹ ಮತ್ತು ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಿ, ಭಾರತ ತನ್ನ ಮೊದಲ ಸಂಪೂರ್ಣ ಡಿಜಿಟಲ್ ಜನಗಣತಿಯನ್ನು ಆರಂಭಿಸಲು ಸಜ್ಜಾಗಿದೆ. ಮೊದಲ ಹಂತವಾದ ಮನೆಗಳ ಪಟ್ಟಿ ಹಾಗೂ ವಸತಿ ಗಣತಿ ಏ.1ರಿಂದ ಕರ್ನಾಟಕ ಸೇರಿ ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆರಂಭವಾಗಲಿದೆ. ನಾಗರಿಕರು ತಮ್ಮ ಮನೆ, ಜೀವನ ಪರಿಸ್ಥಿತಿ ಮತ್ತು ಮೂಲಭೂತ ಸೌಲಭ್ಯಗಳ ಕುರಿತು 33 ವಿವರವಾದ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ, ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತವು ವಸತಿ ವಿವರಗಳ ಮೇಲೆ ಕೇಂದ್ರೀಕರಿಸಲಿದೆ ಎಂದರು.

➡ ಪುಟ 4

ವೈಯಕ್ತಿಕ ಮಾಹಿತಿ ಸುಭದ್ರ

ಜನಗಣತಿದಾರರಿಗೆ ಸರಿಯಾದ ಮಾಹಿತಿ ನೀಡಿ ಸಹಕರಿಸಿ. ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ರಹಸ್ಯವಾಗಿಡಲಾಗುವುದು. ಯಾವ ಕಾರಣಕ್ಕೂ ಸಾಕ್ಷ್ಯವಾಗಿ ಅಥವಾ ಯಾವುದೇ ಸ್ಕೀಮ್‌ನ ಪ್ರಯೋಜನಕ್ಕಾಗಿ ಬಳಸುವುದು ಅಸಾಧ್ಯ ಎಂದು ಮೃತ್ಯುಂಜಯ್ ಸ್ಪಷ್ಟಪಡಿಸಿದರು.

➡ ಪುಟ 4



ಸಹಜೀವನ ನಡೆಸುವವರೂ ವಿವಾಹಿತ ದಂಪತಿ!

ಸಹ-ಜೀವನ(ಲೀವ್-ಇನ್) ನಡೆಸುತ್ತಿರುವ ದಂಪತಿಗಳು ತಮ್ಮದು ಶಾಶ್ವತ ಸಂಬಂಧ ಎಂದು ಪರಿಗಣಿಸಿದ್ದರೆ ಅವರನ್ನು ಜನಗಣತಿ ವೇಳೆ ವಿವಾಹಿತ ದಂಪತಿಗಳು ಎಂದೇ ಪರಿಗಣಿಸಬೇಕು ಕೇಂದ್ರ ಹೇಳಿದೆ. ಸ್ವಯಂ-ಗಣತಿ ಪೋರ್ಟಲ್‌ನಲ್ಲಿ ಪದೇಪದೆ ಕೇಳಲಾಗುತ್ತಿರುವ ಪ್ರಶ್ನೆಗೆ ಕೇಂದ್ರ ಈ ಸ್ಪಷ್ಟನೆ ನೀಡಿದೆ.

ಕರ್ನಾಟಕದಲ್ಲೂ ಸ್ವಯಂ ಗಣತಿ

• ಪುಟ 4

ತೆರಿಗೆ ಕ್ರಾಂತಿಯ ಹೊಸ ಶಕೆ

• **ಹೊಸದಿಲ್ಲಿ:** ದಶಕಗಳಲ್ಲೇ ಅತ್ಯಂತ ದೊಡ್ಡದಾದ ಆದಾಯ ತೆರಿಗೆ ಸುಧಾರಣಾ ಕ್ರಮಗಳು ಇದೇ ಏಪ್ರಿಲ್ 1 ರಿಂದ ಜಾರಿಗೆ ಬರಲಿವೆ. ಹೊಸ ಆದಾಯ ತೆರಿಗೆ ಕಾಯ್ದೆ 2025 ಅಡಿಯಲ್ಲಿ ಕೋಟ್ಯಂತರ ತೆರಿಗೆದಾರರು ತಮ್ಮ ತೆರಿಗೆ ಸಲ್ಲಿಕೆ ಮತ್ತು ಘೋಷಣೆ ಮಾಡುವ ವಿಧಾನದಲ್ಲಿ ಮಹತ್ತರ ಬದಲಾವಣೆಯಾಗಲಿದೆ.



➡ ಪುಟ 4

ಟೋಲ್ ದುಬಾರಿ



ಏಪ್ರಿಲ್ 1 ರಿಂದ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ವೇ ಹೆದ್ದಾರಿ ಸೇರಿದಂತೆ ರಾಜ್ಯದ 9 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶೇ.3ರಿಂದ ಶೇ.5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ. ಈ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಬೀಳಲಿದೆ.

➡ ಪುಟ 4

ಚೀನಾ ನಿರ್ಮಿತ ಸಿಸಿಟಿವಿ ಕಂಪನಿಗಳಿಗೆ ನಿಷೇಧ

• ಪುಟ 4

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,45,000** (2,45,000) ಅಪರಂಜಿ ಚಿನ್ನ: **1,48,260** (1,48,090) ಆಭರಣ ಚಿನ್ನ: **1,35,900** (1,35,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **71,947** (1,635↓) ಎನ್‌ಎಸ್‌ಇ **22,331** (488↓)

$1 = ₹94.82

ಕಿರುಸುದ್ದಿ

ವಿಜೃಂಭಣೆಯ ಕಾಮಾಘನಾಶಿನಿ ಉತ್ಸವ



ಗೋಕರ್ಣ: ಇಲ್ಲಿನ ಮಹಾಬಲೇಶ್ವರ ಮಂದಿರದ ಕಾಮಾಘನಾಶಿನಿ ಉತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ಉತ್ಸವದ ಪ್ರಯುಕ್ತ ದೇವರ ಉತ್ಸವ ಸೋಮವಾರ ರಾತ್ರಿ ಬಿರಿದು ಬಾವಲಿ, ಪಕ್ಕೆ ಪರಾಕಿನೊಂದಿಗೆ ಹೊರಟು ಇಲ್ಲಿಂದ ಐದು ಕಿ.ಮೀ. ಹೆಚ್ಚು ದೂರದ ತದಡಿಗೆ ತಲುಪಿತು. ಮುಂಜಾನೆ ಅಘನಾಶಿನಿ ನದಿಯಲ್ಲಿ ದೇವರ ಸ್ನಾನ ನೆರವೇರಿದ ಬಳಿಕ ಅಶ್ವಥಗಣಪತಿ ಮಂದಿರದಲ್ಲಿ ಪೂಜೆ ಸ್ವೀಕರಿಸಿ, ಬಳಿಕ ಉತ್ಸವ ಕೋಟಿತೀರ್ಥಕಟ್ಟೆಯಲ್ಲಿರುವ ಕಾಮೇಶ್ವರ ಮಠಕ್ಕೆ ಆಗಮಿಸಿತು. ಇಲ್ಲಿ ರಾಜೋಪಚಾರ ಪೂಜೆ ಸ್ವೀಕರಿಸಿದ ಬಳಿಕ ನಾಗಬೀದಿ ಮೂಲಕ ಮಂದಿರಕ್ಕೆ ಮರಳಿತು. ಉತ್ಸವ ಸಾಗುವ ಮಾರ್ಗದಲ್ಲಿನ ನಿವಾಸಿಗಳು ರಂಗೋಲಿ, ಮಾವಿನ ತೋರಣಗಳಿಂದ ಶೃಂಗರಿಸಿ ಆರತಿ ನೀಡಿ ದೇವರಿಗೆ ವಂದಿಸಿದರು. ವೇ.ಶಿವಾ ಭಟ್ ಷಡಕ್ಷರಿ ಪೂಜಾ ಕೈಂಕರ್ಯ ನೆರವೇರಿಸಿದರು.ಮಂದಿರದ ಮೇಲುಸ್ತುವಾರಿ ಸಮಿತಿ ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿ ಪಾಲ್ಗೊಂಡಿದ್ದರು. ಗಂಗಾಷ್ಟಮಿಯಲ್ಲಿ ದೇವರ ಉತ್ಸವ ಗಂಗಾವಳಿ ನದಿ ಸಂದರ್ಶಿಸಿದರೆ, ಕಾಮಜಯಂತಿಯಂದು ಅಘನಾಶಿನಿ ನದಿ ಸಂದರ್ಶಿಸುತ್ತದೆ. ಜಿಲ್ಲೆಯ ಎರಡು ಪ್ರಮುಖ ನದಿಗಳು ಸಮುದ್ರ ಸೇರುವಲ್ಲಿ ಸಾರ್ವಭೌಮ ಮಹಾಬಲೇಶ್ವರ ಚಿತ್ತೈಸುವುದು ವಿಶೇಷವಾಗಿದೆ.

ಏ.31ರಂದು ಸ್ವಚ್ಛತಾ ಕಾರ್ಯಕ್ರಮ

ಕಾರವಾರ: ದಾಂಡೇಲಿ ನಗರಸಭೆ ವ್ಯಾಪ್ತಿಯಲ್ಲಿ ಏ. 31ರಂದು ಬೆಳಗ್ಗೆ 7 ಗಂಟೆಗೆ ಎಲ್ಲಾ 31 ವಾರ್ಡಗಳಲ್ಲಿ ಏಕಕಾಲದಲ್ಲಿ ಸಂಪೂರ್ಣ ಸ್ವಚ್ಛತಾ ಕಾರ್ಯವನ್ನು ಶಾಸಕ ಆರ್.ವಿ. ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.ಕಾರ್ಯಕ್ರಮಕ್ಕೆ ದಾಂಡೇಲಿ ತಾಲೂಕಿನ ಎಲ್ಲ ಇಲಾಖಾ ಅಧಿಕಾರಿಗಳು, ದಾಂಡೇಲಿ ನಗರ ಸಭೆಯ ಆಡಳಿತಾಧಿಕಾರಿಗಳು ನಿಕಟಪೂರ್ವ ನಗರಸಭೆ ಹಾಗೂ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿಸಮಿತಿ ಅಧ್ಯಕ್ಷರು, ಸರ್ವಸದಸ್ಯರು, ಪಂಚಗ್ಯಾರಂಟಿ ಸಮಿತಿ ಯೋಜನೆಯ ಮುಖ್ಯಸ್ಥರು, ಆಶ್ರಯ ಸಮಿತಿ ಸದಸ್ಯರು, ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹಾಗೂ ಸದಸ್ಯರು, ಗ್ರಾಪಂ ಆಡಳಿತಾಧಿಕಾರಿಗಳು, ವಿವಿಧ ಪಕ್ಷದ ಮುಖಂಡರು, ಸಂಸ್ಥೆಯಪದಾಧಿಕಾರಿಗಳು, ರೋಟರಿ, ಲಾಯನ್ಸ್, ಬಾರ್ ಅಸೋಸಿಯೇಶನ್ ಪದಾಧಿಕಾರಿಗಳು, ಕಾಲೇಜಿನ ಪ್ರಾಚಾರ್ಯರು, ಹೋಂಸ್ಟೇ, ರೆಸಾರ್ಟ, ಹೋಟೇಲ್ ವ್ಯಾಪಾರಸ್ಥರ ಮುಖ್ಯಸ್ಥರು, ಬೀದಿ ವ್ಯಾಪಾರಸ್ಥರ ಮುಖ್ಯಸ್ಥರು, ವಿವಿಧ ಕೈಗಾರಿಕೋದ್ಯಮಿಗಳು ಹಾಗೂ ದಾಂಡೇಲಿಯ ಸಮಸ್ತ ನಾಗರೀಕರು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು ಯಕ್ಷಗಾನ ಪ್ರದರ್ಶನ

ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಸಮೀಪದ ವಡಗೇರಿಯ ಭಾಸ್ಕರ ರಾಮ ಗೌಡ ಅವರ ಮನೆಯ ವಾರ್ಷಿಕ ದೇವತಾರಾಧನೆ ಪ್ರಯುಕ್ತ ಮಾ.31ರಂದು ಮಧ್ಯಾಹ್ನ ವಿವಿಧ ಧಾರ್ಮಿಕ ಕಾರ್ಯಕ್ರಮ ಹಾಗೂ ರಾತ್ರಿ 9ರಿಂದ ಕ್ಷೇತ್ರ ಸಿಗಂದೂರು ಯಕ್ಷಗಾನ ಮೇಳದವರಿಂದ ಪ್ರೊ.ಪವನ ಕಿರಣಕೆರೆ ವಿರಚಿತ ಕಾಲ್ಪನಿಕ ಕಥಾನಕ 'ವಸಂತಗಾನ' ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ. ಗಣ್ಯರ ಉಪಸ್ಥಿತಿಯಲ್ಲಿ ಯಕ್ಷಗಾನ ಕಲಾವಿದರಾದ ಉದಯ ಹೆಗಡೆ ಕಡಬಾಳ ಹಾಗೂ ನರಸಿಂಹ ಚಿಟ್ಟಾಣಿ ಅವರನ್ನು ಸನ್ಮಾನಿಸಿ ಗೌರವಿಸಲಾಗುತ್ತದೆ ಎಂದು ಕಾರ್ಯಕ್ರಮದ ಪ್ರಾಯೋಜಕರಾದ ಭಾಸ್ಕರ ಗೌಡ ವಡಗೇರಿ ತಿಳಿಸಿದ್ದಾರೆ.

ಕಾರು ಆಟೋ ಡಿಕ್ಕಿ: ಚಾಲಕನಿಗೆ ಗಾಯ

ಬನವಾಸಿ: ಕಾರು ಮತ್ತು ಆಟೋ ನಡುವೆ ಡಿಕ್ಕಿ ಸಂಭವಿಸಿ ಇಬ್ಬರು ಗಾಯಗೊಂಡ ಘಟನೆ ಬನವಾಸಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸಂಭವಿಸಿದೆ. ಶಿರಸಿ ಕಡೆಯಿಂದ ಬರುತ್ತಿದ್ದ ಗೂಡ್ಸ್ ಆಟೋಗೆ ಬನವಾಸಿ ಕಡೆಯಿಂದ ಹೋಗುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ. ಬನವಾಸಿಯ ಮಧುಕೇಶ್ವರ ದೇವರ ಜಾತ್ರೆಯಲ್ಲಿ ಸಂತೆ ಹಾಕಲು ತಿಂಡಿ ತಿನಿಸುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಆಟೋ ಹಾಗೂ ಕಾರು ನಡುವೆ ಅಪಘಾತ ಸಂಭವಿಸಿ ಆಟೋ ಚಾಲಕ ಹಾಗೂ ಮತ್ತೋರ್ವನಿಗೆ ಸಣ್ಣಪುಟ್ಟ ಗಾಯವಾಗಿದೆ. ಘಟನಾ ಸ್ಥಳಕ್ಕೆ ಬನವಾಸಿ ಪೊಲೀಸರು ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ.



ಹಳಿಯಾಳ: ಹಳಿಯಾಳ ವಿಧಾನ ಸಭಾ ಕ್ಷೇತ್ರದಾದ್ಯಂತ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಸೋಮವಾರ ಶಾಸಕ ಆರ್.ವಿ.ದೇಶಪಾಂಡೆ ಚಾಲನೆ ನೀಡಿದರು.

ಸ್ವಚ್ಛತಾ ಕಾರ್ಯಕ್ಕೆ ಶಾಸಕ ದೇಶಪಾಂಡೆ ಚಾಲನೆ

ಕಾರವಾರ: ಹಳಿಯಾಳ ವಿಧಾನ ಸಭಾ ಕ್ಷೇತ್ರದಾದ್ಯಂತ ಮಾ.30 ರಿಂದ ಏ.1ರವರೆಗೆ ನಿರಂತರವಾಗಿ 3 ದಿನಗಳ ಕಾಲ ಸಂಪೂರ್ಣ ಸ್ವಚ್ಛತಾ ಕಾರ್ಯ ಆಯೋಜಿಸುವ ಮೂಲಕ ದೇಶದಲ್ಲೇ ವಿನೂತನ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.ಅವರು ಸೋಮವಾರ ಹಳಿಯಾಳದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಹಾಕಿಕೊಟ್ಟ ಸ್ವಚ್ಛತೆಯ ಹಾದಿಯಲ್ಲಿ ನಾವು ಸಾಗಬೇಕು. ಸಾರ್ವಜನಿಕರ ಸಹಕಾರದೊಂದಿಗೆ ಪ್ರತಿ ಹಳ್ಳಿ, ಪಟ್ಟಣ, ಶೌಚಾಲಯ ಹಾಗೂ ಉದ್ಯಾನವನಗಳು ಸ್ವಚ್ಛವಾಗಿರಬೇಕು ಎಂದರು.ಹಳಿಯಾಳ ವಿಧಾನ ಸಭಾ ಕ್ಷೇತ್ರದ ಹಳಿಯಾಳ ದಾಂಡೇಲಿ, ಜೋಯಿಡಾ ತಾಲೂಕುಗಳ ನಗರ, ಗ್ರಾಮ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಪೂರ್ಣ ಸ್ವಚ್ಛತಾ ಕಾರ್ಯ ನಡೆಯಲಿದ್ದು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಹಕಾರದೊಂದಿಗೆ ಈ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.ತಹಶೀಲ್ದಾರ್ ಫಿರೋಜ್ ಷಾ ಮಾತನಾಡಿ, ಗಾಂಧೀಜಿಯವರ ಸ್ವಚ್ಛತೆಯೇ ಸೇವೆ ಮತ್ತು ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಧ್ಯೇಯವಾಕ್ಯಗಳೊಂದಿಗೆ, ಶಾಸಕರ ಸೂಚನೆಯ ಮೇರೆಗೆ ಹಳಿಯಾಳ ತಾಲೂಕಿನ ಸಂಪೂರ್ಣ ಸ್ವಾಸ್ಥ್ಯಕ್ಕಾಗಿ ಈ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಂಡಿದ್ದೇವೆ. ಇದು ಕೇವಲ ಒಂದು ದಿನದ ಕಾರ್ಯಕ್ರಮವಲ್ಲ, ನಿರಂತರವಾಗಿ ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ಗುರಿಯನ್ನು ಹೊಂದಿದ್ದು, ಹಳಿಯಾಳ ತಾಲೂಕಿನ ಸಾರ್ವಜನಿಕರು ಈ ಅಭಿಯಾನಕ್ಕೆ ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ ಎಂದರು.ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರು, ಸಾರ್ವಜನಿಕರು ಭಾಗವಹಿಸಿದ್ದರು.



ಯಲ್ಲಾಪುರ: ಪಟ್ಟಣದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳೂರಿನಿಂದ ಬೆಳಗಾವಿ ಕಡೆಗೆ ತೆರಳುತ್ತಿದ್ದ ಖಾಸಗಿ ಬಸ್ ಒಂದು ಪೊಲೀಸ್ ಸ್ಟೇಷನ ಪಕ್ಕ ಕೆಟ್ಟು ನಿಂತ ಪರಿಣಾಮ ಸಂಚಾರ ಅಸ್ತವ್ಯಸ್ತ ವಾಗಿ ವಾಹನ ಸವಾರರು ಪರದಾಡುವಂತಾಯಿರು. ಸೋಮವಾರ ನಸುಗತ್ತಲಿನಲ್ಲಿ ಕೆಟ್ಟು ನಿಂತು ಟ್ರಾಫಿಕ್ ಜಾಮ್‌ನಿಂದ ಸವಾರರು, ಪಾದಚಾರಿಗಳು ಹೈರಾಣಾದರು. ಕೂಡಲೇ ಕೆಟ್ಟು ನಿಂತ ಬಸ್‌ನ್ನು ತೆರವು ಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಂಗಾರಮಕ್ಕಿಯಲ್ಲಿ ಉದ್ಯೋಗೋತ್ಸವ | ವಿಪ ಸದಸ್ಯ ಸಂಕನೂರು ಹೇಳಿಕೆ

ಕೌಶಲ್ಯ ವೃದ್ಧಿಯಿಂದ ನಿರುದ್ಯೋಗ ಪರಿಹಾರ

ಹೊನ್ನಾವರ: ಕೌಶಲ್ಯ ತರಬೇತಿ ಇಲಾಖೆಯಿಂದ ಯುವ ಜನತೆಯ ಕೌಶಲ್ಯವನ್ನು ವೃದ್ಧಿಸುವ ಮೂಲಕ ವಿವಿಧ ರಾಷ್ಟ್ರೀಯ, ಅಂತರ್ ರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಪಡೆಯುವ ಮೂಲಕ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಾಣುವಂತಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರು ಹೇಳಿದರು.

ತಾಲೂಕಿನ ಗೇರುಸೊಪ್ಪ ಕ್ಷೇತ್ರ ಬಂಗಾರಮಕ್ಕಿ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ 'ಸಂಸ್ಕೃತಿ ಕುಂಭ - ಮಲೆನಾಡ ಉತ್ಸವ- 2026' ಇದರ ನಾಲ್ಕನೇ ದಿನ ಸೋಮವಾರ ನಡೆದ ಉದ್ಯೋಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿರುದ್ಯೋಗ ಜಾಗತಿಕ ಮಟ್ಟದ ಸಮಸ್ಯೆಯಾಗಿದ್ದು ಇದರ ಪರಿಹಾರ ಸವಾಲಿನ ಕೆಲಸವಾಗಿದೆ. ಯುವ ಜನತೆಯಲ್ಲಿ ಕೌಶಲ್ಯದ ಕೊರತೆ ನಿರುದ್ಯೋಗ ಹೆಚ್ಚಲು ಬಹು ದೊಡ್ಡ ಕಾರಣವಾಗಿದೆ. ವೃತ್ತಿಗೆ ಸಮಾನವಾದ ಕೌಶಲ್ಯ ರೂಪಿಸುವ ಕೆಲಸ ಪಠ್ಯದ ಮೂಲಕ ಆಗಬೇಕಿದೆ. ಚಿನ್ನದ ಪದಕದೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳು ಉದ್ಯೋಗ ಸಂದರ್ಶನದಲ್ಲಿ ವಿಫಲರಾಗುತ್ತಿರುವುದು ಕಂಡು ಬರುತ್ತಿದೆ ಎಂದರು.

ಧಾರ್ಮಿಕ ಕ್ಷೇತ್ರದಲ್ಲಿ ಯುವ ಜನತೆಗಾಗಿ ಉದ್ಯೋಗ ಮೇಳ ಹಮ್ಮಿಕೊಂಡಿರುವುದು ಪ್ರಶಂಸನೀಯವಾಗಿದೆ.



ಹಲವು ಯೋಜನೆ ಜಾರಿ

ಯುವ ಜನತೆಯಲ್ಲಿ ಕೌಶಲ್ಯ ಬೆಳೆಸಲು ಕೇಂದ್ರ ಸರ್ಕಾರ ಕೌಶಲ್ಯ ತರಬೇತಿ ಇಲಾಖೆಯನ್ನು ರಚಿಸಿದೆ. ಆ ಬಳಿಕ ದೇಶದಲ್ಲಿ ಕೌಶಲ್ಯ ಯುಗ ಆರಂಭಗೊಂಡಿದೆ. ಈ ಇಲಾಖೆಯಿಂದ ಕೌಶಲ್ಯ ವೃದ್ಧಿಗೊಳಿಸಿ ಉದ್ಯೋಗ ಸಮಸ್ಯೆ ಬಗೆಹರಿಸಲು ಸಹಕಾರಿಯಾಗಿದೆ. ಇದೇ ರೀತಿ ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿಸಲು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ತಿಳಿಸಿದರು.


ಸರಕಾರದಿಂದ ಯಾವುದೇ ಧನ ಸಹಾಯ ಯಾಚಿಸದೆ, ಕೇವಲ ಭಕ್ತರ ಸಹಾಯ ಸಹಕಾರದಲ್ಲಿ ಎರಡು ದಶಕದಿಂದ ಶ್ರೀಮಾರುತಿ ಗುರೂಜಿ ಅವರ ನೇತೃತ್ವದಲ್ಲಿ ಬಂಗಾರಮಕ್ಕಿಯಲ್ಲಿ ಸಂಸ್ಕೃತಿ ಕುಂಭ - ಮಲೆನಾಡ ಉತ್ಸವ ಯಶಸ್ವಿಯಾಗಿ ನಡೆಯುತ್ತಿದೆ ಎಂದು ನಾನು ತಿಳಿದು ಆಶ್ಚರ್ಯಗೊಂಡೆ. ಸಂಸ್ಕೃತಿಯನ್ನು ಉಳಿಸಲು ಸರ್ಕಾರ ಮಾಡಬೇಕಾದ ಕೆಲಸವನ್ನು ಮಾರುತಿ ಗುರೂಜಿ ಮಾಡುತ್ತಿದ್ದಾರೆ ಎಂದರು.

ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿ ಶ್ರೀ ಮಾರುತಿ ಗುರೂಜಿ ಅಧ್ಯಕ್ಷತೆ ಮತ್ತು ಸಾನಿಧ್ಯ ವಹಿಸಿ ಉಪದೇಶ ನೀಡಿದರು. ಸಾಹಿತಿ ಸಿದ್ದು ಯಾಪಲಪರವಿ ಗದಗ ಉಸ್ಥಿತರಿದ್ದರು.

ಮಂಜುನಾಥ್ ಸ್ವಾಗತ ಮತ್ತು ಧನ್ಯವಾದಗೈದರು. ಶೈಲೇಶ್, ಭಾರತಿ, ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.

ಎರಡು ಶಾಲೆಗಳು ಮಂಜೂರು: ಶಾಸಕ ಆರ್‌ವಿಡಿ

ಹಳಿಯಾಳ: ತಾಲೂಕಿನಲ್ಲಿ ಶ್ರಮಿಕ ಶಾಲೆ ಮಂಜೂರಾತಿಗಾಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ವಿನಂತಿ ಪತ್ರ ಬರೆಯಲಾಗಿದ್ದು, ಉಕ ಎರಡು ಶಾಲೆಗಳು ಮಂಜೂ ರಾಗಿದೆ ಎಂದು ಶಾಸಕ ಆರ್.ವಿ.ದೇಶ ಪಾಂಡೆ ಹೇಳಿದರು. ತಮ್ಮ ಸ್ವಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,



ಒಂದು ಶಾಲೆ ಭಟ್ಕಳದ ಜಾಲಿಗೆ ನಿಗದಿಯಾಗಿದ್ದು, ಮತ್ತೊಂದು ನಮ್ಮ ಕ್ಷೇತ್ರದ ದಾಂಡೇಲಿ ತಾಲೂಕಿಗೆ ಶ್ರಮಿಕ ಶಾಲೆ ಈಗಾಗಲೇ ಮಂಜೂರಾಗಿದ್ದು, ಟೆಂಡರ್ ಕರೆಯಲಾಗಿದ್ದು ಹೆಚ್ಚುವರಿಯಾಗಿ ಹಳಿಯಾಳಕ್ಕೊಂದು ಬೇಡಿಕೆ ಸಲ್ಲಿಸಲಾಗಿದೆ ಎಂದರು.

ತಾಲೂಕಿನ ಎಲ್ಲಾ ವಸತಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ಉದ್ದೇಶಕ್ಕಾಗಿ, ಹಳಿಯಾಳದಲ್ಲಿ ಬಾಲಕಿಯರ ವಸತಿನಿಲಯ ಕಟ್ಟಡ ಮಂಜೂರು ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಶಿವರಾಜ್ ತಂಗಡಗಿ ಅವರಿಗೆ ವಿನಂತಿ ಪತ್ರ ಬರೆಯಲಾಗಿದೆ ಎಂದರು.

ದಾಂಡೇಲಿಯಿಂದ ಬೆಂಗಳೂರು ನಡುವೆ ಹವಾನಿಯಂತ್ರಣ ರಹಿತ ಸ್ಲೀಪರ್ ಪಲ್ಲಕ್ಕಿ ಬಸ್‌ಗೆ ಚಾಲನೆ ದೊರೆತಿದ್ದು ಮನವಿ ನೀಡಿದ ಒಂದು ವಾರದೊಳಗೆ ಸಂಚಾರ ಸೇವೆ ಪ್ರಾರಂಭಿಸುವುದಾಗಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗ ರೆಡ್ಡಿ ತಿಳಿಸಿದಂತೆ ಆಶ್ವಾಸನೆ ಈಡೇರಿಸಿದ್ದಾರೆ ಎಂದರು.

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್‌ರವರು ನಮ್ಮ ವಿಧಾನಸಭಾ ಕ್ಷೇತ್ರಕ್ಕೆ ಈ ಕೆಳಗಿನ ಅನುದಾನವನ್ನು ಬಿಡುಗಡೆ ಮಾಡುವ ಆಶ್ವಾಸನೆನೀಡಿದ್ದು ಕ್ಷೇತ್ರದ ಉದ್ಯಾನವನಗಳ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನವು ಹಳಿಯಾಳದ ಮರಡಿಗುಡ್ಡ ಉದ್ಯಾನವನ, ಕಿಲ್ಲಾ ಉದ್ಯಾನವನ, ದಾಂಡೇಲಿಯ ದಂಡಕಾರಣ್ಯ ಮತ್ತು ಜೋಯಿಡಾದಲ್ಲಿ ಜೀಫ್ ಲೈನ್ ಅಳವಡಿಕೆಗಾಗಿ ನೀಡಲಾಗುತ್ತಿದೆ ಎಂದರು. ಜೋಯಿಡಾ ತಾಲೂಕಿನ ಸಿಂಥೇರಿ ರಾಕ್ ಪ್ರವಾಸಿ ತಾಣದ ಅಭಿವೃದ್ಧಿಗೆ 50 ಲಕ್ಷ ರೂ.ಗಳ ಅನುದಾನ ನೀಡುವ ಭರವಸೆ ನೀಡಿದ್ದು, ವಿಶಿಷ್ಟ ಶಿಲೆಗಳ ಮ್ಯೂಸಿಯಂ ಕೂಡ ಸ್ಥಾಪಿಸುವ ಯೋಜನೆ ಇದರಲ್ಲಿದೆ ಎಂದರು. ಜೋಯಿಡಾ ತಾಲೂಕಿನ ಕ್ಯಾಸಲ್ ರಾಕ್ ನೈಸರ್ಗಿಕ ತಾಣದ ಅಭಿವೃದ್ಧಿಗೆ 50 ಲಕ್ಷ ರೂ.ಗಳ ಅನುದಾನ ದೊರೆಯುವ ನಿರೀಕ್ಷೆ ಇದೆ ಎಂದರು. ಈ ಸಂದರ್ಭದಲ್ಲಿ ವಿಆರ್ ಡಿ ಎಮ್ ಟ್ರಸ್ಟ್‌ನ ಆಡಳಿತಾಧಿಕಾರಿ ಪ್ರಕಾಶ ಪ್ರಭು ಉಪಸ್ಥಿತರಿದ್ದರು.



ಕಾರವಾರ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಭಗವಾನ ಮಹಾವೀರ ಜಯಂತಿಯನ್ನು ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ಶಾಖೆಯ ತಹಶೀಲ್ದಾರ ಪ್ರಮೋದ ನಾಯ್ಕ ಉದ್ಘಾಟಿಸಿದರು.

ಮಹಾವೀರ ಜಯಂತಿ ಆಚರಣೆ

ದಾಂಡೇಲಿ: ನಗರದ ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ತಾಲೂಕಾಡಳಿತ ಮತ್ತು ದಾಂಡೇಲಿ ಜೈನ ಸಮಾಜ ಸೇವಾ ಟ್ರಸ್ಟ್ ಆಶ್ರಯದಡಿ ಭಗವಾನ್ ಮಹಾವೀರ ಜಯಂತಿ ಸೋಮವಾರ ಆಚರಿಸಲಾಯಿತು.

ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಆರತಿಯನ್ನು ಬೆಳಗಿ ಪುಷ್ಪ ಗೌರವವನ್ನು ಸಲ್ಲಿಸಿ ತಹಶೀಲ್ದಾರ್ ಶೈಲೇಶ ಪರಮಾನಂದ, ಪೌರಾಯುಕ್ತ ವಿವೇಕ ಬನ್ನೆ, ದಾಂಡೇಲಿ ಜೈನ ಸಮಾಜ ಸೇವಾ ಟ್ರಸ್ಟಿನ ಅಧ್ಯಕ್ಷ ಸಂದೇಶ್ ಎಸ್. ಜೈನ್, ಕಾರ್ಯಾಧ್ಯಕ್ಷ ಎಂ.ಬಿ.ನಾಗೇಂದ್ರನಾಥ, ಪ್ರಧಾನಕಾರ್ಯದರ್ಶಿ ಮಹಾವೀರನೇರ್ಲೇಕರ ಅವರು ಮಹಾವೀರ ಜಯಂತಿ ಕೇವಲ ಧಾರ್ಮಿಕ ಹಬ್ಬವಲ್ಲ, ಬದಲಾಗಿ ಕರುಣೆ, ನೈತಿಕತೆ ಮತ್ತು ಅಹಿಂಸೆಯನ್ನು ಪ್ರತಿಬಿಂಬಿಸುವ ದಿನವಾಗಿದೆ.

ಭಗವಾನ್ ಮಹಾವೀರರು ಅಹಿಂಸೆಯ ಪ್ರತಿಪಾದಕರಾಗಿದ್ದು, ವಿಶ್ವದಲ್ಲಿ ಶಾಂತಿ ಮತ್ತು ಅಹಿಂಸೆಯನ್ನು ಬಯಸಿ ತ್ಯಾಗ ಮತ್ತು ತಪಸ್ಸು ಮಾಡಿದವರು. ಬದುಕು ಮತ್ತು ಬದುಕಲು ಬಿಡಿ' ಎಂಬ ಅವರ ಸಂದೇಶವು ಮಾನವೀಯತೆಗೆ ಶಾಶ್ವತ ಸ್ಫೂರ್ತಿಯಾಗಿ ಉಳಿದಿದೆ. ಮಹಾವೀರರು ಬೋಧಿಸಿದ ಪಂಚಶೀಲ ತತ್ವಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಸ್ವಾಸ್ಥ್ಯ ಸಮಾಜ ನಿರ್ಮಾಣ ಸುಲಭ ಸಾಧ್ಯ ಎಂದರು.

ಮಹಾವೀರ ಜಯಂತಿ ಆಚರಣೆಯ ಉದ್ದೇಶ ಮತ್ತು ಭಗವಾನ್ ಮಹಾವೀರರ ಬೋಧನೆಗಳ ಬಗ್ಗೆ ಪದ್ಮಾವತಿ ಗಾಳಿ, ಸಿದ್ಧಿ ಆಶೀಷ್ ಬನ್ನಾಲಿ ಅವರು ಉಪನ್ಯಾಸ ನೀಡಿದರು.

ತಾಲೂಕಾಡಳಿತದ ಪರವಾಗಿ ಜೈನ ಸಮಾಜದ ಹಿರಿಯರಾದ ಶಾಂತಿನಾಥ ಟೋಪಣ್ಣನವರ ಮತ್ತು ಚಾರ್ಟೆಡ್ ಅಕೌಂಟೆಂಟ್ ಆಶೀಷ್ ಬನ್ನಾಲಿ ಅವರನ್ನು ಸನ್ಮಾನಿಸಿದರು. ತಹಶೀಲ್ದಾರ್ ಶೈಲೇಶ ಪರಮಾನಂದ ಮತ್ತು ಪೌರಾಯುಕ್ತ ವಿವೇಕ ಬನ್ನೆ ಅವರನ್ನು ದಾಂಡೇಲಿ ಜೈನ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಗೌರವಿಸಲಾಯಿತು.

ಕಂದಾಯ ನಿರೀಕ್ಷಕ ರಾಘವೇಂದ್ರ ಪಾಟೀಲ್, ತಹಶೀಲ್ದಾರ್ ಕಾರ್ಯಾಲಯದ ಮುಕುಂದ ಬಸವಮೂರ್ತಿ, ಗೌಡಪ್ಪ ಬನಾಕದಿನ್ನಿ, ದೀಪಾಲಿ ಪೆಡ್ನೇಕರ, ರವಿ ಕಮ್ಮಾರ, ಪತ್ರಕರ್ತ ಪ್ರವೀಣ್ ಸುಲಾಖೆ, ಜೈನ ಸಮಾಜದ ಪ್ರಮುಖರಾದ ಉದಯ ಶಾ, ಅಜಿತ್ ಕರಡೆನ್ನವರ, ಅಭಯ ಸದಲಗಿ ಹಾಗೂ ಜೈನ ಬಾಂಧವರು ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದ ನಂತರ ಜೈನ ಸಮಾಜ ಬಾಂಧವರಿಂದ ಜಿನ ಭಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.



ಅಹಿಂಸೆ ತತ್ವ ಬೋಧಿಸಿದ ಭಗವಾನ್ ಮಹಾವೀರ: ಶಂಕರ ಗೌಡಿ

ಮುಂಡಗೋಡ: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇವು ಸರ್ವಕಾಲಕ್ಕೂ ಸಲ್ಲುವ ಭಗವಾನ್ ಮಹಾವೀರರ ಐದು ತತ್ವಗಳು ಎಂದು ತಹಶೀಲ್ದಾರ್ ಶಂಕರ ಗೌಡಿ ಹೇಳಿದರು.

ತಾಲೂಕು ಆಡಳಿತ, ತಾಪಂ, ಪಪಂ ಹಾಗೂ ಜೈನ ಸಮುದಾಯದ ಆಶ್ರಯದಲ್ಲಿ ಪಟ್ಟಣದ ಶಿರಸಿ ರಸ್ತೆಯಲ್ಲಿರುವ ಜೈನ ಬಸದಿಯ ಆವರಣದಲ್ಲಿ ಸೋಮವಾರ ಜರುಗಿದ ಭಗವಾನ್ ಮಹಾವೀರ ಜಯಂತ್ಯುತ್ಸವದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಭಗವಾನ್ ಬುದ್ಧ ಮತ್ತು ಭಗವಾನ್ ಮಹಾವೀರ ಈ ಇಬ್ಬರು ಮಹಾನ್ ಪುರುಷರ ಬಗ್ಗೆ ನಾವೆಲ್ಲ ಚಿಕ್ಕಂದಿನಿಂದಲೇ ಶಾಲೆಯಲ್ಲಿ ತಿಳಿದುಕೊಂಡಿದ್ದೇವೆ ಎಂದರು.

ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಸ್ವರೂಪ ರಾಣಿ ಮಾತನಾಡಿ, ಮಹಾಪುರುಷರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗೆ ಒಂದು ಮಹತ್ವ ಬರುತ್ತದೆ. ಎಲ್ಲ ಮಹಾಪುರುಷರ ಸಂದೇಶದ ಸಾರಾಂಶ ಎಂದರೆ ಶಾಂತಿ ಎಂದರು.ಬಿಇಒ ಸುಮಾ ಜಿ. ಮಾತನಾಡಿದರು. ಸಮಾಜದ ತಾಲೂಕು ಘಟಕದ ಅಧ್ಯಕ್ಷ ಧರಣೇಂದ್ರ ಅಂಗಡಿ, ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ, ರಮೇಶ ಅಂಬಿಗೇರ ಮಾತನಾಡಿದರು.



ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಡಾ.ಪಿ.ಪಿ.ಛಬ್ಬಿ ಅವರನ್ನು ಸನ್ಮಾನಿಸಲಾಯಿತು.ಇದಕ್ಕೂ ಮುನ್ನ ಜೈನ ಬಸದಿಯಿಂದ ಶ್ರೀಶಂಭವನಾಥ ಮತ್ತು ಮಹಾವೀರರ ಭಾವಚಿತ್ರದ ಪಲ್ಲಕ್ಕಿ ಮೆರವಣಿಗೆ ಹೊರಟು ಬನ್ನಿ ಮಹಾಕಾಳಿ ದೇವಸ್ಥಾನದವರೆಗೆ ಹೋಗಿ ವಾಪಸ್ ಬಸದಿಗೆ ಮರಳಿತು. ಶಿರಸ್ತೇದಾರ ಜಿ.ಬಿ.ಭಟ್, ಪ.ಪಂ.ಮುಖ್ಯಾಧಿಕಾರಿ ಸಂತೋಷ ಕುಮಾರ ಎಚ್., ಸಿಡಿಪಿಒ ಸಂಜೀವ ಸದಲಗಿ, ಸೋಮು ಮುಡೆಣ್ಣವರ, ರಾಘವೇಂದ್ರ ಕರೂರ, ಎಸ್.ಬಿ.ಹೂಗಾರ, ಎಸ್. ಕೆ.ಬೋರಕರ ಮತ್ತು ಶ್ರಾವಕ-ಶ್ರಾವಕಿಯರು ಉಪಸ್ಥಿತರಿದ್ದರು. ಅರುಣಾ ಕುತ್ತೆ ಹಾಗೂ ಸಂಗಡಿಗರು ನಾಡಗೀತೆ ಹೇಳಿದರು. ಡಾ.ಪಿ.ಪಿ.ಛಬ್ಬಿ ಸ್ವಾಗತಿಸಿದರು. ಅಶೋಕ ಸಂಕ್ರಿಕೊಪ್ಪ ನಿರೂಪಿಸಿದರು.

ನ್ಯಾಯಾಧೀಶೆ ಪದ್ಮಾವತಿ ಮನೆಗೆ ಶಾಸಕ ದೇಶಪಾಂಡೆ ಭೇಟಿ

ದಾಂಡೇಲಿ: ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಬರ್ಚಿ ರಸ್ತೆಯಲ್ಲಿರುವ ಪದ್ಮಾವತಿ ಮಾದಿಗ ಅವರ ಮನೆಗೆ ಶಾಸಕ ಆರ್.ವಿ. ದೇಶಪಾಂಡೆಯವರು ಭೇಟಿ ನೀಡಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇಶಪಾಂಡೆಯವರು ಬಹಳ ಬಡತನದಿಂದ ಶಿಕ್ಷಣಾಭ್ಯಾಸವನ್ನು ಮಾಡಿ ಸಹೋದರರು ಮತ್ತು ಮನೆಯವರ ನೆರವಿನೊಂದಿಗೆ ವಕೀಲರಾಗಿ ಇದೀಗ ನ್ಯಾಯಾಂಶರಾಗಿ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ನಿಜಕ್ಕೂ ಇದು ದಾಂಡೇಲಿಗೆ ಅಭಿಮಾನದ ಜೊತೆಗೆ ಇಂದಿನ ವಿದ್ಯಾರ್ಥಿ ಯುವಜನರ ಸಾಧನೆಗೂ ಕೂಡ



ಪ್ರೇರಣೆಯಾಗಿದೆ ಎಂದರು. ಸನ್ಮಾನ ಸ್ವೀಕರಿಸಿದ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಪದ್ಮಾವತಿ ಮಾದಿಗ ಅವರು ಶಾಸಕರು ತಮ್ಮ ಮನೆಗೆ ಬಂದು ಗೌರವ ಸಲ್ಲಿಸಿದ್ದಕ್ಕೆ ಅಭಿನಂದಿಸಿದರು. ಪದ್ಮಾವತಿ ಮಾದಿಗ ಅವರ ತಾಯಿ ಮತ್ತು ಸಹೋದರರು ಈಗಲೂ ನಡೆಸುತ್ತಿರುವ ಪಾದರಕ್ಷೆ ಅಂಗಡಿಗೆ ಭೇಟಿ ನೀಡಿದ ಶಾಸಕ ಆರ್.ವಿ. ದೇಶಪಾಂಡೆಯವರು ಸ್ಥಳೀಯ ಆಡಳಿತ ಹಾಗೂ ಸರ್ಕಾರದಿಂದ ಇವರ ಕುಲಕಸುಬಿಗೆ ಯಾವುದಾದರೂ ರೀತಿಯ ಸಹಾಯಧನ ಅಥವಾ ಪ್ರಯೋಜನಗಳು ಸಿಗುವ ಕಾರ್ಯಕ್ರಮಗಳಿದ್ದರೆ ಅವರಿಗೆ ಒದಗಿಸಿಕೊಡುವಂತೆ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ಪ್ರಧಾನ ಕಾರ್ಯದರ್ಶಿ ಕೀರ್ತಿ ಗಾಂವಕರ, ಉಪಾಧ್ಯಕ್ಷ ಬಶೀರ್ ಗಿರಿಯಾಲ, ಕಾರ್ಯದರ್ಶಿ ಉಸ್ಮಾನ್ ಶೇಖ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಆರ್.ಪಿ. ನಾಯ್ಕ್, ಕಾಂಗ್ರೆಸ್ ಪರಿಶಿಷ್ಠ ಪಂಗಡ ವಿಭಾಗದ ಜಿಲ್ಲಾಧ್ಯಕ್ಷ ಅನಿಲ್ ನಾಯ್ಕರ್ ಉಪಸ್ಥಿತರಿದ್ದರು.

ಸ್ವಯಂ ಗಣತಿ ಮಾಡಿಕೊಳ್ಳಲು ಅವಕಾಶ

ಕಾರವಾರ: ಭಾರತೀಯ ಜನಗಣತಿ ಪ್ರಯುಕ್ತ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವು ಏಪ್ರಿಲ್ 1ರಿಂದ 15 ನೇ ಮೇ 2026 ರವರೆಗೆ ನಡೆಯಲಿದ್ದು, ಜನಗಣತಿ ಕಾರ್ಯಾಚರಣೆಗಳ ನಿರ್ದೇಶನಾಲಯ ಕರ್ನಾಟಕದರವರು ಈ ಬಾರಿ ಸಾರ್ವಜನಿಕರಿಗೆ ಏಪ್ರಿಲ್ 1 ರಿಂದ 15 ರವರೆಗೆ ಸ್ವಯಂ ಗಣತಿ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.



ಜಿಲ್ಲೆಯ ಎಲ್ಲ ಸಾರ್ವಜನಿಕರು ವೆಬ್ ಪೋರ್ಟಲ್ https://se.census.gov.in ಮೂಲಕ ಸ್ವಯಂ ಗಣತಿ ಮಾಡಿಕೊಳ್ಳಬಹುದಾಗಿದ್ದು, ಕುಟುಂಬದ ಯಾವುದೇ ಒಬ್ಬ ಸದಸ್ಯರು ಸ್ವಯಂ ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಿ ಮೊಬೈಲ್, ಇಮೇಲ್ ನಲ್ಲಿ ಸ್ವಯಂ ಗಣತಿ ಐಡಿಯನ್ನು ಪಡೆಯ ಬಹುದಾಗಿದೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ದೃಢೀಕರಿಸಲು ಮತ್ತು ಸ್ವಯಂ ಗಣತಿ ತಂತ್ರಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ ಗಣತಿ ಐಡಿಯನ್ನು ಅವರೊಂದಿಗೆ ಹಂಚಿಕೊಳ್ಳಬೇಕಾಗಿರುತ್ತದೆ.

ಆದ್ದರಿಂದ ಜಿಲ್ಲೆಯ ಸಾರ್ವಜನಿಕರು ಸ್ವಯಂ ಗಣತಿ ಕಾರ್ಯದಲ್ಲಿ ಪಾಲ್ಗೊಂಡು ನಿಖರವಾದ ಮಾಹಿತಿಯನ್ನು ಒದಗಿಸಿ ಗಣತಿ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಸಾರ್ವಜನಿಕರು ನೀಡಿದ ಮಾಹಿತಿಯು ಸುರಕ್ಷಿತವಾಗಿ ಹಾಗೂ ಗೌಪ್ಯವಾಗಿ ಉಳಿಯುತ್ತದೆ. ಸದ್ರಿ ಮಾಹಿತಿಯನ್ನು ರಾಷ್ಟ್ರ ನಿರ್ಮಾಣಕ್ಕಾಗಿ ಮಾತ್ರ ಬಳಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾವೀರರ ಆದರ್ಶಗಳು ಎಂದಿಗೂ ಪ್ರಸ್ತುತ: ಶಿವಾನಂದ ನಾಯ್ಕ



ಅಂಕೋಲಾ: ಮಹಾವೀರ ಜಯಂತಿ ಕೇವಲ ಒಂದು ಹಬ್ಬವಲ್ಲ, ಅದು ಮಾನವೀಯ ಮೌಲ್ಯಗಳನ್ನು ಪುನರುಜ್ಜೀವನಗೊಳಿಸುವ ದಿನವಾಗಿದೆ ಎಂದು ಸಹಾಯಕ ಸಂಚಾರ ಅಧೀಕ್ಷಕ ಶಿವಾನಂದ ನಾಯ್ಕ ಹೇಳಿದರು.

ಅವರು ಇಲ್ಲಿನ ಸಾರಿಗೆ ಘಟಕದಲ್ಲಿ ನಡೆದ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.ಡಿಪೋ ವ್ಯವಸ್ಥಾಪಕ ಮಂಜುನಾಥ ಎಲ್. ನಾಯ್ಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಾವೀರರ ತತ್ವಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿದ್ದು, ಅಹಿಂಸೆ, ಸತ್ಯ ಮತ್ತು ಶಾಂತಿಯ ಸಂದೇಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಸಿಬ್ಬಂದಿ ಮೇಲ್ವಿಚಾರಕ ವಿನಾಯಕ ಪಟಗಾರ, ಡಿಪೋ ಪಾರುಪತ್ತೆಗಾರರಾದ ದೀಪಕ ನಾಯ್ಕ, ಎ.ಬಿ. ಹಿರೇಗುತ್ತಿ ಸೇರಿದಂತೆ ತಾಂತ್ರಿಕ ಹಾಗೂ ಆಡಳಿತ ಶಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಏ.3ಕ್ಕೆ ಪುಸ್ತಕ ಲೋಕಾರ್ಪಣೆ, ಪ್ರಶಸ್ತಿ ಪ್ರದಾನ

ಶಿರಸಿ: ಶಿರಸಿಯ ಕವಿ ಕಾವ್ಯ ಬಳಗದ 18ನೇ ವರ್ಷದ ಸ್ನೇಹ ಸಮ್ಮಿಲನ, ಪುಸ್ತಕ ಲೋಕಾರ್ಪಣೆ ಮತ್ತು ಉಪಾಯನ ಪ್ರಶಸ್ತಿ ಪ್ರದಾನ ಸಮಾರಂಭ ಏ.3ರಂದು ಬೆಳಗ್ಗೆ 10 ಗಂಟೆಗೆ ಮಧುವನದ ಆರಾಧನಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.ಬೆಳಗಿನ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಆರ್.ಡಿ .ಹೆಗಡೆ ಆಲ್ಮನೆ ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಖ್ಯಾತ ಬರಹಗಾರ ಗಂಗಾಧರ ಕೊಳಗಿ ಮಾಡಲಿದ್ದಾರೆ. ಪತ್ರಕರ್ತ ನಾಗರಾಜ್ ವೈದ್ಯ ಅವರ ಎಐ ಭಗವದ್ಗೀತೆ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಬರಹಗಾರ ಸಂಜಯ್ ಭಟ್ ಬೆಣ್ಣೆ ಪುಸ್ತಕ ಪರಿಚಯ ಮಾಡಲಿದ್ದಾರೆ. ಬೆಳಗ್ಗೆ 11.30 ರಿಂದ ಕವಿ ಸಮಯ ಅಧ್ಯಕ್ಷತೆಯನ್ನು ಲೇಖಕಿ ಹಾಗೂ ನಿರೂಪಕಿ ಎನ್.ಆರ್.ರೂಪಶ್ರೀ ವಹಿಸಲಿದ್ದಾರೆ. ಹಿರಿಯ ಸಾಹಿತಿ ಅಶೋಕ ಹಾಸ್ಯಗಾರ್ ಆಶಯ ಭಾಷಣ ಮಾಡಲಿದ್ದಾರೆ. ಕವಿ ಸಮಯದಲ್ಲಿ ಕಲ್ಪನಾ ಸೋಮನಹಳ್ಳಿ, ದತ್ತಗುರು ಕಂಠಿ, ಯಶಸ್ವಿನಿ ಶ್ರೀಧರ ಮೂರ್ತಿ, ಗಣೇಶ್ ಹೊಸ್ಮನೆ, ಮಂಜುಳಾ ಅಮರನಾಥ್, ರಮೇಶ್ ಹೆಗಡೆ ಕೆರೆಕೋಣ, ದಾಕ್ಷಾಯಿಣಿ ಪಿ.ಸಿ ಕಾವ್ಯವಾಚನ ಮಾಡಲಿದ್ದಾರೆ. ಗಾಯನ ಕಾರ್ಯಕ್ರಮದಲ್ಲಿ ವಿಮಲಾ ಭಾಗವತ್, ಹನುಮಂತ ಸಾಲಿ, ರೇಣುಕಾ ಬಟ್, ರಾಜೇಶ್ವರಿ ಹೆಗಡೆ, ಗಂಗಾ ಹೆಗಡೆ ರಾಜಲಕ್ಷ್ಮಿ ಭಟ್ ಹಾಡಲಿದ್ದಾರೆ. ಸಂವಾದ ಗೋಷ್ಠಿ ಮಧ್ಯಾಹ್ನ 2 ಗಂಟೆಯಿಂದ ಪ್ರಾರಂಭವಾಗಲಿದೆ. ಎಐ ಸಾಧಕ ಬಾಧಕಗಳು ವಿಷಯದ ಕುರಿತು ಸೀತಾರಾಮ್ ಕಾನಳ್ಳಿ, ನಾಗರಾಜ್ ವೈದ್ಯ, ಕೃಷ್ಣ ಪದಕಿ, ಡಿ.ಎಸ್ ನಾಯ್ಕ್ ಉಮೇಶ್ ನಾಯ್ಕ, ಭವ್ಯ ಹಳೆಯೂರು, ಸಿಂಧು ಚಂದ್ರ ಹೆಗಡೆ, ಗಣಪತಿ ಭಟ್ ವರ್ಗಾಸರ, ಕೆ.ಮಹೇಶ್ ಮಾತನಾಡಲಿದ್ದಾರೆ. ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಬರಹಗಾರ ಸುಬ್ರಾಯ್ ಮತ್ತಿಹಳ್ಳಿ ವಹಿಸಲಿದ್ದಾರೆ. ಸಂಜೆ ನಾಲ್ಕು ಗಂಟೆಗೆ ಉಪಾಯನ ಪ್ರಶಸ್ತಿ ಪ್ರದಾನ ಸಮಾರಂಭವಿದೆ. ಹಿರಿಯ ಸಾಹಿತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಎಚ್.ಆರ್. ಅಮರನಾಥ್ ಅವರಿಗೆ ಈ ವರ್ಷದ ಉಪಾಯನ ಪ್ರಶಸ್ತಿಯನ್ನು ನೀಡಿ ಕವಿ ಕಾವ್ಯ ಬಳಗ ಗೌರವಿಸಲಿದೆ. ಹಿರಿಯ ಸಾಹಿತಿ ಭಾಗೀರಥಿ ಹೆಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ನಿವೃತ್ತ ಕನ್ನಡ ಉಪನ್ಯಾಸಕರಾದ ಡಾ. ವಿಜಯನಳಿನಿ ರಮೇಶ್ ಅಭಿನಂದನಾ ಭಾಷಣ ಮಾಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್‌ಗಳ ನಡುವೆ ಡಿಕ್ಕಿ: ಸವಾರ ಸಾವು

ಅಂಕೋಲಾ: ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಗಾಯಗೊಂಡ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲೂಕಿನ ಹಾರವಾಡದ ಮೂಡೆಕಟ್ಟಾ ಕ್ರಾಸ್ ಬಳಿ ಸಂಭವಿಸಿದೆ.

ಹಾರವಾಡ ತರಂಗಮೇಟ್ ನಿವಾಸಿ ಸಚಿನ್ ಬುದ್ದು ಹರಿಕಂತ್ರ(30) ಮೃತ ವ್ಯಕ್ತಿಯಾಗಿದ್ದು, ಇವರು ತಮ್ಮ ಕೆ.ಎ 30ಯು2640 ನೋಂದಣಿ ಸಂಖ್ಯೆಯ ಬೈಕ್ ಮೇಲೆ ಅವರ್ಸಾ ಕಡೆಯಿಂದ ಹಾರವಾಡ ಕಡೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ರಾತ್ರಿ 8.30 ಗಂಟೆ ಸುಮಾರಿಗೆ ಎದುರಿನಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದ ಕೆ.ಎ30 ಎಕ್ಸ್ 3659 ನೋಂದಣಿ ಸಂಖ್ಯೆಯ ಪಲ್ಸರ್ ಬೈಕ್ ಸವಾರ ಡಿಕ್ಕಿ ಹೊಡೆದಿದ್ದು ಇದರಿಂದಾಗಿ ಕೆಳಗೆ ಬಿದ್ದ ಸಚಿನ್ ಹರಿಕಂತ್ರ ಅವರ ಎದೆಗೆ ಮತ್ತು ಎರಡೂ ಕಾಲುಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಅಂಕೋಲಾದ ಖಾಸಗಿ ಆಸ್ಪತ್ರೆಗೆ ತಂದು ದಾಖಲಿಸಲಾಯಿತಾದರೂ ರಾತ್ರಿ 9.10ರ ಸುಮಾರಿಗೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.

ಅಪಘಾತ ಪಡಿಸಿದ ಪಲ್ಸರ್ ಬೈಕ್ ಸವಾರ ಬೈಕ್‌ನ್ನು ಘಟನಾ ಸ್ಥಳದಲ್ಲಿ ಬಿಟ್ಟು ಪರಾರಿಯಾಗಿದ್ದು, ಅಂಕೋಲಾ ಪಿಎಸ್‌ಐ ಸುನೀಲ ಹುಲ್ಲೋಳಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹಿಂದಿ ಭಾಷೆ ರದ್ದತಿ: ಕೈ ರಾಜಕಾರಣ

• **ಬೆಂಗಳೂರು:** ತೃತೀಯ ಭಾಷೆ ಹಿಂದಿಯನ್ನು ರದ್ದು ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಮಕ್ಕಳ ಬದುಕಿಗೆ ಕಲ್ಲು ಹಾಕಿದೆ. ಕನ್ನಡದ ಮೇಲಿನ ಪ್ರೀತಿಯಿಂದ ಸರ್ಕಾರ ಈ ತೀರ್ಮಾನ ಮಾಡಿಲ್ಲ, ಇದು ಕೇವಲ ರಾಜಕಾರಣ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು. ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಶಿಕ್ಷಣ ಇಲಾಖೆಯಿಂದ ಏಕಾಏಕಿ ತೃತೀಯ ಭಾಷೆ ಹಿಂದಿಯನ್ನು ತೆಗೆದುಹಾಕಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿರುವ ಸಮಯದಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು ಹಿಂದಿ ಪಾಠ ಓದಿ ಅಭ್ಯಾಸ ಮಾಡಿದ್ದಾರೆ. ಈಗ ದಿಢೀರನೆ ಈ ತೀರ್ಮಾನ ಕೈಗೊಂಡಿರುವುದು ದೊಡ್ಡ ಸಮಸ್ಯೆಯಾಗಿದೆ ಎಂದು ಗಮನಸೆಳೆದರು. ಮಹಾತ್ಮ ಗಾಂಧೀಜಿ 1918ರಲ್ಲಿ ಹಿಂದಿ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದರು. ದಕ್ಷಿಣ ಭಾರತದಲ್ಲೂ ಅವರೇ ಈ ಸಮಿತಿ ಆರಂಭಿಸಿದರು. ಈ ಇತಿಹಾಸ ಗೊತ್ತಿಲ್ಲದ ಕಾಂಗ್ರೆಸ್ ನಾಯಕರು ಏಕಾಏಕಿ ಹಿಂದಿ ರದ್ದು ಮಾಡಿದ್ದಾರೆ. ಮಕ್ಕಳ ವಿಚಾರದಲ್ಲಿ ನಾವು ಸೂಕ್ಷ್ಮವಾಗಿರಬೇಕು ಎಂದು ಹೇಳಿದರು.

ಮುಸ್ಲಿಮರು ಕಾಂಗ್ರೆಸ್ ವಿರುದ್ಧವಾಗಿದ್ದಾರೆ : ಅಶೋಕ್ ಟೀಕೆ

• **ಬೆಂಗಳೂರು:** ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ. ದಾವಣಗೆರೆಯಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ವಿರುದ್ಧವಾಗಿದ್ದರೆ, ಬಾಗಲಕೋಟೆಯಲ್ಲೂ ಜನರು ಕಾಂಗ್ರೆಸ್‌ಗೆ ವಿರುದ್ಧ ಇದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕುರ್ಚಿ ಭಯ ಇರುವುದರಿಂದ ಪ್ರಚಾರಕ್ಕೆ ಖುದ್ದಾಗಿ ಹೋಗುತ್ತಿದ್ದಾರೆ. ಸಚಿವ ಜಮೀರ್ ಪ್ರಚಾರದಲ್ಲಿ ಭಾಗವಹಿಸುತ್ತಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಭಯದಲ್ಲಿದ್ದಾರೆ ಎಂದರು. ಶಾಮನೂರು ಶಿವಶಂಕರಪ್ಪ ಮುಸ್ಲಿಮರಿಗೆ ಟಿಕೆಟ್ ನೀಡುತ್ತೇನೆಂದು ಹೇಳಿದ್ದರು. ಆದರೆ, ಈಗ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ.



ನಂಜನಗೂಡಿನಲ್ಲಿ ಸೋಮವಾರ ನಡೆದ ಐತಿಹಾಸಿಕ ಗೌತಮ ಪಂಚ ರಥೋತ್ಸವದಲ್ಲಿ ಲಕ್ಷಾಂತರ ಜನ ಸಾಗರದ ಮಧ್ಯೆ ಶ್ರೀಕಂಠೇಶ್ವರ ಸ್ವಾಮಿರಥೋತ್ಸವದ(ಗೌತಮ ರಥ) ವಿಹಂಗಮ ನೋಟ.

ಶಾಸಕ, ಸಂಸದರಿಗೆ 3 ಐಪಿಎಲ್ ಟಿಕೆಟ್

• **ಬೆಂಗಳೂರು:** ಶಾಸಕರಿಗೆ ಐಪಿಎಲ್ ಟಿಕೆಟ್ ನೀಡಬೇಕೆನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಹಾಗೂ ಕೆಎಸ್‌ಸಿಎ ಪದಾಧಿಕಾರಿಗಳ ನಡುವೆ ನಡೆದ ಸಭೆಯಲ್ಲಿ ಅಂತಿಮ ನಿರ್ಧಾರಕ್ಕೆ ಬರಲಾಗಿದ್ದು, ಪ್ರತಿ ಶಾಸಕ ಹಾಗೂ ಸಂಸದರಿಗೆ ಮೂರು ಐಪಿಎಲ್ ಟಿಕೆಟ್ ನೀಡಲು ಕ್ರಿಕೆಟ್ ಮಂಡಳಿ ಒಪ್ಪಿಗೆ ಸೂಚಿಸಿದೆ.

ಸದಾಶಿವನಗರ ಡಿಸಿನಿವಾಸದಲ್ಲಿ ಕೆಎಸ್‌ಸಿಎ ಪದಾಧಿಕಾರಿಗಳು, ಆರ್‌ಸಿಬಿ ಹಾಗೂ ಡಿಎನ್‌ಎ ಸಂಸ್ಥೆಯ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಐಪಿಎಲ್ ಮುಂಬರುವ ಐಪಿಎಲ್ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಿಗೆ ಶಾಸಕರಿಗೆ ಉಚಿತ ಟಿಕೆಟ್ ನೀಡುವ ವಿಚಾರ ಕುರಿತ ಸುದೀರ್ಘ ಸಭೆ ನಡೆಸಿದರು. ಸಭೆ ಬಳಿಕ ಮಾಹಿತಿ ನಿಡಿದ ಡಿ.ಕೆ.ಶಿವಕುಮಾರ್ ಅವರು, ಶಾಸಕರಿಗೆ ಐಪಿಎಲ್ ಪಂದ್ಯಗಳ 3 ಟಿಕೆಟ್ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 2 ಟಿಕೆಟ್ ಉಚಿತವಾಗಿ ನೀಡಲು ಒಪ್ಪಿದ್ದಾರೆ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 2 ಹೆಚ್ಚುವರಿ ಟಿಕೆಟ್ ಅನ್ನು ಖರೀದಿಸಲು ಅವಕಾಶ ನೀಡಲಾಗಿದೆ ತಿಳಿಸಿದರು. ಈಗ ಮತ್ತೆ ಸಭೆ ಮಾಡಿದ್ದೇವೆ. ಕ್ರಿಕೆಟ್ ಸಂಸ್ಥೆಯವರು ಅನೇಕ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ ಈ ತೀರ್ಮಾನಕ್ಕೆ ಬರಲಾಗಿದೆ. ಇದರೊಂದಿಗೆ ಈ ವಿಚಾರ ಇಲ್ಲಿಗೆ ಅಂತ್ಯಗೊಳಿಸಲಾಗುತ್ತಿದೆ. ಯಾರಿಗಾದರೂ ಐಪಿಎಲ್ ಟಿಕೆಟ್ ಬಗ್ಗೆ ಆಸಕ್ತಿ ಇಲ್ಲವಾದರೆ, ಅವರು ಈ ಬಗ್ಗೆ ನಮಗೆ ಲಿಖಿತ ರೂಪದಲ್ಲಿ ನೀಡಲಿ, ನಾವು ಅವರಿಗೆ ಟಿಕೆಟ್ ನೀಡುವುದಿಲ್ಲ, ಇಲ್ಲಿ ಯಾರಿಗೂ ಬಲವಂತವಿಲ್ಲ ಎಂದರು.

ಇಂದಿನಿಂದ ಉಪಚುನಾವಣೆ ಪ್ರಚಾರದಲ್ಲಿ ಭಾಗಿ

ಉಪಚುನಾವಣೆ ಪ್ರಚಾರದ ಬಗ್ಗೆ ಕೇಳಿದಾಗ, ಹೋಗಲೇಬೇಕಲ್ಲವೇ, ಇಂದೇ ಹೋಗಬೇಕಿತ್ತು. ಮುಖ್ಯಮಂತ್ರಿಗಳು ಬಾಗಲಕೋಟೆಗೆ ತೆರಳಿದ್ದಾರೆ. ನಾನು ಹಾಗೂ ಸುರ್ಜೇವಾಲ ಅವರು ಮಂಗಳವಾರ ದಾವಣಗೆರೆ ಹೋಗುತ್ತಿದ್ದು, ಕೆಲವು ಸಭೆಗಳಿವೆ. ಬುಧವಾರ ಬಾಗಲಕೋಟೆಗೆ ತೆರಳಲಿದ್ದೇನೆ. ನಂತರ ಎರಡೂ ಕ್ಷೇತ್ರಗಳಿಗೆ ಮತ್ತೊಂದು ಸುತ್ತು ತೆರಳಿ ಪ್ರಚಾರ ಮಾಡುತ್ತೇನೆ. ಏ.5–6ರಂದು ಕೇರಳ ಚುನಾವಣೆ ಪ್ರಚಾರಕ್ಕೆ ತೆರಳುತ್ತಿದ್ದೇನೆ. ಈಸ್ಟರ್ ಹಾಗೂ ಗುಡ್ ಫ್ರೈಡೆ ಹಿನ್ನೆಲೆಯಲ್ಲಿ ಕೇರಳ ಪ್ರವಾಸವನ್ನು 5ಕ್ಕೆ ಮುಂದೂಡಲಾಗಿದೆ ಎಂದು ತಿಳಿಸಿದರು.

ಕಿರುಸುದ್ದಿ

ಏ.5ರಂದು ಮೂರು ಕೃತಿಗಳ ಲೋಕಾರ್ಪಣಾ ಸಮಾರಂಭ

• **ಬೆಂಗಳೂರು:** ಬೆರಗು ಪ್ರಕಾಶನ ವತಿಯಿಂದ ಏ.5 ರಂದು ಬೆಳಗ್ಗೆ 10.30ಕ್ಕೆ ಕೊಂಡಜ್ಜಿ ಬಸಪ್ಪ ಸಭಾ ಭವನದಲ್ಲಿ ಮೂರು ತಲೆಮಾರಿನವರು ಬರೆದ ಮೂರು ಲೇಖಕರು ಬರೆದ ಮೂರು ಕೃತಿ ಲೋಕಾರ್ಪಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಲೇಖಕಿಯರಾದ ಭಾರತಿ ವಸ್ತ್ರದ ವಿರಚಿತ ಚೇತನ ಭಾರತಿ, ಸುಧಾ ವಾರಪತ್ರಿಕೆ ಸಂಪಾದಕಿ ರಶ್ಮಿ ಎಸ್. ಬರೆದ ಮಿದು ಮಾತು, ಆರ್ನಿ ನವೀನ್ ಬರೆದ ಲಿಖಿತ ಎಕ್ಸೋಸ್ ಫ್ರಮ್ ಮೈ ಜಾರ್ ಕೃತಿಯನ್ನು ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಲೋಕಾರ್ಪಣೆಗೊಳಿಸಲಿದ್ದಾರೆ. ಅಂಕಣಕಾರ ಎನ್. ರವಿಶಂಕರ್ ಕೃತಿಪರಿಚಯ ಮಾಡಿ, ಲೇಖಕರೊಂದಿಗೆ ಸಂವಾದ ನಡೆಸಲಿದ್ದಾರೆ.



ತೃತೀಯ ಭಾಷೆಗೆ ಗ್ರೇಡಿಂಗ್ ಸಲ್ಲ: ಹೊರಟ್ಟಿ

• **ಹುಬ್ಬಳ್ಳಿ:** ರಾಜ್ಯ ಸರ್ಕಾರ ಹಿಂದಿ ಸೇರಿ ತೃತೀಯ ಭಾಷಾ ವಿಷಯಗಳಿಗೆ ಅಂಕದ ಬದಲು, ಗ್ರೇಡಿಂಗ್‌ಗೆ ಅವಕಾಶ ನೀಡಿದ್ದು ಸರಿಯಲ್ಲ, ಇದರ ಬಗ್ಗೆ ಮುಖ್ಯಮಂತ್ರಿ, ಶಾಲಾ ಶಿಕ್ಷಣ ಸಚಿವರ ಜೊತೆ ಚರ್ಚಿಸುವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಗ್ರೇಡಿಂಗ್ ಬದಲು ಹಿಂದಿನ ವ್ಯವಸ್ಥೆ ಮುಂದುವರಿಸಬೇಕು. ಸರ್ಕಾರವು ಶಿಕ್ಷಕ ಪ್ರತಿನಿಧಿಗಳ ಜೊತೆ ಚರ್ಚಿಸಿಲ್ಲ, 1961ರಿಂದ ಇರುವ ಅಂಕ ಪದ್ಧತಿ ಬದಲಿಸಲು ನಿರ್ಧರಿಸಿದ್ದು ಸರಿಯಲ್ಲ ಎಂದರು. ಆಡಳಿತದಲ್ಲಿ ದ್ವಿಭಾಷಾ ನೀತಿ ಸರಿ. ಆದರೆ, ಶಾಲಾ-ಕಾಲೇಜುಗಳಲ್ಲಿ ಇದು ಸರಿಯಲ್ಲ, ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ಹಿಂದಿ ಅಧ್ಯಯನ ವಿಭಾಗ ಇದೆ. ಅವುಗಳನ್ನು ಮುಚ್ಚುತ್ತೀರಾ ಎಂದು ಪ್ರಶ್ನಿಸಿದರು. ದೈಹಿಕ ಶಿಕ್ಷಣ, ಚಿತ್ರಕಲೆಗೆ ಗ್ರೇಡಿಂಗ್ ಕೊಡಬಹುದು. ಸರ್ಕಾರದ ಗ್ರೇಡಿಂಗ್ ಕ್ರಮದಿಂದ ತೃತೀಯ ಭಾಷೆಯಾಗಿ ಓದುವ ಹಿಂದಿ ಅಲ್ಲದೇ ಕನ್ನಡ, ಸಂಸ್ಕೃತ, ಉರ್ದು, ತಮಿಳು ಸೇರಿ ಇತರ ವಿಷಯಗಳಿಗೂ ಸಮಸ್ಯೆ ಆಗುತ್ತದೆ. ಹಿಂದಿ ಬಾರದಿದ್ದರೆ ಸಂಸದರಿಗೆ ಸಮಸ್ಯೆ ಆಗುತ್ತದೆ. ದೇಶದ ವಿವಿಧ ರಾಜ್ಯಗಳಿಗೆ ಹೋದಾಗ ಸಂವಹನಕ್ಕೆ ಹಿಂದಿ ಅವಶ್ಯ ಎಂದರು.

ದಾಸವಾಳ ಹೂವಿನ ದಿಂಡು ನುಂಗಿ ಮಗು ಸಾವು

• **ಮೈಸೂರು:** ದಾಸವಾಳದ ಹೂವಿನ ದಿಂಡಿನ ಭಾಗವನ್ನು ನುಂಗಿದ ಆರೂವರೆ ತಿಂಗಳ ಮಗು ಉಸಿರಾಟದ ಸಮಸ್ಯೆಯಿಂದ ಬಳಲಿ ಮೃತಪಟ್ಟಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ದೊಡ್ಡಹೆಜ್ಜೂರು ಗ್ರಾಮದಲ್ಲಿ ಸಂಭವಿಸಿದೆ. ಹುಣಸೂರು ತಾಲೂಕಿನ ದೊಡ್ಡ ಹೆಜ್ಜೂರು ಗ್ರಾಮದ ನಿವಾಸಿಗಳಾದ ಸುದರ್ಶನ್ ಹಾಗೂ ನವ್ಯ ದಂಪತಿಯ ಎರಡನೇ ಪುತ್ರ ಚಿನ್ಮಯ್ ಗೌಡ ಸಾವಿಗೀಡಾದ ಮಗು. ಮನೆಯ ಹೊಸ್ತಿಲಿಗೆ ಪೂಜೆ ಮಾಡಿ ದಾಸವಾಳದ ಹೂವುಗಳನ್ನು ಇಡಲಾಗಿತ್ತು. ಈ ವೇಳೆ ಮಗು ಚಿನ್ಮಯ್ ತನ್ನ ಅಣ್ಣನ ಜತೆ ಆಟವಾಡುತ್ತಿದ್ದ. ಪೂಜೆಗಾಗಿ ಇಟ್ಟಿದ್ದ ದಾಸವಾಳ ಹೂವಿನ ಹಸಿರು ದಿಂಡಿನ ಭಾಗವನ್ನು ಕಿತ್ತು ಬಾಯಿಗೆ ಹಾಕಿಕೊಂಡಿದ್ದ ಚಿನ್ಮಯ್, ಇದನ್ನು ಗಮನಿಸಿದ ಮಗುವಿನ ಅಣ್ಣ ಹೂ ಹೊರತೆಗೆಯಲು ಪ್ರಯತ್ನಿಸಿದ್ದನಾದರೂ, ಅಷ್ಟರಲ್ಲೇ ಮಗು ಆ ದಿಂಡನ್ನು ನುಂಗಿದೆ. ಮಗು ನುಂಗಿದ ಹೂವಿನ ಭಾಗವು ನೇರವಾಗಿ ಶ್ವಾಸಕೋಶಕ್ಕೆ ಹೋಗಿ ಸಿಲುಕಿಕೊಂಡು ಮೃತಪಟ್ಟಿದೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲೆ | ಜೂನ್‌ನಿಂದ ಪ್ರಾರಂಭ

ಆರ್‌ವಿಕೆ ಶಾಲೆ ಲೋಕಾರ್ಪಣೆ

• **ಬೆಂಗಳೂರು:** ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ (ಆರ್‌ವಿಕೆ) – ಹುರುಳಿಚಿಕ್ಕನಹಳ್ಳಿ ಸಿಬಿಎಸ್‌ಸಿ ಶಾಲೆಯನ್ನು ಶಬರಿ ನಗರದಲ್ಲಿ ಲೋಕಾರ್ಪಣೆ ಮಾಡಲಾಯಿತು. ಆರ್‌ವಿಕೆ ಸಮೂಹದ 18ನೇ ಶಾಲೆ ಇದಾಗಿದ್ದು, ಈ ಜೂನ್‌ನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ.

ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಮಾತನಾಡಿ, ಸಾಮಾನ್ಯಜ್ಞಾನ ಹೆಚ್ಚಾಗಿರುವ ದೇಶ ಬಹುಬೇಗ ಉದ್ಧಾರವಾಗುತ್ತದೆ ಎಂಬುದನ್ನು ತಾವು ವಿದೇಶ ಪ್ರವಾಸದಲ್ಲಿ ಕಂಡುಕೊಂಡ ಅಂಶವಾಗಿದೆ. ಒಳ್ಳೆಯ ವಿಚಾರವನ್ನು ಬಳಸದೇ ಇದ್ದರೆ, ನಾವು ಸೂಕ್ಷ್ಮಗ್ರಾಹಿಗಳಾಗದೇ ಇದ್ದರೆ, ಒಳ್ಳೆಯದು ಕೆಟ್ಟದ್ದರ ನಡುವಿನ ವ್ಯತ್ಯಾಸ ತಿಳಿಯದಿದ್ದರೆ ಅದು ಪ್ರಯೋಜನವಾಗದು ಎಂದರು.

ಶಿಕ್ಷಣ ಹಾಗೂ ಸಾಕ್ಷರತೆಯ ನಡುವಿನ ವ್ಯತ್ಯಾಸದ ಕುರಿತು ಹೇಳುತ್ತ, ಶಿಕ್ಷಣ ಏನನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಕಲಿಸುತ್ತದೆ. ಆದರೆ ಇಂದು ಒಳ್ಳೆಯದು, ಕೆಟ್ಟದನ್ನು ನಿರ್ಧರಿಸುವುದೇ ಕಷ್ಟವಾಗುತ್ತಿದೆ. ಕತ್ತಲುಮಯ ಅಜ್ಞಾನದಿಂದ ಪಾರುಮಾಡುವ ಕಲಿಕೆಯನ್ನು ಸನಾತನವು ಶಿಕ್ಷಣ ಎಂದು ಕರೆಯಿತು. ಶಿಕ್ಷಣ ಚಾರಿತ್ರ್ಯವನ್ನು ನಿರ್ಮಿಸಬೇಕು, ಬೌದ್ಧಿಕ ಸಾಮರ್ಥ್ಯ ವಿಕಸಿಸಬೇಕು, ಸ್ವಾಭಿಮಾನಿ ಸ್ವಾವಲಂಬಿ ಜೀವನ ನೀಡಬೇಕು ಎಂದು ಹೇಳಿದರು.

ಅನ್ಯಾಯದ ಮಾರ್ಗದಲ್ಲಿ ಗೆಲ್ಲುವುದಕ್ಕಿಂತ ನ್ಯಾಯದ ಮಾರ್ಗದಲ್ಲಿ ಸೋತರೂ ಚಿಂತೆ ಇಲ್ಲ, ಅದನ್ನು ಪೋಷಕರು ಕಲಿಸಬೇಕು. ಶಿಕ್ಷಣವನ್ನು ಕಾಲುಭಾಗ ಶಿಕ್ಷಕರಿಂದ, ಕಾಲುಭಾಗ ಪರಿಶ್ರಮದಿಂದ, ಕಾಲು ಭಾಗ ಸ್ನೇಹಿತರಿಂದ, ಕಾಲುಭಾಗ ತನ್ನೊಳಗಿನ ಅರಿವಿನಿಂದ ಪಡೆಯಲಾಗುತ್ತದೆ. ಹಾಗಾಗಿ, ಶಿಕ್ಷಣ ಜೀವನಪರ್ಯಂತದ ಪ್ರಕ್ರಿಯೆಯಾಗಿದೆ. ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಂತಹ ಶಾಲೆ ಸಿಕ್ಕರೆ ಮಾನವ ಸಂಪನ್ಮೂಲ ಆಗುತ್ತಾರೆ, ದೇಶಭಕ್ತರಾಗುತ್ತಾರೆ. ಇನ್ನೊಬ್ಬರನ್ನು ಪ್ರೇರಿಸುವ ವ್ಯಕ್ತಿಗಳು ದೊರಕುತ್ತಾರೆ. ಇದರಿಂದ ಸಮಾಜದಲ್ಲಿ ಪೊಲೀಸರ ಅಗತ್ಯ ಕಡಿಮೆ ಆಗುತ್ತದೆ ಎಂದರು.



> ನಾವು ಮೆಕಾಲೆ ಶಿಕ್ಷಣವನ್ನು ಬದಲಾಯಿಸಲು ಸಾಧ್ಯವಾಗದು. ಆದರೆ ಶಿಕ್ಷಣದಲ್ಲಿ ಭಾರತೀಯತೆಯನ್ನು ತರಲು ಸಾಧ್ಯವಿದೆ. ನಾಡಿನ ಜ್ಞಾನ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ದೃಢಸಂಕಲ್ಪದಿಂದ ಶಾಲೆಗಳನ್ನು ಆರಂಭಿಸಲಾಗಿದೆ.
> ■ **ನಾ. ದಿನೇಶ್ ಹೆಗ್ಡೆ**, ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ

> ಒಂದು ಶಾಲೆ ಅಕಾಡೆಮಿಕ್ ಎಕ್ಸರ್‌ಸೈಜ್ ಆಗದೇ ಸಂಸ್ಕೃತಿ, ಸಂಸ್ಕಾರ ಕೇಂದ್ರವಾಗಬೇಕು. ಮೊಬೈಲ್, ಸೋಷಿಯಲ್ ಮೀಡಿಯಾ, ಎಐನಿಂದ ಹುಟ್ಟಿದ ಸವಾಲುಗಳನ್ನು ನಿರ್ವಹಿಸುವಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ.
> ■ **ಎಂ.ಪಿ. ಕುಮಾರ್**, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ

ಮೊಬೈಲ್ ನಿಷೇಧಕ್ಕಿಂತ ವಿವೇಕದ ಬಳಕೆ ಅಗತ್ಯ: ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಅವರು, ಇಂದಿನ ಶಾಲಾ ಶಿಕ್ಷಣ ಅಂಕಗಳ ಮೇಲೆ ಅವಲಂಬಿತವಾಗಿದ್ದು, ಸಂಸ್ಕಾರ ಶಿಕ್ಷಣ ಬೇಕಾಗಿದೆ. ಉತ್ತಮ ವ್ಯಕ್ತಿಗಳು ತಯಾರಾದರೆ ಉತ್ತಮ ರಾಷ್ಟ್ರ ನಿರ್ಮಾಣವಾಗುತ್ತದೆ, ಇಲ್ಲವಾದರೆ ದೇಶಕ್ಕೆ ಭವಿಷ್ಯವಿರುವುದಿಲ್ಲ, ಶಾಲೆ, ಮನೆ ಸಾಮಾಜಿಕ ಪರಿವರ್ತನೆಯ ಕೇಂದ್ರಗಳು. ಮೊಬೈಲ್ ಬಳಕೆಯನ್ನು ನಿಷೇಧ ಮಾಡುವುದಕ್ಕಿಂತ ಅದರ ಬಳಕೆಯ ಬಗೆಗೆ ವಿವೇಕವನ್ನು ಕಲಿಸಬೇಕು. ಮನೆಯಲ್ಲಿ ಆ ಬಗ್ಗೆ ಯೋಚನೆ ಮಾಡಿದರೆ ಮಕ್ಕಳು ಚೆನ್ನಾಗಿ ಬೆಳೆಯುತ್ತಾರೆ. ಸಮಾಜಕ್ಕೆ ಉತ್ತಮ ವ್ಯಕ್ತಿಗಳು ಬರಬೇಕಾದರೆ ಮನೆ, ಮಂದಿರ, ಮಸೀದಿ, ಶಾಲೆಗಳಲ್ಲಿ ಕಲಿಸಬೇಕು. ಸಮಸ್ಯೆ, ಸವಾಲುಗಳನ್ನು ಸಂಘಟಿತರಾಗಿ ಕಂಡು ಕೊಳ್ಳಬೇಕು. ಈ ಶಾಲೆ ಈ ಭಾಗದ ಶಕ್ತಿಕೇಂದ್ರವಾಗಲಿ ಎಂದು ಹಾರೈಸಿದರು.

ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ. ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು. ಮಕ್ಕಳು ಪ್ರಸ್ತುಪಡಿಸಿದ ಸಮೂಹಗೀತೆ, ಪ್ರದರ್ಶಿಸಿದ ಅರ್ಧನಾರೀಶ್ವರ ನೃತ್ಯ ಹಾಗೂ ದಶಾವತಾರ ನೃತ್ಯ ರೂಪಕಗಳು ಎಲ್ಲರ ಗಮನ ಸೆಳೆದವು.

ಗ್ಯಾಸ್ ಬಳಕೆ ಇಳಿಕೆಗೆ ಒಕ್ಕೂಟಗಳಿಗೆ ಸೂಚನೆ

• **ಬೆಂಗಳೂರು:** ಗ್ಯಾಸ್ ಬಳಕೆ ಪ್ರಮಾಣವನ್ನು ಶೇ.55ರ ಒಳಗೆ ಇಳಿಸಿಕೊಳ್ಳಬೇಕು, ಶೇ.100ರಷ್ಟು ಬಳಸಿದರೆ ಶೇ.30ರಷ್ಟು ಹೆಚ್ಚುವರಿ ವೆಚ್ಚ ಮಾಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಗ್ಯಾಸ್ ಬಳಕೆ ಇಳಿಕೆಗೆ ಹಾಲು ಒಕ್ಕೂಟಗಳಿಗೂ ಸೂಚನೆ ನೀಡಲಾಗಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದ್ದಾರೆ.



ಸೋಮವಾರ ತಮ್ಮ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಶೇ.100ರಷ್ಟು ಗ್ಯಾಸ್ ಬಳಸಿದರೆ ಉತ್ಪನ್ನಗಳ ಬೆಲೆ ಏರಿಕೆ ಮಾಡಬೇಕಾಗುತ್ತದೆ. ನಾವು ಕೂಡ ಅಗತ್ಯ ವಸ್ತುಗಳ ವ್ಯಾಪ್ತಿಯಲ್ಲಿ ಬರುತ್ತಿದ್ದು, ಇಂತಹ ಸಮಸ್ಯೆಗಳು ಎದುರಾಗಲಿವೆ. ಹೀಗಾಗಿ ಜನ ಈಗಲೇ ಎಚ್ಚೆತ್ತುಕೊಳ್ಳುವುದು ಉತ್ತಮ. ಸದ್ಯಕ್ಕೆ ಹಾಲು ಒಕ್ಕೂಟಕ್ಕೆ ಈ ಖರ್ಚು ವೆಚ್ಚದ ಸಮಸ್ಯೆ ಎದುರಾಗಿಲ್ಲ ಎಂದರು. ಈ ಮುನ್ನ ಫರ್ನೆಸ್ ಆಯಿಲ್, ಗ್ಯಾಸ್ ಬೆಲೆ ಕಡಿಮೆ ಇತ್ತು, ಈಗ ಬೆಲೆ ಹೆಚ್ಚಾಗಿರುವುದರಿಂದ ಸ್ಥಳೀಯವಾಗಿ ಸೌದೆ ಒಲೆಯನ್ನು ಒಂದು ಪ್ಲಾಂಟ್‌ನಲ್ಲಿ ಅಳವಡಿಸಿಕೊಂಡಿದ್ದೇವೆ ಎಂದು ಹೇಳಿದರು.

ಹಣ ಕೊಟ್ಟು ಪಂದ್ಯ ನೋಡಲಿ

ಉಚಿತವಾಗಿ ಟಿಕೆಟ್ ಕೇಳಿರುವುದು ತಪ್ಪು. ಪಂದ್ಯ ವೀಕ್ಷಣೆ ಮಾಡುವ ಆಸೆ ಇರುವವರು ವೈಯಕ್ತಿಕವಾಗಿ ಹಣ ಕೊಟ್ಟು ಹೋಗಿ ನೋಡಲಿ. ಐಪಿಎಲ್ ರಾಷ್ಟ್ರವನ್ನು ಪ್ರತಿನಿಧಿಸುವ ಪಂದ್ಯಾವಳಿ ಅಲ್ಲ, ವಾಣಿಜ್ಯ ಉದ್ದೇಶಿತ ಪಂದ್ಯಾವಳಿ. ಇವುಗಳ ಬಗ್ಗೆ ಜನಪ್ರತಿನಿಧಿಗಳು ಹೆಚ್ಚು ಗಮನಹರಿಸುವುದು ಒಳ್ಳೆಯದಲ್ಲ ಎಂದು ಡಿ.ಕೆ.ಸುರೇಶ್ ಹೇಳಿದರು.

ರಸಗೊಬ್ಬರ ಅಭಾವ ಸೃಷ್ಟಿ ಸಾಧ್ಯತೆ

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅವಲಂಬಿತವಾಗಿರುವ ವಸ್ತುಗಳ ಉತ್ಪಾದನೆ ಕಡಿಮೆಯಾದರೆ ಬೆಲೆ ಏರಿಕೆಯಾಗುತ್ತದೆ.

ವಿಮಾನ ನಿಲ್ದಾಣಕ್ಕೆ ನುಗ್ಗಿದ ಕರಡಿ ಸೆರೆ

• **ಶಿವಮೊಗ್ಗ:** ಕಾಡಿನಿಂದ ಬಂದ ಕರಡಿಯೊಂದು ಸಮೀಪದ ಸೋಗಾನೆ ವಿಮಾನ ನಿಲ್ದಾಣದ ಕಾಂಪೌಂಡ್ ಹಾರಿ ಒಳಗೆ ಸೇರಿಕೊಂಡಿದ್ದು, ಆತಂಕ ಸೃಷ್ಟಿಸಿದ ಘಟನೆ ಸೋಮವಾರ ನಡೆಯಿತು.

ಸೋಮವಾರ ಬೆಳಗ್ಗೆ 9.30ರ ಸುಮಾರಿಗೆ ಕರಡಿ ಕಾಂಪೌಂಡ್ ಹಾರಿ ವಿಮಾನ ನಿಲ್ದಾಣದ ಒಳಗೆ ಹೋಗಿರುವುದನ್ನು ಕಂಡ ನಿವಾಸಿಗಳು ನಿಲ್ದಾಣದ ಸಿಬ್ಬಂದಿಗೆ ಮಾಹಿತಿ ನೀಡಿದರು. ತಕ್ಷಣ ಜಾಗೃತರಾದ ಅಧಿಕಾರಿಗಳು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಕರಡಿ ಪತ್ತೆ ಕಾರ್ಯಕ್ಕೆ ಮುಂದಾದರು. ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ ಊರಿನ ನಿವಾಸಿಗಳು ಕರಡಿ ಬಂದಿರುವುದನ್ನು ವಿಡಿಯೋ ಮಾಡಿಕೊಂಡಿದ್ದರಿಂದ ಕರಡಿ ನಿಲ್ದಾಣದ ಒಳಗೆ ಸೇರಿಕೊಂಡಿರುವುದು ಖಾತರಿಯಾಗಿತ್ತು. ನಿಲ್ದಾಣದ ಪ್ರದೇಶದ ಒಳಗೆ ಅಲ್ಲಲ್ಲಿ ಪೊದೆ ಬೆಳೆದಿರುವುದರಿಂದ ಕರಡಿ ಅಲ್ಲೆ ಅವಿತಿರಬಹುದೆಂಬ ಶಂಕೆಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಆಹಾರ ಅರಸುತ್ತಾ ವಿಮಾನ ನಿಲ್ದಾಣ ಪಕ್ಕದ ವಿನಾಯಕ ನಗರದ ಸುತ್ತಮುತ್ತ ಕರಡಿ ಸಂಚಾರ ನಡೆಸಿತ್ತು.

ಬಳಿಕ ಹರಸಾಹಸಪಟ್ಟು ಅರಣ್ಯ ಸಿಬ್ಬಂದಿ ಜ್ಯೋತಿನಗರದ ಅಂಗನವಾಡಿ ಬಳಿ ಕರಡಿಗೆ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆಹಿಡಿದು ವೈದ್ಯಕೀಯ ಚಿಕಿತ್ಸೆ ನೀಡಿ ಪುನರ್ವಸತಿ ವಿಭಾಗಕ್ಕೆ ಕಳುಹಿಸಿದರು. ಕರಡಿ ಸೆರೆಯ ಬಳಿಕ ಗ್ರಾಮಸ್ಥರು ನಿಟ್ಟುಸಿರು ಬಿಟ್ಟರು. ಸುಮಾರು 11.30ರವರೆಗೆ ಈ ಕಾರ್ಯಾಚರಣೆ ನಡೆಯಿತು. ಉಂಬ್ಳೆಬೈಲು ಅರಣ್ಯ ವಿಭಾಗದ ಅಧಿಕಾರಿಗಳು, ಸಿಬ್ಬಂದಿ ಮತ್ತು ತುಂಗಾನಗರ ಪೊಲೀಸರು ಈ ಸಂದರ್ಭದಲ್ಲಿದ್ದರು.

ಸೇತುವೆಗೆ ಬಿದ್ದ ಬಸ್ 30 ಪ್ರಯಾಣಿಕರಿಗೆ ಗಾಯ



• **ಭದ್ರಾವತಿ:** ತಾಲೂಕಿನ ಕಾಗೇಹಳ್ಳ ಗ್ರಾಮದ ಸೇತುವೆಗೆ ಖಾಸಗಿ ಬಸ್ ಉರುಳಿ ಬಿದ್ದ ಪರಿಣಾಮ ಸುಮಾರು 30ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ.

ಶ್ರೀ ರೇಣುಕಾಂಬಾ ಟ್ರಾವೆಲ್ಸ್ ಮಾಲೀಕತ್ವದ ಖಾಸಗಿ ಬಸ್ ದಾವಣಗೆರೆಯಿಂದ ಭದ್ರಾವತಿ ನಗರಕ್ಕೆ ಆಗಮಿಸುತ್ತಿದ್ದಾಗ ಕಾಗೇಹಳ್ಳ ಗ್ರಾಮದ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಮಧ್ಯಾಹ್ನ ಸುಮಾರು 1.30ರ ಸಮಯದಲ್ಲಿ ಸೇತುವೆಗೆ ಉರುಳಿ ಬಿದ್ದಿದೆ. ಅಪಘಾತ ಸಂದರ್ಭದಲ್ಲಿ ಬಸ್ಸಿನಲ್ಲಿ ಒಟ್ಟು 35 ಪ್ರಯಾಣಿಕರಿದ್ದರು ಎಂದು ಹೇಳಲಾಗಿದೆ. ಅಪಘಾತದಲ್ಲಿ ಗಾಯಗೊಂಡ ಪ್ರಯಾಣಿಕರನ್ನು ಹಳೇನಗರದ ತಾಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಈ ಪೈಕಿ ಗಂಭೀರವಾಗಿ ಗಾಯಗೊಂಡಿರುವ ಸುಮಾರು 17ಕ್ಕೂ ಹೆಚ್ಚು ಪ್ರಯಾಣಿಕರನ್ನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಮಾಹಿತಿ ತಿಳಿದ ತಕ್ಷಣ ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕದಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಪೊಲೀಸ್ ಉಪಾಧೀಕ್ಷಕ ಪ್ರಕಾಶ್ ರಾಥೋಡ್, ಗ್ರಾಮಾಂತರ ಪೊಲೀಸ್ ಠಾಣೆ ಉಪ ನಿರೀಕ್ಷಕರು ಸೇರಿದಂತೆ ಇನ್ನಿತರ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಸಂತ್ರಸ್ತೆಗೆ ಆರೋಪಿ ವಿಡಿಯೋ ಕಾಲ್ ಬೆದರಿಕೆ

• **ಧಾರವಾಡ:** ಇಲ್ಲಿನ ಕೇಂದ್ರ ಕಾರಾಗೃಹದ ವಿಚಾರಣಾಧೀನ ಕೈದಿಯೊಬ್ಬ ಕಾನೂನು ಬಾಹಿರವಾಗಿ ಮೊಬೈಲ್ ಬಳಸಿ, ಪೋಕ್ಸೋ ಪ್ರಕರಣದ ಸಂತ್ರಸ್ತ ಅಪ್ರಾಪ್ತ ಬಾಲಕಿಗೆ ವಿಡಿಯೋ ಕಾಲ್ ಮಾಡಿ, ಬೆದರಿಕೆ ಹಾಕಿದ ಘಟನೆ ಬೆಳಕಿಗೆ ಬಂದಿದೆ.

ಬಾಲಕಿಯ ಮೇಲೆ ದೌರ್ಜನ್ಯ ಎಸಗಿದ ಆರೋಪದಡಿ ಜೈಲು ಪಾಲಾಗಿರುವ ಆರೋಪಿ, ಜೈಲಿನ ಒಳಗಿನಿಂದ ಬಾಲಕಿಯ ಮೊಬೈಲ್‌ಗೆ ವಿಡಿಯೋ ಕಾಲ್ ಮಾಡಿ, ನ್ಯಾಯಾಲಯದಲ್ಲಿ ತನ್ನ ಪರವಾಗಿ ಸಾಕ್ಷಿ ನುಡಿಯುವಂತೆ ಬೆದರಿಕೆ ಹಾಕಿದ್ದಾನೆ. ಆರೋಪಿ ಹುಬ್ಬಳ್ಳಿಯ ಫರವೇಜ್ ಬಾಲಕಿಗೆ ಕರೆ ಮಾಡಿ, ತಾನು ನಿರ್ದೋಷಿ ಎಂದು ಹೇಳಬೇಕು. ತನ್ನ ವಿರುದ್ಧ ಸಾಕ್ಷಿ ಹೇಳಿದರೆ, ತನ್ನ ಜೊತೆಗಿನ ಅಶ್ಲೀಲ ಖಾಸಗಿ ವಿಡಿಯೋ ವೈರಲ್ ಮಾಡುವುದಾಗಿಯೂ ಸಹ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ.

ಆತಂಕದಲ್ಲಿ ಬಾಲಕಿ

ಜೈಲಿನಿಂದ ಕರೆ ಬಂದ ಕಾರಣ ಸಂತ್ರಸ್ತ ಬಾಲಕಿ ಮತ್ತು ಆಕೆಯ ಪಾಲಕರು ಆತಂಕಕ್ಕೆ ಒಳಗಾಗಿದ್ದಾರೆ. ಆತ ಜೈಲಿನಲ್ಲಿದ್ದರೂ, ಸ್ಮಾರ್ಟ್‌ಫೋನ್ ಬಳಸಿ ಬಾಲಕಿ ಸಂಪರ್ಕ ಮಾಡಿರುವುದು ಕಾರಾಗೃಹದ ಭದ್ರತಾ ಲೋಪವನ್ನು ಎತ್ತಿ ತೋರಿಸುತ್ತದೆ. ಜೈಲಿನಲ್ಲಿ ಮೊಬೈಲ್ ಮತ್ತು ಇಂಟರ್‌ನೆಟ್ ಲಭಿಸಿದ್ದು ಹೇಗೆ? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಹಿಂದೆ ಜೈಲಿನಲ್ಲಿ ಮೊಬೈಲ್ ಪತ್ತೆ ಆಗಿವೆ. ಈ ಘಟನೆ ಜೈಲು ಅಧಿಕಾರಿಗಳ ಕಾರ್ಯವೈಖರಿ ಮೇಲೆ ಸಂಶಯ ಮೂಡಿಸಿದೆ.

ನಾಳೆ ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ ಮುರ್ಮು

• **ತುಮಕೂರು:** ಏಪ್ರಿಲ್ 1ರಂದು ಸಿದ್ಧಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿದ್ದು, ಅಂದು ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಈ ಸಂಬಂಧ ಸಭೆ ನಡೆಸಿದರು.



ತುಮಕೂರು ಜಿಲ್ಲೆಗೆ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಕೇಂದ್ರ ಗೃಹ ಸಚಿವರು, ರಾಜ್ಯಪಾಲರು ಸೇರಿದಂತೆ ಗಣ್ಯರು ಆಗಮಿಸುವ ಹಿನ್ನೆಲೆ ಲೋಪವಿಲ್ಲದೆ ಸೂಕ್ತ ಭದ್ರತೆ ಒದಗಿಸಲು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ ನಿಯೋಜನೆ ಮಾಡಲಾಗಿದೆ ಎಂದು ಸಭೆಗೆ ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಭದ್ರತೆ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ರಾಷ್ಟ್ರಪತಿ ಅವರ ಭದ್ರತೆಗೆ ಸುಮಾರು 15,000 ಪೊಲೀಸ್ ಸಿಬ್ಬಂದಿ ನಿಯೋಜಿಸಲು ಪೊಲೀಸ್ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ರಾಷ್ಟ್ರಪತಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮತ್ತೆ ನಿರ್ಗಮಿಸುವವರೆಗೆ ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಇರಲಿದೆ. ತುಮಕೂರು ವಿಶ್ವವಿದ್ಯಾಲಯದಲ್ಲಿ ಹೆಲಿಪ್ಯಾಡ್, ವಾಹನ ಸಂಚರಿಸುವ ರಸ್ತೆ ಮಾರ್ಗಗಳು ಹಾಗೂ ಕಾರ್ಯಕ್ರಮ ನಡೆಯುವ ಜಾಗ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ತಂಡಗಳನ್ನು ರಚಿಸಿ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಅಲ್ಲದೆ, ಮಾ.31 ಪೂರ್ವ ತಾಲೀಮು ಪ್ರಕ್ರಿಯೆ ಹಮ್ಮಿಕೊಂಡಿರುವುದಾಗಿ ಮಾಹಿತಿ ನೀಡಿದರು.

ತೃತೀಯ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಕಡ್ಡಾಯವಲ್ಲ | ನಿಲುವಿಗೆ ಕನ್ನಡ ಸಂಘಟನೆಗಳ ಸ್ವಾಗತ

ಕೇವಲ ಗ್ರೇಡ್ ನೀಡುವುದರಿಂದ ಕನ್ನಡ ಭಾಷೆಗೂ ಕುತ್ತು?

▸ **ನಂದಿನಿ ಎನ್.**

• **ಬೆಂಗಳೂರು:** ರಾಜ್ಯ ಸರ್ಕಾರವು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ತೃತೀಯ ಭಾಷೆಯ ಕಲಿಕೆಯನ್ನು ಬೋಧನೆಗೆ ಮಾತ್ರ ಸೀಮಿತಗೊಳಿಸಿ, ಅಂಕಗಳನ್ನು ಪರಿಗಣಿಸದೆ ಕೇವಲ ಗ್ರೇಡ್ ನೀಡುವ ನಿರ್ಧಾರ ಕೈಗೊಂಡಿದೆ. ಆದರೆ, ಉರ್ದು ಶಾಲೆಗಳು ಸೇರಿದಂತೆ ತೃತೀಯ ಭಾಷೆಯಾಗಿ ಎಲ್ಲಿ ಕನ್ನಡ ಕಲಿಯುತ್ತಿದ್ದಾರೋ ಅಂತಹ ಶಾಲೆಯ ಕನ್ನಡ ಭಾಷೆಗೆ ಈ ನಿರ್ಧಾರ ಕುತ್ತು ತರುವಂತಾಗಿದೆ.

ರಾಜ್ಯ ಸರ್ಕಾರ ಇತ್ತೀಚೆಗೆ ಕೈಗೊಂಡಿರುವ ನಿರ್ಧಾರದಂತೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯು ಸೇರಿದಂತೆ ತೃತೀಯ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಲ್ಲ ಎಂಬ ನಿಲುವನ್ನು ಹಲವು ಕನ್ನಡಪರ ಸಂಘಟನೆಗಳು ಸ್ವಾಗತಿಸಿವೆ. ಆದರೆ, ತೃತೀಯ ಭಾಷೆ ಕನ್ನಡ ಇರುವಲ್ಲಿ ಕನ್ನಡಕ್ಕೂ ಕೇವಲ ಗ್ರೇಡಿಂಗ್ ನೀಡುವಂತಾಗಿದೆ. ಕರ್ನಾಟಕದಲ್ಲಿ ಕನ್ನಡ ಕಲಿಯುವುದು ಕಡ್ಡಾಯ ಎಂದು ಸರ್ಕಾರದ ನಿಯಮವಿದೆ. ವಿಶೇಷವಾಗಿ ರಾಜ್ಯದಲ್ಲಿರುವ ಸುಮಾರು 4,300 ಉರ್ದು ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ಅಳವಡಿಸಲು ಕನ್ನಡ ಕಲಿಸುವಂತೆ ಸೂಚಿಸಲಾಗಿದೆ. ಆದರೆ, ಕನ್ನಡೇತರ ಮೀಡಿಯಂಗಳಲ್ಲಿ ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಅಲ್ಲ, ತೃತೀಯ ಭಾಷೆಯಾಗಿ ಮಾತ್ರ ಪರಿಗಣಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಅಂತಹ ಶಾಲೆಗಳಲ್ಲಿ ನಮ್ಮ ನಾಡಿನ ಜೀವ ಭಾಷೆ ಕನ್ನಡವಾಗಿರಲಿ ಇನ್ನೂ ಕೆಲವು ಕಡೆಗಳಲ್ಲಿ ಅಪರೂಪವಾಗಿ ಸಂಸ್ಕೃತ ಭಾಷೆ ತೃತೀಯ ಭಾಷೆಯಲ್ಲಿದ್ದರೆ, ಅದನ್ನು ಗ್ರೇಡಿಂಗ್ (ಎ,ಬಿ,ಸಿ ಮತ್ತು ಡಿ) ರೂಪದಲ್ಲಿ ನೀಡಲಾಗುತ್ತದೆ ಎಂಬುದೇ ಆತಂಕಕ್ಕೀಡು ಮಾಡಿದೆ. ಈ ತೃತೀಯ ಭಾಷೆಯಲ್ಲಿ ಯಾವುದೇ ಭಾಷೆಯಾಗಿದ್ದರೂ, ಕೇವಲ ಗ್ರೇಡಿಂಗ್‌ಗೆ ಮಾತ್ರ ಸೀಮಿತವಾಗಲಿದ್ದು, ವಾರ್ಷಿಕ ಅಂಕಗಳ ಪಟ್ಟಿಗೆ ಪರಿಗಣನೆಯಾಗುವುದಿಲ್ಲ. 525 ಅಂಕಗಳಿಗೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಬೇಕಿದೆ.




> ಎಲ್ಲ ತೃತೀಯ ಭಾಷೆಗಳಿಗೂ ಸರ್ಕಾರದ ಈ ನಿರ್ಧಾರ ಅನ್ವಯವಾಗಲಿದ್ದು, ಅಂಕಗಳ ಬದಲಾಗಿ ಎ,ಬಿ,ಸಿ ಮತ್ತು ಡಿ ಗ್ರೇಡಿಂಗ್ ನೀಡಲಾಗುತ್ತದೆ. ಆದರೆ, ಮುಂದಿನ ವರ್ಷದಿಂದ ದ್ವಿಭಾಷಾ ನೀತಿಯಂತೆ ಕನ್ನಡ ಕಡ್ಡಾಯಗೊಳಿಸಲಿದ್ದು, ಆಗ ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಲಿದೆ.
> ■ **ಸುರಳ್ಕರ್ ವಿಕಾಸ್ ಕಿಶೋರ್**, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

ಮುಂದಿನ ವರ್ಷದಿಂದ ಕನ್ನಡ ಕಡ್ಡಾಯ

ದ್ವಿಭಾಷಾ ನೀತಿಯಂತೆ ಮುಂದಿನ ವರ್ಷದಿಂದ ಕನ್ನಡ ಕಡ್ಡಾಯಗೊಳಿಸಲು, ಸರ್ಕಾರ ನಿರ್ಧರಿಸಿದೆ. ಈ ನಿರ್ಧಾರದಿಂದ ಕನ್ನಡ ತೃತೀಯ ಭಾಷೆಯಿಂದ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಲಿದೆ. ಆಗ, ಕನ್ನಡೇತರ ಮಾತೃಭಾಷೆಯಾಗಿರುವ ಶಾಲೆಗಳಲ್ಲೂ (ಉರ್ದು, ಮರಾಠಿ, ತಮಿಳು ಸೇರಿದಂತೆ ಇತರೆ ಶಾಲೆಗಳಲ್ಲಿ) ಕನ್ನಡ ಕಡ್ಡಾಯವಾಗಲಿದೆ.

ಹೋಟೆಲ್‌ಗಳಿಗೆ ಹೆಚ್ಚುವರಿ ಗ್ಯಾಸ್ ಸಿಲಿಂಡರ್ ವಿತರಣೆ

• **ಬೆಂಗಳೂರು:** ಹೋಟೆಲ್‌ಗಳಿಗೆ 17,500 ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಘೋಷಿಸಿದ್ದಾರೆ.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಹೋಟೆಲ್‌ಗಳಿಗೆ 17,500 ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸಲಾಗುವುದು. ಮಾ.31ರಿಂದ ಹೋಟೆಲ್ ಮಾಲೀಕರಿಗೆ ಡಿಸೇಲ್ ವಿತರಣೆ ಆರಂಭವಾಗಲಿದೆ. ಈ ಪ್ರಕ್ರಿಯೆಯು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಆದರೆ ಹೋಟೆಲ್ ಮಾಲೀಕರ ಆತಂಕ ನಾಳೆಯಿಂದ ಬಗೆಹರಿಯಲಿದೆ ಎಂದು ಹೇಳಿದರು.

ದೇಶೀಯ ಸಿಲಿಂಡರ್‌ಗಳ ವಿತರಣೆಯಲ್ಲೂ ವಿಳಂಬವಾಗುತ್ತಿದ್ದು, ಗ್ರಾಹಕರು ವಿನಾಕಾರಣ ವಿತರಕರ ಕಚೇರಿಗೆ ಹೋಗಬಾರದು. 25 ದಿನಗಳ ನಂತರ ಬುಕ್ ಮಾಡಿದರೆ ಸಿಲಿಂಡರ್ ಲಭ್ಯವಾಗುತ್ತದೆ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಇದು 45 ದಿನಗಳಿಗೆ ಅನ್ವಯಿಸಲಿದೆ ಎಂದು ತಿಳಿಸಿದ್ದಾರೆ.



10ವರ್ಷದಿಂದ ಸ್ವಂತ ಮಗಳನ್ನೇ ಗೃಹಬಂಧನದಲ್ಲಿ ಇಟ್ಟಿದ್ದ ಪೋಷಕರು!

ಪುಟ ೧➔ಸ್ನೇಹಾಗೆ ಬಾನಾಮತಿಯಾಗಿದೆ ಎಂದು ಸ್ವಾಮೀಜಿಯೊಬ್ಬರು ಹೇಳಿದ್ದರಂತೆ. ಬಾನಾಮತಿ ತೆಗೆಯಲು ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ ಎಂದಿದ್ದಾರೆ. ಹಾಗಾಗಿ ನಾವು ಮಗಳನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದೇವೆ. ಸರಪಳಿ ಬಿಚ್ಚಿದರೆ ಕಲ್ಲು ಎಸೆಯುವುದು, ಹೊಡೆಯುವುದು, ಓಡಿಹೋಗುವುದು ಮಾಡುತ್ತಾಳೆ. ನಮ್ಮ ಮೂವರು ಮಕ್ಕಳ ಪೈಕಿ ಓರ್ವ ಮಗಳ ಸ್ಥಿತಿ ಹೀಗಾಗಿದೆ. ಆದ್ದರಿಂದ ಅನಿವಾರ್ಯವಾಗಿ ಮಗಳನ್ನು ಗೃಹಬಂಧನದಲ್ಲಿಟ್ಟಿದ್ದೇವೆ ಎಂದು ಸ್ನೇಹಾ ತಂದೆ ಸಿದ್ರಾಯ ಅಳಲು ತೋಡಿಕೊಂಡಿದ್ದಾರೆ.ಕಾಗವಾಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಮಾನಸಿಕ ಸಮಸ್ಯೆಗೆ ಮನೋವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಕೊಡಿಸುವುದನ್ನು ಬಿಟ್ಟು ಬಾನಾಮತಿ ಹೆಸರಲ್ಲಿ ಮಗಳನ್ನು ಕಟ್ಟಿ ಹಾಕಿ ಕಳೆದ 10 ವರ್ಷಗಳಿಂದ ಗೃಹಬಂಧನದಲ್ಲಿಟ್ಟು ಶಿಕ್ಷಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಬಿಜೆಪಿ ಬೆಂಬಲ ಕಂಡು ಕಾಂಗ್ರೆಸ್ ಅತಂತ್ರ: ಬಿವೈವಿ

ಪುಟ ೧➔ಬಳಿಕ ಮಾತನಾಡಿದ ಅವರು, ಉಪಚುನಾವಣೆಯ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು ಬಾಗಲಕೋಟೆ ಮತಕ್ಷೇತ್ರ ರಣರಂಗವಾಗಿ ಬದಲಾಗಿದೆ ಎಂದರು.

ಕಳೆದ 3 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಹಿಂದು ಕಾರ್ಯಕರ್ತರ ಅಪಮಾನ ಮತ್ತು ಸುಳ್ಳು ಕೇಸ್ ದಾಖಲು ಪ್ರಕರಣಗಳು ಹೆಚ್ಚಾಗಿವೆ. ಬಾಗಲಕೋಟೆ ಸೇರಿದಂತೆ ವಿವಿಧೆಡೆ ಹಿಂದು ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ನಡೆಯುತ್ತಿವೆ. ದೇಶದ್ರೋಹಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಉದ್ಯೋಗ ಭರವಸೆ ನೀಡಿ ಒಂದು ಹುದ್ದೆಯನ್ನು ಭರ್ತಿ ಮಾಡದೇ ಪ್ರತಿಭಟನೆ ಮಾಡುವ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಟಿ ಪ್ರಹಾರ ಮಾಡಿಸಿದ್ದಾರೆ. ಸರ್ಕಾರದ ಇಂತಹ ಸಾಲು ಸಾಲು ವೈಫಲ್ಯಗಳೇ ಬಿಜೆಪಿ ಗೆಲ್ಲಿಸುತ್ತವೆ ಎಂದರು.

ಫಲಿಸದ ಕುತಂತ್ರ: ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕಾಂಗ್ರೆಸ್‌ಗೆ ಚುನಾವಣೆ ಮೊದಲೇ ಸೋಲು ಖಚಿತವಾಗಿದ್ದು ಅತಂತ್ರ ಸ್ಥಿತಿ ತಲುಪಿದೆ. ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಚಾರದ ಮುಂದೆ ಮುಖ್ಯಮಂತ್ರಿಗಳ ಪ್ರಚಾರ ಕೆಲಸ ಮಾಡುವುದಿಲ್ಲ. ಅವರ ಯಾವ ಕುತಂತ್ರವೂ ಫಲ ನೀಡದ ಕಾರಣ ವಾಸ್ತವ್ಯ ಹೂಡಲು ಮುಂದಾಗಿದ್ದಾರೆ ಎಂದು ಹೇಳಿದರು. ಮತಯಾಚನೆಯಲ್ಲಿ ಜಮಖಂಡಿ ಶಾಸಕರಾದ ಜಗದೀಶ ಗುಡಗುಂಟಿ, ಬಾದಾಮಿ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯಕ, ಸರಸ್ವತಿ ಕುರಬರ, ಶೀವಲೀಲಾ ಪಟ್ಟಣಶೆಟ್ಟಿ ಕಿರಣ ಕೋರಿ, ಮಲ್ಲು ಕಾಂಭಳೆ, ವಿಶ್ವನಾಥ ವಿಜಾಪುರ ಸೇರಿದಂತೆ ಬಿಜೆಪಿ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ನಕ್ಸಲ್‌ಮುಕ್ತ ಭಾರತ

ಪುಟ ೧➔ಛತ್ತೀಸ್‌ಗಢ, ಜಾರ್ಖಂಡ್, ಒಡಿಶಾ, ಮಹಾರಾಷ್ಟ್ರ, ಕೇರಳ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಒಳಗೊಂಡ ನಕ್ಸಲ ಪ್ರಭಾವಿತ ಪ್ರದೇಶವನ್ನು ಅವರು ಉಲ್ಲೇಖಿಸಿದರು. ಈ ಚರ್ಚೆ ನಕ್ಸಲ್ ಹಿಂಸೆಯನ್ನು ನಿರ್ಮೂಲನೆ ಮಾಡುವ ಗಡುವಿನ ಮುನ್ನಾದಿನ ನಡೆಯಿತು. ಕಳೆದ ವರ್ಷ, ಶಾ ಅವರು 2026ರ ಮಾರ್ಚ್ 31ರೊಳಗೆ ದೇಶದಲ್ಲಿ ಎಡಪಂಥೀಯ ಉಗ್ರವಾದವನ್ನು ಅಂತ್ಯಗೊಳಿಸಲಾಗುತ್ತದೆ ಎಂದು ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ನಕ್ಸಲರ ವಿರುದ್ಧ ಮಹತ್ವದ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

ಭದ್ರತಾ ಪಡೆಗಳ ಸಾಧನೆಗಳ ವಿವರ ನೀಡಿದ ಗೃಹ ಸಚಿವರು, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢದ ರಾಜ್ಯ ಸಮಿತಿಗಳ ಎಲ್ಲಾ ಸದಸ್ಯರು ಶರಣಾಗಿದ್ದಾರೆ ಎಂದು ಹೇಳಿದರು. ಒಡಿಶಾದಲ್ಲಿ ಉಳಿದಿದ್ದ ನಾಲ್ವರಲ್ಲಿ ಒಬ್ಬರು ಶರಣಾಗಿದ್ದು, ಮೂವರು ಸಾವಿಗೀಡಾಗಿದ್ದಾರೆ ಎಂದು ತಿಳಿಸಿದರು. ತೆಲಂಗಾಣದಲ್ಲಿ ಆರು ಮಂದಿ ಶರಣಾಗಿದ್ದು, ಮೂವರು ಸಾವಿಗೀಡಾಗಿದ್ದಾರೆ ಮತ್ತು ಈಗ ಅಲ್ಲಿ ಒಬ್ಬರೂ ಉಳಿದಿಲ್ಲ ಎಂದು ಹೇಳಿದರು.

ನಕ್ಸಲರಿಗೆ ಅಭಿವೃದ್ಧಿಯಲ್ಲ,ಅಧಿಕಾರದಲ್ಲೇ ಆಸಕ್ತಿ:'ರಾಜಕೀಯ ಅಧಿಕಾರವು ಬಂದೂಕಿನ ನಳಿಕೆಯಿಂದ ಬೆಳೆಯುತ್ತದೆ' ಎಂಬುದು ಮಾವೋವಾದಿಗಳ ಮೂಲ ಸಿದ್ಧಾಂತವಾಗಿದ್ದು, ಜನರಿಗೆ ಸೇವೆ ಸಲ್ಲಿಸುವುದು ಅಥವಾ ಅಭಿವೃದ್ಧಿಯನ್ನು ಉತ್ತೇಜಿಸುವುದು ಅವರ ಉದ್ದೇಶವೇ ಅಲ್ಲ ಎಂದು ಅಮಿತ್ ಶಾ ಮಾವೋವಾದಿ ಸಿದ್ಧಾಂತದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ದೇಶವನ್ನು ಮಾವೋವಾದಿಗಳಿಂದ ಮುಕ್ತಗೊಳಿಸುವ ಪ್ರಯತ್ನಗಳ ಕುರಿತಾದ ಚರ್ಚೆಯ ಸಂದರ್ಭದಲ್ಲಿ ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಅವರ ಏಕೈಕ ಗುರಿ ತಮ್ಮ ಸಿದ್ಧಾಂತಗಳನ್ನು ಆದಿವಾಸಿ ಸಮುದಾಯಗಳಲ್ಲಿ ಹರಡುವುದು ಮತ್ತು ಅಧಿಕಾರ ಕಬಳಿಸು ವುದು. ಅವರ ಸಿದ್ಧಾಂತದಲ್ಲಿ ಅಭಿವೃದ್ಧಿ, ಪ್ರಜಾಪ್ರಭುತ್ವ ಅಥವಾ ಪ್ರಗತಿಯ ಬಗ್ಗೆ ಯಾವುದೇ ಚರ್ಚೆಯಿಲ್ಲ' ಎಂದರು.

ನ್ಯಾಯದ ಹೆಸರಿನಲ್ಲಿ ಮಾವೋವಾದಿ ಹಿಂಸೆಯನ್ನು ಸಮರ್ಥಿಸುವವರನ್ನೂ ಇದೇ ವೇಳೆ ಅಮಿತ್ ಶಾ ಟೀಕಿಸಿದರು. ಸಂವಿಧಾನವನ್ನು ಉಲ್ಲಂಘಿಸಿ, ಶಸ್ತ್ರಾಸ್ತ್ರಗಳನ್ನು ಎತ್ತಿಕೊಂಡು ನಿರಪರಾಧಿ ನಾಗರಿಕರನ್ನು ಕೊಲ್ಲುವವರು ಹೇಗೆ ಭಗತ್ ಸಿಂಗ್ ಮತ್ತು ಬಿರ್ಸಾ ಮುಂಡಾರಂತಹ ಸ್ವಾತಂತ್ರ್ಯ ಹೋರಾಟ ಗಾರರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳಬಹುದು ಎಂದು ಅವರು ಪ್ರಶ್ನಿಸಿದರು. 'ಇಂತಹ ಹೋಲಿಕೆಗಳು ಸಂಪೂರ್ಣವಾಗಿ ಅಸ್ವೀಕಾರಾರ್ಹ' ಎಂದು ಅವರು ಹೇಳಿದರು.

ಮೋದಿ ಸರ್ಕಾರವು ಭದ್ರತೆ ಮತ್ತು ಅಭಿವೃದ್ಧಿ ಎಂಬ ತಂತ್ರದ ಮೂಲಕ ಮಾವೋವಾದವನ್ನು ನಿರ್ಮೂಲನೆ ಮಾಡುವುದಕ್ಕೆ ಬದ್ಧವಾಗಿದೆ. ಎಡಪಂಥೀಯ ಆತಿರೇಕದ ವಿರುದ್ಧದ ಹೋರಾಟದಲ್ಲಿ ಪ್ರಾಣ ಕಳೆದುಕೊಂಡ ಭದ್ರತಾ ಸಿಬ್ಬಂದಿ ಮತ್ತು ನಾಗರಿಕರಿಗೆ ಅವರು ಇದೇ ವೇಳೆ ಶ್ರದ್ಧಾಂಜಲಿ ಸಲ್ಲಿಸಿದರು.

ನಕ್ಸಲಿಸಂ ಬಹುತೇಕ ಅಂತ್ಯ: ಛತ್ತೀಸ್‌ಗಢದ ಬಸ್ತಾರ್‌ನಲ್ಲಿ ಪ್ರಮುಖ ಭದ್ರತಾ ಕಾರ್ಯಾಚರಣೆಯ ನಂತರ ನಕ್ಸಲಿಸಂನ್ನು ಬಹುತೇಕ ನಿರ್ಮೂಲನೆ ಮಾಡಲಾಗಿದೆ ಎಂದು ಅಮಿತ್ ಶಾ ತಿಳಿಸಿದರು. ಬಸ್ತಾರ್‌ನಲ್ಲಿ ಭಯೋತ್ಪಾದನೆಯ ನೆರಳು ಸರಿಯುತ್ತಿದ್ದು, ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಈ ಯಶಸ್ಸಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು, ವಿಶೇಷವಾಗಿ ಕೋಬ್ರಾ ಮತ್ತು ಸಿಆರ್‌ಪಿಎಫ್ ಘಟಕಗಳು, ಛತ್ತೀಸ್‌ಗಢ ಪೊಲೀಸ್, ಡಿಆರ್‌ಜಿ ಸಿಬ್ಬಂದಿ ಮತ್ತು ಸ್ಥಳೀಯ ಬುಡಕಟ್ಟು ನಿವಾಸಿಗಳ ಶ್ರಮ ಕಾರಣ ಎಂದು ಅವರು ಶ್ಲಾಘಿಸಿದರು. ಬಸ್ತಾರ್‌ನ ಪ್ರತಿ ಗ್ರಾಮದಲ್ಲಿ ಶಾಲೆಗಳು ಮತ್ತು ಪಡಿತರ ಅಂಗಡಿಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಎಂದು ಅವರು ವಿವರಿಸಿದರು.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

ದಾಖಲೆ ಬಜೆಟ್ ಮಂಡಿಸಿರುವ ಖ್ಯಾತಿಯ ಸಿದ್ದರಾಮಯ್ಯನವರು ತಮ್ಮದೇ ಸರಕಾರ ಮಾಡಿರುವ ಸಾಲದಿಂದಾಗಿ ಸಾಲದ ರಾಮಯ್ಯ ಆಗಿ ಉಳಿಯಲಿದ್ದಾರೆ
- ಪ್ರತಾಪಸಿಂಹ ನಾಯಕ್

-ಅಧಿಕಾರದ ಆಸೆಯ ಮುಂದೆ ಸಾಲ ಶೂಲ ಲೆಕ್ಕಕ್ಕಿಲ್ಲ, ಅಧಿಕಾರ ಅಂತ್ಯವಾದಾಗ ತಾನು ಯಾರಿಗೂ ಲೆಕ್ಕಕ್ಕಿಲ್ಲ ಎಂಬುದು ಅರಿವಾದಾಗ ತಡವಾಗಿರುತ್ತದೆ!

ದಿನ ಭವಿಷ್ಯ

ಮೇಷ ಕೆಲ ದಿನಗಳ ಚಿಂತೆ ಕಳೆದು ಹುರುಪು ತುಂಬುವ ಬೆಳವಣಿಗೆ. ಪ್ರೀತಿಪಾತ್ರರ ಸಂಗದಲ್ಲಿ ಉತ್ಸಾಹ. ಹಣದ ಬಿಕ್ಕಟ್ಟು ಪರಿಹಾರ ಕಾಣಲಿದೆ.

ವೃಷಭ ಕ್ಷುಲ್ಲಕ ವಿಚಾರ ಬದಿಗಿಡಿ, ತಕ್ಷಣದ ಪರಿಣಾಮ ಬೀರುವ ವಿಷಯಕ್ಕೆ ಗಮನ ಕೊಡಿ. ನಿಮ್ಮ ನಿರ್ಧಾರ ಒಳ್ಳೆ ಫಲ ನೀಡಲಿದೆ, ಚಿಂತೆ ಬೇಡ.

ಮಿಥುನ ಕಚೇರಿ ಮತ್ತು ಮನೆಯಲ್ಲಿ ಕೆಲವಾರು ವಿಷಯ ನಿಮ್ಮ ತಾಳ್ಮೆ ಕೆಣಕುವುದು. ಯಾವುದೂ ನಿಮ್ಮ ಮನಸ್ಸಿಗೆ ತೃಪ್ತಿ ತರುವಂತಿರುವುದಿಲ್ಲ.

ಕಟಕ ಕೆಲ ವಿಷಯದಲ್ಲಿ ನಿಮ್ಮ ಧೋರಣೆ ಬದಲಿಸಿ. ಹೊಂದಾಣಿಕೆಯ ಸ್ವಭಾವ ಬೆಳೆಸಿಕೊಳ್ಳಿ. ಇತರರ ಮಾತಿಗೂ ಬೆಲೆ ಕೊಡಿ. ಸಂಘರ್ಷ ತಪ್ಪಿಸಿರಿ.

ಸಿಂಹ ಎಲ್ಲ ಕೆಲಸ ಪರಿಪೂರ್ಣವಾಗಿ ಮುಗಿಯಲಿದೆ. ನಿಮ್ಮ ಸಾಧನೆ ನಿಮಗೇ ಅಚ್ಚರಿ ತಂದೀತು. ವೈವಾಹಿಕ ಸಂಬಂಧ ಏರ್ಪಡಲಿದೆ.

ಕನ್ಯಾ ಒತ್ತಡ ಮತ್ತು ಅತಿ ಪ್ರಯಾಸದ ದಿನ. ಯಾವ ಕಾರ್ಯವೂ ಸುಲಭದಲ್ಲಿ ಸಾಧ್ಯವಾಗದು. ತೊಡಕು, ವಾದ ಉಂಟಾಗುವುದು. ನೆಗೆಟಿವ್ ಚಿಂತನೆ ಬಿಡಿ.

ತುಲಾ ಹಿಗ್ಗು ಕುಗ್ಗು ಎರಡನ್ನೂ ಇಂದು ಅನುಭವಿಸುವಿರಿ. ಆಪ್ತರೊಬ್ಬರು ನಿಮ್ಮ ಜತೆ ಮುನಿಸಿಕೊಂಡಾರು. ವ್ಯವಹಾರದಲ್ಲಿ ಪ್ರಗತಿ.

ವೃಶ್ಚಿಕ ನಿಮ್ಮ ಚಿಂತೆ ಕುರಿತು ಮುಕ್ತವಾಗಿ ಹಂಚಿಕೊಳ್ಳಿ. ಹೆಗಲ ಮೇಲಿನ ಹೊರೆ ಕಡಿಮೆಯಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ಧನು ನಿಮ್ಮ ಕುರಿತಂತೆ ಬಹಳಷ್ಟು ಮಂದಿ ಆಸಕ್ತಿ ತೋರುವರು. ನಿಮ್ಮ ಸಾಧನೆ ತೋರಿಸಲು ಮುಜುಗರ ಬೇಕಾಗಿಲ್ಲ. ಶ್ಲಾಘನೆ ಸ್ವೀಕರಿಸಿ.

ಮಕರ ಕೆಲವರ ಜತೆ ವ್ಯವಹಾರ ಕಷ್ಟವಾದೀತು. ಆದರೆ ಆದರಿಂದ ಧೃತಿಗೆಡದಿರಿ. ಹಣದ ಕೊರತೆ ನಿವಾರಣೆ. ಆತ್ಮೀಯರಿಂದ ನೆರವು.

ಕುಂಭ ಈ ಹಿಂದೆ ಗೊಂದಲ ಸೃಷ್ಟಿಸಿದ್ದ ವಿಷಯಗಳಲ್ಲಿ ಸ್ಪಷ್ಟತೆ ರೂಪಿಸಿಕೊಳ್ಳಿ. ಬದುಕಿನಲ್ಲಿ ಖುಷಿ ಪಡಲು ಸಾಕಷ್ಟು ವಿಷಯಗಳಿವೆ, ಅರಿಯಿರಿ. ಧನವ್ಯಯ.

ಮೀನ ವೃತ್ತಿ ಒತ್ತಡ ಮರೆತು, ದಿನವಹಿ ಜಂಜಾಟ ಬಿಟ್ಟು ಕಾಲ ಕಳೆಯಿರಿ. ನಿರಾಳ ದಿನವನ್ನು ಗ್ರಹಗತಿ ಸೂಚಿಸುತ್ತಿದೆ. ಆತ್ಮೀಯರ ಒಡನಾಟ ಸಾಧ್ಯತೆ.

ರಾಹುಕಾಲ: 3.00 - 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 0,7,3,5

8 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೊದಲ ಹಂತದ ಜನಗಣತಿ | 33 ಪ್ರಶ್ನೆಗಳಿಗೆ ಬೇಕಿದೆ ಮಾಹಿತಿ

ನಾಳೆಯಿಂದ ಕರ್ನಾಟಕದಲ್ಲೂ ಸ್ವಯಂಗಣತಿ

•ಬೆಂಗಳೂರು: ಮಹತ್ವದ ರಾಷ್ಟ್ರೀಯ ಜನಗಣತಿ-2027 ರ ಕಾರ್ಯಕ್ಕೆ ರಾಜ್ಯ ಸಿದ್ಧವಾಗಿದೆ. ಜನಗಣತಿ-2027 ರ ಮೊದಲ ಹಂತ ಏಪ್ರಿಲ್ 1ರಿಂದ ಆರಂಭವಾಗಲಿದ್ದು, ಸ್ವಯಂ-ಗಣತಿಗೆ ಏಪ್ರಿಲ್ 1 ರಿಂದ 15ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು 2 ಹಂತಗಳಲ್ಲಿ ನಡೆಸಲು ಉದ್ದೇಶಿಸಿದೆ. ಮೊದಲ ಹಂತದಲ್ಲಿ ಮನೆ ಪಟ್ಟಿ ಏ.1ರಿಂದ ಆರಂಭವಾಗಲಿದೆ. ಮೊದಲ ಹಂತ ಮೊದಲ ಭಾಗದಲ್ಲಿ ಏ.1 ರಿಂದ 15 ರ ವರೆಗೆ 15 ದಿನಗಳ ಕಾಲ ವೆಬ್ ಪೋರ್ಟಲ್ https://se.census.gov.in ಮೂಲಕ ಸ್ವಯಂ-ಗಣತಿಗೆ ಅವಕಾಶ ಕಲ್ಪಿಸಲಾಗಿದೆ. ಆದರಂತೆ, ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15ರಿಂದ 20 ನಿಮಿಷಗಳ ಅವಧಿಯಲ್ಲಿ ಸ್ವಯಂ-ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು. ಮೊಬೈಲ್, ಇಮೇಲ್‌ನಲ್ಲಿ ಸ್ವಯಂ-ಗಣತಿ ಐಡಿಯನ್ನು ಪಡೆಯಬಹುದಾಗಿರುತ್ತದೆ. ಮೊದಲ ಹಂತದ ಎರಡನೇ ಭಾಗವಾಗಿ ಏ.16ರಿಂದ ಮೇ 15ರವರೆಗೆ 30 ದಿನಗಳ ಕಾಲ ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿ ಸಂಗ್ರಹಿಸಲಿದ್ದಾರೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ-ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ.

ದೇಶದ ಮೊದಲ ಡಿಜಿಟಲ್ ಜನಗಣತಿ

ಪುಟ ೧➔ಎರಡನೇ ಹಂತವಾದ ಜನಸಂಖ್ಯಾ ಗಣತಿಯಲ್ಲಿ ವ್ಯಕ್ತಿಗತ ಮಟ್ಟದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಇದರಲ್ಲಿ ಮೊದಲ ಬಾರಿಗೆ ಜಾತಿ ಮಾಹಿತಿ ಡಿಜಿಟಲ್ ರೀತಿಯಲ್ಲಿ ದಾಖಲಿಸಲಾಗುತ್ತದೆ.

ಸುಮಾರು 30 ಲಕ್ಷ ಗಣಕಕರ್ತರು ಆಂಡ್ರಾಯ್ಡ್ ಮತ್ತು ಐಒಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿರುವ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿ ನಿಖರತೆ ಮತ್ತು ಕಾರ್ಯಕ್ಷಮತೆಯನ್ನು ಖಚಿತಪಡಿಸಲಿದ್ದಾರೆ. ಈ ಆ್ಯಪ್ 16 ಭಾಷೆಗಳನ್ನು ಒಳಗೊಂಡಿದೆ ಮತ್ತು ಇಂಟರ್ನೆಟ್ ಸಂಪರ್ಕವಿಲ್ಲದೆಯೂ ಕಾರ್ಯನಿರ್ವಹಿಸಬಲ್ಲದು, ಇದರಿಂದ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿಯೂ ಸುಲಭವಾಗಿ ಬಳಸಬಹುದು. ಜಾತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ದ್ವಿತೀಯ ಹಂತದ ಜನಗಣತಿಯಲ್ಲಿ ಸಂಗ್ರಹಿಸಲಾಗುವುದು ಎಂದು ರಿಜಿಸ್ಟ್ರಾರ್ ಜನರಲ್ ಹೇಳಿದರು. ಜಾತಿ ಬಗ್ಗೆ ಯಾವ ವಿಧಾನದಿಂದ ಮಾಹಿತಿ ಸಂಗ್ರಹಿಸಬೇಕೆಂಬ ಬಗ್ಗೆ ಸಮಗ್ರ ಚರ್ಚೆಗಳನ್ನು ನಡೆಸುತ್ತೇವೆ. ಜಾತಿ ಮಾಹಿತಿ ಸಂಗ್ರಹ ಬಗ್ಗೆ ಹಲವು ಸಲಹೆಗಳು ಬಂದಿವೆ. ಅವೆಲ್ಲವನ್ನು ಪರಿಗಣಿಸಿ, ಅತ್ಯುತ್ಕೃಷ್ಟ ಪ್ರಶ್ನೆಗಳನ್ನು ಅಂತಿಮಗೊಳಿಸಲಾಗುವುದು ಎಂದರು. 1881-1931ರ ನಡುವಣ ಅವಧಿಯಲ್ಲಿ ಅಂತಿಮ ಸಮಗ್ರ ಜಾತಿ ಆಧಾರಿತ ಲೆಕ್ಕಾಚಾರ ಅಥವಾ ಜನಗಣತಿ ನಡೆದಿತ್ತು. ವಾಸ್ತವದಲ್ಲಿ ಸ್ವಾತಂತ್ರ್ಯನಂತರದ ಎಲ್ಲಾ ಜನಗಣತಿಗಳಲ್ಲೂ ಜಾತಿ ವಿಚಾರವನ್ನು ಹೊರತುಪಡಿಸಲಾಗಿತ್ತು.

ವೈಯಕ್ತಿಕ ಮಾಹಿತಿ ಸುಭದ್ರ

ಪುಟ ೧➔ಜನರ ವೈಯಕ್ತಿಕ ಮಾಹಿತಿಗಳನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿ ಸರಕಾರಿ ಅಥವಾ ಖಾಸಗಿ ಸಂಸ್ಥೆಗಳೊಂದಿಗೆ ಶೇರ್ ಮಾಡಲಾಗುವುದಿಲ್ಲ ಅಥವಾ ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಬಳಸಿಕೊಳ್ಳಲೂ ಆಗದು. ಸಮಗ್ರ ದತ್ತಾಂಶಗಳನ್ನು ಮಾತ್ರ ಕ್ರಮಬದ್ಧವಾಗಿ ಪಟ್ಟಿ ಸಿದ್ಧಪಡಿಸುವ ಉದ್ದೇಶಗಳಿಗೆ ಬಳಸಲಾಗುವುದು. ಜನಗಣತಿ ಕಾಯಿದೆಯ ಕಲಂ 15ರಲ್ಲಿ ಎಲ್ಲಾ ಜನರ ಎಲ್ಲಾ ವೈಯಕ್ತಿಕ ಮಾಹಿತಿಗಳು ಗೌಪ್ಯವಾಗಿರುವುದು. ದೇಶದ 16ನೇ ಜನಗಣತಿಯ ಮೊದಲ ಹಂತವು ಏಪ್ರಿಲ್‌ನಲ್ಲಿ ದಿಲ್ಲಿ ಸಹಿತ ಹಲವು ರಾಜ್ಯಗಳಲ್ಲಿ ನಡೆಯಲಿದ್ದು, ದಿಲಿಯಲ್ಲಿ ಏ.16 ರಿಂದ ಮೇ 15ರ ತನಕ ಮೊದಲ ಹಂತದ ಜನಗಣತಿ ನಡೆಯಲಿದೆ.

ತೆರಿಗೆ ಕ್ರಾಂತಿಯ ಹೊಸ ಶಕೆ

ಪುಟ ೧➔**ಪ್ರಮುಖಾಂಶಗಳು**

- **ಹೊಸ ಆದಾಯ ತೆರಿಗೆ ಕಾಯ್ದೆ, 2025 ಮತ್ತು ನಿಯಮಗಳ ಜಾರಿ**
- **ಸರಳತೆ, ಪಾರದರ್ಶಕತೆ ಮತ್ತು ಜಾಗತಿಕ ಗುಣಮಟ್ಟಕ್ಕೆ ಒತ್ತು.**
- **ಸಂಬಳ ಪಡೆಯುವ ಉದ್ಯೋಗಿಗಳು, ವೃತ್ತಿಪರರು ಮತ್ತು ವಿದೇಶಿ ಆಸ್ತಿ ಹೊಂದಿರುವವರಿಗೆ ಅನ್ವಯ.**

ಒಂದೇ ವರ್ಷ, ಒಂದೇ ಹೆಸರು!

- ಹಿಂದಿನ ವರ್ಷ (ಪ್ರೀವಿಯಸ್ ಇಯರ್) ಮತ್ತು ಮೌಲ್ಯಮಾಪನ ವರ್ಷ (ಅಸೆಸ್‌ಮೆಂಟ್ ಇಯರ್) ಇನ್ನಿಲ್ಲ.
- ಎರಡರ ಬದಲಿಗೆ ಕೇವಲ ತೆರಿಗೆ ವರ್ಷ (ಟ್ಯಾಕ್ಸ್ ಇಯರ್) ಎಂಬ ಏಕರೂಪದ ಹೆಸರು.
- ಎಲ್ಲಾ ಗಡುವುಗಳು ಮತ್ತು ಸಮಯ ಮಿತಿಗಳ ನಿಗದಿಗೆ ಇನ್ನು ಇದೇ ಉಲ್ಲೇಖ
- ಮೊದಲ ಬಾರಿ ತೆರಿಗೆ ಪಾವತಿಸುವವರಿಗೆ ಮತ್ತು ವೈಯಕ್ತಿಕ ತೆರಿಗೆದಾರರಿಗೆ ದೊಡ್ಡ ಸಮಾಧಾನ

ಬೆಂಗಳೂರು, ಪುಣೆ ಬಾಡಿಗೆದಾರರಿಗೆ ಸಿಹಿ ಸುದ್ದಿ!

- ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ವಿನಾಯಿತಿ ಮಿತಿ ಮೂಲ ವೇತನದ ಶೇ.40ರಿಂದ ಶೇ.50ಕ್ಕೆ ಏರಿಕೆ.
- ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಅಹಮದಾಬಾದ್ ಈಗ ಮುಂಬೈ, ದಿಲ್ಲಿಯಂತೆ ಪರಿಗಣನೆ.
- ಮೊದಲ ಬಾರಿಗೆ ಹೆಚ್ಚಿನ ನಗರಗಳಿಗೆ ಮೆಟ್ರೊ ನಗರಗಳ ಮಟ್ಟದ ತೆರಿಗೆ ಸೌಲಭ್ಯ ವಿಸ್ತರಣೆ.

ಮನೆ ಮಾಲೀಕರ ವಿವರ ಕಡ್ಡಾಯ

- ಎಚ್‌ಆರ್‌ಎ ವಿನಾಯಿತಿಗೆ ಮನೆ ಮಾಲೀಕರೊಂದಿಗೆ ಇರುವ ಸಂಬಂಧ ಘೋಷಣೆ ಕಡ್ಡಾಯ
- ಬಾಡಿಗೆ ರಸೀದಿಗಳ ದುರುಪಯೋಗ ತಡೆಯುವುದು ಇದರ ಮುಖ್ಯ ಉದ್ದೇಶ.

ಮಕ್ಕಳ ಶಿಕ್ಷಣ ಭತ್ಯೆಯಲ್ಲಿ ಭಾರಿ ಏರಿಕೆ

- ಶಿಕ್ಷಣ ಭತ್ಯೆ: ಪ್ರತಿ ಮಗುವಿಗೆ ತಿಂಗಳಿಗೆ 100 ಇದ್ದದ್ದು ಈಗ 3,000 ರೂ.ಗೆ ಏರಿಕೆ.
- ಹಾಸ್ಟೆಲ್ ಭತ್ಯೆ: ತಿಂಗಳಿಗೆ 300 ಇದ್ದದ್ದು ಈಗ 9,000 ರೂ.ಗೆ ಹೆಚ್ಚಳ
- ದಶಕಗಳಿಂದ ಬದಲಾಗದಿದ್ದ ಈ ಮಿತಿಯಲ್ಲಿ ಕೊನೆಗೂ ದೊಡ್ಡ ಬದಲಾವಣೆ

ಕಚೇರಿ ಊಟದ ಮೇಲಿನ ತೆರಿಗೆ ವಿನಾಯಿತಿ

- ಉದ್ಯೋಗದಾತರು ನೀಡುವ ಊಟ ಮತ್ತು ಫುಡ್ ಕೂಪನ್‌ಗಳ ಮಿತಿ 50ರಿಂದ 200ಗೆ ಏರಿಕೆ.
- ಇದು ಆಲ್ಕೋಹಾಲ್ ಅಲ್ಲದ ಪಾನೀಯಗಳಿಗೂ ಅನ್ವಯಿಸುತ್ತದೆ.
- ಹಣದುಬ್ಬರಕ್ಕೆ ಅನುಗುಣವಾಗಿ ಬದಲಾವಣೆ, ಕೈಗೆ ಬರುವ ಸಂಬಳ ಹೆಚ್ಚಾಗಲಿದೆ.

ವಿದೇಶಕ್ಕೆ ಹಣ ಕಳುಹಿಸುವುದು ಅಗ್ಗ (ಪ್ರಸ್ತಾವಿತ)

- ವಿದೇಶಿ ಪ್ರವಾಸದ ಪ್ಯಾಕೇಜ್‌ಗಳ ಮೇಲಿನ ಟಿಸಿಎಸ್ ದರ ಶೇ.5ರಿಂದ ಶೇ. 2ಕ್ಕೆ ಇಳಿಕೆ.
- ವಿದೇಶಿ ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚದ ಮೇಲಿನ ಟಿಸಿಎಸ್ ಶೇ.20ರಿಂದ ಶೇ.2ಕ್ಕೆ ಕಡಿತ.
- ಇದು ವಿದೇಶದಲ್ಲಿ ಓದುವ ವಿದ್ಯಾರ್ಥಿಗಳ ಪೋಷಕರಿಗೆ ದೊಡ್ಡ ಆರ್ಥಿಕ ನೆರವು

ಇತರ ಉದ್ಯೋಗದ ಸೌಲಭ್ಯ ಪರಿಷ್ಕರಣೆ

- ವಿಶಿಷ್ಟಚೇತನ ಉದ್ಯೋಗಿಗಳಿಗೆ ಸಾರಿಗೆ ಭತ್ಯೆಯಲ್ಲಿ ಹೆಚ್ಚಿನ ವಿನಾಯಿತಿ.
- ಉದ್ಯೋಗದಾತರು ನೀಡುವ ತೆರಿಗೆ ರಹಿತ ಉಡುಗೊರೆ ಮತ್ತು ವೋಚರ್‌ಗಳ ಮಿತಿ ಏರಿಕೆ.
- ಕಂಪನಿ ನೀಡುವ ಸಾಲಗಳ ಮೇಲಿನ ವಿನಾಯಿತಿ ವ್ಯಾಪ್ತಿ ವಿಸ್ತರಣೆ.

ಕಂಪನಿ ಕಾರು ಬಳಸುವವರಿಗೆ ಹೆಚ್ಚಿನ ತೆರಿಗೆ

- ಕಂಪನಿ ನೀಡುವ ಕಾರಿನ ಸೌಲಭ್ಯದ ಮೇಲಿನ ತೆರಿಗೆ ಮೌಲ್ಯ ಏರಿಕೆ.
- ಹೊಸ ತೆರಿಗೆ ಮೌಲ್ಯ: ತಿಂಗಳಿಗೆ 2,000 ಹಾಗೂ 7,000 ರೂ. (ಹಿಂದೆ 600 ಹಾಗೂ 2,400 ರೂ. ಇತ್ತು).
- ಚಾಲಕನ ಸೌಲಭ್ಯವಿದ್ದರೆ ತಿಂಗಳಿಗೆ 3,000 ರೂ. ಹೆಚ್ಚುವರಿ (ಹಿಂದೆ 900 ರೂ. ಇತ್ತು).
- ಇದೇ ಮೊದಲ ಬಾರಿಗೆ ಎಲೆಕ್ಟ್ರಿಕ್ ವಾಹನಗಳಿಗೂ (ಇವಿ) ಪ್ರತ್ಯೇಕ ತೆರಿಗೆ ಚೌಕಟ್ಟು

ಸಂಬಳದ ಪ್ರಮಾಣಪತ್ರದ ಹೆಸರು ಬದಲಾವಣೆ

- ಫಾರ್ಮ್ 16 (ಸಂಬಳ ಪ್ರಮಾಣಪತ್ರ) ಇನ್ನು ಮುಂದೆ ಫಾರ್ಮ್ 130 ಎಂದು ಕರೆಯಲ್ಪಡುತ್ತದೆ.
- ಫಾರ್ಮ್ 12ಬಿಬಿ (ಉದ್ಯೋಗಿ ಘೋಷಣೆ) ಇನ್ನು ಮುಂದೆ ಫಾರ್ಮ್ 124 ಆಗಲಿದೆ.
- ಟಿಡಿಎಸ್ ಫಾರ್ಮ್‌ಗಳು ಮತ್ತು ಪ್ಯಾನ್ (ಪಿಎಎನ್) ಅರ್ಜಿ ಪ್ರಕ್ರಿಯೆ ಇನ್ನಷ್ಟು ಸರಳ

ಚೀನಾ ನಿರ್ಮಿತ ಸಿಸಿಟಿವಿ ಕಂಪನಿಗಳಿಗೆ ನಿಷೇಧ

•ಹೊಸದಿಲ್ಲಿ: ಮಹತ್ತರ ಬೆಳವಣಿಗೆಯೊಂದರಲ್ಲಿ ದೇಶೀಯ ಕಂಪನಿಗಳಿಗೆ ಪ್ರೋತ್ಸಾಹಿಸುವ ಭಾಗವಾಗಿ ಏ.1ರಿಂದ ಭಾರತದಲ್ಲಿ ಚೀನಾ ನಿರ್ಮಿತ ಅಂತರ್ಜಾಲ ಸಂಪರ್ಕಿತ ಕಂಪನಿ ಹಿಕ್ವಿಷನ್ ಸಿಸಿಟಿವಿ ಕ್ಯಾಮೆರಾ ಮಾರಾಟ ಮಾಡುವುದನ್ನು ಕೇಂದ್ರ ನಿಷೇಧಿಸಿದೆ. ಹಿಕ್ವಿಷನ್ ಮತ್ತು ದಹುವಾ ಮುಂತಾದ ಸಾಗರೋತ್ತರ ಕಂಪನಿಗಳಿಗೆ ಭಾರತದ ಪ್ರಮಾಣೀಕರಣ ಚೌಕಟ್ಟಿನ ಅನುಸರಣೆ ಕಡ್ಡಾಯವಾಗಿದೆ. ಆದ್ದರಿಂದ ದೇಶದಲ್ಲಿ ಸಿಸಿಟಿವಿ ಉತ್ಪನ್ನಗಳ ಮಾರಾಟವನ್ನು ಕೇಂದ್ರ ಪರಿಣಾಮಕಾರಿಯಾಗಿ ನಿರ್ಬಂಧಿಸಿದೆ. ಕಣ್ಗಾವಲು ಸಾಧನಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸುವ ಮತ್ತು ಭದ್ರತಾ ಮಾನದಂಡಗಳ ಕಟ್ಟುನಿಟ್ಟಾದ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಈ ಕ್ರಮವು ಹೊಂದಿದೆ.

ವಿದೇಶಿ ಆಸ್ತಿ ಘೋಷಣೆಗೆ ಕೊನೆ ಅವಕಾಶ (ಪ್ರಸ್ತಾವಿತ)

- ಸಣ್ಣ ತೆರಿಗೆದಾರರಿಗಾಗಿ ವಿದೇಶಿ ಆಸ್ತಿ ಘೋಷಣಾ ಯೋಜನೆ ಪ್ರಸ್ತಾಪಿಸಲಾಗಿದೆ.
- ಘೋಷಿಸದ ವಿದೇಶಿ ಆಸ್ತಿಗಳ ಬಗ್ಗೆ ಮಾಹಿತಿ ನೀಡಲು 6 ತಿಂಗಳ ಕಾಲಾವಕಾಶ.
- ಅನ್ವಯವಾಗುವ ತೆರಿಗೆ ಪಾವತಿಸಿ ಶಿಕ್ಷೆಯಿಂದ ಪಾರಾಗಲು ಸುವರ್ಣಾವಕಾಶ.

ವಿದೇಶಿ ತೆರಿಗೆ ಕ್ರೆಡಿಟ್: ಸಿಎ ಪತ್ರ ಕಡ್ಡಾಯ

- 1 ಲಕ್ಷ ರೂ.ಗಿಂತ ಹೆಚ್ಚಿನ ವಿದೇಶಿ ತೆರಿಗೆ ಕ್ರೆಡಿಟ್ ಕ್ಲೈಮ್ ಮಾಡಲು ಸಿಎ ಪ್ರಮಾಣಪತ್ರ ಬೇಕು.
- ಹಳೆಯ ಫಾರ್ಮ್ 67ರ ಬದಲಿಗೆ ಹೊಸ ಫಾರ್ಮ್ 44 ಬಳಕೆಗೆ ಬರಲಿದೆ.




ಟೋಲ್ ದುಬಾರಿ

ಪುಟ ೧➔ವಾರ್ಷಿಕ ಹಣದುಬ್ಬರ ಆಧಾರಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರಗಳ ನಿರ್ಣಯ ಮತ್ತು ಸಂಗ್ರಹ) ನಿಯಮ 2008ರ ಅನ್ವಯ ಪ್ರತಿ ವರ್ಷ ಟೋಲ್ ದರ ಶೇ.3ರಿಂದ ಶೇ.5 ರವರೆಗೆ ಹೆಚ್ಚಳವಾಗಲಿದೆ. ಈಗಾಗಲೇ ಎನ್‌ಎಚ್‌ಎಐ ಏಪ್ರಿಲ್ 1 ರಿಂದ ಅನ್ವಯವಾಗುವಂತೆ ಫಾಸ್ಟ್‌ಟ್ಯಾಗ್ ಪಾಸ್ ದರವನ್ನು ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಖಾಸಗಿ ಕಾರು, ಜೀಪ್, ವ್ಯಾನ್ ಸೇರಿದಂತೆ ವಾಣಿಜ್ಯೇತರ ವಾಹನ ಮಾಲೀಕರು ಇನ್ನು ಮುಂದೆ ವಾರ್ಷಿಕ ಪಾಸ್‌ಗಳನ್ನು 3000 ರೂ. ಬದಲಿಗೆ 3075 ರೂ.ಪಾವತಿಸಿ ಖರೀದಿಸಬೇಕಾಗಿದೆ.

ಮೈಸೂರು ಎಕ್ಸ್‌ಪ್ರೆಸ್ ವೇ ಮತ್ತಷ್ಟು ದುಬಾರಿ: ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸಂಚಾರ ಆರಂಭವಾದಾಗಿನಿಂದ ಇದು ನಾಲ್ಕನೇ ಬಾರಿ ಬೆಲೆ ಏರಿಕೆಯಾಗಿದೆ. 2023ರ ಏಪ್ರಿಲ್ 1 ರಿಂದ ಎಕ್ಸ್‌ಪ್ರೆಸ್ ವೇ ಸಂಚಾರಕ್ಕೆ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಟೋಲ್ ದರ ನಿಗದಿ ಮಾಡಿತ್ತು. ಈ ವರ್ಷವೂ ಏ.1ರಿಂದ ವಾರ್ಷಿಕ ಶೇ.5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ.

ಸಂಘರ್ಷ ತೀವ್ರತೆ ಹೆಚ್ಚಳ

ಪುಟ ೧➔ಇರಾನ್ ಅಮೆರಿಕದ ಬೇಡಿಕೆಗಳು ಅತಿಯಾದವು, ಅಸಂಬದ್ಧ ಮತ್ತು ಅಸಾಧ್ಯ ಎಂದು ತಿರಸ್ಕರಿಸಿದೆ. ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್, ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಮಾತುಕತೆಗಳು ಕೇವಲ ಒಂದು ನಾಟಕ ಎಂದು ಆರೋಪಿಸಿದ್ದು, ಅಮೆರಿಕ ಸೈನಿಕರು ನಮ್ಮ ನೆಲಕ್ಕೆ ಬಂದರೆ, ಅವರನ್ನು ಬೆಂಕಿಯಲ್ಲಿ ಸುಟ್ಟು ಶಿಕ್ಷೆ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದರು.



ಗಲ್ಫ್ ಮತ್ತು ಇಸ್ರೇಲ್ ಮೇಲೆ ಇರಾನ್ ದಾಳಿ: ಇರಾನ್ ತನ್ನ ದಾಳಿಗಳನ್ನು ಗಲ್ಫ್ ದೇಶಗಳತ್ತ ವಿಸ್ತರಿಸಿದೆ. ಸೌದಿ ಅರೇಬಿಯಾದ ಪೂರ್ವ ಪ್ರಾಂತ್ಯವನ್ನು ಗುರಿಯಾಗಿಸಿಕೊಂಡ ಐದು ಕ್ಷಿಪಣಿಗಳನ್ನು ತಡೆಯಲಾಗಿದೆ. ದುಬೈ ಮೇಲೆಯೂ ಕ್ಷಿಪಣಿ ತಡೆಗಟ್ಟುವ ಸಂದರ್ಭದಲ್ಲಿ ಭಾರೀ ಸ್ಫೋಟ ಸಂಭವಿಸಿದೆ. ಕುವೈತ್‌ನಲ್ಲಿ ನಡೆದ ದಾಳಿಯಲ್ಲಿ ವಿದ್ಯುತ್ ಮತ್ತು ನೀರು ಘಟಕ ಹಾನಿಗೊಳಗಾಗಿದ್ದು, ಭಾರತದ ಒಬ್ಬ ಕಾರ್ಮಿಕ ಮೃತಪಟ್ಟಿದ್ದು, 10 ಸೈನಿಕರು ಗಾಯಗೊಂಡಿದ್ದಾರೆ. ಇಸ್ರೇಲ್‌ನಲ್ಲಿ, ಪ್ರಮುಖ ಅಣು ಸಂಶೋಧನಾ ಕೇಂದ್ರದ ಬಳಿ ಸೈರನ್‌ಗಳು ಮೊಳಗಿವೆ. ಯೆಮನ್‌ನ ಹೌತಿ ಪಡೆಗಳಿಂದ ಉಡಾಯಿಸಲಾದ ಎರಡು ಡ್ರೋನ್‌ಗಳನ್ನು ಇಸ್ರೇಲ್ ಹೊಡೆದುರುಳಿಸಿದೆ.

ಜವಾಬ್ದಾರಿಯನ್ನು ಹಕ್ಕು ಚಲಾಯಿಸಲು ಬಳಸಿದಾಗ...

ಪುಟ ೧➔ನಮ್ಮ ರಾಜ್ಯದಲ್ಲಿ ಶಾಂತವೇರಿ ಗೋಪಾಲಗೌಡ, ಅಬ್ದುಲ್ ನಜೀರ್ ಸಾಬ್, ಎ. ಲಕ್ಷ್ಮೀಸಾಗರ್, ಟಿ.ಆರ್. ಶಾಮಣ್ಣ, ವಿ.ಎಸ್. ಕೃಷ್ಣ ಅಯ್ಯರ್, ಬಾಪುರಾವ್ ದೇಶಪಾಂಡೆ, ಎಸ್. ಮಲ್ಲಿಕಾರ್ಜುನಯ್ಯ, ಡಾ. ಎಂ.ಆರ್. ತಂಗಾ ಮೊದಲಾದ ಹಲವು ನಾಯಕರು ಮೌಲ್ಯಾಧಾರಿತ ಸಾರ್ವಜನಿಕ ಜೀವನವನ್ನು ನಡೆಸಿದ್ದನ್ನು ನಾನು ಕಂಡಿದ್ದೇನೆ ಮತ್ತು ಸ್ವತಃ ಅನುಭವಿಸಿದ್ದೇನೆ.

ಇವರೆಲ್ಲ ಪಕ್ಷಾತೀತವಾಗಿ ಜನಸಾಮಾನ್ಯರ ಮನ್ನಣೆ ಗಳಿಸಿದವರು. ಪ್ರೊಫೆಸರ್ ಲಕ್ಷ್ಮೀಸಾಗರ್ ಅವರು ಶಾಸಕರಾಗಿ ಆಯ್ಕೆಯಾಗುವ ಮುನ್ನ ನನಗೆ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಪಾಠ ಹೇಳಿದ ಮೇಷ್ಟ್ರು. ನಾನು ಬೆಂಗಳೂರು ನಗರಸಭಾ ಸದಸ್ಯನಾಗಿದ್ದಾಗ ಅವರು ನಗರಾಭಿವೃದ್ಧಿ ಸಚಿವರಾಗಿದ್ದರು. ಆಗ ಬೆಂಗಳೂರಿನಲ್ಲಿ ನೀರಿನ ಕೊರತೆ ಉಂಟಾದಾಗ ನಮ್ಮ ಕ್ಷೇತ್ರಕ್ಕೂ ಬಂದು ನನ್ನೊಡನೆ ಕಾಲ್ನಡಿಗೆಯಲ್ಲಿ ಎಲ್ಲಾ ಕಡೆ ಸಂಚರಿಸಿ ಸಮಸ್ಯೆಯ ತೀವ್ರತೆ ಅರಿತಿದ್ದರು.

ಇವರ್ಯಾರೂ ಜನಸಾಮಾನ್ಯರಿಗಿಂತ ತಾವು ಭಿನ್ನ, ತಮಗೆ ವಿಶೇಷ ಸವಲತ್ತುಗಳು ಬೇಕು, ನಮಗೆ ವಿಐಪಿ ಟ್ರೀಟ್ಮೆಂಟ್ ಬೇಕು ಎಂದು ಭಾವಿಸಿದವರಲ್ಲ ಮತ್ತು ಅಪೇಕ್ಷಿಸಿದವರಲ್ಲ. ನಿಜ, ಪ್ರಧಾನಮಂತ್ರಿಗಳು, ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳಿಗೆ ಸಹಜವಾಗಿ ಭದ್ರತೆಯ ಕಾರಣ ಒಂದಷ್ಟು ವಿಶೇಷ ಸೌಲಭ್ಯಗಳು ಇರಲೇಬೇಕು. ಅದನ್ನು ನಾವು ವಿಐಪಿ ಟ್ರೀಟ್ಮೆಂಟ್ ದೃಷ್ಟಿಯಿಂದ ನೋಡಲಾಗುವುದಿಲ್ಲ. ಹಾಗೆಯೇ ಅಂದಿನ ಕಾಲದಲ್ಲಿ ನಗರಸಭಾ ಸದಸ್ಯರಿಗೆ, ಶಾಸಕರಿಗೆ ಟೆಲಿಫೋನ್ ಸಂಪರ್ಕ ಕೊಡಿಸುವ ವ್ಯವಸ್ಥೆಯೂ ಇತ್ತು. ಇವೆಲ್ಲವೂ ಜನರ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ನೀಡಲಾಗಿದ್ದ ಸೌಲಭ್ಯಗಳು. ಆದರೆ ಕಾಲಕ್ರಮೇಣ ಶಾಸಕ ಸ್ಥಾನ ಎಂಬುದು ಒಂದು ಸೇವೆ ಅಥವಾ ಸೇವಾ ಸ್ಥಾನ ಎಂಬುದರ ಬದಲಾಗಿ ಹಕ್ಕು ಚಲಾಯಿಸುವ ಸ್ಥಾನವಾಗಿ ಮಾರ್ಪಾಟಾಗಿದ್ದು ದುರದೃಷ್ಟಕರ. ಇತ್ತೀಚೆಗೆ ವ್ಯಾಪಕವಾಗುತ್ತಿರುವ ಮತ್ತು ನಮಗೆ ವಿಶೇಷ ಸವಲತ್ತುಗಳು ದೊರಕಲೇಬೇಕು ಎನ್ನುವ ಮನಸ್ಥಿತಿಯ ವಿಐಪಿ ಮತ್ತು ವಿವಿಐಪಿ ಸಂಸ್ಕೃತಿ ಜನನಾಯಕರ ಬಗ್ಗೆ ಜನಸಾಮಾನ್ಯರ ದೃಷ್ಟಿಯಲ್ಲಿ ಜನಪ್ರತಿನಿಧಿಗಳ ಗೌರವದ ಅವನತಿಯ ಕಡೆ ಸಾಗಿರುವುದು ಕೂಡ ದಿಟ.

ಈ ವಿಐಪಿ ಸಂಸ್ಕೃತಿಯ ಅಡಿಯಲ್ಲಿಯೇ, ರಾಜಕಾರಣಿಗಳ ಫೋಟೋ ವಿಜೃಂಭಿಸುವ ನಗರದ ಸೌಂದರ್ಯಕ್ಕೆ ಮಾರಕವಾಗುತ್ತಿರುವ 'ಫ್ಲೆಕ್ಸ್ ಸಂಸ್ಕೃತಿ'ಯೂ ಸೇರುತ್ತದೆ. ಜನಸಾಮಾನ್ಯರು ಈ ಫ್ಲೆಕ್ಸ್‌ಗಳನ್ನು ನೋಡುತ್ತ ಮನಸ್ಸಿನಲ್ಲೇ ಎಷ್ಟು ಬೈದುಕೊಂಡು ಓಡಾಡುತ್ತಾರೋ ತಿಳಿಯದು. ನಾನು ವಿಧಾನಸಭೆಯಲ್ಲಿ ತಿಳಿಸಿದಂತೆ ಕೆಲವು ವರ್ಷಗಳ ಹಿಂದೆ ಉಗ್ರಗಾಮಿಗಳ ವಿರುದ್ಧ ಹೋರಾಡಿ ತನ್ನ ಜೀವವನ್ನು ಬಲಿಕೊಟ್ಟ ಭಾರತದ ಸೈನ್ಯದ ಕಮಾಂಡೊ ಒಬ್ಬರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲು ಹೋದಾಗ ದಾರಿಯುದ್ದಕ್ಕೂ ಹಾಕಲಾಗಿದ್ದ ಫ್ಲೆಕ್ಸ್‌ಗಳ ಭರಾಟೆ ಕಂಡು ನನಗೆ ತೀವ್ರ ವೇದನೆಯಾಯಿತು. ಆ ಎಲ್ಲಾ ಫ್ಲೆಕ್ಸ್‌ಗಳಲ್ಲಿ ದೇಶಕ್ಕಾಗಿ ಬಲಿದಾನ ಮಾಡಿದ ಆ ಹುತಾತ್ಮನ ಫೋಟೋ ಕೇವಲ ಸ್ಟ್ಯಾಂಪ್ ಸೈಜ್ ಗಾತ್ರದಲ್ಲಿದ್ದರೆ, ಸ್ಥಳೀಯ ರಾಜಕೀಯ ನಾಯಕರ ಫೋಟೋಗಳು ಲೈಫ್-ಸೈಜ್‌ನಲ್ಲಿ ಬಹಳ ದೊಡ್ಡದಾಗಿ ರಾರಾಜಿಸುತ್ತಿದ್ದವು.

ಕೇಂದ್ರದ ಸಮ್ಮತಿ ಬಳಿಕ ಆಲಮಟ್ಟಿ ಎತ್ತರ ಹೆಚ್ಚಳ

ಪುಟ ೧➔ನಮ್ಮ ಸರ್ಕಾರ ಬಂದ ಬಳಿಕ ರೈತರಿಗೆ ಪರಿಹಾರ ಕೊಡುವ ಕೆಲಸ ಮಾಡುತ್ತಿದ್ದೇವೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕಾಗಿ ಮುಳುಗಡೆಯಾಗುವ ಭೂಮಿಗೆ ಮೂರು ವರ್ಷದಲ್ಲಿ ರೈತರಿಗೆ ಪರಿಹಾರ ನೀಡುತ್ತೇವೆ. ಗೆಜೆಟ್ ನೋಟಿಫಿಕೇಶನ್ ಹೊರಡಿಸಿದರೆ ಸಂತ್ರಸ್ತರನ್ನು ಸ್ಥಳಾಂತರ ಮಾಡಿ ಪುನರ್ವಸತಿ ಕಲ್ಪಿಸುವುದು ಮತ್ತು ಕಾಲುವೆಗಳಿಗೆ ಮುಳುಗಡೆಯಾಗುವ ಭೂಮಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿದರು. ಕೇಂದ್ರ ನೀರಾವರಿ ಮಂತ್ರಿಯನ್ನು ಭೇಟಿಯಾಗಿ ಹಲವು ಬಾರಿ ಹೇಳಿದರೂ ಇನ್ನೂ ಗೆಜೆಟ್ ನೋಟಿಫಿಕೇಶನ್ ಹೊರಡಿಸುತ್ತಿಲ್ಲ, ನ್ಯಾಯಾಧಿಕರಣ ತೀರ್ಪು ಬಂದು 13 ವರ್ಷವಾದರೂ ಇನ್ನೂ ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಹೇಳಿದರು.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಆಲಮಟ್ಟಿ ವಿಚಾರದಲ್ಲಿ ಜನವಿರೋಧಿ ನಿಲುವು ಹೊಂದಿದೆ. 4 ವರ್ಷ ಅಧಿಕಾರದಲ್ಲಿದ್ದಾಗಲೂ ಭೂ ಪರಿಹಾರ ಘೋಷಿಸಿದರೂ ಹಣ ನೀಡಲಿಲ್ಲ, ನಮ್ಮ ಸರ್ಕಾರ ಪರಿಹಾರ ಕೊಡುವ ತೀರ್ಮಾನ ಮಾಡಿ ಕೆಲಸ ಪ್ರಾರಂಭ ಮಾಡಿದೆ ಎಂದರು. ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಎಚ್.ವೈ.ಮೇಟಿಯವರ ಒತ್ತಾಯದಂತೆ ಬಾಗಲಕೋಟೆಗೆ ಮೆಡಿಕಲ್ ಕಾಲೇಜು ತರಲು ಶಂಕುಸ್ಥಾಪನೆ ಮಾಡಿದ್ದೇವೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮತ್ತು ಟ್ರಾಮಾ ಸೆಂಟರನ್ನೂ ನಾವು ಮಾಡುತ್ತೇವೆ. ನುಡಿದಂತೆ ಮಾಡುವ ಸರ್ಕಾರ ನಮ್ಮದು ಎಂದರು. ಬಿಜೆಪಿಯವರು ನುಡಿದಂತೆ ನಡೆಯಲಿಲ್ಲ, ಒಂದೇ ಒಂದು ರೂಪಾಯಿ ರೈತರ ಸಾಲ ಮನ್ನಾ ಮಾಡಲಿಲ್ಲ. ಕೋವಿಡ್‌ನಿಂದ ಬಳಲಿದ್ದ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡಲು ಐದು ಗ್ಯಾರಂಟಿಗಳನ್ನು ತಂದು ಜನರಿಗೆ ನೆರವಾಗಿದ್ದು ನಮ್ಮ ಸರ್ಕಾರ ಎಂದಹ ನುಡಿದರು. ಸಚಿವ ಭೈರತಿ ಸುರೇಶ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಮಲ್ಲಿಕಾರ್ಜುನ ಚರಂತಿಮಠ, ಅಜಯಕುಮಾರ ಸರನಾಯಕ, ಆನಂದ ನ್ಯಾಮಗೌಡ, ನಜೀರ ಅಹ್ಮದ್, ವೀಣಾ ಕಾಶಪ್ಪನವರ, ಮಲ್ಲಿಕಾರ್ಜುನ ಮೇಟಿ, ಅಭ್ಯರ್ಥಿ ಉಮೇಶ ಮೇಟಿ, ಮಹಾದೇವಿ ಮೇಟಿ ಇದ್ದರು.

ಗ್ಯಾರಂಟಿ ಮುಂದುವರಿಕೆಗೆ ಕಾಂಗ್ರೆಸ್ ಬೆಂಬಲಿಸಿ

ಪುಟ ೧➔ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗೆ ಪ್ರತಿ ವರ್ಷ 52 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದ್ದೇವೆ. ಇದನ್ನು ಮಾಡಿದರೆ ಸರ್ಕಾರದ ಖಜಾನೆ ಖಾಲಿಯಾಗಲಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದು ಗ್ಯಾರಂಟಿ ಜತೆಗೆ ರಾಜ್ಯದ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು. ನಾವು ಪ್ರತಿ ವರ್ಷ 52 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯದ ಜನರ ಜೇಬಿಗೆ ಹಾಕುತ್ತಲೇ ಅಭಿವೃದ್ಧಿ ಕೆಲಸವನ್ನೂ ಮಾಡುತ್ತಿದ್ದೇವೆ ಎಂದು ಹೇಳಿದರು.

ಅಕಾಲಿಕ ಮಳೆಗೆ 18 ಹೆಕ್ಟೇರ್ ಬೆಳೆಹಾನಿ | ನಾಲ್ಕು ಪಟ್ಟು ಹೆಚ್ಚಿದ ಮಳೆ

ಕಂಗಾಲಾದ 'ಹೂ' ಬೆಳೆಗಾರರು

▸ಕಿರಣ ಮಾಸಣಗಿ



ಹಾವೇರಿ: ದಿನದಿಂದ ದಿನಕ್ಕೆ ಕೃಷಿಯಲ್ಲಿನ ವೆಚ್ಚ ಹೆಚ್ಚುತ್ತಿದೆ. ಆದರೆ, ಆದಾಯ ನಿರೀಕ್ಷಿತ ಮಟ್ಟದಲ್ಲಿ ಸಿಗದೇ ಇದ್ದಾಗಲೂ ಭಗವಂತನ ಮೇಲೆ ಭಾರ ಹಾಕಿ ಭವಿಷ್ಯ ಕಟ್ಟಿಕೊಳ್ಳುವಲ್ಲಿ ಜಿಲ್ಲೆಯ ರೈತರು ಸೆಣಸಾಡುತ್ತಿದ್ದಾರೆ. ಹೆಚ್ಚುತ್ತಿರುವ ಬಿಸಿಲಿನ ಮಧ್ಯೆಯೇ ನೀರುಣಿಸಿ ಬೆಳೆದು ದೇವರಿಗೆ ಇಲ್ಲವೇ ಶುಭ ಕಾರ್ಯಕ್ಕೆ ಸಲ್ಲಬೇಕಾಗಿದ್ದ ಹೂವುಗಳು ಇದೀಗ ಅಕಾಲಿಕ ಮಳೆಗೆ ಸಿಲುಕಿ ಹಾಳಾಗಿದ್ದು, ಇದು ಹೂವಿನ ಬೆಳೆಗಾರರನ್ನು ಆತಂಕಕ್ಕೆ ನೂಕಿದೆ.

ಜಿಲ್ಲೆಯ ರಾಣೇಬೆನ್ನೂರ, ಹಿರೇಕೆರೂರ, ಸವಣೂರ ಮತ್ತು ಹಾವೇರಿ ತಾಲೂಕುಗಳಲ್ಲಿ ಹೂವಿನ ಬೆಳೆಗಾರರಿದ್ದು, ಅಕಾಲಿಕ ಮಳೆಯಿಂದಾಗಿ ಸೇವಂತಿಗೆ, ಬಟನ್ ಗುಲಾಬಿ, ಚೆಂಡು, ಗಲಾಟೆ, ಮತ್ತು ಮಲ್ಲಿಗೆ ಹೂವಿನ ಬೆಳೆ ನಷ್ಟವಾಗಿದೆ. ದಿನನಿತ್ಯದ ಆದಾಯದ ಮೂಲವಾಗಿದ್ದ ಈ ಹೂವು ಇದೀಗ ಅಕಾಲಿಕ ಮಳೆಗೆ ನಲುಗಿದ್ದು, ಕೆಲವೆಡೆ ಕೊಳೆತರೆ ಮತ್ತೆ ಕೆಲವೆಡೆ ಆಲಿಕಲ್ಲಿನ ಹೊಡೆತಕ್ಕೆ ನಾಶವಾಗಿದ್ದು ಇದರಿಂದ ಹೂ ಬೆಳೆಗಾರರು ನಷ್ಟಕ್ಕೀಡಾಗಿದ್ದಾರೆ.

ವಾಡಿಕೆಗಿಂತ ಹೆಚ್ಚಿನ ಮಳೆ: ಬೇಸಿಗೆಯಲ್ಲಿ ಅಂದರೆ ಕಳೆದ 7-8 ದಿನಗಳಲ್ಲಿ ಜಿಲ್ಲೆಯ ಅಲ್ಲಲ್ಲಿ 18 ಮಿ.ಮೀ.ಗೂ ಹೆಚ್ಚಿನ ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿದಿದ್ದು, ಇದು ವಾಡಿಕೆಯ 4.60ಮಿ.ಮೀ.ಯ ನಾಲ್ಕುಪಟ್ಟು ಹೆಚ್ಚಳವಾಗಿದೆ. ವಾಡಿಕೆಯಂತೆ ಮಾ.1ರಿಂದ 27ರವರೆಗೆ 8.40ಮಿ.ಮೀ ಮಳೆ ಸುರಿಯಬೇಕಿದ್ದು, ಆದರ ಬದಲಾಗಿ ಅದರ ನಾಲ್ಕು ಪಟ್ಟು ಹೆಚ್ಚಳದ 31.70ಮಿ.ಮೀ ಮಳೆ ಸುರಿದಿದ್ದು ಇದರಿಂದ ಜಿಲ್ಲೆಯಲ್ಲಿ ಸುಮಾರು 13ಹೆಕ್ಟೇರ್ ಬೆಳೆ ಹಾನಿಯಾಗಿದೆ.

ಅಗತ್ಯ ಪರಿಹಾರ ನೀಡಿ

ಫಸಲಿಗೆ ಬಂದಿದ್ದ ಹಳದಿ, ಗುಲಾಬಿ ಮತ್ತು ಬಿಳಿಬಣ್ಣದ ಸೇವಂತಿಗೆ ಹೂ ಅಕಾಲಿಕ ಮಳೆಗೆ ಸಿಲುಕಿ ಕಪ್ಪಾಗಿದ್ದು ಕೊಳೆಯುವ ಸ್ಥಿತಿಗೆ ಸಿಲುಕಿದೆ. ಅಲ್ಲದೇ ಆಣೆಕಲ್ಲಿನ ಹೊಡೆತದಿಂದ ಇಡೀ ಗಿಡವೇ ಪೆಟ್ಟು ತಿಂದು ನಾಶವಾಗುವ ಹಂತಕ್ಕೆ ತಲುಪಿದೆ ಎಂಬುದು ರಾಣೇಬೆನ್ನೂರ ತಾಲೂಕಿನ ಲಿಂಗದಹಳ್ಳಿ ಗ್ರಾಮದ ರೈತ ಹನುಮಂತಪ್ಪನ ಅಳಲು. ನಮ್ಮ ಹೂವು ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ದಾವಣಗೆರ ಮತ್ತು ಬೆಂಗಳೂರು ಮಾರುಕಟ್ಟೆಗೆ ಹೋಗುತ್ತಿತ್ತು. ಇದೀಗ ಯಾವುದೂ ಇಲ್ಲವಾಗಿದ್ದು, ಕೂಡಲೇ ಸಂಬಂದಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯ ಪರಿಹಾರ ನೀಡಲು ಮುಂದಾಗಲಿ ಎಂದು ಒತ್ತಾಯಿಸಿದ್ದಾರೆ.

> ಜಿಲ್ಲಾಧಿಕಾರಿಗಳ ತುರ್ತು ಸ್ಪಂದನೆಯ ಪಿಡಿ ಖಾತೆಯಲ್ಲಿ 15.53 ಕೋಟಿ ರೂ. ಇದ್ದು, ತಹಶೀಲ್ದಾರರುಗಳ ಖಾತೆಗಳಲ್ಲೂ ಹಣವಿದ್ದು ಒಟ್ಟು ವಿಪತ್ತು ನಿರ್ವಹಣೆಗೆ 18.87 ಕೋಟಿ ರೂ. ಮೀಸಲು ಹಣವಿದೆ.
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

ಅತಿ ಹೆಚ್ಚು ಹಾನಿ ರಾಣೇಬೆನ್ನೂರ ತಾಲೂಕಿನಲ್ಲಿ ದಾಖಲಾಗಿದ್ದು, 8.90ಹೆಕ್ಟೇರ್ ಕಲ್ಲಂಗಡಿ, 0.40ಹೆ ಪಪ್ಪಾಯ, 0.81ಹೆ ಟೊಮೆಟೋ, 0.20 ಎಲೆಬಳ್ಳಿ, ಹಾನಗಲ್ಲ 1ಹೆ ಮೆಕ್ಕೆಜೋಳ, 1.6ಹೆ ಬಾಳೆ, ಬ್ಯಾಡಗಿ ತಾಲೂಕಿನಲ್ಲಿ 0.4 ಹೆಕ್ಟೇರ್ ಕಲ್ಲಂಗಡಿ ಬೆಳೆ ಹಾನಿಯಾಗಿದೆ.

ಇನ್ನು ಈ ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 8ಮನೆಗಳಿಗೆ ಹಾನಿಯಾಗಿದ್ದು, ಬ್ಯಾಡಗಿ 4, ಸವಣೂರ 1, ಹಾನಗಲ್ಲ 3 ಮನೆಗೆ ಹಾನಿಯಾಗಿದ್ದು ಒಟ್ಟು ಜಿಲ್ಲೆಯಲ್ಲಿ ಈ ಮಳೆಗೆ ಸುಮಾರು 26ಲಕ್ಷ ಮೌಲ್ಯದ ಮೂಲಸೌಕರ್ಯಕ್ಕೆ ಹಾನಿಯಾಗಿದೆ. ಅದೇ ರೀತಿ ಅಂಗನವಾಡಿ ಕಟ್ಟಡ, 169 ವಿದ್ಯುತ್ ಕಂಬಗಳು, 2 ಟ್ರಾನ್ಸ್‌ಫಾರ್ಮರ್‌ಗೆ ಹಾನಿಯಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಒಟ್ಟಿನಲ್ಲಿ ಅಕಾಲಿಕ ಗಾಳಿ ಮಳೆಯಿಂದ ಜಿಲ್ಲೆಯ ಅನ್ನದಾತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಮತ್ತು ಸರ್ಕಾರ ರೈತರ ಕಣ್ಣೀರೊರೆಸಲು ಮುಂದಾಗಬೇಕೆಂಬುದು ಜನರ ಆಗ್ರಹ.

ದಿಗಂತ ವಿಶೇಷ

ಹಿಪ್ಪರಗಿ ಜಲಾಶಯದಲ್ಲಿ ನೀರು ಖಾಲಿ

ಬೇಸಿಗೆ ಕಳೆಯುವುದೇ ದುಸ್ತರ

▸ಗೋಪಾಲ ಪಾಟೀಲ

ಜಮಖಂಡಿ: ಬೇಸಿಗೆ ಪ್ರಾರಂಭವಾಗುತ್ತಿದ್ದಂತೆಯೇ ಕೃಷ್ಣೆಯ ಒಡಲು ಖಾಲಿಯಾಗುತ್ತ ಬರುತ್ತದೆ. ಈ ಬಾರಿಯಂತೂ ಸಮೀಪದ ಹಿಪ್ಪರಗಿ ಗ್ರಾಮದ ಬ್ಯಾರೇಜ್ ಕ್ರಸ್ಟ್ ಗೇಟ್ ಮುರಿದು ಅಪಾರ ಪ್ರಮಾಣದ ನೀರು ಪೋಲಾಗಿದ್ದು ಈಗ ಸುಮಾರು 2.9 ಟಿಎಂಸಿ ಮಾತ್ರ ನೀರಿದೆ.

ಪ್ರತಿ ವರ್ಷಕ್ಕಿಂತ ಈ ಬಾರಿ ಬಿಸಿಲಿನ ಪ್ರಖರತೆ ಹೆಚ್ಚೆಂದು ಹವಾಮಾನ ಇಲಾಖೆ ತಿಳಿಸಿದೆ. ಬರುವ ಎರಡು ತಿಂಗಳಲ್ಲಿ ಇನ್ನೂ ಉಷ್ಣಾಂಶ ಹೆಚ್ಚಾಗಿ 45 ಸೆಲ್ಸಿಯಸ್ ವರಗೂ ದಾಟುವ ಸಂಭವ ಇದ್ದು, ಬೇಸಿಗೆ ಕಳೆಯುವುದೇ ದುಸ್ತರವಾಗಿದೆ.

ಆದರಲ್ಲಿ ನೀರಿನ ಕೊರತೆಯಂತೂ ಸದಾಕಾಲ ನಮ್ಮನ್ನು ಕಾಡುತ್ತಲೇ ಇರುತ್ತದೆ. ನದಿ ಪಾತ್ರದಲ್ಲಿ ನೀರು ಖಾಲಿಯಾಗುತ್ತಿದ್ದಂತೆಯೇ ಅಂತರ್ಜಲ ಮಟ್ಟವೂ ಸಹ ಕಡಿಮೆಯಾಗುತ್ತದೆ. ಜನ ಜಾನುವಾರು ಜೊತೆಗೆ ಬೆಳೆಗಳನ್ನು ಕಾಪಾಡುವುದೇ ರೈತರಿಗೆ ದೊಡ್ಡ ಸಮಸ್ಯೆಯಾಗಿ ಕಾಡುತ್ತದೆ.

ಈ ಬಾರಿಯಂತೂ ಅವಳಿ ತಾಲೂಕಿನಲ್ಲಿ ಹಿಪ್ಪರಗಿ ಜಲಾಶಯವೇ ನೀರಿನ ಮೂಲವಾಗಿದ್ದು, ಆದೂ ಕೂಡಾ ಸಂಪೂರ್ಣ ಖಾಲಿಯಾಗುತ್ತ ಬರುತ್ತಿದೆ. ಬ್ಯಾರೇಜ್‌ನ ಗೇಟ್ ಮುರಿದು ಅಪಾರ ಪ್ರಮಾಣದ ನೀರು ಪೋಲಾದರೂ ಸಹ ಸರಿಯಾಗಿ ದುರಸ್ತಿಯಾಗದ ಕಾರಣ ನೀರು ಪೋಲಾಗುತ್ತಲೇ ಇದೆ. ಹೊಸ ಗೇಟ್ ಅಳವಡಿಸಲು ರೈತರು ಅನೇಕ ಬಾರಿ ಮನವಿ ಸಲ್ಲಿಸಿದ್ದಾರೆ. ಆದಕ್ಕೆ ಸರ್ಕಾರ ಮಾತ್ರ ಸ್ಪಂದಿಸುತ್ತಿಲ್ಲ.

ಹಿಪ್ಪರಗಿ ಜಲಾಶಯದಲ್ಲಿ ನೀರು ನಿಲ್ಲಿಸಲು ಪ್ರಾರಂಭವಾಗಿ ಇಂದಿಗೆ ಸುಮಾರು 25 ವರ್ಷಗಳೇ ಗತಿಸಿವೆ. ಅಲ್ಲಿಂದ ಇಲ್ಲಿಯ ವರೆಗೂ ಯಾವುದೇ ಗೇಟ್ ನಿರ್ವಹಣೆ ಮಾಡಿಲ್ಲವೆಂದು ರೈತರು ದೂರುತ್ತಾರೆ. ಗೇಟ್ ಹಾಳಾದಾಗ ಬಂದು ಹೋದ ಅಧಿಕಾರಿಗಳು ಮತ್ತೊಮ್ಮೆ ಇತ್ತ ಬಂದಿಲ್ಲವೆಂದು ಅಲ್ಲಿಯ ನಿವಾಸಿಗಳು ದೂರಿದ್ದಾರೆ.

ಮೊದಲು ಹಿಪ್ಪರಗಿ ಕೆಳ ಭಾಗದಲ್ಲಿ ಹಿಪ್ಪರಗಿ ಜಲಾಶಯದ ನೀರಾದರೂ ಲಭ್ಯವಾಗುತ್ತಿತು. ಆದರೆ, ಈ ಬಾರಿ ಅದೂ ಕೂಡಾ ಲಭ್ಯವಿಲ್ಲ. ಮತ್ತೆ ಮಹಾರಾಷ್ಟ್ರದತ್ತ ಮುಖ ಮಾಡುವುದು ಸರ್ಕಾರಕ್ಕೆ ಅನಿವಾರ್ಯವಾಗಿದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಸರ್ವ ಜನಪ್ರತಿನಿಧಿಗಳ ನಿಯೋಗ ಮುಖ್ಯಮಂತ್ರಿಗಳಿಗೆ ಭೇಟಿ ನೀಡಿ ಮನವಿ ಅರ್ಪಿಸಿ ನೀರು ಬಿಡುಗಡೆಗೆ ಒತ್ತಾಯಿಸಬೇಕು ಎಂದು ಸಾರ್ವಜನಿಕರ ಒತ್ತಾಸೆಯಾಗಿದೆ.



ಸರ್ಕಾರಕ್ಕೆ ಕಾಣದ ಕೃಷ್ಣೆ

ಈ ಭಾಗದ ಜೀವಜಲವಾದ ಕೃಷ್ಣೆಯ ತಟದ ಜನ ಜೀವನ ಬೇಸಿಗೆಯಲ್ಲಿ ಅಸ್ತವ್ಯಸ್ತಗೊಂಡರೂ ಸಹ ಸರ್ಕಾರ ಮಾತ್ರ ಮೌನಕ್ಕೆ ಶರಣಾಗಿರುವುದು ಸತ್ಯವಾಗಿದೆ. ರಾಜ್ಯದಲ್ಲಿ ಹರಿಯುವುದು ಕಾವೇರಿ ಮಾತ್ರ. ಆದರೆ, ಉತ್ತರ ಕರ್ನಾಟಕದ ಪಂಚ ರಾಜ್ಯಗಳ ಜನತೆಯ ಜೀವ ಜಲ ಕೃಷ್ಣೆ ಮಾತ್ರ ಇಂದಿಗೂ ಸಹ ಬಡವಿಯಾಗಿದ್ದಾಳೆ. ಆಲಮಟ್ಟಿ ಜಲಾಶಯವೇನೋ ನಿರ್ಮಾಣವಾಯಿತು. ಅದರ ಹಿನ್ನೀರಿನಲ್ಲಿ ಸಾವಿರಾರು ಕುಟುಂಬಗಳು ತಮ್ಮ ಮೂಲ ನೆಲೆ ಕಳೆದುಕೊಂಡು ಬೇರೆಡೆ ಆಸರೆ ಅರಸಿ ಹೋಗಿದ್ದೂ ಆಗಿದೆ. ಅವರ ಈ ತ್ಯಾಗಕ್ಕೂ ಸಹ ಸರ್ಕಾರ ಮನ್ನಣೆ ನೀಡದಿರುವುದು ವಿಷಾದನೀಯ ಅನ್ನುತ್ತಾರೆ ಇಲ್ಲಿಯ ನಾಗರಿಕರು.

ಜಿಎಸ್‌ಟಿ ಅಪೀಲಾತ್ಮಕ ನ್ಯಾಯಾಧಿಕರಣ ಶಾಖೆ ಸ್ಥಾಪಿಸಲು ಮನವಿ

ಹುಬ್ಬಳ್ಳಿ : ಜಿಲ್ಲೆಯಲ್ಲಿ ಜಿಎಸ್‌ಟಿ ಅಪೀಲಾತ್ಮಕ ನ್ಯಾಯಾಧಿಕರಣ ಶಾಖೆಯನ್ನು ಸ್ಥಾಪಿಸಬೇಕು ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾರೆ.

ಈ ಕುರಿತು ಸಚಿವರಿಗೆ ಪತ್ರ ಬರೆದ ಸಂಸ್ಥೆ, ಕರ್ನಾಟಕ ರಾಜ್ಯದಲ್ಲಿ ಜಿಎಸ್‌ಟಿ ಅಪೀಲಾತ್ಮಕ ನ್ಯಾಯಾಧಿಕರಣ ಕಾರ್ಯನಿರ್ವಹಣೆಗೆ ಬಂದಿರುವುದು ರಾಜ್ಯದ ವ್ಯಾಪಾರ ಹಾಗೂ ಕೈಗಾರಿಕಾ ವಲಯಕ್ಕೆ ಮಹತ್ವದ ಬೆಳವಣಿಗೆಯಾಗಿದೆ. ಕೇಂದ್ರ ಸರ್ಕಾರ ನ್ಯಾಯಾಧಿಕರಣ ಸ್ಥಾಪಿಸಿದ್ದು, ಕರ್ನಾಟಕ ರಾಜ್ಯಕ್ಕೆ ಬೆಂಗಳೂರಿನಲ್ಲಿ ಎರಡು ರಾಜ್ಯ ಪೀಠಗಳನ್ನು ಹಂಚಿಕೆ ಮಾಡಲಾಗಿದೆ. ಕರ್ನಾಟಕ ಹಣಕಾಸು ಇಲಾಖೆಯ ಅಧಿಸೂಚನೆಯ ಮೂಲಕ ಸಿ ಜಿಎಸ್‌ಟಿ ಮತ್ತು ಕೆಸಿಎಸ್‌ಟಿ ಕಾಯ್ದೆಗಳಡಿ ಹೊರಡಿಸಲಾದ ಆದೇಶಗಳ ಮೇಲಿನ ದ್ವಿತೀಯ ಅಪೀಲಿಗೆ ಜಿಎಸ್‌ಟಿಎಟಿ ಅನ್ನು ಮಾನ್ಯತೆ ನೀಡಲಾಗಿದೆ.

ಈ ಮೂಲಕ, ಪ್ರಥಮ ಅಪೀಲು ಅಧಿಕಾರಿಗಳ ಅಥವಾ ಪರಿಷ್ಕರಣಾ ಅಧಿಕಾರಿಗಳ ಆದೇಶಗಳ ವಿರುದ್ಧ ತೆರಿಗೆದಾರರು ಈಗ ಎಪಿಎಲ್ -05 ಅರ್ಜಿಯ ಮೂಲಕ ಒಂದೇ ವೇದಿಕೆಯಲ್ಲಿ ಸಿಜಿಎಸ್‌ಟಿ ಮತ್ತು ಕೆಸಿಎಸ್‌ಟಿ ಸಂಬಂಧಿತ ಅಪೀಲನ್ನು ಸಲ್ಲಿಸಲು ಅವಕಾಶ ದೊರೆಯಲಿದೆ.

ಧಾರವಾಡ ಜಿಲ್ಲೆ ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರವಾಗಿದ್ದು, ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು ವ್ಯಾಪಾರ, ಕೈಗಾರಿಕೆ, ಸಾರಿಗೆ ಹಾಗೂ ಸೇವಾ ವಲಯಗಳಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ. ರಾಜ್ಯದ ಪ್ರಮುಖ ವಾಣಿಜ್ಯ ಹಬ್ಬಗಳಿಗೂ, ಉದ್ಯಮ ಚಟುವಟಿಕೆಗಳಿಗೂ ಈ ಪ್ರದೇಶವು ಕೇಂದ್ರ ಬಿಂದುವಾಗಿ ಪರಿಣಮಿಸಿದೆ.

ಈ ಪ್ರದೇಶದಲ್ಲಿ ಅನೇಕ ಸಣ್ಣ, ಮಧ್ಯಮ ಹಾಗೂ ದೊಡ್ಡ ಮಟ್ಟದ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದ್ದು, ಜಿಎಸ್‌ಟಿ ವ್ಯಾಪ್ತಿಗೆ ಒಳಪಡುವ ವ್ಯಾಪಾರಸ್ಥರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಿಎಸ್‌ಟಿ ಸಂಬಂಧಿತ ವಿವಾದಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಪರಿಹರಿಸಲು ಸ್ಥಳೀಯ ಮಟ್ಟದಲ್ಲೇ ಅಪೀಲಾತ್ಮಕ ನ್ಯಾಯಾಧಿಕರಣದ ಸೌಲಭ್ಯ ಅತ್ಯಂತ ಅಗತ್ಯವಾಗಿದೆ.

ಸರ್ಕಾರವು ಈ ಬೇಡಿಕೆಯನ್ನು ಸಹಾನುಭೂತಿಯೊಂದಿಗೆ ಪರಿಗಣಿಸಿ, ಶೀಘ್ರ ಕ್ರಮ ಕೈಗೊಂಡು ಉತ್ತರ ಕರ್ನಾಟಕದ ವ್ಯಾಪಾರ ವಲಯಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಾರೆ ಎಂಬ ವಿಶ್ವಾಸವನ್ನು ಗೌರವ ಕಾರ್ಯದರ್ಶಿ ಉದಯ ರೇವಣಕರ ಅವರು ವ್ಯಕ್ತಪಡಿಸಿದ್ದಾರೆ.

ಹುಬ್ಬಳ್ಳಿ-ಕೇರಳದ ಕೊಲ್ಲಂ ನಡುವೆ ವಿಶೇಷ ರೈಲು ಸಂಚಾರ

ಹುಬ್ಬಳ್ಳಿ: ಗುಡ್ ಫ್ರೈಡೇ ಹಾಗೂ ಈಸ್ಟರ್ ಹಬ್ಬದ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಯಂತ್ರಿಸಲು ನೈರುತ್ಯ ರೈಲ್ವೆಯು ಎಸ್‌ಎಸ್‌ಎಸ್ ಹುಬ್ಬಳ್ಳಿ ಮತ್ತು ಕೇರಳದ ಕೊಲ್ಲಂ ನಡುವೆ ಒಂದು ಟ್ರಿಪ್ ವಿಶೇಷ ರೈಲನ್ನು ಓಡಿಸಲಿದೆ.

ಎಸ್‌ಎಸ್‌ಎಸ್ ಹುಬ್ಬಳ್ಳಿ- ಕೊಲ್ಲಂ ವಿಶೇಷ ಎಕ್ಸ್‌ಪ್ರೆಸ್(07347ರೈಲು) ಏ.2ರಂದು ಬೆಳಗ್ಗೆ ಹುಬ್ಬಳ್ಳಿಯಿಂದ ಹೊರಟು ಏ.3ರಂದು ಬೆಳಗ್ಗೆ 7 ಗಂಟೆಗೆ ಕೊಲ್ಲಂ ತಲುಪಲಿದೆ. ಕೊಲ್ಲಂನಿಂದ ಎಸ್‌ಎಸ್‌ಎಸ್ ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ (073480 ರೈಲು ಏ.3ರಂದು ಬೆಳಗ್ಗೆ 10.45ಕ್ಕೆ ಕೊಲ್ಲಂನಿಂದ ಹೊರಟು ಏ.4ರಂದು ಬೆಳಗ್ಗೆ 10.40ಕ್ಕೆ ಹುಬ್ಬಳ್ಳಿಗೆ ತಲುಪಲಿದೆ.

ಈ ವಿಶೇಷ ರೈಲು ಮಾರ್ಗ ಮಧ್ಯೆ ಎಸ್‌ಎಂಎಂ ಹಾವೇರಿ, ರಾಣೇಬೆನ್ನೂರು, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ತುಮಕೂರು, ಎಸ್‌ಎಂವಿಟಿ ಬೆಂಗಳೂರು, ಕೃಷ್ಣರಾಜಪುರಂ, ಬಂಗಾರಪೇಟೆ, ಕುಪ್ಪಂ, ಸೇಲಂ, ಈರೋಡ್, ತಿರುಪ್ಪೂರ್, ಪೋಡನೂರು, ಪಾಲಕ್ಕಾಡ್, ತ್ರಿಶೂರ್, ಆಲುವಾ, ಎರ್ನಾಕುಲಂ ಟೌನ್, ಕೊಟ್ಟಾಯಂ, ಚಂಗನಾಸೇರಿ, ತಿರುವಲ್ಲಾ, ಚೆಂಗನ್ನೂರ್, ಮಾವೇಲಿಕರ ಮತ್ತು ಕಾಯಂಕುಲಂ ನಿಲ್ದಾಣಗಳಲ್ಲಿ ನಿಲ್ಲಲಿದೆ.ಈ ವಿಶೇಷ ರೈಲು ಒಟ್ಟು 17 ಬೋಗಿಗಳನ್ನು ಹೊಂದಿರಲಿದೆ. ಇದರಲ್ಲಿ ಒಂದು ಎಸಿ 2-ಟೈರ್, ಮೂರು ಎಸಿ 3-ಟೈರ್, 7 ಸ್ಲೀಪರ್ ಕ್ಲಾಸ್, 4 ಸಾಮಾನ್ಯ ದ್ವಿತೀಯ ದರ್ಜೆ ಹಾಗೂ 2 ಎಸ್‌ಎಲ್‌ಆರ್/ಡಿ ಬೋಗಿಗಳು ಇರಲಿವೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ರಾಜ್ಯಮಟ್ಟದ ಭಜನಾ ಸ್ಪರ್ಧೆ ಉದ್ಘಾಟನೆ



ಹುಬ್ಬಳ್ಳಿ: ಶ್ರೀ ಮನ್ನಿಜಗುಣ ಶಿವಯೋಗಿಗಳ ಕೈವಲ್ಯ ಸಾಹಿತ್ಯವನ್ನು ನಾಡಿನಾದ್ಯಂತ ಪಸರಿಸುವುದು, ಅದರಲ್ಲಿರುವ ಮೌಲ್ಯಗಳನ್ನು ಜನರಿಗೆ ತಿಳಿಸುವುದು ಮತ್ತು ಆ ಸಾಹಿತ್ಯವನ್ನು ಉಳಿಸಿ-ಬೆಳೆಸಲು ಭಜನಾ ಸ್ಪರ್ಧೆಗಳು ತುಂಬಾ ಸಹಕಾರಿಯಾಗುತ್ತವೆ ಎಂದು ಅಣ್ಣಿಗೇರಿ ದಾಸೋಹಮಠದ ಶ್ರೀ ಶಿವಕುಮಾರ ಸ್ವಾಮೀಜಿ ಹೇಳಿದರು.

ಇಲ್ಲಿನ ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಯವರ ಮಠದ ಆವರಣದಲ್ಲಿ ಶ್ರೀ ಸಿದ್ಧಾರೂಢ ಸ್ವಾಮಿಗಳ ಜಯಂತಿ ನಿಮಿತ್ತ ಏರ್ಪಡಿಸಿದ್ದ 11ನೇ ವರ್ಷದ ರಾಜ್ಯಮಟ್ಟದ ಭಜನಾ ಸ್ಪರ್ಧೆ ಉದ್ಘಾಟನೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ರಾಜ್ಯದ ಎಲ್ಲ ಜಿಲ್ಲೆಗಳ ಭಜನಾ ಮಂಡಳಿಗಳು ಭಾಗವಹಿಸುವ ಸ್ಪರ್ಧೆ ಇದ್ದರೆ ಅದು ಶ್ರೀ ಸಿದ್ಧಾರೂಢ ಮಠದಲ್ಲಿ ನಡೆಯುವ ರಾಜ್ಯಮಟ್ಟದ ಭಜನಾ ಸ್ಪರ್ಧೆಯಾಗಿದೆ. ಇಲ್ಲಿ ಎಲ್ಲ ಜಿಲ್ಲೆಗಳಿಂದ ಒಂದು ತಂಡವಾದರೂ ಭಾಗವಹಿಸುತ್ತಿರುವುದು ಸಂತಸದ ಸಂಗತಿ ಎಂದರು.

ರಾಜ್ಯಮಟ್ಟದ ಭಜನಾ ಸ್ಪರ್ಧೆ ಸಮಿತಿ ಅಧ್ಯಕ್ಷ ಶಾಮಾನಂದ ಪೂಜೇರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಿಜಗುಣ ಶಿವಯೋಗಿಗಳ ಕೈವಲ್ಯ ಸಾಹಿತ್ಯ ಯಾವುದೇ ಜಾತಿ, ಮತ, ಪಂಥಗಳಿಗೆ ಸೀಮಿತವಾಗಿಲ್ಲ. ಇಡೀ ಮಾನವ ಕುಲದ ಒಳಿತನ್ನು ಒಳಗೊಂಡಿದೆ. ಸ್ಪರ್ಧೆಯ ಮೊದಲ ವರ್ಷ ಮೈಸೂರು, ರಾಮನಗರ, ಬಳ್ಳಾರಿ, ರಾಯಚೂರು ಹೀಗೆ ವಿವಿಧೆಡೆ ತೆರಳಿ ಮಾಹಿತಿ ನೀಡಲಾಯಿತು. ಅಲ್ಲಿಂದ ಈವರೆಗೆ ರಾಜ್ಯದ ಪ್ರತಿ ಜಿಲ್ಲೆಗಳಿಂದಲೂ ತಂಡಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮಠದ ಚೇರಮನ್ ಚನ್ನವೀರ ಮುಂಗರವಾಡಿ ಮಾತನಾಡಿ, ಈವರೆಗೆ 150ಕ್ಕೂ ಅಧಿಕ ಭಜನಾ ತಂಡಗಳು ಹೆಸರು ನೋಂದಾಯಿಸಿವೆ. ನಿತ್ಯ ಬೆಳಗ್ಗೆಯಿಂದ ಸಂಜೆವರೆಗೆ 25ರಿಂದ 30 ತಂಡಗಳು ಸ್ಪರ್ಧೆಯಲ್ಲಿ ಪ್ರದರ್ಶನ ನೀಡಲಿವೆ. ಭಾನುವಾರದಿಂದ 5 ದಿನಗಳ ಕಾಲ ಸ್ಪರ್ಧೆ ನಡೆಯಲಿದೆ. ಏ.2ರಂದು ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ಏ.3ರಂದು ಬೆಳಗ್ಗೆ 11ಕ್ಕೆ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದರು.

ಧರ್ಮದರ್ಶಿ ಬಸವರಾಜ ಕಲ್ಯಾಣಶೆಟ್ಟರ, ತಲಕಟ್ನಾಳ ಸಿದ್ಧಾರೂಢಮಠದ ಆತ್ಮಾನಂದ ಸ್ವಾಮೀಜಿ ಉಪಸ್ಥಿತರಿದ್ದರು. ಆರಂಭದಲ್ಲಿ ಮುಧೋಳ ತಾಲೂಕಿನ ಕುಳಲಿಯ ಲಕ್ಷ್ಮೀದೇವಿ ಗಾಜಿ ನೇತೃತ್ವದ ತಂಡ ಸಿದ್ಧಾರೂಢರ ಕುರಿತು ಭಜನೆ ಪ್ರಸ್ತುತಪಡಿಸಿದರು.

ಭಜನಾ ಸ್ಪರ್ಧೆ ಸಮಿತಿ ಉಪಾಧ್ಯಕ್ಷ ಡಾ.ಗೋವಿಂದ ಮಣ್ಣೂರ, ಕಾರ್ಯದರ್ಶಿ ಉದಯಕುಮಾರ ನಾಯ್ಕ, ಧರ್ಮದರ್ಶಿಗಳಾದ ಮಂಜುನಾಥ ಮುನವಳ್ಳಿ, ವಿನಾಯಕ ಘೋಡಕೆ, ಬಾಳು ಮಗಜಿಕೊಂಡಿ, ಶ್ರೀಮಠದ ವ್ಯವಸ್ಥಾಪಕ ಈರಣ್ಣ ತುಪ್ಪದ, ಸಿಬ್ಬಂದಿ ಇದ್ದರು. ಧರ್ಮದರ್ಶಿ ಗೀತಾ ಕಲಬುರಗಿ ಕಾರ್ಯಕ್ರಮ ನಿರ್ವಹಿಸಿದರು.

ಗಾಂಜಾ ಮಾರಾಟ: ಓರ್ವನ ಬಂಧನ

ದಾಂಡೇಲಿ: ನಗರದ ಡಿಎಫ್ಎ ಮೈದಾನದ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವನನ್ನು ಬಂಧಿಸಿದ ಘಟನೆ ನಡೆದಿದೆ. ಡಿಎಫ್ಎ ಮೈದಾನದ ಹತ್ತಿರದ ಸಾರ್ವಜನಿಕ ಪ್ರದೇಶದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಸ್ಥಳೀಯ ಗಣೇಶನಗರದ ನಿವಾಸಿ ಥಾಕೇಶ ಮಾಣಿಕ್ ಅಮೋದೆ (23) ಎಂಬಾತನನ್ನು ಬಂಧಿಸಿ ಕೃತ್ಯಕ್ಕೆ ಬಳಸಲಾದ ದ್ವಿಚಕ್ರ ವಾಹನ ಹಾಗೂ ಮಾಲನ್ನು ವಶಪಡಿಸಕೊಂಡು ಈತನ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಈ ಪ್ರಕರಣದಲ್ಲಿ ಸುಮಾರು 10 ಸಾವಿರ ರೂ. ಮೌಲ್ಯದ 235 ಗ್ರಾಂ ತೂಕದ ಗಾಂಜಾ ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ಕೃಷ್ಣಮೂರ್ತಿ ಜಿ ಹಾಗೂ ಜಗದೀಶ್ ಎಂ ಮತ್ತು ಡಿವೈಎಸ್ಪಿ ಶಿವಾನಂದ ಮದರಕಂಡಿ ಹಾಗೂ ಸಿಪಿಐ ಶಿವಾನಂದ ಅಂಬಿಗೇರವರ ಮಾರ್ಗದರ್ಶನದಲ್ಲಿ ಪಿಎಸ್ಐಗಳಾದ ಅಮೀನ್ ಅತ್ತರ್ ಮತ್ತು ಕಿರಣ್ ಪಾಟೀಲ್ ಅವರ ನೇತೃತ್ವದಲ್ಲಿ ನಡೆದ ಈ ದಾಳಿಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಬಸವರಾಜ ತೇಲಸಂಗ, ಕೃಷ್ಣ ಬೆಳ್ಳುವರಿ, ಚಂದ್ರಶೇಖರ್ ಪಾಟೀಲ್, ಇಮ್ರಾನ್ ಕಂಬಾರಗಣವಿ, ರಮೇಶ್ ನಿಂಬರಗಿ, ಜಯನಗೌಡ ಪಾಟೀಲ್, ಮಹಾಂತೇಶ್ ಜಾಮಗೌಡ ಅವರು ಭಾಗವಹಿಸಿದ್ದರು.

ಓವರ್ ಲೋಡ್ ಲಾರಿ ವಶ



ಅಂಕೋಲಾ: ಸರಾಯಿ ನಶೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಾಯಕಾರಿ ರೀತಿಯಲ್ಲಿ ಓವರ್ ಲೋಡ್ ಲಾರಿಯನ್ನು ಚಲಾಯಿಸುತ್ತಿದ್ದ ಕಾರಣ ರಾಷ್ಟ್ರೀಯ ಹೆದ್ದಾರಿ ಗಸ್ತು ಪೊಲೀಸರು ಲಾರಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಹುಬ್ಬಳ್ಳಿ ಕಡೆಯಿಂದ ಕಾರವಾರ ಕಡೆ ಸಾಗುತ್ತಿದ್ದ ಕೆ.ಎ29 ಸಿ 6106 ನೋಂದಣಿ ಸಂಖ್ಯೆಯ ಲಾರಿಯಲ್ಲಿ ಕೋಕ್ ಸಾಗಿಸಲಾಗುತ್ತಿದ್ದು, ಭಾರೀ ಲಾರಿಯನ್ನು ಚಾಲಕ ಅಜಾಗರೂಕತೆಯಿಂದ ತನ್ನ ಬದಿಯ ರಸ್ತೆಯಿಂದ ಬಲ ಬದಿಗೆ ಹೋಗುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿ ಗಸ್ತು ವಾಹನದ ಸಹಾಯಕ ಪೊಲೀಸ್ ಉಪ ನಿರೀಕ್ಷಕ ದೇವಿದಾಸ್ ಚಾಪೋಲೆಕರ್ ಲಾರಿಯನ್ನು ಎಕ್ಕೆಗುಳಿ ಕ್ರಾಸಿನ ಬಳಿ ತಡೆದು ಆಲ್ಕೋಮೀಟರ್ ಸಹಾಯದಿಂದ ಚಾಲಕನ ಪರೀಕ್ಷೆ ನಡೆಸಿದಾಗ ಆತ 100ಎಂ.ಎಲ್ ಮದ್ಯ ಸೇವನೆ ಮಾಡಿರುವುದು ದೃಢಪಟ್ಟಿದೆ.

ವಾಹನದ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ಸರಕು ತುಂಬಿದಂತೆ ಕಂಡು ಬಂದಿದ್ದರಿಂದ ಹತ್ತಿರದ ವೇವ್ ಯಂತ್ರದಲ್ಲಿ ಪರೀಕ್ಷೆ ನಡೆಸಿದಾಗ ಒಟ್ಟು 2760 ಕೆಜಿ ಹೆಚ್ಚಿನ ಸರಕು ಓವರ್ ಲೋಡ್ ಮಾಡಿರುವುದು ಕಂಡು ಬಂದಿದೆ.

ಚಾಲಕನ ವೈದ್ಯಕೀಯ ಪರೀಕ್ಷೆ ನಡೆಸಿದಾಗ ಆತ ಮಾದಕ ವಸ್ತು ಸಹ ಸೇವಿಸಿರುವುದು ದೃಢಪಟ್ಟಿದ್ದು ಲಾರಿ ಚಾಲಕ ಬಾಗಲಕೋಟೆಯ ಸಂಗಪ್ಪ ಎಂಬಾತನ ಮೇಲೆ ದೂರು ದಾಖಲಿಸಲಾಗಿದೆ.

ಇರಾನ್ ಪೈಲ್ವಾನಗೆ ಮಣ್ಣು ಮುಕ್ಕಿಸಿದ ಕೊಲ್ಲಾಪುರದ ಕೇಸರಿ ಜಯದೀಪ್ ಪಾಟೀಲ



ಬೆಳಗಾವಿ: ತಾಲೂಕಿನ ಮುತಗಾ ಗ್ರಾಮದ ಹನುಮಾನ್ ಯಾತ್ರೋತ್ಸವದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಟ್ಟದ ಕುಸ್ತಿ ಮೈದಾನದಲ್ಲಿ ಭಾರತೀಯ ಪೈಲ್ವಾನರ ಅಬ್ಬರ ಕಂಡುಬಂತು.

ಇರಾನ್ ಪ್ರಬಲ ಪೈಲ್ವಾನನನ್ನು ಮಣಿಸುವ ಮೂಲಕ ಕೊಲ್ಲಾಪುರದ ಮಲ್ಲ ಜಯದೀಪ್ ಪಾಟೀಲ್ ಮುತಗಾ ಮೈದಾನದ ಕಿಂಗ್ ಆಗಿ ಹೊರಹೊಮ್ಮಿದ್ದಾರೆ.

ಮುತಗಾದ ಹನುಮಾನ್ ಕುಸ್ತಿ ಸಂಘಟನೆ ಮತ್ತು ಗ್ರಾಮಸ್ಥರ ಸಹಯೋಗದಲ್ಲಿ ದಮನಿ ಕೆರೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಈ ಅಂತಾರಾಷ್ಟ್ರೀಯ ಕುಸ್ತಿ ಮೈದಾನವು ಕ್ರೀಡಾಭಿಮಾನಿಗಳ ಹರ್ಷೋದ್ಗಾರಕ್ಕೆ ಸಾಕ್ಷಿಯಾಯಿತು.

ಮೈದಾನದ ಪ್ರಮುಖ ಆಕರ್ಷಣೆಯಾಗಿದ್ದ ಮೊದಲನೇ ನಂಬರ್‌ನ ಕುಸ್ತಿಯಲ್ಲಿ ಕೊಲ್ಲಾಪುರದ ಗಂಗಾವೇಸ್ ತಾಲೀಮಿನ ಉದಯೋನ್ಮುಖ ಮಲ್ಲ ಜಯದೀಪ್ ಪಾಟೀಲ್ ಮತ್ತು ಇರಾನ್‌ನ ಅಂತಾರಾಷ್ಟ್ರೀಯ ಪೈಲ್ವಾನ ಇರ್ಫಾನ್ ನಡುವೆ ರೋಚಕ ಹೋರಾಟ ನಡೆಯಿತು.

ಸುಮಾರು 26 ನಿಮಿಷ ನಡೆದ ಈ ಭೀಕರ ಹಣಾಹಣಿಯಲ್ಲಿ ಜಯದೀಪ್ ಪಾಟೀಲ್ ಅವರು 'ಬಾಹೇರಿಲ್ ಟಾಂಗ್' (ಹೊರಗಿನ ಕಾಲು ಹಾಕುವ) ಪಟ್ಟು ಹಾಕುವ ಮೂಲಕ ಇರಾನ್ ಪೈಲ್ವಾನನನ್ನು ಸೋಲಿಸಿ ವಿಜಯ ಮಾಲೆ ಧರಿಸಿದರು.

ಇನ್ನು ಎರಡನೇ ಕ್ರಮಾಂಕದ ಕುಸ್ತಿಯಲ್ಲಿ ಪುಣೆಯ ಸಚಿನ್ ಘೋಂಬ್ರೆ ಮತ್ತು ಪಂಜಾಬ್‌ನ ಗೋಗಿಸಿಂಗ್ ನಡುವೆ ಪ್ರಬಲ ಪೈಪೋಟಿ ಏರ್ಪಟ್ಟಿತ್ತು. ಸಚಿನ್ ಘೋಂಬ್ರೆ, ಅವರು ತಮ್ಮ ಚಾಣಾಕ್ಷತನದ ಮೂಲಕ ಗೋಗಿಸಿಂಗ್ ಅವರನ್ನು ಮಣಿಸಿ ಮೈದಾನದ ಎರಡನೇ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಮೂರನೇ ಕ್ರಮಾಂಕದಲ್ಲಿ ದೆಹಲಿಯ ಕರಣ್ ಅವರು ದಡ್ಡಿ ಗ್ರಾಮದ ಶಿವ ಅವರನ್ನು ಕೇವಲ ಒಂದೇ ನಿಮಿಷದಲ್ಲಿ 'ಕೊಂದಣ್ ಏಕಚಾಕ್' ಪಟ್ಟು ಹಾಕಿ ಮಣ್ಣು ಮುಕ್ಕಿಸಿದರು. ಇದಲ್ಲದೆ ನೇಪಾಳದ ದೇವ್ ಥಾಪಾ ಅವರ ಮನರಂಜನಾತ್ಮಕ ಕುಸ್ತಿ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು.


ಮೈದಾನದಲ್ಲಿ ಒಟ್ಟು 60ಕ್ಕೂ ರೆಸ್ಟ್ ಜಿದ್ದಾಜಿದ್ದಿನ ಕುಸ್ತಿಗಳು ನಡೆದವು. ಸ್ಥಳೀಯ ಮಲ್ಲ ಮುತಗಾದ ಭೂಮಿಪುತ್ರ ಅವರು ಚಿಕ್ಕೋಡಿಯ ಅನಿಲ್ ಅವರನ್ನು ಚಿತ್ ಮಾಡಿ ಗಮನ ಸೆಳೆದರೆ, ದಾದಾ ಕೋಳೆಕರ್ ಅವರು 'ಹಪ್ತಾ' ಪಟ್ಟು ಹಾಕಿ ದೆಹಲಿಯ ಆಯುಷ್ ಅವರನ್ನು ಪರಾಭವಗೊಳಿಸಿದರು.

ಮೈದಾನದ ಪಂಚರಾಗಿ ನವೀನ್ ಪಾಟೀಲ್, ಭಾವಕಣ್ಣ ಪಾಟೀಲ್ ಸೇರಿದಂತೆ ಹಲವು ಹಿರಿಯರು ಕಾರ್ಯನಿರ್ವಹಿಸಿದರು. ಗ್ರಾಮ ಪಂಚಾಯತ್, ಗ್ರಾಮ ಸುಧಾರಣಾ ಮಂಡಳಿ ಹಾಗೂ ದೇವಸ್ಥಾನ ಕಮಿಟಿಯ ಪದಾಧಿಕಾರಿಗಳ ಸಮ್ಮುಖದಲ್ಲಿ ವಿಜೇತ ಮಲ್ಲರಿಗೆ ಬಹುಮಾನ ವಿತರಿಸಿ ಗೌರವಿಸಲಾಯಿತು.

ಸಂಪಾದಕೀಯ

ತಾಪಮಾನ: ಆತಂಕಕಾರಿ ವರದಿ

ವರುಷ ಕಳೆದಂತೆ ಭೂತಾಪಮಾನವು ಏರುತ್ತಾ ಬರುತ್ತಿರುವುದು ಅನುಭವಕ್ಕೆ ಬರುತ್ತಿರುವ ವಿದ್ಯಮಾನ. ಈ ವರ್ಷ ಕೂಡಾ ಭಾರತವು ಈಗಲೇ ಅತಿಯಾದ ಉಷ್ಣಹವೆಯನ್ನು ಎದುರಿಸುತ್ತಿದೆ. ಈಗಿನ್ನೂ ಬಿರುಬೇಸಿಗೆ ಕಾಲಿಟ್ಟಿಲ್ಲ. ಹಾಗಿದ್ದರೂ ತಾಪಮಾನ ಅಧಿಕವಾಗಿದೆ. ಇದರ ಮಧ್ಯೆಯೇ 'ಹವಾಮಾನ ಪರಿಣಾಮ ಪ್ರಯೋಗಾಲಯ'ದ ಸಂಶೋಧನಾ ವರದಿಯೊಂದು ಇನ್ನಷ್ಟು ಆತಂಕಕಾರಿ ವಿಷಯಗಳನ್ನು ಪ್ರತಿಪಾದಿಸಿದೆ.



2050ರ ವೇಳೆಗೆ ಭೂಮಿಯ ತಾಪಮಾನವು 1.5ರಿಂದ 2.0 ಡಿಗ್ರಿಯಷ್ಟು ಹೆಚ್ಚಲಿದೆ ಹಾಗೂ ಜಾಗತಿಕ ದಕ್ಷಿಣದ ದೇಶಗಳಲ್ಲಿ ಈಗಿನದ್ದಕ್ಕಿಂತ ಹತ್ತು ಪಟ್ಟು ಹೆಚ್ಚು ಜನರು ಉಷ್ಣಹವೆಯಿಂದಾಗಿ ಸಾವಿಗೀಡಾಗಲಿದ್ದಾರೆ ಎಂಬುದಾಗಿ ವರದಿಯು ಹೇಳಿದೆ. ಹವಾಮಾನ ಬದಲಾವಣೆಯಿಂದಾಗಿ ಉಂಟಾಗಬಹುದಾದ ಪ್ರವಾಹ ಹಾಗೂ ಮಳೆಗಿಂತಲೂ ಅಧಿಕವಾಗಿ ಉಷ್ಣಹವೆಯಿಂದಲೇ ಹೆಚ್ಚು ಸಾವು ಸಂಭವಿಸಬಹುದು ಎಂದು ಈ ವರದಿಯು ಹೇಳುತ್ತಿದೆ.

ಉಷ್ಣಹವೆಯ ಮಾರಣಾಂತಿಕ ಪರಿಣಾಮವು ಪಾಶ್ಚಿಮಾತ್ಯ ಸಂಪನ್ನ ದೇಶಗಳಲ್ಲಿ ಹೆಚ್ಚಿನ ಸಾವಿಗೆ ಕಾರಣವಾಗಲಾರದು ಎಂದೂ ವರದಿಯು ತಿಳಿಸುತ್ತದೆ. ಇದರರ್ಥವೆಂದರೆ ಅಭಿವೃದ್ಧಿಶೀಲ ಹಾಗೂ ಬಡ ದೇಶಗಳೇ ತಾಪಮಾನ ಏರಿಕೆಯ ದುಷ್ಪರಿಣಾಮಗಳನ್ನು ಅತಿಯಾಗಿ ಎದುರಿಸಲಿವೆ. ಅದರಲ್ಲಿಯೂ ದಕ್ಷಿಣ ಗೋಳಾರ್ಧದ ರಾಷ್ಟ್ರಗಳಿಗೆ ಈ ಅಪಾಯ ಹೆಚ್ಚು. ಇವುಗಳು ಉಷ್ಣ ವಲಯದಲ್ಲಿರುವುದು ಇದಕ್ಕೆ ಒಂದು ಕಾರಣವಾದರೆ, ಇನ್ನೂ ಅಭಿವೃದ್ಧಿ ಹೊಂದದಿರುವುದು ಮತ್ತೊಂದು ಕಾರಣವಾಗಿದೆ. ಬಯಲು ಗದ್ದೆಗಳಲ್ಲಿ ಕೆಲಸ ಮಾಡುವವರಿಗೆ, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹಾಗೂ ಉಷ್ಣತೆಗೆ ತಮ್ಮನ್ನು ತೆರೆದುಕೊಂಡು ಕೆಲಸ ಮಾಡುವವರಿಗೆ ಮುಂದಿನ ದಿನಗಳು ಹೆಚ್ಚು ಕಷ್ಟಕರವಾಗಲಿವೆ. ಬಡ ರಾಷ್ಟ್ರಗಳಲ್ಲಿ ಹವಾಮಾನ ಉಷ್ಣತೆಯಿಂದ ರಕ್ಷಣೆ ಪಡೆಯುವಂತಹ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಸಾಮಾನ್ಯ ಜನರು ಅಸಮರ್ಥರಾಗಿರುವುದೂ ಈ ಪ್ರದೇಶಗಳ ಜನರನ್ನು ಹೆಚ್ಚು ಬಾಧಿಸುವಂತೆ ಮಾಡಲಿದೆ.

ಕಾಡುಗಳೆಲ್ಲ ಅಳಿದು ನಗರಗಳು ಬೆಳೆಯುತ್ತಿರುವುದು, ಕಾಂಕ್ರೀಟ್ ನಗರಗಳೇ ಎಲ್ಲೆಡೆ ತುಂಬುತ್ತಿರುವುದು, ವಾಯುಮಾಲಿನ್ಯ ಉಂಟು ಮಾಡುವಂತಹ ಮಾನವ ಚಟುವಟಿಕೆಗಳು ಭೂ ತಾಪಮಾನ ಏರಿಕೆಗೆ ಕೊಡುಗೆ ನೀಡುತ್ತಿರುವುದು ತಿಳಿದಿರುವುದೆ. ದುರಂತವೆಂದರೆ ಈ ತಾಪಮಾನ ಏರಿಕೆಯ ದುಷ್ಪರಿಣಾಮ ಎದುರಿಸುವ ಬಡ ದೇಶಗಳೆಲ್ಲ ಪರಿಸರ ನಾಶಕ್ಕೆ ಕೊಡುಗೆ ನೀಡಿದ ದೇಶಗಳಲ್ಲ. ವಾಸ್ತವದಲ್ಲಿ ಪರಿಸರ ನಾಶಕ್ಕೆ ಕಾರಣವಾಗುತ್ತಿರುವುದು ಸಿರಿವಂತ ದೇಶಗಳು. ಸಿರಿವಂತ ರಾಷ್ಟ್ರಗಳು ಕೆಡಿಸುತ್ತಿರುವ ಹವಾಮಾನದ ದುಷ್ಫಲವನ್ನು ಏನೂ ತಪ್ಪೆಸಗದ ರಾಷ್ಟ್ರಗಳು ಅನುಭವಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಯಲ್ಲಿ ಸಂಪನ್ನ ರಾಷ್ಟ್ರಗಳು ಹೆಚ್ಚು ಶ್ರಮ ವಹಿಸಬೇಕಾಗಿರುವುದು ಮತ್ತು ಹೆಚ್ಚು ಸಂಪನ್ಮೂಲ ವ್ಯಯಿಸಬೇಕಾಗಿರುವುದು ನ್ಯಾಯವಾಗಿದೆ. ಭೂಮಿಯು ಸಕಲರಿಗೂ ವಾಸಯೋಗ್ಯವಾಗುವಂತೆ ಮಾಡಲು ಪರಿಶ್ರಮಿಸಬೇಕಾಗಿದೆ.

ಮೋಸ ಹೋಗದಿರಲು...

ಪ್ರಜ್ಞಾವೃದ್ಧಂ ಧರ್ಮವೃದ್ಧಂ ಸ್ವಬಂಧುಂ ವಿದ್ಯಾವೃದ್ಧಂ ವಯಸಾ ಚಾಪಿ ವೃದ್ಧಮ್ ।
ಕಾರ್ಯಾಕಾರ್ಯೇ ಪೂಜಯಿತ್ವಾ ಪ್ರಸಾದ್ಯ ಯಃ ಸಂಪೃಚ್ಛೇನ್ನ ಸ ಮುಹ್ಯೇತ್ ಕದಾಚಿತ್ ॥

ಕೆಲಸವನ್ನು ಕೈಗೊಳ್ಳುವಾಗ ಅಥವಾ ಬಿಡುವಾಗ ಪ್ರಜ್ಞಾ ವೃದ್ಧರನ್ನೂ, ಧರ್ಮವೃದ್ಧರನ್ನೂ, ಸ್ವಬಂಧುಗಳನ್ನೂ, ವಿದ್ಯಾವೃದ್ಧರನ್ನೂ ಮತ್ತು ವಯೋವೃದ್ಧರನ್ನೂ ಗೌರವಿಸಿ, ಸಂತೋಷಗೊಳಿಸಿ, ವಿಚಾರಿಸಿ ತಿಳಿದುಕೊಳ್ಳುವವನು ಮೋಸ ಹೋಗುವುದಿಲ್ಲ – ಎಂಬುದು ಶ್ಲೋಕಾರ್ಥ.

ಜೀವನದಲ್ಲಿ ಎಲ್ಲರೂ ಕೂಡ ಒಂದಲ್ಲ ಒಂದು ವಿಧದಲ್ಲಿ ಮೋಸ ಹೋಗುತ್ತಾರೆ. ಎಲ್ಲಿಯವರೆಗೆ ಮೋಸ ಹೋಗುವವರಿರುತ್ತಾರೋ ಅಲ್ಲಿಯವರೆಗೆ ಮೋಸ ಮಾಡುವವರೂ ಇರುತ್ತಾರೆ. ಇದು ಜಗದ ನಿಯಮವಾಗಿಬಿಟ್ಟಿದೆ. ಇದಕ್ಕೆ ಪರಿಹಾರವೆಂದರೆ ಮೋಸ ಹೋಗದಿರುವುದು. ಸಾಕಷ್ಟು ವಿಚಾರ ವಿಮರ್ಶೆ ನಡೆಸಿ ವಿವೇಕದಿಂದ ವ್ಯವಹರಿಸಿದರೆ ಮೋಸ ಹೋಗದಿರಬಹುದು. ಈ ಹಂತಕ್ಕೆ ಏರಲು



ನಿರಂತರ ಪ್ರಯತ್ನ ಹಾಗೂ ಎಚ್ಚರ ಬೇಕೇಬೇಕು.

ಅನುಭವಿಗಳ ಒಡನಾಟ, ವಿಚಾರಿಸಿ ನಡೆಸುವ ವ್ಯವಹಾರ ಇವುಗಳಿಂದ ಮೋಸಾದಿಗಳಿಂದ ದೂರವಿರಬಹುದು. ಅಂತಹ ಕೆಲವು ತಿಳುವಳಿಕೆಯನ್ನು ಕವಿಯು ಪ್ರಕೃತ ಶ್ಲೋಕದಲ್ಲಿ ನೀಡಿದ್ದಾನೆ. 'ಪ್ರಜ್ಞಾಬಲಂ ಚ ಸರ್ವೇಷು ಮುಖ್ಯಂ ಕಾರ್ಯೇಷು ಸಾಧನಮ್' ಎಲ್ಲ ಕೆಲಸಗಳಲ್ಲೂ ಸಾಧಕವಾದುದು ಉತ್ತಮ ಜ್ಞಾನದ ಬಲ ಎಂಬುದು ಸೂಕ್ತಿಯ ಅರ್ಥ. 'ಪ್ರಜ್ಞಾ ಹಿ ಅಮೋಘ ಶಸ್ತ್ರಮ್' ಎಲ್ಲ ತೊಂದರೆಗಳಿಂದ ಪಾರಾಗಲು ಪ್ರಜ್ಞೆಯೇ ಅಮೋಘವಾದ ಅಸ್ತ್ರ. ಇದನ್ನು ಸರಿಯಾಗಿ ಅರಿತಿರಬೇಕಷ್ಟೆ!

ಯಾವುದೇ ಕೆಲಸವನ್ನು ಆರಂಭಿಸುವಾಗ, ಸಾಹಸ ಮಾಡಲು ಮುಂದಾಗುವಾಗ ಅಥವಾ ಅದರಿಂದ ಹಿಂದೆ ಸರಿಯುವಾಗ ಯೋಗ್ಯರೊಡನೆ ವಿಚಾರ ವಿನಿಮಯ ನಡೆಸಿ ಮುಂದಾಗುವುದು ಒಳ್ಳೆಯ ಪರಿಪಾಠ. ಜ್ಞಾನವೃದ್ಧರೇ ಮೊದಲು ಸಂಪರ್ಕಿಸಬೇಕಾದವರು. ತಮ್ಮ ಅನುಭವ ಹಾಗೂ ಅರಿವಿನ ಆಧಾರದಿಂದ ಮಾರ್ಗದರ್ಶನ ಮಾಡುತ್ತಾರೆ. ಅದನ್ನು ಪಡೆದ ಮೇಲೆ ಧರ್ಮವೃದ್ಧರನ್ನು ಸಂಪರ್ಕಿಸಬೇಕು. ಅವರು ದೈವಾನುಗ್ರಹ, ಸಾಧಕ–ಬಾಧಕಗಳ ಬಗ್ಗೆ ತಿಳಿಸುತ್ತಾರೆ. ತಮ್ಮದೇ ಆದ ಅಧ್ಯಾತ್ಮದ ಜ್ಞಾನದ ಹಿನ್ನೆಲೆಯಲ್ಲಿ ಬೋಧಿಸುತ್ತಾರೆ.

ಯಾವಾಗಲೂ ಎಲ್ಲ ಸಂದರ್ಭಗಳಲ್ಲೂ ನಮ್ಮೊಂದಿಗಿರುವವರು ಬಂಧುಗಳು ಹಾಗೂ ಕುಟುಂಬದವರು. ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ನಮ್ಮ ಸೋಲು–ಗೆಲುವುಗಳನ್ನು ಹಂಚಿಕೊಳ್ಳುವವರು ಅವರೇ. ಆದ್ದರಿಂದ ಅವರನ್ನು ಮರೆಯಬಾರದು. ವಿದ್ಯಾವಂತರ ಸಲಹೆ ಪಡೆಯಬೇಕು. ವಿದ್ಯಾವಂತರ ಜ್ಞಾನ ಸಕಾಲದಲ್ಲಿ ಪ್ರಯೋಜನಕ್ಕೆ ಬರುತ್ತದೆ. ಇದರ ಜತೆಗೆ ಅನುಭವ ಪಕ್ವಗೊಂಡ ವಯೋವೃದ್ಧರ ಅನುಭವವನ್ನು ಸ್ವೀಕರಿಸಬೇಕು; ವಿಚಾರವನ್ನು ಹಂಚಿಕೊಳ್ಳಬೇಕು.

ತಮ್ಮ ತಮ್ಮ ರಂಗದಲ್ಲಿ ಪರಿಪಕ್ವತೆಯನ್ನು ಪಡೆದ ಇಂಥಹ ಅನುಭವಿಗಳನ್ನು ವಿಚಾರಿಸಿ, ಗೌರವಿಸಿ, ಸಂತೋಷಪಡಿಸಿ ಮುಂದುವರಿಯಬೇಕು.

ಕಾರ್ಯಾರಂಭದಲ್ಲೂ, ಕಾರ್ಯ ಬಿಡುವ ವಿಚಾರದಲ್ಲೂ ಈ ಬಗೆಯ ಜ್ಞಾನಿಗಳ ಯೋಗ್ಯ ಮಾರ್ಗ ದರ್ಶನ ಪಡೆದು, ಸರಿಯಾಗಿ ವ್ಯವಹರಿಸಿದರೆ ಮೋಸ ಹೋಗುವ ಪ್ರಮೇಯ ಬರುವುದಿಲ್ಲ.

ವಿದ್ಯುತ್ ಕ್ಷೇತ್ರದಲ್ಲಿ ಗೋಸಂಪತ್ತು

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ದಿನದಿಂದ ದಿನಕ್ಕೆ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿದೆ. ಬಾಂಬ್ ದಾಳಿಗೆ ತೈಲ ಬಾವಿಗಳು ಹೊತ್ತಿ ಉರಿಯುತ್ತಿವೆ. ಇದರಿಂದ ಮುಂದಿನ ದಿನಗಳಲ್ಲಿ ಪೆಟ್ರೋಲ್, ಡೀಸೆಲ್, ಎಲ್.ಪಿ.ಜಿ. ಸೇರಿದಂತೆ ಎಲ್ಲಾ ತೈಲೋತ್ಪನ್ನಗಳ ಅಭಾವ ವಿಶ್ವವ್ಯಾಪಿ ತೀವ್ರವಾಗಿ ಕಾಡಲಿದೆ. ಹೀಗಾಗಿ ಜಗತ್ತಿನಾದ್ಯಂತ ತೈಲೋತ್ಪನ್ನಗಳಿಗೆ ಪರ್ಯಾಯದ ಹುಡುಕಾಟ ಹೆಚ್ಚಾಗಿದೆ. ಭಾರತವೂ ಇದರಿಂದ ಹೊರತಾಗಿಲ್ಲ. ಬೇರೆಲ್ಲಾ ದೇಶಗಳಿಗೆ ಹೋಲಿಸಿದಲ್ಲಿ ಭಾರತ ಪರ್ಯಾಯ ಮಾರ್ಗವನ್ನು ತನ್ನಲ್ಲೇ ಅಡಗಿಸಿಕೊಂಡಿರುವುದು ಕಾಣಿಸುತ್ತದೆ. ಆ ಮಾರ್ಗ ಬೇರ್‍ಯಾವುದು ಆಗದೇ ಗೋಸಂಪತ್ತಾಗಿರುವುದು ಬಹುತೇಕ ದೇಶಗಳಿಗೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಆ ಸಂಪತ್ತನ್ನು ಇನ್ನಿಲ್ಲವಾಗಿಸುವ ಎಲ್ಲಾ ಷಡ್ಯಂತ್ರವನ್ನು ದೇಶದ ಒಳಗಿನ ಮತ್ತು ಹೊರಗಿನ ಶಕ್ತಿಗಳು ನಿರಂತರವಾಗಿ ಮಾಡುತ್ತಿರುವುದನ್ನು ಅವಲೋಕಿಸಿದಾಗ ಗೋಚರಿಸುತ್ತದೆ.

ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಇಂಧನ ಮತ್ತು ವಿದ್ಯುತ್ತಿಗೆ ಪರ್ಯಾಯವಾಗಿ ಏನಾದರೊಂದು ಶಕ್ತಿಯನ್ನು ಭಾರತ ಬಹಳ ಹಿಂದಿನಿಂದ ಹುಡುಕುತ್ತಲೇ ಇದೆ. ಆದರೆ ತನ್ನ ಹತ್ತಿರವೇ ಇರುವ, ಕರಗುತ್ತಿರುವ ಗೋಸಂಪತ್ತಿನ ಕಡೆ ಗಮನ ಹರಿಸುತ್ತಲೇ ಇಲ್ಲದಿರುವುದು ದುರಂತವೇ ಸರಿ. ದೇಶದಲ್ಲಿ 2019ರ ಪ್ರಾಣಿ ಗಣತಿಯ ಪ್ರಕಾರ 535.78 ಮಿಲಿಯನ್ ಜಾನುವಾರುಗಳಿವೆ. ಅವುಗಳಲ್ಲಿ ದನಗಳ ಸಂಖ್ಯೆ 192.5 ಮಿಲಿಯನ್ ಆಗಿದ್ದರೆ, ಎಮ್ಮೆ ಮತ್ತು ಕೋಣಗಳ ಸಂಖ್ಯೆ 109.9 ಮಿಲಿಯನ್‌ನಷ್ಟಿದೆ. ಇವುಗಳಿಂದ ಉತ್ಪಾದನೆಯಾಗುವ ಸಗಣಿ ಮತ್ತು ಮೂತ್ರವನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ದೇಶದಲ್ಲಿರುವ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ನೀಡಬಹುದು. ಇವುಗಳ ಗೊಬ್ಬರದಿಂದ ಸಿಗುವ ಮಿಥೇನ್ ಅನಿಲದಿಂದ ಜಲಜನಕವನ್ನು ಬೇರ್ಪಡಿಸುವ ಘಟಕ ಸ್ಥಾಪಿಸಿದರೆ ಸಾಕು, ಸುಲಭವಾಗಿ ಎಲ್.ಪಿ.ಜಿ.ಗೆ ಪರ್ಯಾಯವಾದ ಕಡಿಮೆ ಖರ್ಚಿನ ದೇಶಿ ಅನಿಲವನ್ನು ಪಡೆಯಬಹುದು. ಇದರಲ್ಲಿರುವ ಜಲಜನಕವನ್ನು ಸಾಂದ್ರೀಕರಿಸಿದಾಗ ಅದು ದ್ರವ ರೂಪಕ್ಕೆ ಬರುತ್ತದೆ. ಇದನ್ನು ಎಲ್.ಎನ್.ಜಿ. ಹಾಗೂ ಸಿ.ಎನ್.ಜಿ. ಅನಿಲದೊಂದಿಗೆ ಮಿಶ್ರಣ ಮಾಡಿ ಬಳಸಬಹುದು. ಜಲಜನಕವನ್ನು ನೇರವಾಗಿ ಬಳಸುವ ಕಾರುಗಳು ಸಹ ಇವೆ. ಆದರೆ ಈ ತಂತ್ರಜ್ಞಾನ ಸ್ವಲ್ಪ ದುಬಾರಿ ಎನ್ನಲಾಗುತ್ತದೆ.

1981ರಲ್ಲಿ ಭಾರತದಲ್ಲಿನ ಪಶು ಶಕ್ತಿಯು ಒಟ್ಟು ದೇಶದಲ್ಲಿ ಉತ್ಪತ್ತಿಯಾಗುತ್ತಿದ್ದ ವಿದ್ಯುಚ್ಛಕ್ತಿಗಿಂತ ಹೆಚ್ಚಿನದನ್ನು ನೀಡುತ್ತಿತ್ತು. ಇದರಿಂದ ದೊರೆಯುವ ಗೋಬರ್ ಗ್ಯಾಸ್‌ನಿಂದ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಹಾಗೆಯೇ ಗೋಬರ್ ಗ್ಯಾಸ್‌ನಿಂದ ನಡೆಸಬಹುದಾದ ಜನರೇಟರ್‌ನಿಂದ ಶೇಕಡಾ 20ರಷ್ಟು ಡೀಸೆಲ್‌ನ್ನು ಉಳಿಸಬಹುದಾಗಿದೆ. ಇದರಿಂದ ಪರಿಸರ ಮಾಲಿನ್ಯವಾಗುವ ಭಯ ಇರುವುದಿಲ್ಲ. ಗೋಬರ್ ಗ್ಯಾಸ್ ಜನರೇಟರ್‌ನಿಂದ ಉತ್ಪತ್ತಿಯಾದ ವಿದ್ಯುತ್‌ನಿಂದ ಫ್ಯಾನ್, ಟಿ.ವಿ. ಸೇರಿದಂತೆ ಬಹುತೇಕ ಮೋಟಾರ್‌ಗಳು ಕಾರ್ಯ ನಿರ್ವಹಿಸಬಲ್ಲವು. ಅಚ್ಚರಿ ಎಂದರೆ ಐದು ಹಾರ್ಸ್ ಪವರ್ ವಿದ್ಯುತ್ ಮೆಶಿನ್ ಮಾಡಿದಷ್ಟೇ ಕೆಲಸವನ್ನು ಒಂದು ಎತ್ತು 24 ಘಂಟೆಗಳಲ್ಲಿ ಮಾಡುವುದು ಸಾಬೀತಾಗಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಇನ್ ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಎಂಬ ಮುಂಬೈನಲ್ಲಿರುವ ಸಂಸ್ಥೆಯೊಂದು ಗೋವು ನಿಯಮಿತವಾಗಿ ಸುತ್ತುವುದರಿಂದ ವಿದ್ಯುತ್ ಉತ್ಪತ್ತಿಯಾಗುವುದನ್ನು ಮೊದಲಿಗೆ ಕಂಡು ಹಿಡಿದಿತ್ತು. ಅಲ್ಲಿ ಒಂದು ಗೋವು ಒಂದು ಹೆಚ್.ಪಿ ಅಂದರೆ 786 ವ್ಯಾಟ್ ವಿದ್ಯುತ್ತನ್ನು ನಿರಂತರವಾಗಿ ಉತ್ಪಾದಿಸುವುದು ಸಾಬೀತಾಗಿತ್ತು.

ಒಂದು ಸಮೀಕ್ಷೆಯ ಪ್ರಕಾರ 1050 ಮಿಲಿಯನ್ ಟನ್ ಗೊಬ್ಬರದಿಂದ 45 ಲಕ್ಷ ಕಿಲೋ ಕ್ಯಾಲರಿ ಶಕ್ತಿ ಲಭ್ಯವಾಗುತ್ತದೆ. ಮತ್ತೊಂದು ಹಿಂದಿನ ಸಮೀಕ್ಷೆಯ ವರದಿಯ ಪ್ರಕಾರ ಮಧ್ಯಪ್ರದೇಶದಲ್ಲಿದ್ದ ಸುಮಾರು 24 ಗೋಶಾಲೆಗಳು ಪ್ರತಿ ವರ್ಷ ಸಗಣಿ ಗೊಬ್ಬರದಿಂದ 6.63 ಲಕ್ಷ ಯೂನಿಟ್ ವಿದ್ಯುತ್ತನ್ನು ತಯಾರಿಸಿತ್ತು. ಗೋಶಾಲೆಗಳಲ್ಲಿ ಸಿಗುವ ಗೊಬ್ಬರದಿಂದ 25ರಿಂದ 85 ಮೀಟರ್ ಬಯೋಗ್ಯಾಸ್ ಯಂತ್ರವನ್ನು ನಿರ್ಮಾಣ ಮಾಡಲಾಗಿತ್ತು. ಈ 24 ಗೋಶಾಲೆಗಳಿಂದ ವಿದ್ಯುತ್ ತಯಾರಿಸಲು 10 ರಿಂದ 20 ಕೆ.ವಿ.ಎ.ಯ ಬಯೋಗ್ಯಾಸ್ ಜನರೇಟರ್ ಸಿದ್ದಪಡಿಸಲಾಗಿತ್ತು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಪ್ರಾಧಿಕಾರವು (K.R.E.D.L) ಬಹಳ ಹಿಂದೆಯೇ ಒಂದು ದೇಶಿ ತಳಿಗಳಿಗೆ ಪೂರಕವಾದ ಜನರೇಟರ್ ರೂಪಿಸಿದ್ದು ಜನಪ್ರಿಯವಾಗಿತ್ತು. ಅದರ ಪ್ರಕಾರ ಎರಡು ದೇಶಿ ತಳಿ ಗೋವು ಮತ್ತು ಈ ಜನರೇಟರ್ ಇದ್ದಲ್ಲಿ ಮನೆಗೆ ಬೆಳಕು ಖಂಡಿತ ದೊರೆಯುವಂತಾಗಿತ್ತು. ಈ ಜನರೇಟರ್ ತಿರುಗಿಸಲು ಎತ್ತು ಅಥವಾ ಕೋಣಗಳನ್ನು ಕಟ್ಟಿದರಾಯ್ತು. ಗಾಣದ ಮಾದರಿಯಲ್ಲಿ ಇವು ಜನರೇಟರ್‌ನ್ನು ತಿರುಗಿಸುತ್ತಿದ್ದವು. ಹೀಗೆ ಉತ್ಪಾದನೆಯಾಗುವ ಶಕ್ತಿಯನ್ನು ಬ್ಯಾಟರಿಗಳಲ್ಲಿ ಶೇಖರಿಸಿ ಬೇಕಾದಾಗ ಬಳಸಬಹುದಾಗಿತ್ತು. ಇದಕ್ಕೆ ಹೆಚ್ಚಿನ ನಿರ್ವಹಣೆ ಬೇಕಿರಲಿಲ್ಲ ಮತ್ತು ಬೇರೆ ಇಂಧನದ ಅಗತ್ಯವೂ ಬೇಕಾಗಿರಲಿಲ್ಲ. ಇದು ಸುಮಾರು ಗಂಟೆಗೆ 2 ಕೆ.ವಿ ವಿದ್ಯುತ್ ಉತ್ಪಾದಿಸಬಲ್ಲದಾಗಿತ್ತು. ಅಂದರೆ ಟ್ಯೂಬ್‌ಲೈಟ್‌ಗೆ 20 ವ್ಯಾಟ್, ಫ್ಯಾನ್‌ಗೆ 75 ವ್ಯಾಟ್ ಮತ್ತು ಟಿ.ವಿ.ಗೆ 100 ವ್ಯಾಟಿನಂತೆ ಅಂದಾಜಿಸಿದರೂ ಮನೆಯೊಂದಕ್ಕೆ ಬೇಕಾಗುವ ವಿದ್ಯುತ್ ಉತ್ಪಾದನೆಗೆ ಕಷ್ಟವಿರಲಿಲ್ಲ. ಮನೆಯೊಂದರಲ್ಲಿ ದಿನಕ್ಕೆ ಸುಮಾರು 16 ಯೂನಿಟ್ ವಿದ್ಯುತ್ ಖರ್ಚಾದರೆ ವರ್ಷಕ್ಕೆ 5760 ಯೂನಿಟ್‌ಗಳಾಗುತ್ತವೆ. ಇದರಿಂದ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಉಳಿತಾಯವಾಗಲಿದೆ.

ಉತ್ತರ ಪ್ರದೇಶದ ಬುಲಂದಶಹರದ ಗಂಗಾವಡ ಗ್ರಾಮದ ನಿವಾಸಿಗಳಾದ ಹರಿವಂಶ ಯಾದವ್ ಮತ್ತು ನಿರುತ್ತಮ ಕುಮಾರ್ ಸಿಂಗ್ ಎಂಬ ಇಬ್ಬರು ವ್ಯಕ್ತಿಗಳು ಬಹಳ ಹಿಂದೆಯೇ ಅಹಮದಾಬಾದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಕಾರ್ಯಾಗಾರದಲ್ಲಿ, ಪ್ಲಾಸ್ಟಿಕ್ ಟ್ಯಾಂಕಿಗೆ ದನದ ಸಗಣಿಯನ್ನು ತುಂಬಿಸಿ ಅದಕ್ಕೆ ಎರಡು ಹಳೆಯ ಬ್ಯಾಟರಿಗಳನ್ನು ಹಾಕಿ, ಉಪ್ಪು ನೀರಿನ ದ್ರಾವಣ ಸುರಿದು, ನಂತರ ಧನ ಮತ್ತು ಋಣ ವಿದ್ಯುತ್ ವಾಹಕಗಳನ್ನು ಅದರಲ್ಲಿ ಅದ್ದಿ, ಅದರಿಂದ ವಿದ್ಯುತ್ ಉತ್ಪತ್ತಿ ಮಾಡಿ ವಿದ್ಯುತ್ ಬಲ್ಬ್‌ಗಳು ಉರಿಯುವಂತೆ ಮಾಡಿದ್ದರು. ಇದರಿಂದ ಉತ್ತರ ಪ್ರದೇಶದ ಗಂಗಾವಢ, ಕಮೋನಾಹ, ಚಿನಮಾಯಿ, ರಿಸೋಲ್ ಗಢದ 250 ಮನೆಗಳಲ್ಲಿ ಬಲ್ಬ್‌ಗಳು ಉರಿಯುವಂತಾಗಿತ್ತು. ಇದರೊಂದಿಗೆ ಆ ಸಮಯದಲ್ಲಿ ಅಲ್ಲಿನ ರೇಡಿಯೋಗಳು ಹಾಡುವಂತಾಗಿದ್ದವು. ಇಂದಿಗೂ ಅಲ್ಲಿರುವ ಜನರ ಮೊಬೈಲ್‌ಗಳು ಇದರಿಂದಲೇ ರಿಂಗಣಿಸುತ್ತಿವೆ ಎನ್ನಲಾಗಿದೆ. ಇಂದಿಗೂ ನಮ್ಮ ದೇಶದಲ್ಲಿ ವಿದ್ಯುತ್ತಿನ ಕೊರತೆ ಸಾಕಷ್ಟಿದ್ದು, ಎಷ್ಟೋ ಹಳ್ಳಿಗಳಲ್ಲಿ ವಿದ್ಯುತ್ತಿನ ಸಂಪರ್ಕವೇ ಇಲ್ಲ. ಆದರೆ ಜನರ ಬಳಿ ಗೋಸಂಪತ್ತಿದೆ. ಆದ್ದರಿಂದ ಪ್ರತಿಯೊಂದು ನಗರ ಮತ್ತು ಹಳ್ಳಿಗಳಲ್ಲಿ ಸಗಣಿ ಗೊಬ್ಬರದಿಂದ ಈ ರೀತಿಯ ವಿದ್ಯುತ್ ತಯಾರಿಸುವ ಸಣ್ಣ ಸಣ್ಣ ಪ್ಲಾಂಟನ್ನು ಅಳವಡಿಸುವ ಮೂಲಕ ಬೆಳಕನ್ನು ನೀಡಬಹುದಾಗಿದೆ. ಕೋಟ್ಯಾಂತರ ರೂಪಾಯಿ ಬೇರೆ ಬೇರೆ ರೀತಿಯಲ್ಲಿ ವಿದ್ಯುತ್ ತಯಾರಿಸುವುದನ್ನು ಉಳಿಸಬಹುದಾಗಿದೆ. ದೇಶ ಸ್ವಾವಲಂಬನೆಯತ್ತ ಸಾಗಬಹುದಾಗಿದೆ.

ಇನ್ನು ವಿದೇಶಗಳಲ್ಲೂ ಸಗಣಿಯಿಂದ ವಿದ್ಯುತ್ ತಯಾರಿಸುವ ಪ್ರಕ್ರಿಯೆ ಬಹು ಹಿಂದಿನಿಂದಲೇ ಪ್ರಾರಂಭವಾಗಿದೆ. ನಮಗಿಂತ ಒಂದು ಹೆಜ್ಜೆ ಮುಂದಿರುವ ಅವರುಗಳು ಈಗಾಗಲೇ ಸಗಣಿಯಿಂದ ಹಲವು ರೀತಿಯಲ್ಲಿ ವಿದ್ಯುತ್ ತಯಾರಿಸುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಇದರಂತೆ ಸಗಣಿ ಗೊಬ್ಬರದಿಂದ ವಿದ್ಯುತ್ ತಯಾರಿಸುವ ಮೊದಲ ಪ್ಲಾಂಟ್ ಬ್ರಿಟನ್‌ನಲ್ಲಿ ಬಹಳ ಹಿಂದೆಯೇ ಕೆಲಸವನ್ನು ಪ್ರಾರಂಭಿಸಿದೆ. ಇದರ ಡೈರೆಕ್ಟರ್ ಆಗಿದ್ದ ಚಾರ್ಲ್ಸ್ ಕ್ಲಾರ್ಕ್ ಎಂಬುವವರು ಇಲ್ಲಿ ಸಗಣಿಯಿಂದ ವಿದ್ಯುತ್ ತಯಾರಾಗುತ್ತಿದೆ ಎಂಬುದಾಗಿ ನೀಡಿದ್ದ ಹೇಳಿಕೆ ಸುದ್ದಿ ಮಾಡಿತ್ತು. ಅಂದ ಹಾಗೆ ಈ ಪ್ಲಾಂಟ್‌ನಿಂದ ಪ್ರತಿ ವರ್ಷ ಸುಮಾರು 16 ಲಕ್ಷ ಟನ್ ಯೂನಿಟ್‌ನಷ್ಟು ವಿದ್ಯುತ್ ಹಿಂದೆಯೇ ಉತ್ಪಾದಿಸಲಾಗುತ್ತಿತ್ತು. ಇದರಂತೆ ಲಂಡನ್‌ನಲ್ಲಿಯೂ ಸಹ ಒಂದು ದಶಮಾನದ ಹಿಂದೆಯೇ ಸಗಣಿಯಿಂದ ವಿದ್ಯುತ್ ತಯಾರಿಸುವ ಪ್ರಕ್ರಿಯೆಗೆ ಚಾಲನೆಯನ್ನು ನೀಡಲಾಗಿತ್ತು. ಇಲ್ಲಿಯ ಓಹಿಯೋ ಸ್ಟೇಟ್ ವಿಶ್ವವಿದ್ಯಾಲಯದ ಆಹಾರ, ಕೃಷಿ ಮತ್ತು ಜೈವಿಕ ಎಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆ್ಯನ್‌ಕ್ರಿಸ್ಟಿ ಮತ್ತು ಅವರ ವಿದ್ಯಾರ್ಥಿಗಳು ದನ ಮೆಲುಕು ಹಾಕಿದ ಆಹಾರ ಹೊಟ್ಟೆಯಲ್ಲಿ ಪಚನ ಕ್ರಿಯೆಗೆ ಒಳಪಟ್ಟ ಬಳಿಕ ಅದನ್ನು ಹೊರ ತೆಗೆದು, ಅದರ ಅರ್ಧ ಲೀಟರ್ ನಷ್ಟು ರಸದಿಂದ 600 ವೋಲ್ಟ್ ರೀಚಾರ್ಜ್ ಮಾಡಬಹುದಾದ ಬ್ಯಾಟರಿ ಚಲಾಯಿಸಲು ಸಾಧ್ಯವಾಗುವಷ್ಟು ವಿದ್ಯುತ್ ಉತ್ಪಾದಿಸಿ ತೋರಿಸಿದ್ದರು. ಇವರು ಕಂಡು ಹಿಡಿದ ಈ ಮಾಪನದಿಂದ ಸುಮಾರು 30 ದಿನಗಳವರೆಗೆ ವಿದ್ಯುತ್ತಿನ ವೋಲ್ಟೇಜ್‌ನಲ್ಲಿ ಇಳಿಕೆಯಾಗಿರಲಿಲ್ಲ. ಇಂದು ಕೊಲ್ಲಿ ರಾಷ್ಟ್ರಗಳಷ್ಟೇ ಅಲ್ಲದೆ ಬಹುತೇಕ ರಾಷ್ಟ್ರಗಳ ತಲೆಯ ಮೇಲೆ ಯುದ್ಧದ ಕಾರ್ಮೋಡ ಕವಿಯುತ್ತಿದ್ದು ತೈಲೋತ್ಪನ್ನಗಳಿಗೆ ಪರ್ಯಾಯದ ಹುಡುಕಾಟ ವಿಶ್ವದಾದ್ಯಂತ ನಡೆಯುತ್ತಿದೆ.


ಈ ಸಂದರ್ಭದಲ್ಲಿ ಸಗಣಿ ಎಂಬುದು ಎಲ್ಲದಕ್ಕೂ ಪರ್ಯಾಯವಾಗಿ ಕಂಡುಬಂದಿದೆ. ಗಮನಿಸಬೇಕಾದ್ದೇನೆಂದರೆ ಭಾರತದಲ್ಲಿ ಒಂದು ಅಂದಾಜಿನ ಪ್ರಕಾರ ಸುಮಾರು 5000ಕ್ಕೂ ಹೆಚ್ಚು ಗೋಶಾಲೆಗಳಿವೆ.

ಸದಾಚಾರವೇ ಜೀವನದ ಮೂಲ ಆಧಾರ

▸ ಸಿ.ಪಿ. ರಾಧಾಕೃಷ್ಣನ್, ಉಪ-ರಾಷ್ಟ್ರಪತಿ



ಮಹಾವೀರ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ, ನಾವು ಇಂದು ಯಾರ ಜಯಂತಿಯನ್ನು ಆಚರಿಸುತ್ತಿದ್ದೇವೆಯೋ ಆ ಭಗವಾನ್ ಮಹಾವೀರರಿಗೆ ನಾನು ಮನಃಪೂರ್ವಕವಾಗಿ ಗೌರವವನ್ನು ಅರ್ಪಿಸುತ್ತೇನೆ. ಈ ಲೇಖನದ ಮೂಲಕ, ಮಾನವಕುಲಕ್ಕೆ ಸದಾಚಾರ, ಕರುಣೆ ಮತ್ತು ಸತ್ಯದ ಹಾದಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಅವರ ಶಾಶ್ವತ ಬೋಧನೆಗಳಿಗೆ ಹಾಗೂ ಮೌಲ್ಯಗಳಿಗೆ ಗೌರವ ಸಲ್ಲಿಸಲು ನಾನು ಬಯಸುತ್ತೇನೆ. ತಮಿಳುನಾಡು ದೀರ್ಘಕಾಲದಿಂದಲೂ ಗಾಢ ಆಧ್ಯಾತ್ಮಿಕ ಭಕ್ತಿಯ ನಾಡಾಗಿದೆ. ಕಳೆದ ಹಲವು ಸಾವಿರ ವರ್ಷಗಳಿಂದ, ಈ ಪವಿತ್ರ ಭೂಮಿಯಲ್ಲಿ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ತ್ವಶಾಸ್ತ್ರಗಳ ಶ್ರೀಮಂತ ಪರಂಪರೆಯು ಪ್ರವರ್ಧಮಾನಕ್ಕೆ ಬಂದಿದೆ. ಪುರಾತನ ಸಾಂಸ್ಕೃತಿಕ ಪರಂಪರೆ, ಗಾಢವಾದ ಒಳಗೊಳ್ಳುವಿಕೆಯ ಮನೋಭಾವ ಮತ್ತು ಗಮನಾರ್ಹವಾದ ಬುದ್ಧಿವಂತಿಕೆಯನ್ನು ಹೊಂದಿರುವ ನಮ್ಮ ತಮಿಳು ಮಣ್ಣು, ದೇಶದಾದ್ಯಂತದ ಧರ್ಮಗಳನ್ನು ಯಾವುದೇ ತಾರತಮ್ಯವಿಲ್ಲದೆ ಮುಕ್ತವಾಗಿ ಸ್ವೀಕರಿಸಿದೆ ಮತ್ತು ಪೋಷಿಸಿದೆ. ಇದೇ ಕಾರಣಕ್ಕಾಗಿ ತಮಿಳುನಾಡಿನ ಜನರು ಇಂದಿನ ಬಿಹಾರದಲ್ಲಿ ಉದಯಿಸಿದ ಜೈನ ಧರ್ಮವನ್ನು ಸುಲಭವಾಗಿ ಅನುಸರಿಸುತ್ತಿದ್ದಾರೆ. ತಮಿಳರು ಸದಾ 'ಅರಮ್' (ಸದಾಚಾರ) ಅನ್ನು ಜೀವನದ ಮೂಲ ಆಧಾರವೆಂದು ಪರಿಗಣಿಸಿದ್ದಾರೆ ಮತ್ತು ಅದಕ್ಕೆ ಒತ್ತು ನೀಡುವ ಧರ್ಮಗಳನ್ನು ಸ್ವಾಗತಿಸಿ, ಸ್ವೀಕರಿಸಿದ್ದಾರೆ. ಜೀವನವನ್ನು ಅರಮ್ (ಧರ್ಮ), ಪೊರುಳ್ (ಸಂಪತ್ತು) ಮತ್ತು ಇನ್ಬಮ್ (ಸುಖ) ಗಳ ಸಾಮರಸ್ಯದ ಅನ್ವೇಷಣೆಯ ಮೂಲಕ ರೂಪಿಸಲಾಗಿದ್ದರೂ, ಸಂಪತ್ತು ಮತ್ತು ಸುಖ ಎರಡನ್ನೂ ಕೇವಲ ಸದಾಚಾರದ ಹಾದಿಯ ಮೂಲಕವೇ ಪಡೆಯಬೇಕು ಎಂಬುದು ಇಲ್ಲಿನ ಆಶಯ. 'ಅರತೋಡು ನಿಟ್ರಲ್'ಅಂದರೆ ಸದಾಚಾರಕ್ಕೆ ಅಚಲವಾಗಿ ಬದ್ಧವಾಗಿರುವುದು ಜೀವನದ ಮೂಲ ವ್ಯಾಕರಣವಾಗಿದೆ.



ಮಹಾವೀರ ಜಯಂತಿ

ತಮಿಳುನಾಡಿನ ಜನರು ಯಾವಾಗಲೂ ಸದಾಚಾರವಿಲ್ಲದ ಸಂಪತ್ತಿನ ಅನ್ವೇಷಣೆ ಮತ್ತು ಧರ್ಮವಿಲ್ಲದ ಸುಖದ ಅನುಭವವು ಅನುಚಿತವೆಂದು ಹಾಗೂ ಸಾಮಾಜಿಕ ಅಸಮ್ಮತಿ ಮತ್ತು ನೈತಿಕ ದಂಡನೆಗೆ ಅರ್ಹವೆಂದು ನಂಬುತ್ತಾ ಬಂದಿದ್ದಾರೆ. ಇಂತಹ ಆಚರಣೆಗಳು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದಾಗಲೂ, ಅವುಗಳನ್ನು ಎಂದಿಗೂ ಸಂಪ್ರದಾಯದ ಭಾಗವಾಗಿ ಒಪ್ಪಿಕೊಳ್ಳಲಿಲ್ಲ. ಅಂತಹ ನಡವಳಿಕೆಯನ್ನು ಸಾಹಿತ್ಯದಲ್ಲೂ ಅನುಮೋದಿಸದಂತೆ ನಿಯಮಗಳನ್ನು ರೂಪಿಸಿದ ನಾಗರಿಕತೆ ನಮ್ಮದು. ಈ ತತ್ವವು ಪ್ರಾಚೀನ ಪಠ್ಯವಾದ 'ತೊಲ್ಕಾಪ್ಪಿಯಂ'ನಲ್ಲಿ ಪ್ರತಿಫಲಿಸುತ್ತದೆ.

ಸಮ್ಯಕ್ ದರ್ಶನ (ಸರಿಯಾದ ನಂಬಿಕೆ), ಸಮ್ಯಕ್ ಜ್ಞಾನ (ಸರಿಯಾದ ಜ್ಞಾನ) ಮತ್ತು ಸಮ್ಯಕ್ ಚಾರಿತ್ರ್ಯ (ಸರಿಯಾದ ನಡತೆ) ಎಂಬ ರತ್ನತ್ರಯಗಳು ಜೈನ ಧರ್ಮದ ಮೂಲ ಅಡಿಪಾಯವೆಂದು ಭಗವಾನ್ ಮಹಾವೀರರು ಬೋಧಿಸಿದರು. ಆದ್ದರಿಂದ, ಇಂತಹ ನೈತಿಕ ಆದರ್ಶಗಳನ್ನು ಪಾಲಿಸುತ್ತಿದ್ದ ತಮಿಳು ಜನರು, ದೇಶದ ಉತ್ತರದ ಭಾಗಗಳಿಂದ ಈ ಉನ್ನತ ಸಂಪ್ರದಾಯವು ವಿಸ್ತರಿಸಿದಾಗ ಅದನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಜೈನ ಧರ್ಮವು ತಮಿಳುನಾಡಿನಲ್ಲಿ ವ್ಯಾಪಕವಾಗಿ ಪ್ರವರ್ಧಮಾನಕ್ಕೆ ಬಂದಿತು ಏಕೆಂದರೆ, ಅದರ ಬೋಧನೆಗಳನ್ನು ತಮಿಳು ಭಾಷೆಯಲ್ಲಿಯೇ ನೀಡಲಾಗಿತ್ತು. ಜೈನ ವಿದ್ವಾಂಸರು ತಾವು ಸೇವೆ ಸಲ್ಲಿಸಿದ ಪ್ರದೇಶಗಳ ಮಾತೃಭಾಷೆಗಳಲ್ಲಿಯೇ ತಮ್ಮ ಧರ್ಮಗ್ರಂಥಗಳನ್ನು ರಚಿಸಲು ಆರಿಸಿಕೊಂಡರು, ಆ ಮೂಲಕ ಸಾಮಾನ್ಯ ಜನರಿಗೆ ತಮ್ಮ ತತ್ತ್ವಶಾಸ್ತ್ರವು ಸುಲಭವಾಗಿ ಲಭ್ಯವಾಗುವಂತೆ ಮಾಡಿದರು. ತಮಿಳು ಸಾಹಿತ್ಯಕ್ಕೆ ಅವರ ಕೊಡುಗೆ ನಿಜಕ್ಕೂ ಅಪಾರವಾದುದು.

ಶಾಸ್ತ್ರೀಯ ತಮಿಳು ಸಾಹಿತ್ಯದಲ್ಲಿ ಜೈನ ಚಿಂತನೆಯ ಪ್ರಭಾವವು ಸ್ಪಷ್ಟವಾಗಿ ಗೋಚರಿಸುತ್ತದೆ. ಸಂಗಮ ಕಾಲದಲ್ಲಿ, ಪುರನಾನೂರು ಕವಿ ಪಕ್ಕುಡುಕ್ಕೈ ನಂಕನಿಯಾರ್ ಅವರು, ಜಗತ್ತು ದುಃಖ ಮತ್ತು ಸಂತೋಷದ ಅನಿರೀಕ್ಷಿತ ಸಂಯೋಜನೆಯಾಗಿದೆ ಆದರೂ, ಅದರ ಸ್ವರೂಪವನ್ನು ಅರ್ಥಮಾಡಿಕೊಂಡವರು ಅದರ ಮಾಧುರ್ಯವನ್ನು ಗ್ರಹಿಸುತ್ತಾರೆ ಎಂದು ಹೇಳುತ್ತಾರೆ. ಇದು ಸಂತೋಷ ಮತ್ತು ದುಃಖಗಳು ಜೀವನದ ಸಹಜ ಭಾಗಗಳಾಗಿವೆ ಮತ್ತು ಈ ವಾಸ್ತವವನ್ನು ಗುರುತಿಸುವುದರಲ್ಲಿ ನಿಜವಾದ ಬುದ್ಧಿವಂತಿಕೆ ಅಡಗಿದೆ ಎಂಬ ಜೈನ ದೃಷ್ಟಿಕೋನವನ್ನು ಪ್ರತಿಫಲಿಸುತ್ತದೆ. ಅಂತೆಯೇ, ಕನಿಯನ್ ಪೂಂಗುಂದ್ರನಾರ್ ಅವರ ಪ್ರಸಿದ್ಧ ಪದ್ಯ ಯಾದುಮ್ ಊರೇ, ಯಾವರುಮ್ ಕೇಳಿರ್ ಒಂದು ಸಾರ್ವತ್ರಿಕ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತದೆ. ಅಂದರೆ ಎಲ್ಲಾ ಸ್ಥಳಗಳು ಒಬ್ಬರ ಸ್ವಂತ ಮತ್ತು ಎಲ್ಲಾ ಜನರು ಬಂಧುಗಳಾಗಿದ್ದಾರೆ ಮತ್ತು ಒಳ್ಳೆಯದು ಹಾಗೂ ಕೆಟ್ಟದ್ದು ಇತರರಿಂದ ಉದ್ಭವಿಸುವುದಿಲ್ಲ ಆದರೆ, ಅವು ಒಬ್ಬರ ಸ್ವಂತ ಕ್ರಿಯೆಗಳಿಂದಲೇ ರೂಪಿತವಾಗುತ್ತವೆ. ಕರ್ಮ ಸಿದ್ಧಾಂತದಲ್ಲಿ ಬೇರೂರಿರುವ ಈ ಆಳವಾದ ಆಲೋಚನೆಯು ಜೈನ ತತ್ವಶಾಸ್ತ್ರದೊಂದಿಗೆ ನಿಕಟವಾಗಿ ಹೊಂದಿಕೊಂಡಿದೆ. ಈ ಕಾರಣದಿಂದಲೇ ಕನಿಯನ್ ಪೂಂಗುಂದ್ರನಾರ್ ಅವರನ್ನು ಅನೇಕ ಬಾರಿ ಜೈನ ಧರ್ಮೀಯರು ಎಂದು ಪರಿಗಣಿಸಲಾಗುತ್ತದೆ. ಸಿಲಪ್ಪತಿಕಾರಂ, ಜೀವಕ ಚಿಂತಾಮಣಿ, ವಲಯಾಪತಿ ಮತ್ತು ನಾಲಡಿಯಾರ್ ನಂತರ ಕಾಲಾತೀತ ಸಾಹಿತ್ಯಿಕ ಕೃತಿಗಳು ತಮಿಳು ಸಾಹಿತ್ಯಿಕ ಪರಂಪರೆಯ ಶಾಶ್ವತ ಸ್ತಂಭಗಳಾಗಿ ನಿಂತಿವೆ, ಇವು ಜೈನ ಚಿಂತನೆ ಮತ್ತು ನೈತಿಕ ಬುದ್ಧಿವಂತಿಕೆಯ ಅಳಿಸಲಾಗದ ಮುದ್ರೆಯನ್ನು ಹೊಂದಿವೆ. ತಮಿಳುನಾಡಿನಲ್ಲಿ ಜೈನ ಧರ್ಮದ ಪ್ರಸಾರದ ಕುರಿತು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಐತಿಹಾಸಿಕ ಸಂಪ್ರದಾಯವೊಂದು ಚಾಲ್ತಿಯಲ್ಲಿದೆ. ಪೂಜ್ಯ ಋಷಿ ಭದ್ರಬಾಹು ಅವರು ತಮ್ಮ ಆಧ್ಯಾತ್ಮಿಕ ಒಳನೋಟದ ಮೂಲಕ ಮಗಧದಲ್ಲಿ 12 ವರ್ಷಗಳ ಭೀಕರ ಕ್ಷಾಮವನ್ನು ಊಹಿಸಿ, 12,000 ಸನ್ಯಾಸಿ ಗಳನ್ನು ಅದರ ಪರಿಣಾಮಗಳಿಂದ ರಕ್ಷಿಸಲು ದಕ್ಷಿಣಾಭಿಮುಖವಾಗಿ ಪ್ರಯಾಣ ಬೆಳೆಸಿದರು. ಅವರ ಜೊತೆಯಲ್ಲಿ ಅಸಂಖ್ಯಾತ ಸುಖಭೋಗಗಳನ್ನು ತ್ಯಜಿಸಿ ಸನ್ಯಾಸತ್ವದ ಜೀವನವನ್ನು ಅರಸಿ ಬಂದಿದ್ದ ಚಂದ್ರಗುಪ್ತ ಮೌರ್ಯರೂ ಇದ್ದರು. ಅವರು ಅಂತಿಮವಾಗಿ ಇಂದಿನ ಕರ್ನಾಟಕದ ಶ್ರವಣಬೆಳಗೊಳದಲ್ಲಿ ನೆಲೆಸಿದರು.

ಅಲ್ಲಿಂದ, ಋಷಿ ಭದ್ರಬಾಹು ಅವರು ತಮ್ಮ ಶಿಷ್ಯ ವಿಶಾಖ ಮುನಿವರ್ ಅವರನ್ನು ಚೋಳ ಮತ್ತು ಪಾಂಡ್ಯ ಪ್ರಾಂತ್ಯಗಳಲ್ಲಿ ಜೈನ ತತ್ವಗಳನ್ನು ಪ್ರಚಾರ ಮಾಡಲು ಕಳುಹಿಸಿದರು ಎಂದು ಹೇಳಲಾಗುತ್ತದೆ. ಈ ಘಟನೆಗಳ ಉಲ್ಲೇಖಗಳು ಹರಿಸೇನನಿಗೆ ಸಂಬಂಧಿಸಿದ 'ಬೃಹತ್ಕಥಾ ಕೋಶ' ಮತ್ತು ದೇವಚಂದ್ರನ 'ರಾಜಾವಳಿ ಕಥೆ'ಯಂತಹ ಪಠ್ಯಗಳಲ್ಲಿ ಕಂಡುಬರುತ್ತವೆ. ಮಧುರೈ ಪ್ರದೇಶದಲ್ಲಿ ಪತ್ತೆಯಾದ ಬ್ರಾಹ್ಮಿ ಶಾಸನಗಳು, ಹಾಗೆಯೇ ಸುಮಾರು ಎರಡು ಸಹಸ್ರಮಾನಗಳಿಂದ ಸಂರಕ್ಷಿಸಲ್ಪಟ್ಟಿರುವ ಶಾಶ್ವತ ಮೌಖಿಕ ಸಂಪ್ರದಾಯಗಳು ಇದಕ್ಕೆ ಹೆಚ್ಚಿನ ಪುಷ್ಟಿ ನೀಡುತ್ತವೆ. ಇಂದು ಕೂಡ ತಮಿಳುನಾಡಿನಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ತಮಿಳು ಮಾತನಾಡುವ ಜೈನರಿದ್ದಾರೆ, ಈ ಮೂಲಕ ಈ ಪುರಾತನ ಜೀವಂತ ಪರಂಪರೆಯೊಂದಿಗೆ ಅವರು, ತಮ್ಮ ಸಂಪರ್ಕವನ್ನು ಉಳಿಸಿಕೊಂಡಿದ್ದಾರೆ. ಜೈನರ ಉಪಸ್ಥಿತಿಯ ಪುರಾತತ್ವ ಕುರುಹುಗಳನ್ನು ಸಿದ್ದನವಾಸಲ್, ತಿರುಮಲೈ ಮತ್ತು ಅರವಕುರಿಚಿ ಯಂತಹ ಸ್ಥಳಗಳಲ್ಲಿ ಕಾಣಬಹುದು; ಅಲ್ಲಿನ ಬಂಡೆಗಳ ಮೇಲೆ ಕೆತ್ತಲಾದ ಕಲ್ಲಿನ ಹಾಸಿಗೆಗಳು ಜೈನ ಮುನಿಗಳ ತಪಸ್ವಿ ಜೀವನದ ಮೂಕ ಸಾಕ್ಷಿಗಳಾಗಿವೆ.

ದಕ್ಷಿಣದ ಕಾಶಿ ಎಂದು ಪೂಜಿಸಲ್ಪಡುವ ಕಾಂಚೀಪುರಂ ಅನ್ನು ಹೆಚ್ಚಾಗಿ ಶಿವ ಕಾಂಚಿ, ವಿಷ್ಣು ಕಾಂಚಿ ಮತ್ತು ಜೈನ ಕಾಂಚಿ ಎಂದು ಮೂರು ವಿಭಿನ್ನ ಪ್ರದೇಶಗಳಾಗಿ ವಿಂಗಡಿಸಲಾಗುತ್ತಿತ್ತು. ಜೈನ ಕಾಂಚಿ ಎಂಬುದು ತಿರುಪರುತ್ತಿಕುನ್ರಂ ಪ್ರದೇಶವನ್ನು ಸೂಚಿಸುತ್ತದೆ, ಇಲ್ಲಿ ಭಗವಾನ್ ಮಹಾವೀರ ಮತ್ತು ಭಗವಾನ್ ಚಂದ್ರಪ್ರಭರಿಗೆ ಅರ್ಪಿತವಾದ ದೇವಾಲಯಗಳಿವೆ. ಇಲ್ಲಿನ ಜೈನ ಮುನಿಗಳು ಧರ್ಮ, ಶಿಕ್ಷಣ ಮತ್ತು ಸಮಾಜದ ಕ್ಷೇತ್ರಗಳಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇದು ಕಾಂಚೀಪುರಂ ಅನ್ನು ಒಂದು ದೊಡ್ಡ ಕಲಿಕೆಯ ಕೇಂದ್ರವಾಗಿ ಪ್ರಸಿದ್ಧಿಗೊಳಿಸಲು ಮಹತ್ತರ ಕೊಡುಗೆ ನೀಡಿದೆ. ತಿರುಪುರ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವನಾದ ನನಗೆ, ನನ್ನ ಪ್ರದೇಶದ ಜೈನ ಪರಂಪರೆಯೊಂದಿಗೆ ನಿಕಟ ಮತ್ತು ವೈಯಕ್ತಿಕ ಸಂಬಂಧವಿದೆ. ವಿಜಯಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕೊಂಗು ವೇಲಿರ್ ಅರಸರು ಸಾಹಿತ್ಯ ಮತ್ತು ಧರ್ಮ ಎರಡಕ್ಕೂ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅವರು ಉದಯನನ ಕಥೆಯನ್ನು ವಿವರಿಸುವ 'ಬೃಹತ್ಕಥಾ'ದ ತಮಿಳು ಆವೃತ್ತಿಯಾದ 'ಪೆರುಂಕತೈ' ಎಂಬ ಮಹಾಕಾವ್ಯವನ್ನು ರಚಿಸಿದರು. ಅವರು ವಿಜಯಮಂಗಲದಲ್ಲಿ ಜೈನ ದೇವಾಲಯವೊಂದನ್ನು ಸ್ಥಾಪಿಸಿದರು, ಇದನ್ನು ಕೊಂಗು ಪ್ರದೇಶದ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಈ ಪವಿತ್ರ ಸ್ಥಳದಲ್ಲಿ, ಅವರು ತಮಿಳು ಸಂಘವನ್ನು ಸ್ಥಾಪಿಸುವ ಮೂಲಕ ಮತ್ತು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ತಮಿಳು ಕಲಿಕೆಯನ್ನು ಪೋಷಿಸಿದರು ಎಂದು ನಂಬಲಾಗಿದೆ, ಆ ಮೂಲಕ ತಮಿಳು ಭಾಷೆ ಮತ್ತು ಪಾಂಡಿತ್ಯದ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ತಿರುಪ್ಪರುತ್ತಿಕುನ್ರಂ ನಂತಹ ತಮಿಳುನಾಡಿನ ಜೈನ ದೇವಾಲಯಗಳು ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲೆಯಲ್ಲಿನ ಶ್ರೇಷ್ಠತೆಗೆ ಗಮನಾರ್ಹ ಉದಾಹರಣೆಗಳಾಗಿ ನಿಂತಿವೆ. ಜೈನ ಧರ್ಮವು ಭಾರತದ ಉತ್ತರದ ಪ್ರದೇಶಗಳಲ್ಲಿ ಉದಯಿಸಿದರೂ, ಈ ದೇವಾಲಯಗಳು ತಮಿಳು ವಾಸ್ತುಶೈಲಿಯ ಸಾರವನ್ನು ಸುಂದರವಾಗಿ ಪ್ರತಿಫಲಿಸುತ್ತವೆ.

ಈ ಸಾಮರಸ್ಯದ ಏಕೀಕರಣವು ಜಿಂಗಿಯಲ್ಲಿನ ಜೈನ ಮಠ ಮತ್ತು ಅರಂತೈ ಹಾಗೂ ತಿರುಪ್ಪನ್ನಮ್ಲೈನಲ್ಲಿನ ದೇವಾಲಯಗಳಂತಹ ಕೇಂದ್ರಗಳಲ್ಲಿ ಹಬ್ಬಗಳ ರೋಮಾಂಚಕ ಆಚರಣೆಯಲ್ಲಿ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತದೆ, ಅಲ್ಲಿ ಹಳೆಯ ಸಂಪ್ರದಾಯಗಳನ್ನು ಭಕ್ತಿಯಿಂದ ಸಂರಕ್ಷಿಸಲಾಗಿದೆ. ಚೆನ್ನಾಪುರಂನಲ್ಲಿಯೂ ಸಹ, ಭಗವಾನ್ ಆದಿನಾಥರಿಗೆ (ಮೊದಲ ತೀರ್ಥಂಕರರು) ಅರ್ಪಿತವಾದ ಪ್ರಾಚೀನ ದೇವಾಲಯವು ಸಕ್ರಿಯ ಆರಾಧನೆಯ ಸ್ಥಳವಾಗಿ ಮುಂದುವರಿದಿದೆ, ಇದು ಅವಿಚ್ಛಿನ್ನ ಆಧ್ಯಾತ್ಮಿಕ ಸಂಪ್ರದಾಯವನ್ನು ಪ್ರತಿಫಲಿಸುತ್ತದೆ.

ವಿಧಾನಸಭಾ ಚುನಾವಣೆ: ಕುಸಿಯಲಿರುವ ಕೆಲವು ಕೋಟೆಗಳು

▸ ರಾಮ್ ಮಾಧವ್

ಐದು ರಾಜ್ಯಗಳಿಗೆ ಈ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಎರಡು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪಾಲಿಗೆ ಮಹತ್ವದ್ದಾಗಿದೆ. 2021ರಂತೆ ಈ ಬಾರಿಯೂ ಪ.ಬಂಗಾಳ ಚುನಾವಣೆಯ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. 2011ರಿಂದ ಆರಂಭಿಸಿ ತೃಣಮೂಲ ಕಾಂಗ್ರೆಸ್ ಮೂರು ಚುನಾವಣೆಗಳನ್ನೂ ಗೆದ್ದಿದೆ. 4ನೇ ಬಾರಿಗೆ ಅಧಿಕಾರ ಗಳಿಸಲು ಮಮತಾ ಬ್ಯಾನರ್ಜಿ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಇದೇವೇಳೆ 2011ರಲ್ಲಿ ಶೇ. 4 ಮತ ಗಳಿಕೆಯೊಂದಿಗೆ ಶೂನ್ಯ ಸ್ಥಾನ ಗಳಿಸಿದ್ದ ಬಿಜೆಪಿ 2021ರಲ್ಲಿ ಶೇ. 38 ಮತ ಗಳಿಕೆಯೊಂದಿಗೆ 77 ಸ್ಥಾನ ಗಳಿಸಿದ್ದು, ಈ ಬಾರಿ ತಾನೇ ಸರಕಾರ ರಚಿಸಬೇಕೆಂಬ ಇರಾದೆಯಲ್ಲಿದೆ.

ಪ.ಬಂಗಾಳದಲ್ಲಿ ಕಳೆದೊಂದು ದಶಕದಲ್ಲಿ ಬಿಜೆಪಿಯ ಪ್ರಗತಿ ಅಸಾಧಾರಣವಾದುದು. 2016ರ ಚುನಾವಣೆಯಲ್ಲಿ 3 ಸ್ಥಾನಗಳನ್ನು ಗೆದ್ದು ಶೇ. 10 ಮತ ಗಳಿಸಿದ್ದ ಬಿಜೆಪಿ ಬಳಿಕ ಅದ್ಭುತ ಪ್ರಗತಿ ಸಾಧಿಸಿತು. ಟಿಎಂಸಿಯ ಭಿನ್ನಮತೀಯರನ್ನು ತನ್ನೆಡೆಗೆ ಸೆಳೆದುದಷ್ಟೇ ಅಲ್ಲದೆ, ಕಾಂಗ್ರೆಸ್ ಮತ್ತು ಎಡಪಕ್ಷಗಳ ತಳಮಟ್ಟದ ಕಾರ್ಯಕರ್ತರನ್ನೂ ಸೆಳೆದುಕೊಂಡಿತು. ಇದರಿಂದಾಗಿ 2021ರ ಚುನಾವಣೆಯಲ್ಲಿ ಟಿಎಂಸಿಗೆ ಪ್ರಮುಖ ಪ್ರತಿಸ್ಪರ್ಧಿಯಾಗಿ ಮೂಡಿ ಬಂದಿತು. 2020ರಲ್ಲಿ ಟಿಎಂಸಿ ಮುಖಂಡ ಸುವೇಂದು ಅಧಿಕಾರಿ ಹಾಗೂ ಇನ್ನಿತರ 9 ಶಾಸಕರು ಕೂಡಾ ಬಿಜೆಪಿ ಸೇರಿದ್ದರು. ನಂದಿಗ್ರಾಮದಲ್ಲಿ ಮಮತಾ ವಿರುದ್ಧ ಸ್ಪರ್ಧಿಸಿದ್ದ ಸುವೇಂದು ಮಮತಾರನ್ನು ಸೋಲಿಸುವ ಮೂಲಕ ರಾಜಕೀಯ ಕೋಲಾಹಲ ಸೃಷ್ಟಿಸಿದ್ದರು. ಇದೀಗ 2026ರ ವೇಳೆಗೆ ಕಾಂಗ್ರೆಸ್ ಮತ್ತು ಟಿಎಂಸಿ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಕಳೆದ ಹದಿನೈದು ವರ್ಷಗಳಲ್ಲಿ ಮಮತಾ ಸರಕಾರವು ಪರಿಣಾಮಕಾರಿ ಆಡಳಿತ ನೀಡಲು ವಿಫಲವಾಗಿದೆ. ಮೂರು ದಶಕಗಳ ಕಾಲ ಆಳಿದ ಎಡಪಕ್ಷಗಳು ರಾಜ್ಯವನ್ನು ಅಧೋಗತಿಗೆ ತಳ್ಳಿದ್ದರೆ, ಮಮತಾ ಸರಕಾರ ಕೂಡಾ ರಾಜ್ಯವನ್ನು ಮೇಲೆತ್ತುವ ಪ್ರಯತ್ನ ನಡೆಸಲಿಲ್ಲ. ರಾಜ್ಯದಲ್ಲಿ ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿ ಕಿಂಚಿತ್ತೂ ಆಗಿಲ್ಲ. ನಿರುದ್ಯೋಗ ಪ್ರಮಾಣವೂ ಅತ್ಯಧಿಕವಾಗಿದೆ. ಚುನಾವಣೆಗಿಂತ ಕೆಲವೇ ತಿಂಗಳ ಮೊದಲು ಪ್ರಕಟಿಸಿದ ಯುವ ಸಾಥಿ ಯೋಜನೆಯು ನಿರುದ್ಯೋಗಿ ಯುವಕರಿಗೆ ತಿಂಗಳಿಗೆ ಕೇವಲ 1500 ರೂ. ನೀಡುತ್ತಿದೆ. ಈ ಯೋಜನೆಗೆ ಅರ್ಜಿ ಹಾಕಲು ಲಕ್ಷಾಂತರ ಯುವಕರು ಧಾವಿಸಿರುವುದನ್ನು ಕಂಡಾಗ ರಾಜ್ಯ ಸರಕಾರವು ಉದ್ಯೋಗ ಸೃಷ್ಟಿಯಲ್ಲಿ ಹೇಗೆ ವೈಫಲ್ಯ ಕಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಮಮತಾ ಬ್ಯಾನರ್ಜಿ ಈಗ ಪ್ರಬಲ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ. ಆಕೆಯ ಸಾಂಪ್ರದಾಯಿಕ ಬೆಂಬಲಿಗರಾದ ಮಹಿಳೆಯರು ಮತ್ತು ಮುಸ್ಲಿಮರು ಕೂಡಾ ಆಕೆಯಿಂದ ದೂರ ಸರಿಯುತ್ತಿದ್ದಾರೆ. ಆಶ್ವಾಸನೆಗಳನ್ನು ಈಡೇರಿಸದಿರುವುದು ಇದಕ್ಕೆ ಕಾರಣ. ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವುದು ಪ್ರಮುಖ ಚರ್ಚಾ ವಿಷಯವಾಗಿದೆ. ನಿರುದ್ಯೋಗವು ಮುಸ್ಲಿಮರಲ್ಲೇ ಅಧಿಕವಾಗಿದೆ. ಆಡಳಿತ ವಿರೋಧಿ ಅಲೆ ಗುಪ್ತಗಾಮಿನಿಯಾಗಿ ಹರಿಯುತ್ತಿರುವುದರಿಂದ ಮಮತಾ ಅವರಿಗೆ ಈ ಬಾರಿ ಗೆಲುವು ಕಷ್ಟಕರವೆನಿಸಿದೆ.

> 5 ರಾಜ್ಯಗಳ ಚುನಾವಣೆಯಲ್ಲಿ ಕೆಲವು ಪಕ್ಷಗಳ ಕೋಟೆಗಳು ಕುಸಿಯಲಿರುವುದು ಖಚಿತವಾಗಿದೆ.

ಹಾಗೆಂದು ಬಿಜೆಪಿಗೂ ಸವಾಲಿಲ್ಲದಿಲ್ಲ. ಅದು ಟಿಎಂಸಿಯನ್ನು ಒಂದಲ್ಲ, ಮೂರು ಹಂತಗಳಲ್ಲಿ ಎದುರಿಸಬೇಕಾಗಿದೆ. ಮೊದಲನೆಯದಾಗಿ ಮಮತಾ ಬ್ಯಾನರ್ಜಿ ಗ್ರಾಮ ಮಟ್ಟದಿಂದ ಹಿಡಿದು ಉನ್ನತ ಸ್ತರದವರೆಗೆ ಆಡಳಿತ ಯಂತ್ರವನ್ನು ತಮ್ಮ ಪಕ್ಷದ ಯಂತ್ರವನ್ನಾಗಿಸಿದ್ದಾರೆ. ಅಧಿಕಾರಶಾಹಿತ್ವವು ರಾಜಕೀಕರಣಗೊಂಡಿರುವುದರಲ್ಲಿ ಪ.ಬಂಗಾಳ ಅಗ್ರ ಸ್ಥಾನದಲ್ಲಿದೆ. ಎರಡನೆಯದಾಗಿ ಟಿಎಂಸಿಯು ಅಧಿಕ ತೋಳ್ಬಲ ಹೊಂದಿದೆ. ದೊಡ್ಡ ಗೂಂಡಾ ಪಡೆಯೇ ಅದರೊಂದಿಗಿದೆ. ಮೂರನೆಯದಾಗಿ ಮಮತಾ ರಾಜಕೀಯ ಏಜೆನ್ಸಿಯನ್ನು ಬಾಡಿಗೆಗೆ ಪಡೆದಿದ್ದಾರೆ. ಚುನಾವಣೆ ವೇಳೆ ಸಾವಿರಾರು ಬಾಡಿಗೆ ಕಾರ್ಯಕರ್ತರನ್ನು ಆಕೆ ಬಳಸಿಕೊಳ್ಳುತ್ತಾರೆ.

ಪ.ಬಂಗಾಳವು ಬಿಜೆಪಿಗಷ್ಟೇ ಸವಾಲು ಒಡ್ಡಿರುವುದಲ್ಲ, ಚುನಾವಣಾ ಆಯೋಗಕ್ಕೂ ನ್ಯಾಯಯುತ ಚುನಾವಣೆ ನಡೆಸುವುದಕ್ಕೆ ಸವಾಲೊಡ್ಡಿದೆ. ಅಲ್ಲಿ ಶಾಂತಿಯುತವಾಗಿ ಮತ್ತು ಸುವ್ಯವಸ್ಥಿತವಾಗಿ ಮತದಾನ ನಡೆಸುವುದು ಕಷ್ಟದ ಕೆಲಸ. ಚುನಾವಣಾ ಆಯೋಗವು ಮತಪಟ್ಟಿ ಪರಿಷ್ಕರಣೆಯನ್ನು ಸಮರ್ಥವಾಗಿ ಮಾಡಿದ್ದು 61 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಇನ್ನೂ 60 ಲಕ್ಷ ಮತದಾರರ ಮೇಲೆ ಸಂದೇಹ ಉಂಟಾಗಿದ್ದು ಅವರು ತಮ್ಮ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಟಿಎಂಸಿಯ ಗೂಂಡಾಗಳು ಮತದಾರರನ್ನು ಬೆದರಿಸುವ ಪ್ರಕ್ರಿಯೆ ಸಾಮಾನ್ಯವಾಗಿದ್ದು, ಅದನ್ನು ತಡೆಯಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಾಗಿದೆ.

ಅಸ್ಸಾಂ ಕುರಿತು ಹೇಳುವುದಾದರೆ ಅಲ್ಲಿ ಬಿಜೆಪಿ ಜಯ ಗಳಿಸುವುದು ಬಹುತೇಕ ಖಚಿತವಾಗಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಸಮರ್ಥ ಆಡಳಿತಗಾರರಾಗಿ ಮೂಡಿಬಂದಿದ್ದಾರೆ. ಅವರ ನಾಯಕತ್ವದಲ್ಲಿ ಅಸ್ಸಾಂ ಬಹಳಷ್ಟು ಪ್ರಗತಿ ಸಾಧಿಸಿದೆ.

ಕೇರಳದಲ್ಲಿ ಕದನ ಕುತೂಹಲ ಮೂಡಿದೆ. ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿಯ ಉನ್ನತಿ ಮತ್ತು ಪಕ್ಷದ ರಾಜಕೀಯ ಅವನತಿಗೆ ಕೇರಳ ಕೂಡಾ ಒಂದು ಉತ್ತಮ ಉದಾಹರಣೆಯಾಗಿದೆ. 1990ರಿಂದ ಕೇರಳದಲ್ಲಿ ಅಧಿಕಾರವು ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಪರ್ಯಾಯವಾಗಿ ಹಂಚಿಕೆಯಾಗಿದೆ. 2021ರಲ್ಲಿ ಎಲ್‌ಡಿಎಫ್ ಈ ಪದ್ಧತಿಯನ್ನು ಮುರಿದು 2ನೇ ಬಾರಿ ಅಧಿಕಾರ ಹಿಡಿದಿತ್ತು. ಕಾಂಗ್ರೆಸ್ ಸ್ಥಾನಮಾನದಲ್ಲಿ ಅತ್ಯಂತ ಕೆಳಮಟ್ಟಕ್ಕೆ ಕುಸಿದಿತ್ತು. ಕೇರಳದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಗೊಂದಲಭರಿತವಾಗಿದೆ. ಭಿನ್ನಮತ ಹೆಚ್ಚಿದೆ. ಕೇರಳದಲ್ಲಿ ಅತಂತ್ರ ವಿಧಾನಸಭೆ ರೂಪುಗೊಂಡು ಬಿಜೆಪಿ 'ಕರಿಗುದುರೆ'ಯಾಗಿ ಮೂಡಿಬಂದರೆ ಅಚ್ಚರಿಪಡಬೇಕಾಗಿಲ್ಲ.

ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪ್ರಭುತ್ವ. ಈ ಬಾರಿಯೂ ಅದೇ ಪರಿಸ್ಥಿತಿ ಮುಂದುವರಿಯಲಿದೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು ನೋಡಬಹುದಷ್ಟೆ.

ಬಿಜೆಪಿ ಪಾಲಿಗೆ ಈ ಬಾರಿಯ ಚುನಾವಣೆ ಐದೂ ರಾಜ್ಯಗಳಲ್ಲಿ ಪ್ರಗತಿಯ ಪ್ರಮಾಣ ನಿರ್ಧರಿಸಬಲ್ಲುದು. ಇಲ್ಲಿ ನಿಜವಾದ ಸವಾಲಿರುವುದು ಕಾಂಗ್ರೆಸ್‌ಗೆ. ಈಗಾಗಲೆ ಪತನದ ಹಾದಿಯಲ್ಲಿರುವ ಕಾಂಗ್ರೆಸ್ ಮುಂದೆ ಯಾವ ಸ್ಥಿತಿಗೆ ತಲುಪುವುದು ಎಂದು ಕಾದು ನೋಡಬೇಕು. ಕಾಂಗ್ರೆಸ್‌ನ ನಿಜವಾದ ಅಗ್ನಿಪರೀಕ್ಷೆಯು ಕೇರಳದಲ್ಲಿ ಆಗಲಿದೆ. ಅಲ್ಲಿ ಅಧಿಕಾರ ಹಿಡಿಯಲು ಸೋತರೆ ಪಕ್ಷವು ಇನ್ನಷ್ಟು ಛಿದ್ರಗೊಳ್ಳಲಿದೆ. ಇದು ಕಾಂಗ್ರೆಸ್‌ನ ವಂಶವಾದಿ ರಾಜಕೀಯಕ್ಕೂ ಸವಾಲೊಡ್ಡಲಿದೆ.

ಖಾರ್ಗ್ ದ್ವೀಪ ಸೇರಿ ಪ್ರಮುಖ ಮೂಲಸೌಕರ್ಯಗಳ ಮೇಲೆ ದಾಳಿ ಎಚ್ಚರಿಕೆ | ಅಮೆರಿಕ ಜತೆ ಮಾತುಕತೆ ಇಲ್ಲ ಎಂದ ಇರಾನ್

ಹಾರ್ಮುಜ್ ತೆರೆಯದಿದ್ದರೆ ಇರಾನ್ ಧ್ವಂಸ!

ವಾಷಿಂಗ್ಟನ್/ದುಬೈ: ಒಪ್ಪಂದ ಸಾಧ್ಯವಾಗದಿದ್ದರೆ ಖಾರ್ಗ್ ದ್ವೀಪ ಸೇರಿದಂತೆ ಪ್ರಮುಖ ಮೂಲಸೌಕರ್ಯಗಳನ್ನು ಧ್ವಂಸ ಮಾಡುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ. ಒಪ್ಪಂದ ಸಾಧ್ಯವಾಗದಿದ್ದರೆ ಖಾರ್ಗ್ ದ್ವೀಪ ಸೇರಿದಂತೆ ಪ್ರಮುಖ ತೈಲ ಮತ್ತು ವಿದ್ಯುತ್ ಮೂಲಸೌಕರ್ಯಗಳನ್ನು ನಾಶಪಡಿಸುವುದಾಗಿ ಅವರು ಹೇಳಿದ್ದಾರೆ.



ಸೋಮವಾರ ತಮ್ಮ ಸಾಮಾಜಿಕ ಜಾಲತಾಣ ಟ್ರೂತ್‌ನಲ್ಲಿ ಪ್ರಕಟಣೆ ನೀಡಿದ ಅವರು, ಇರಾನ್ ತಕ್ಷಣ ಹಾರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಮತ್ತು ವಾಷಿಂಗ್ಟನ್ ಜತೆ ಒಪ್ಪಂದಕ್ಕೆ ಬರದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಟ್ರಂಪ್ ತಮ್ಮ ಹೇಳಿಕೆಯಲ್ಲಿ, ಈ ಕ್ರಮವು ಅಮೆರಿಕದ ಸೈನಿಕರು ಮತ್ತು ನಾಗರಿಕರ ಸಾವಿಗೆ ಪ್ರತೀಕಾರವಾಗಿ ಕೈಗೊಳ್ಳಲಾಗುವುದು. 47 ವರ್ಷದ ಆಡಳಿತದಲ್ಲಿ ನಮ್ಮ ಅನೇಕ ಸೈನಿಕರನ್ನು ಕೊಲ್ಲಲಾಗಿದೆ ಎಂದು ಆರೋಪಿಸಿದ್ದಾರೆ.

ನೇರ ಮಾತುಕತೆ ಇಲ್ಲ: ಇರಾನ್, ಅಮೆರಿಕದೊಂದಿಗೆ ನೇರ ಮಾತುಕತೆ ನಡೆದಿರುವುದನ್ನು ತಳ್ಳಿಹಾಕಿದೆ. ತಸ್ನೀಮ್ ಸುದ್ದಿ ಸಂಸ್ಥೆಯ ಪ್ರಕಾರ, ಅಮೆರಿಕ ನೀಡಿದ 15 ಅಂಶಗಳ ಯೋಜನೆಗೆ ಪಾಕಿಸ್ತಾನದ ಮೂಲಕ ಪ್ರತಿಕ್ರಿಯೆ ಕಳುಹಿಸಲಾಗಿದೆ. ನೇರ ಮಾತುಕತೆ ಇಲ್ಲ, ಮಧ್ಯವರ್ತಿಗಳ ಮೂಲಕ ಅವಾಸ್ತವಿಕ ಮತ್ತು ಅಸಮಂಜಸ ಬೇಡಿಕೆಗಳು ಮಾತ್ರ ಬರುತ್ತಿವೆ. ಪಾಕಿಸ್ತಾನದ ವೇದಿಕೆಗಳಲ್ಲಿ ನಾವು ಭಾಗವಹಿಸಿಲ್ಲ ಎಂದು ಸ್ಪಷ್ಟಪಡಿಸಿದೆ.

ದಾಳಿ-ಪ್ರತಿದಾಳಿಗಳ ಮುಂದುವರಿಕೆ: ಅಮೆರಿಕ ಮತ್ತು ಇಸ್ರೇಲ್ ಇರಾನ್ ವಿರುದ್ಧ ದಾಳಿಗಳನ್ನು ಮುಂದುವರಿಸುತ್ತಿರುವುದಾಗಿ ವರದಿಯಾಗಿದೆ. ಇದಕ್ಕೆ ಪ್ರತಿಯಾಗಿ ಇರಾನ್, ಕುವೈತ್‌ನ ಪ್ರಮುಖ ವಿದ್ಯುತ್ ಮತ್ತು ನೀರಿನ ಘಟಕದ ಮೇಲೆ ದಾಳಿ ನಡೆಸಿದೆ. ಜತೆಗೆ, ಉತ್ತರ ಇಸ್ರೇಲ್‌ನ ತೈಲ ಶೋಧನಾ ಘಟಕವನ್ನೂ ಗುರಿಯಾಗಿಸಿಕೊಂಡಿದೆ

ಸಮಾಧಾನದ ಸಂಕೇತ ಎಂದ ಟ್ರಂಪ್: ಟ್ರಂಪ್ ಹೇಳಿಕೆಯ ಪ್ರಕಾರ, ಇರಾನ್ 20 ತೈಲ ಟ್ಯಾಂಕರ್‌ಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸಂಚಾರಕ್ಕೆ ಅನುಮತಿ ನೀಡಲು ಒಪ್ಪಿಕೊಂಡಿದೆ. ಇದು ತಾತ್ಕಾಲಿಕ ಸಮಾಧಾನದ ಸಂಕೇತವೆಂದು ಅವರು ಹೇಳಿದ್ದಾರೆ.

ಸೈನಿಕ ನಿಯೋಜನೆ ಹೆಚ್ಚಳ: ವಾಷಿಂಗ್ಟನ್ ಪೋಸ್ಟ್ ವರದಿ ಪ್ರಕಾರ, ಅಮೆರಿಕ ರಕ್ಷಣಾ ಇಲಾಖೆ ಇರಾನ್ ಮೇಲೆ ಭೂ ಆಕ್ರಮಣ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸುಮಾರು 10,000 ಸೈನಿಕರನ್ನು ಕಳುಹಿಸಲು ಸಿದ್ಧತೆ ನಡೆಸುತ್ತಿದೆ. ಈಗಾಗಲೇ 3,500ಕ್ಕೂ ಹೆಚ್ಚು ಸೈನಿಕರು, ಅದರಲ್ಲೂ 2,200 ಮರೈನ್ ಪಡೆಗಳು ತಲುಪಿದ್ದು, ಇನ್ನಷ್ಟು ಪಡೆಗಳು 82ನೇ ಏರ್ಬೋರ್ನ್ ಡಿವಿಷನ್‌ನಿಂದ ಆಗಮಿಸುತ್ತಿವೆ

ಖಾರ್ಗ್ ದ್ವೀಪದ ಮಹತ್ವ: ಖಾರ್ಗ್ ದ್ವೀಪ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವಾಗಿದ್ದು, ದೇಶದ ಸುಮಾರು 90% ತೈಲವನ್ನು ನಿರ್ವಹಿಸುತ್ತದೆ. ಈ ದ್ವೀಪದ ಮೇಲಿನ ನಿಯಂತ್ರಣವು ಆರ್ಥಿಕ ಹಾಗೂ ತಾಂತ್ರಿಕವಾಗಿ ಅತ್ಯಂತ ಮಹತ್ವದ್ದಾಗಿದೆ.

ಫಿನಾನ್ಶಿಯಲ್ ಟೈಮ್ಸ್‌ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ಇರಾನ್‌ನ ತೈಲವನ್ನು ಪಡೆಯುವುದು ನನ್ನ ಪ್ರಿಯ ಆಯ್ಕೆ. ನಾವು ಖಾರ್ಗ್ ದ್ವೀಪವನ್ನು ವಶಕ್ಕೆ ಪಡೆಯಬಹುದು ಅಥವಾ ಬೇಡವೆಂದು ತೀರ್ಮಾನಿಸಬಹುದು. ನಮ್ಮ ಬಳಿ ಹಲವಾರು ಆಯ್ಕೆಗಳಿವೆ ಎಂದು ಹೇಳಿದ್ದಾರೆ.

ಉದ್ವಿಗ್ನತೆ ತೀವ್ರ: ಈ ಬೆಳವಣಿಗೆಗಳ ನಡುವೆ ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮತ್ತಷ್ಟು ವಿಸ್ತಾರವಾಗುವ ಆತಂಕ ಹೆಚ್ಚಾಗಿದೆ. ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿದಿದ್ದರೂ, ಸೈನಿಕ ಕ್ರಮಗಳು ತೀವ್ರಗೊಂಡಿರುವುದು ಜಾಗತಿಕ ಮಟ್ಟದಲ್ಲಿ ಚಿಂತೆಗೆ ಕಾರಣವಾಗಿದೆ.



ಪಾಕ್‌ನ ಸಂಧಾನ ಪ್ರಯತ್ನ ಹೇಳಿಕೆ ತಿರಸ್ಕರಿಸಿದ ಇರಾನ್

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ನೇರ ಮಾತುಕತೆಗೆ ವೇದಿಕೆ ಒದಗಿಸುವ ಪಾಕಿಸ್ತಾನದ ಸಂಧಾನದ ಪ್ರಯತ್ನದಲ್ಲಿ ತಾನು ಭಾಗಿಯಾಗಿಲ್ಲ ಎಂದು ಇರಾನ್ ಅಧಿಕೃತವಾಗಿ ಸ್ಪಷ್ಟಪಡಿಸಿದೆ.

ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆ ನಡೆದಿಲ್ಲ ಎಂದು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಸೋಮವಾರ ತಿಳಿಸಿದ್ದಾರೆ. ಮಧ್ಯವರ್ತಿಗಳ ಮೂಲಕ ಬಂದ ಅಮೆರಿಕದ ರಾಜತಾಂತ್ರಿಕ ಸಂದೇಶಗಳು ಅವಿವೇಕದ ಬೇಡಿಕೆಗಳು. ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ಸಭೆಗಳು ಆ ದೇಶದ ಸ್ವತಂತ್ರ ನಿರ್ಧಾರಗಳಾಗಿದ್ದು, ಅದರಲ್ಲಿ ಇರಾನ್ ಪ್ರಾತಿನಿಧ್ಯವಾಗಲಿ ಅಥವಾ ಭಾಗ ವಹಿಸುವಿಕೆಯಾಗಲಿ ಇರಲಿಲ್ಲ ಎಂದು ಕಾನ್ಸುಲೇಟ್ ಸ್ಪಷ್ಟಪಡಿಸಿದೆ.

ಪಾಕಿಸ್ತಾನದ ಪ್ರತಿಪಾದನೆ: ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಮಾತುಕತೆ ನಡೆಸುವುದಕ್ಕೆ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿ ದೇಶಗಳು ಬೆಂಬಲ ಸೂಚಿಸಿವೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಈ ಹಿಂದೆ ಘೋಷಿಸಿದ್ದರು. ಪ್ರಧಾನಿ ಶೆಹಬಾಜ್ ಷರೀಫ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿದ್ದಾರೆ ಎಂದು ದಾರ್ ಪ್ರತಿಪಾದಿಸಿದ್ದರು. ಆದರೆ, ಭಾನುವಾರ ನಡೆದ ಈ ಮಾತುಕತೆಗಳಲ್ಲಿ ಇರಾನ್, ಇಸ್ರೇಲ್ ಅಥವಾ ಅಮೆರಿಕದ ಯಾವುದೇ ಪ್ರತಿನಿಧಿಗಳು ಇರಲಿಲ್ಲ.

ಟೆಹ್ರಾನ್ ಆಡಳಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 15 ಅಂಶಗಳ ಯೋಜನೆಗೆ ಇಸ್ಲಾಮಾಬಾದ್ ಮೂಲಕ ಪ್ರತಿಕ್ರಿಯೆ ನೀಡಿದೆ ಎಂದು ವರದಿಯಾಗಿದ್ದರೂ, ಸೇನಾ ಕಾರ್ಯಾಚರಣೆಗಳು ಮುಂದುವರಿದಿವೆ. ಇರಾನ್, ಕುವೈತ್ ಮತ್ತು ಇಸ್ರೇಲ್‌ನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡಿದೆ. ಇತ್ತ ಅಮೆರಿಕ, ಈ ಪ್ರದೇಶಕ್ಕೆ 2,500 ನೌಕಾಪಡೆಗಳನ್ನು ನಿಯೋಜಿಸಿದೆ.

ಕುವೈತ್ ನೀರು ಸ್ಥಾವರ ಮೇಲಿನ ದಾಳಿಯಲ್ಲಿ ಭಾರತೀಯ ಸಾವು

ದುಬೈ: ಕುವೈತ್‌ನ ನೀರು ಶುದ್ಧೀಕರಣ ಘಟಕದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬರು ಭಾನುವಾರ ಮೃತಪಟ್ಟಿದ್ದಾರೆ. ಇದರೊಂದಿಗೆ ಕಳೆದ ತಿಂಗಳು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ನಂತರ ಮೃತಪಟ್ಟ ಭಾರತೀಯರ ಸಂಖ್ಯೆ ಎಂಟಕ್ಕೇರಿದೆ. ದಾಳಿಯ ವೇಳೆ ಸೇವಾ ಕಟ್ಟಡವೊಂದು ಹಾನಿಗೊಳಗಾಗಿದೆ ಎಂದು ಕುವೈತ್‌ನ ವಿದ್ಯುತ್, ನೀರು ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ವರದಿ ಮಾಡಿದೆ. ಭಾರತೀಯ ಕಾರ್ಮಿಕರ ಸಾವನ್ನು ವಕ್ತಾರ ಫಾತಿಮಾ ಜವ್ಹರ್ ಹಯಾತ್ ಖಚಿತಪಡಿಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸಲು ತುರ್ತು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತದ ರಾಯಭಾರಿ ಪರಮಿತ ತ್ರಿಪಾಠಿ, ಸೋಮವಾರ ಶವಾಗಾರಕ್ಕೆ ಭೇಟಿ ನೀಡಿ, ಮೃತದೇಹವನ್ನು ತಾಯ್ನಾಡಿಗೆ ಕಳುಹಿಸುವ ಪ್ರಕ್ರಿಯೆಯನ್ನು ಸುಗಮಗೊಳಿಸಿದರು. ಭಾರತೀಯ ರಾಯಭಾರ ಕಚೇರಿ ಕುವೈತ್ ಅಧಿಕಾರಿಗಳು ಮತ್ತು ಮೃತರ ಕುಟುಂಬದೊಂದಿಗೆ ಸಮನ್ವಯ ಸಾಧಿಸುತ್ತಿದೆ. ಸಂಘರ್ಷ ಆರಂಭವಾದ ನಂತರ ಯುಎಇ, ರಿಯಾದ್ ಮತ್ತು ಒಮಾನ್‌ನಲ್ಲಿ ಈ ಮೊದಲು ಭಾರತೀಯರ ಜೀವಹಾನಿಯಾಗಿತ್ತು.

ಇರಾನ್ ನೌಕಾಪಡೆಯ ಮುಖ್ಯಸ್ಥ ಸಾವು ದೃಢ

ದುಬೈ: ಇಸ್ರೇಲ್ ನಡೆಸಿದ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರೆವಲ್ಯೂಷನರಿ ಗಾರ್ಡ್ ನೌಕಾಪಡೆ ಮುಖ್ಯಸ್ಥ ರಿಯರ್ ಅಡ್ಮಿರಲ್ ಅಲಿರೇಜಾ ತಂಗ್ಸಿರಿ ಸೋಮವಾರ ಮೃತಪಟ್ಟಿದ್ದಾರೆ ಎಂದು ಇರಾನ್ ದೃಢಪಡಿಸಿದೆ. ತಂಗ್ಸಿರಿ ಅವರು



ತೀವ್ರ ಗಾಯಗಳಿಂದಾಗಿ ಮೃತಪಟ್ಟಿರುವುದಾಗಿ ಇರಾನ್ ಸರ್ಕಾರಿ ದೂರದರ್ಶನದಲ್ಲಿ ಓದಲಾದ ಹೇಳಿಕೆ ತಿಳಿಸಿದೆ. ಅವರನ್ನು ಗುರಿಯಾಗಿಸಿ ಹತ್ಯೆ ಮಾಡಿರುವುದಾಗಿ ಕಳೆದ ಗುರುವಾರ ಇಸ್ರೇಲ್ ಪ್ರತಿಪಾದಿಸಿತ್ತು. ಹಾರ್ಮುಜ್ ಜಲಸಂಧಿಯ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಅವರ ಪಾತ್ರವನ್ನು ಗಾರ್ಡ್ ಸ್ಮರಿಸಿದ್ದು, ಅವರ ಕಾರ್ಯವನ್ನು ಇತರ ಹೋರಾಟಗಾರರು ಮುಂದುವರಿಸಲಿದ್ದಾರೆ ಎಂದು ಹೇಳಿದೆ. ಪ್ರತಿಯೊಬ್ಬ ಹೋರಾಟಗಾರನೂ ಒಬ್ಬ ತಂಗ್ಸಿರಿಯೇ, ಮುಂಬರುವ ದಿನಗಳಲ್ಲಿ ಮತ್ತು ತಿಂಗಳುಗಳಲ್ಲಿ ಅವರು ತರಲಿರುವ ಅಚ್ಚರಿಗಳನ್ನು ನಾವು ಕಾದು ನೋಡೋಣ ಎಂದು ಹೇಳಿಕೆ ತಿಳಿಸಿದೆ. ಮತ್ತೊಂದು ಬೆಳವಣಿಗೆಯಲ್ಲಿ ಟೆಹ್ರಾನ್‌ನ ವಾಯುವ್ಯಕ್ಕೆ 530 ಕಿಮೀ ದೂರದಲ್ಲಿರುವ ಪೆಟ್ರೋಕೆಮಿಕಲ್ ಸ್ಥಾವರದ ಮೇಲೆ ಸೋಮವಾರ ದಾಳಿ ನಡೆದಿದೆ ಎಂದು ಇರಾನ್ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದ್ದಾರೆ.

ಹೂಡಿಕೆದಾರರಿಗೆ 10 ಲಕ್ಷ ಕೋಟಿ ರೂ. ನಷ್ಟ

ಬಾಂಬೆ ಷೇರು ಮಾರುಕಟ್ಟೆಯ(ಬಿಎಸ್‌ಇ) ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರು ಮಾರುಕಟ್ಟೆಯ(ಎನ್‌ಎಸ್‌ಇ) ನಿಫ್ಟಿ ಹಾಗೂ ಬ್ಯಾಂಕ್ ನಿಫ್ಟಿ ಸೂಚ್ಯಂಕಗಳಲ್ಲಿ ಭಾರೀ ಇಳಿಕೆ ಕಂಡುಬಂದಿದ್ದು, ಒಂದೇ ದಿನದಲ್ಲಿ ಹೂಡಿಕೆದಾರರು ಸುಮಾರು 10 ಲಕ್ಷ ಕೋಟಿ ಸಂಪತ್ತನ್ನು ಕಳೆದುಕೊಂಡಿದ್ದಾರೆ. ಸೆನ್ಸೆಕ್ಸ್ 1,635 ಅಂಕ (-2.22%) ಕುಸಿದು 82,497.1ರಲ್ಲಿ ಮುಕ್ತಾಯವಾದರೆ, ನಿಫ್ಟಿ 488 ಅಂಕ (-2.1%) ಇಳಿದು 22,331.40ರಲ್ಲಿ ಕೊನೆಗೊಂಡಿತು. ಬ್ಯಾಂಕ್ ನಿಫ್ಟಿ 1,999.25 ಅಂಕ (-3.82%) ಕುಸಿದು 50,275.35ರಲ್ಲಿ ವ್ಯವಹಾರ ಮುಗಿಸಿದೆ ಅಮೆರಿಕದಿಂದ ಸಂಭವನೀಯ ಸೈನಿಕ ಕ್ರಮಗಳ ಬಗ್ಗೆ ಆತಂಕ, ನಿಫ್ಟಿ ಹಾಗೂ ಬ್ಯಾಂಕ್ ನಿಫ್ಟಿಯ ಫ್ಯೂಚರ್ ಕಾಂಟ್ರಾಕ್ಟ್‌ಗಳು ಮಂಗಳವಾರ ಎಕ್ಸ್‌ಪೈರ್ ಆಗಲಿರುವುದರಿಂದ ಹೂಡಿಕೆದಾರರು ಮುಂಚಿತವಾಗಿ ಮಾರಾಟಕ್ಕೆ ಮುಂದಾದದ್ದು ಸೇರಿ ಹಲವು ಕಾರಣಗಳಿಂದ ಷೇರು ಮಾರುಕಟ್ಟೆ ಕುಸಿದಿದೆ ಎಂದು ವಿಶ್ಲೇಷಿಸಲಾಗಿದೆ.

ಇರಾನ್ ಮೇಲೆ ಇಸ್ರೇಲ್ ಪ್ರತಿದಾಳಿ

ಇಸ್ರೇಲ್ ಇರಾನ್ ರಾಜಧಾನಿ ಟೆಹ್ರಾನ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ 'ಸೈನಿಕ ಮೂಲಸೌಕರ್ಯ' ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ಟೆಹ್ರಾನ್‌ನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿದ್ದು, ತಬ್ರೀಜ್‌ನ ಪೆಟ್ರೋಕೆಮಿಕಲ್ ಘಟಕ ಹಾನಿಗೊಳಗಾಗಿದೆ.



ಲೆಬನಾನ್‌ನಲ್ಲಿ ಹಿಂಸಾಚಾರ

ಲೆಬನಾನ್‌ನಲ್ಲಿ, ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ನಡೆಯುತ್ತಿರುವ ಸಂಘರ್ಷದಲ್ಲಿ ಒಬ್ಬ ಇಂಡೋನೇಷ್ಯಾ ಮೂಲದ ಯುಎನ್ ಶಾಂತಿಸೈನಿಕ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಬೇರೂತ್ ನಗರದ ಉಪನಗರದಲ್ಲಿ ನಡೆದ ಇಸ್ರೇಲ್ ದಾಳಿಯಲ್ಲಿ ಒಬ್ಬರು ಮೃತಪಟ್ಟಿದ್ದು, 17 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ನಾಲ್ವರು ಮಕ್ಕಳು ಸೇರಿದ್ದಾರೆ.

ಸಾವಿನ ಸಂಖ್ಯೆ ಏರಿಕೆ

ಮಧ್ಯಪ್ರಾಚ್ಯ ಯುದ್ಧದಲ್ಲಿ ಮಾನವ ಹಾನಿ ಹೆಚ್ಚುತ್ತಿದ್ದು, ಇರಾನ್‌ನಲ್ಲಿ 1,900 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19, ಗಲ್ಫ್ ದೇಶಗಳು ಮತ್ತು ಪಶ್ಚಿಮ ತೀರದಲ್ಲಿ ಸುಮಾರು 24 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿನಲ್ಲಿ 1,200 ಕ್ಕೂ ಹೆಚ್ಚು ಸಾವು ಮತ್ತು 10 ಲಕ್ಷಕ್ಕೂ ಹೆಚ್ಚು ಜನ ಸ್ಥಳಾಂತರಗೊಂಡಿದ್ದಾರೆ. ಅಮೆರಿಕ ತನ್ನ 13 ಸೈನಿಕರನ್ನು ಕಳೆದುಕೊಂಡಿದ್ದರೆ, ಇಸ್ರೇಲ್ 6 ಸೈನಿಕರನ್ನು ಕಳೆದುಕೊಂಡಿದೆ.

ಟರ್ಕಿಗೂ ಕ್ಷಿಪಣಿ ಭೀತಿ

ಟರ್ಕಿಯ ವಾಯುಪ್ರದೇಶದಲ್ಲಿ ಇರಾನ್‌ನಿಂದ ಹಾರಿಸಲಾದ ಕ್ಷಿಪಣಿಯನ್ನು ನ್ಯಾಟೋ ರಕ್ಷಣಾ ವ್ಯವಸ್ಥೆ ತಡೆದಿದೆ. ಯುದ್ಧ ಆರಂಭವಾದ ನಂತರ ಇದು ನಾಲ್ಕನೇ ಘಟನೆ. ಆದರೆ, ಇರಾನ್ ಈ ಆರೋಪಗಳನ್ನು ನಿರಾಕರಿಸಿದೆ. ಟರ್ಕಿ ಮಧ್ಯಸ್ಥಿಕೆಯಲ್ಲಿ ಭಾಗವಹಿಸುತ್ತಿದ್ದು, ತಟಸ್ಥ ನಿಲುವು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದೆ.

ಜಾಗತಿಕ ಇಂಧನ ಸಂಕಷ್ಟದ ಭೀತಿ

ಈ ಸಂಘರ್ಷವು ಜಾಗತಿಕ ಇಂಧನ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಬೀರಿದೆ. ಇರಾನ್ ಹಾರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸಿರುವುದರಿಂದ ತೈಲ ಮತ್ತು ಅನಿಲ ಸರಬರಾಜು ಅಸ್ತವ್ಯಸ್ತಗೊಂಡಿದೆ. ಬ್ರೆಂಟ್ ಕ್ರೂಡ್ ತೈಲದ ಬೆಲೆ ಬ್ಯಾರೆಲ್‌ಗೆ 115 ಡಾಲರ್ ತಲುಪಿದ್ದು, ಯುದ್ಧ ಆರಂಭವಾದಾಗಿಗಿಂತ ಸುಮಾರು 60% ಹೆಚ್ಚಾಗಿದೆ. ಟ್ರಂಪ್ ಹೇಳುವಂತೆ, ಇರಾನ್ 20 ತೈಲ ಟ್ಯಾಂಕರ್‌ಗಳನ್ನು ಹಾರ್ಮುಜ್ ಮೂಲಕ ಸಾಗಲು ಅನುಮತಿಸಿದೆ ಎಂದು ಹೇಳಿದರೂ, ಅದನ್ನು ದೃಢಪಡಿಸುವ ಮಾಹಿತಿ ಲಭ್ಯವಿಲ್ಲ.

ಕಿರು ಸುದ್ದಿ

ನೌಕಾಪಡೆಗೆ ಮೂರು ಯುದ್ಧ ನೌಕೆ ಸೇರ್ಪಡೆ

ಹೊಸದಿಲ್ಲಿ: ಸ್ಥಳೀಯ ರಕ್ಷಣಾ ಉತ್ಪಾದನೆ ಮತ್ತು ಸ್ವಾವಲಂಬನೆಯ ಮಹತ್ವದ ಮೈಲಿಗಲ್ಲೊಂದರಲ್ಲಿ, ಭಾರತೀಯ ನೌಕಾಪಡೆಗೆ ಮೂರು ಯುದ್ಧನೌಕೆಗಳಾದ ದುನಾಗಿರಿ, ಸಂಶೋಧಕ್ ಮತ್ತು ಅಗ್ರೆಗಳನ್ನು ಕೋಲ್ಕತ್ತಾ ಪ್ರಧಾನ ಕಚೇರಿಯ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್ ಎಸ್‌ಇ) ಸೋಮವಾರ ತಲುಪಿಸಿದೆ. ಈ ಮೂಲಕ ಭಾರತೀಯ ನೌಕಾಪಡೆಗೆ ತಲುಪಿಸಲಾದ 80 ಯುದ್ಧನೌಕೆಗಳು ಸೇರಿದಂತೆ 118 ಯುದ್ಧನೌಕೆಗಳನ್ನು ನಿರ್ಮಿಸುವ ಮೈಲಿಗಲ್ಲನ್ನು ಜಿಆರ್‌ಎಸ್‌ಇ ತಲುಪಿದೆ.

64,920 ಕೋಟಿ ರೂ. ಅಕ್ರಮ ಆದಾಯ ಜಪ್ತಿ

ಹೊಸದಿಲ್ಲಿ: ಪಿಎಂಎಲ್‌ಎ ಅನ್ವಯದಲ್ಲಿ ಜಾರಿ ನಿರ್ದೇಶನಾಲಯ 1,105 ಬ್ಯಾಂಕ್ ವಂಚನೆ ಪ್ರಕರಣಗಳನ್ನು ತನಿಖೆ ಮಾಡಿದೆ. ಅಂತೆಯೇ 64,920 ಕೋಟಿ ಮೌಲ್ಯದ ಅಕ್ರಮ ಆದಾಯವನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.

ನಕ್ಸಲ್ ಹಾವಳಿ ನಿಗ್ರಹದಲ್ಲಿ ಯುಪಿಎ ಸರ್ಕಾರ ವಿಫಲ

ಹೊಸದಿಲ್ಲಿ: ನಕ್ಸಲ್ ಹಾವಳಿಯನ್ನು ಮಟ್ಟ ಹಾಕುವಲ್ಲಿ ಹಿಂದಿನ ಯುಪಿಎ ಸರ್ಕಾರ ಸಂಪೂರ್ಣ ವಿಫಲವಾಗಿತ್ತು ಎಂದು ಬಿಜೆಪಿ ಮತ್ತು ಎನ್‌ಡಿಎ ಸದಸ್ಯರು ಸೋಮವಾರ ಲೋಕಸಭೆಯಲ್ಲಿ ವಿಪಕ್ಷ ಕೂಟವನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಪ್ರತಿಯಾಗಿ, ನಾವು ನಕ್ಸಲ್ ಸಮಸ್ಯೆ ಮೊಟಕು ಹಾಕಲು ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದೆವು, ನಮ್ಮ ಹಲವು ಹಿರಿಯ ನಾಯಕರು ನಕ್ಸಲೀಯರಿಗೆ ಬಲಿಯಾಗಿದ್ದಾರೆ ಎಂದು ಕಾಂಗ್ರೆಸ್ ಸಮರ್ಥಿಸಿದೆ.

ನಕ್ಸಲ್ ಪಿಡುಗಿನಿಂದ ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಕುರಿತು ಲೋಕಸಭೆಯಲ್ಲಿ ಚರ್ಚೆ ಶುರುಮಾಡಿದ ಶಿವಸೇನೆಯ ಶ್ರೀಕಾಂತ್ ಶಿಂಧೆ, ಬಿಜೆಪಿ ಆಳ್ವಿಕೆಯಲ್ಲಿ ಕೆಂಪು ಕಾರಿಡಾರ್ ಬಹುತೇಕ ನಶಿಸಿದೆ ಮತ್ತು ಇದರ ಜಾಗದಲ್ಲಿ ಗ್ರೋತ್ ಕಾರಿಡಾರ್ ಕಂಗೊಳಿಸತೊಡಗಿದೆ ಎಂದರು.

ಬಿಜೆಪಿ ಆಳ್ವಿಕೆಯಲ್ಲಿ ಕಳೆದ ವರ್ಷ 317 ನಕ್ಸಲರ ವಧೆಯಾಗಿದೆ. 862 ಮಂದಿಯನ್ನು ಸೆರೆಹಿಡಿಯಲಾಗಿದೆ ಮತ್ತು 1900 ನಕ್ಸಲರು ಶರಣಾಗಿದ್ದಾರೆ. 2024-25ರಲ್ಲಿ ನಕ್ಸಲರ ಕೇಂದ್ರೀಯ ಸಮಿತಿ ಆರು ಸದಸ್ಯರ ಸಹಿತ 28 ನಕ್ಸಲ್ ನಾಯಕರು ಹತರಾಗಿದ್ದಾರೆ. 2026ರಲ್ಲಿ ಇದುವರೆಗೆ 630 ನಕ್ಸಲರು ಶಸ್ತ್ರ-ಹಿಂಸೆ ತೊರೆದು ಪ್ರಧಾನ ಹೆದ್ದರಿಗೆ ಸೇರ್ಪಡೆಯಾಗಿದ್ದಾರೆ.

ಮೋದಿ, ಶಾಗೆ ಕೃತಜ್ಞತೆ: ಕಾಂಗ್ರೆಸ್ ಆಳ್ವಿಕೆಯಲ್ಲಿ ನಕ್ಸಲ್ ಹಾವಳಿ ಅತಿ ತಾರಕಕ್ಕೇರಿತ್ತು. ಆದರೆ, ನಕ್ಸಲರ ಹಾವಳಿ ಇದೀಗ ಸಂಪೂರ್ಣ ಉಡುಗಿದೆ. ಇದಕ್ಕೆ ಪೂರಕ ನೀತಿ ಅನುಷ್ಠಾನಿಸಿದ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಕೃತಜ್ಞತೆಗಳು ಎಂದು ಟಿಡಿಪಿ ಸಂಸದೆ ಬೈರೆಡ್ಡಿ ಶಬರಿ ಸದನದಲ್ಲಿ ಹೇಳಿದರು.

ಬಂಗಾಳ ಮತದಾರರಿಗೆ ಟಿಎಂಸಿ ಬೆದರಿಕೆ; ದೂರು

ಹೊಸದಿಲ್ಲಿ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕದಂತೆ ಪ.ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ನಾಯಕರು ಮತದಾರರನ್ನು ಬೆದರಿಸುತ್ತಿದ್ದಾರೆ ಎಂದು ಬಿಜೆಪಿ ಸೋಮವಾರ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಪ್ರಚಾರ ಅಭಿಯಾನಗಳಲ್ಲಿ ಮಮತಾ ಬ್ಯಾನರ್ಜಿ ಪಾಲ್ಗೊಳ್ಳುವಿಕೆಯನ್ನು ನಿಷೇಧಿಸಬೇಕು ಮತ್ತು ಟಿಎಂಸಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ ಹೊರಡಿಸಬೇಕೆಂದು ಬಿಜೆಪಿ ನಿಯೋಗ ಕೋರಿದೆ.



ಆಳುವ ಟಿಎಂಸಿ ಜತೆ ಕೈಜೋಡಿಸಿರುವ ಪ.ಬಂಗಾಳ ಪೊಲೀಸರು ದುರ್ಬಲರಿದ್ದಾರೆ. ಹಾಗಾಗಿ ಸೂಕ್ಷ್ಮಸಂವೇದಿ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಯ ಪಡೆಗಳ ನಿಯೋಜಿಸುವಂತೆಯೂ ನಿಯೋಗ ಆಯೋಗವನ್ನು ಒತ್ತಾಯಿಸಿದೆ. ಕೇಂದ್ರ ಸಚಿವರುಗಳಾದ ಕಿರಣ್ ರಿಜಿಜು, ಪಿಯುಷ್ ಗೋಯಲ್, ಸುಕಂತ ಮಜುಂದಾರ್, ಪಕ್ಷದ ಪ್ರಮುಖ ವಕ್ತಾರ ಅನಿಲ್ ಬಲೂನಿ, ರಾಜ್ಯಸಭಾ ಸಂಸದ ಅರುಣ್ ಸಿಂಗ್ ಮತ್ತಿತರ ನಾಯಕರು ನಿಯೋಗದಲ್ಲಿದ್ದರು. ನಿಯೋಗ ಇಲ್ಲಿನ ಚುನಾವಣಾ ಆಯೋಗದ ಕಚೇರಿಯಲ್ಲೇ ಅಧಿಕಾರಿಗಳನ್ನು ಭೇಟಿ ಮಾಡಿತು.

ಅಧಿಕ ಸಂಖ್ಯೆಯಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಇಸಿಐ ವೀಕ್ಷಕರಾಗಿ ನಿಯೋಜಿಸುವಂತೆಯೂ ನಿಯೋಗ ತನ್ನ ಲಿಖಿತ ದೂರಿನಲ್ಲಿ ಮನವಿ ಮಾಡಿದೆ.

ಅಕ್ರಮ ನುಸುಳುಕೋರರ ಪ್ರವೇಶಕ್ಕೆ ಕಾಂಗ್ರೆಸ್ ದಾರಿ!

ಜಾಗೀರೋಡ್: ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಬಾಂಗ್ಲಾದೇಶಿಯರನ್ನು ಅಸ್ಸಾಂಗೆ ಅಕ್ರಮವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಟ್ಟಿದೆ ಎಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಸೋಮವಾರ ಆರೋಪಿಸಿದ್ದಾರೆ.

ರಾಜ್ಯದಲ್ಲಿ ಸರ್ಕಾರ ರಚಿಸಿದ ನಂತರ ಅವರ ಪ್ರವೇಶವನ್ನು ಸ್ಥಗಿತಗೊಳಿಸಿದ್ದು ಬಿಜೆಪಿಯೇ ಎಂದು ಹೇಳಿದ್ದಾರೆ. ಮೊರಿಗಾಂವ್ ಜಿಲ್ಲೆಯ ಜಾಗೀರೋಡ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ನವೀನ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ತಮಗೆ ನೀಡಲಾಗಿದ್ದ ಸಾಂಪ್ರದಾಯಿಕ ಅಸ್ಸಾಮಿ ಸ್ಕಾರ್ಫ್ ಗಮೋಚಾ ಧರಿಸಿರಲಿಲ್ಲ. ಇದು ರಾಜ್ಯದ ಜನರ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ನವೀನ್ ಆರೋಪಿಸಿದ್ದಾರೆ. ಅಸ್ಸಾಂನಲ್ಲಿ ನುಸುಳುಕೋರರನ್ನು ಕಾಂಗ್ರೆಸ್ ಬೆಂಬಲಿಸುತ್ತಿದೆ ಎಂದು ನಬಿನ್ ಆರೋಪಿಸಿದರು. ಅವರು ಬಾಂಗ್ಲಾದೇಶದ ನುಸುಳುಕೋರರಿಗೆ ಸಿಲಿಗುರಿ ಕಾರಿಡಾರ್ ಮೂಲಕ ದೇಶವನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟರು. ರಾಜ್ಯದ ಬಿಜೆಪಿ ಸರ್ಕಾರವು ಈ ಪ್ರವೃತ್ತಿಯನ್ನು ಬದಲಾಯಿಸುತ್ತಿದೆ. ಅಕ್ರಮ ವಲಸಿಗರಿಗೆ ನಿರ್ಗಮನದ ಮಾರ್ಗವನ್ನು ತೋರಿಸುತ್ತಿದೆ ಎಂದು ನವೀನ್ ಹೇಳಿದರು. ಇದನ್ನು ಭದ್ರತೆ ಮತ್ತು ಕಾರ್ಯತಂತ್ರದ ದೃಷ್ಟಿಕೋನಗಳೆರಡರಿಂದಲೂ ನಿರ್ಣಾಯಕ ಮತ್ತು ಸೂಕ್ಷ್ಮ ಜೀವಸೆಲೆ ಎಂದು ಪರಿಗಣಿಸಲಾಗಿದೆ.

ಬಿಜೆಪಿ ಆಡಳಿತದ 10 ವರ್ಷಗಳ ಅವಧಿಯಲ್ಲಿ ಅಸ್ಸಾಂ ಬೃಹತ್ ಅಭಿವೃದ್ಧಿಯನ್ನು ಕಂಡಿದೆ. ಜನರು ಅದರ ಹಿಂದಿನ ಪರಿಸ್ಥಿತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಸ್ಟಾಲಿನ್, ವಿಜಯ್, ಸುವೇಂದು ಅಧಿಕಾರಿ ನಾಮಪತ್ರ ಸಲ್ಲಿಕೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರು ಏ.13ರ ಚುನಾವಣೆಗೆ ಚೆನ್ನೈನ ಕೋಲತ್ತೂರು ವಿಧಾನಸಭಾ ಕ್ಷೇತ್ರದಿಂದ ಹಾಗೂ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಪೆರಂಬೂರು ಕ್ಷೇತ್ರದಿಂದ ವಿಧಾನಸಭಾ ಚುನಾವಣೆಯಲ್ಲಿ ಸೋಮವಾರ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದಾರೆ. ಅದೇ ರೀತಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಸೋಮವಾರ ಪಶ್ಚಿಮ ಬಂಗಾಳದ ನಂದಿಗ್ರಾಮ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದರು.

ತಮ್ಮ ನಾಮಪತ್ರ ಸಲ್ಲಿಸಿದ ನಂತರ, ಕೋಲತ್ತೂರು ಕ್ಷೇತ್ರದಲ್ಲಿ ಜನರು ಸತತವಾಗಿ 4ನೇ ಬಾರಿಗೆ ತಮಗೆ ಅದ್ಭುತ ವಿಜಯವನ್ನು ನೀಡಲಿದ್ದಾರೆ ಎಂಬ ಸಂಪೂರ್ಣ ವಿಶ್ವಾಸವನ್ನು ಸ್ಟಾಲಿನ್ ವ್ಯಕ್ತಪಡಿಸಿದ್ದಾರೆ.

ಟಿವಿಕೆ ಮುಖ್ಯಸ್ಥ ವಿಜಯ್ , ಡಿಎಂಕೆ ಒಂದು ದುಷ್ಟ ಶಕ್ತಿ ಎಂಬ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದಾರೆ.

ಒಳ ನುಸುಳುವಿಕೆ ಕೇವಲ ಚುನಾವಣಾ ವಿಚಾರವಲ್ಲ: ಪ್ರಧಾನಿ ಮೋದಿ

ಅದು ರಾಷ್ಟ್ರೀಯ ಭದ್ರತೆ ರಕ್ಷಿಸುವ ವಿಷಯ

ಹೊಸದಿಲ್ಲಿ: ಅಕ್ರಮ ನುಸುಳುಕೋರರು ಅಸ್ಸಾಂ ಮೂಲವಾಸಿಗಳ ಭೂಮಿಯನ್ನು ಅಕ್ರಮವಾಗಿ ವಶಪಡಿಸಲು ಕಾಂಗ್ರೆಸ್ ಅವಕಾಶ ನೀಡಿತ್ತು ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಅಸ್ಸಾಂನಲ್ಲಿನ ಅಕ್ರಮ ನುಸುಳುವಿಕೆ ಪಿಡುಗು ಚುನಾವಣೆಗೆ ಸೀಮಿತ ವಿಚಾರವಲ್ಲ, ಬದಲಾಗಿ ರಾಜ್ಯದ ಅಸ್ಮಿತೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ್ದಾಗಿದೆ ಎಂದು ಹೇಳಿದ್ದಾರೆ.

ಸುದೀರ್ಘ ಕಾಲದಿಂದ ಅಸ್ಥಿರತೆಯಲ್ಲಿ ತೊಳಲಾಡಿದ್ದ ಅಸ್ಸಾಂನಲ್ಲಿ ಶಾಂತಿ ಸ್ಥಾಪನೆಗಾಗಿ ಬಿಜೆಪಿ ನೇತೃತ್ವದ ಡಬಲ್ ಇಂಜಿನ್ ಸರ್ಕಾರ ತುಂಬು ಪರಿಶ್ರಮಿಸಿದ ಪರಿಣಾಮ, ಕಳೆದ ದಶಕದಿಂದೀಚೆಗೆ ಸನ್ನಿವೇಶ ಬದಲಾಗಿದೆ ಎಂದು ಪ್ರಧಾನಿ ಗಮನ ಸೆಳೆದರು. ಅಸ್ಸಾಂನಲ್ಲಿ ಹಿಂದಿನ ಕಾಂಗ್ರೆಸ್ ಸರಕಾರಗಳ ದುರಾಡಳಿತ ಬಗ್ಗೆ ಪ್ರಪ್ರಥಮ ಮತದಾರರಿಗೆ ಸ್ಪಷ್ಟ ಮನವರಿಕೆ ಮಾಡಬೇಕು ಮತ್ತು ಒಂದು ಸಣ್ಣ ತಪ್ಪಿನಿಂದಲೂ ರಾಜ್ಯವು ಹಿಂದಿನ ಅದೇ ದುಃಸ್ಥಿತಿಗೆ ಜಾರುವ ಅಪಾಯವಿರುವುದನ್ನು ಮತದಾರರಿಗೆ ತಿಳಿಹೇಳಬೇಕೆಂದು ಪ್ರಧಾನಿ ಮೋದಿ ಕರೆ ನೀಡಿದರು. ರಾಜ್ಯದಲ್ಲಿ ಡಬಲ್ ಇಂಜಿನ್ ಸರಕಾರದ ಹ್ಯಾಟ್ರಿಕ್ ವಿಜಯಕ್ಕಾಗಿ ಪಕ್ಷ ಕಾರ್ಯಕರ್ತರು ಅಹರ್ನಿಶಿ ಶ್ರಮಿಸುತ್ತಿದ್ದಾರೆಂದು ಹೇಳಿದರು. ಏ.9ರಂದು ವಿಧಾನಸಭಾ ಚುನಾವಣೆಗಳು ನಡೆಯಲಿರುವ ಅಸ್ಸಾಂನ ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಪ್ರಧಾನಿ ವರ್ಚ್ಯುಲ್ ಆಗಿ ಮಾತನಾಡಿದರು.

ಅಕ್ರಮ ನುಸುಳುಕೋರರು ಎಲ್ಲಿ ವಾಸ್ತವ್ಯ ಹೂಡುವರೋ ಅಲ್ಲಿನ ಮೂಲವಾಸಿಗಳ ಸಣ್ಣ ಪುಟ್ಟ ವ್ಯಾಪಾರ ವ್ಯವಹಾರ, ಅವರ ಜೀವನೋಪಾಯ ಎಲ್ಲವುಗಳನ್ನು ತಮ್ಮ ಸ್ವಾಧೀನಪಡಿಸುತ್ತಾರೆ ಎಂದು ಪ್ರಧಾನಿ ಆರೋಪಿಸಿದರು. ಚುನಾವಣೆ ಎದುರಿಸಲಿರುವ ರಾಜ್ಯಗಳ ಬಿಜೆಪಿ ಕಾರ್ಯಕರ್ತರೊಂದಿಗೆ ನೇರ ಸಂಪರ್ಕ ಸಾಧ್ಯವಾಗಲು, ಆಳುವ ಬಿಜೆಪಿ ಕೈಗೊಂಡಿರುವ ಉಪಕ್ರಮ ಮೇರಾ ಬೂತ್ ಸಬ್‌ಸೇ ಮಜ್‌ಬೂತ್ ಸಂವಾದ ಸಂದರ್ಭ ಪ್ರಧಾನಿ ಮೋದಿ ಕಾಂಗ್ರೆಸ್ ಸರಕಾರಗಳ ದುರಾಡಳಿತವನ್ನು ಒಂದೊಂದಾಗಿ ನೆನಪಿಸಿದರು.

ಜನರಲ್ಲಿ ನವ ಆತ್ಮವಿಶ್ವಾಸ ಮೂಡಿದ್ದು ಬಿಜೆಪಿಯಿಂದ

ಈಶಾನ್ಯ ವಲಯದಲ್ಲಿ ಸರಕಾರ ವಿವಿಧ ಸಂಘಟನೆಗಳ ಜತೆ 12 ಶಾಂತಿ ಒಪ್ಪಂದಗಳಿಗೆ ಸಹಿ ಹಾಕಿದೆ. ಆದರೆ ಪ್ರಚಾರಕ್ಕಾಗಿ ಹಾತೊರೆವ ಮತ್ತು ಜನರಿಗೆ ಮಂಕುಬೂದಿ ಎರಚುವುದರಲ್ಲಿ ನಿಸ್ಸೀಮ ಕಾಂಗ್ರೆಸ್ ಒಪ್ಪಂದಗಳು ಬರೀ ಕಾಗದಗಳಿಗೆ ಸೀಮಿತವಾಗಿತ್ತು ಎಂಬುದನ್ನೂ ಬಿಜೆಪಿ ಕಾರ್ಯಕರ್ತರು ಜನರಿಗೆ ತಿಳಿಸಬೇಕು. ಹಿಂದೆ ಅಸ್ಸಾಂ ಹೊತ್ತುರಿಯುತ್ತಿದ್ದ, ಸುದೀರ್ಘಕಾಲ ಅಸ್ಥಿರತೆಯಿಂದ ತೊಳಲಾಡುತ್ತಿದ್ದ ಕಾಲ ಘಟ್ಟವಿತ್ತು. ಆದರೆ ಕಳೆದ ದಶಕದಲ್ಲಿ ಸನ್ನಿವೇಶ ಬದಲಾಗಿದೆ. ಬಿಜೆಪಿಯ ಡಬಲ್ ಇಂಜಿನ್ ಸರಕಾರ ಶಾಂತಿಗಾಗಿ ಶ್ರಮಿಸಿದ್ದರಿಂದ ಜನರಲ್ಲಿ ಹೊಸ ಆತ್ಮವಿಶ್ವಾಸ ಚಿಗುರೊಡೆದಿದೆ ಎಂದು ಪ್ರಧಾನಿ ಗಮನ ಸೆಳೆದರು.

ಪಾಕ್‌ನ ಐಎಸ್‌ಐ ಜತೆ ನಂಟು ಹೊಂದಿದ್ದ ಎಲ್‌ಇಟಿ ಕಮಾಂಡರ್ ಶಬ್ಬೀರ್

ಲಷ್ಕರ್ ಶಂಕಿತ ಉಗ್ರ ಸೆರೆ, ತಪ್ಪಿದ ದುರಂತ

ಹೊಸದಿಲ್ಲಿ: ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಗುಂಪಿನ ಬಾಂಗ್ಲಾದೇಶದ ಘಟಕವನ್ನು ಬೇಧಿಸಿರುವ ದಿಲ್ಲಿ ಪೊಲೀಸರು, ಎಲ್‌ಇಟಿ ಕಮಾಂಡರ್ ಶಬ್ಬೀರ್ ಅಹ್ಮದ್ ಲೋನ್‌ನನ್ನು ಬಂಧಿಸಿದ್ದಾರೆ. ಆತನನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಲೋನ್ ಉನ್ನತ ತರಬೇತಿ ಪಡೆದ ಭಯೋತ್ಪಾದಕ ಎಂಬ ಶಂಕೆ ಇದೆ. ಆತ ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್(ಐಎಸ್‌ಐ) ಪರವಾಗಿ ಕಾರ್ಯನಿರ್ವಹಿಸುತ್ತಿದ್ದ ಹ್ಯಾಂಡ್ಲರ್‌ಗಳ ಜತೆ ಸಂಪರ್ಕ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸ್ ಹೇಳಿಕೆಯ ಪ್ರಕಾರ, ಈ ಘಟಕವು ಭಾರತದಲ್ಲಿ ದೊಡ್ಡ ಭಯೋತ್ಪಾದಕ ದಾಳಿಗೆ ಸಿದ್ಧತೆ ನಡೆಸುತ್ತಿತ್ತು, ದಿಲ್ಲಿ ಪೊಲೀಸರ ಸಮಯ ಪ್ರಜ್ಞೆ ಮತ್ತು ಕರ್ತವ್ಯಪರತೆಯಿಂದ ಭಾರೀ ಅವಘಡ ತಪ್ಪಿದೆ.

ದಿಲ್ಲಿಯ ಜನಪಥ್ ಮೆಟ್ರೊ ನಿಲ್ದಾಣದಲ್ಲಿ ಅನುಮಾನಾಸ್ಪದ ಭಿತ್ತಿಪತ್ರಗಳು ಕಾಣಿಸಿಕೊಂಡ ಬೆನ್ನಲ್ಲೇ ಫೆ.8ರಂದು ಕಾರ್ಯಾಚರಣೆ ಶುರುವಾಗಿತ್ತು.



ಬಂಧಿತ ರಾಜಾ ಮತ್ತು ಕಾಶ್ಮೀರಿ ಎಂಬ ಹೆಸರುಗಳಿಂದ ದೇಶ-ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಲೋನ್, ಜಮ್ಮು-ಕಾಶ್ಮೀರದ ಶ್ರೀನಗರದ ನಿವಾಸಿಯಾಗಿದ್ದು, ದಿಲ್ಲಿ ಮತ್ತು ಕೋಲ್ಕತ್ತಾದ ಅನೇಕ ಸ್ಥಳಗಳಲ್ಲಿ ರಾಷ್ಟ್ರ ವಿರೋಧಿ ಭಿತ್ತಿಪತ್ರಗಳನ್ನು ಅಂಟಿಸುವಲ್ಲಿ ಭಾಗಿಯಾಗಿದ್ದ ಇತ್ತೀಚೆಗೆ ಪತ್ತೆಯಾದ ಘಟಕವೊಂದರ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದನು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಿತ್ತಿಪತ್ರದಲ್ಲಿ ಪಾಕ್ ಪರ ಘೋಷಣೆ: ನಾವು ಪಾಕಿಸ್ತಾನಿಗಳು, ಪಾಕಿಸ್ತಾನ ನಮ್ಮದು, ಕಾಶ್ಮೀರದ ಬಗ್ಗೆ ಪ್ರಚೋದನಕಾರಿ ಸಂದೇಶಗಳು ಮತ್ತು ಹತ್ಯೆಗೀಡಾದ ಭಯೋತ್ಪಾದಕ ಬುರ್ಹಾನ್ ವಾನಿಯ ಚಿತ್ರಗಳು ಮುಂತಾದ ಪಾಕಿಸ್ತಾನ ಪರವಾದ ಘೋಷಣೆಗಳನ್ನು ಈ ಭಿತ್ತಿಪತ್ರಗಳು ಹೊತ್ತುಕೊಂಡಿದ್ದವು. ನಂತರ ದಿಲ್ಲಿಯ ಇತರ ಹಲವಾರು ಪ್ರದೇಶಗಳಲ್ಲಿ ಇದೇ ರೀತಿಯ ಭಿತ್ತಿಪತ್ರಗಳು ಕಂಡುಬಂದಿದ್ದವು.

ವಿದೇಶಿ ಕರೆನ್ಸಿ ವಶ

ಪೊಲೀಸರು ಆತನ ಬಳಿಯಿದ್ದ ಅನೇಕ ವಿದೇಶಿ ಕರೆನ್ಸಿಗಳು ಮತ್ತು ಇತರ ದೋಷಾರೋಪಣೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಇದರಲ್ಲಿ ಸುಮಾರು 2,300 ಯುನಿಟ್ ಬಾಂಗ್ಲಾದೇಶಿ ಟಕ್ಕಾ, 1,400 ಯುನಿಟ್ ನೇಪಾಳಿ ಕರೆನ್ಸಿ, 5,000 ಯುನಿಟ್ ಪಾಕಿಸ್ತಾನಿ ಕರೆನ್ಸಿ ಮತ್ತು 3,000 ಯುನಿಟ್ ಭಾರತೀಯ ಕರೆನ್ಸಿ ಸೇರಿವೆ ಎಂದು ಅವರು ಹೇಳಿದರು. ನೇಪಾಳದ ಸಿಮ್ ಕಾರ್ಡ್ ಅನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಕಿರುಸುದ್ದಿ

ಭವ್ಯ ಶೋಭಾಯಾತ್ರೆ



ಅಣ್ಣಿಗೇರಿ: ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ಅಣ್ಣಿಗೇರಿ ಮತ್ತು ನವಲಗುಂದ ಘಟಕದ ವತಿಯಿಂದ ರಾಮ ನವಮಿ ಪ್ರಯುಕ್ತ ಹಿಂದೂ ಧರ್ಮಸಭೆ ಕಾರ್ಯಕ್ರಮದ ಮರುದಿನ ಭವ್ಯ ಶೋಭಾಯಾತ್ರೆ ಜರಗಿತು.
ಶೋಭಾ ಯಾತ್ರೆಗೆ ನಗರದ ದಾಹಸವ ಮಠದ ಡಾ. ಶಿವಕುಮಾರ್ ಸ್ವಾಮೀಜಿ ಚಾಲನೆ ನೀಡಿದರು. ರಾಷ್ಟ್ರ ರಕ್ಷಣಾಪಡೆಯ ಹಿರಿಯ ಪುನೀತ್ ಕೆರೆಹಳ್ಳಿ ಅವರಿಗೆ ಅಣ್ಣಿಗೇರಿಯ ಹಿಂದೂ ಸಮಾಜದ ಪರವಾಗಿ ಗೌರವ ಸಮರ್ಪಿಸಿದರು. ಷಣ್ಮುಖ ಗುರಿಕಾರ, ಶಿವಶಂಕರ ಕಲ್ಲೂರ, ಶಿವಯೋಗಿ ಸುರಕೋಡ, ಮಹಾಬಲೇಶ್ವರ ಹೆಬಸೂರ , ನಾಗಪ್ಪ ದಳವಾಯಿ, ಚಂಬಣ್ಣ ಸುರಕೋಡ, ಭರತೇಶ ಜೈನ, ವೀರೇಶ್ ಬ್ಯಾಹಟ್ಟಿ, ರವಿ ಎಳವತ್ತಿ, ಶಿವು ಹೊಸಳ್ಳಿ, ಶಿವಾನಂದ್ ಹಾಳದೋಟರ್, ಅಜಯ್ ಜಾಡಗೇರಿ ಮಠ, ಸಿದ್ದು ಅಂಗಡಿ, ಅರುಣ್ ಕೊಪ್ಪದ್, ನಗರದ ಹಿಂದೂ ಸಮಾಜದ ಯುವ ಮಿತ್ರರು ಹಿರಿಯರು ಉಪಸ್ಥಿತರಿದ್ದರು.

ಧರ್ಮರಾಜ ಚೌಹಾಣ್ ಆಯ್ಕೆ

ನವಲಗುಂದ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತನ ರಾಜ್ಯ ಸಹ ಕಾರ್ಯದರ್ಶಿಯಾಗಿ ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಹೆಬ್ಬಾಳ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಧರ್ಮರಾಜ ಚೌಹಾಣ್ ಅವರನ್ನು ಆಯ್ಕೆ ಮಾಡಲಾಗಿದೆ. ಚೌಹಾಣ್ ಅವರ ಆಯ್ಕೆಗೆ ಶಾಸಕ ಎನ್. ಎಚ್. ಕೋನರಡ್ಡಿ ಹಾಗೂ



ಸಂಸ್ಥಾಪಕ ರಾಜ್ಯಾಧ್ಯಕ್ಷೆ ರಮಾ ಆರ್, ಸಂಸ್ಥಾಪಕ ರಾಜ್ಯ ಪ್ರಧಾನ ಕಾರ್ಯದರ್ಶಿ ಪರ್ವೀನಬಾನು ಬುಳ್ಳಣ್ಣವರ್, ಸಂಸ್ಥಾಪಕ ಗೌರವಾಧ್ಯಕ್ಷ ಎಲ್.ಐ. ಲಕ್ಕಮ್ಮನವರ ಸೇರಿದಂತೆ ತಾಪಂ.ಇಒ ಪಿ. ಆರ್. ಬಡೇಖಾನ ಹಾಗೂ ಆಡಳಿತ ವರ್ಗ, ಹೆಬ್ಬಾಳ ಗ್ರಾಮಸ್ಥರು ಹರ್ಷವ್ಯಕ್ತಪಡಿಸಿದ್ದಾರೆ.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಹುಬ್ಬಳ್ಳಿ: ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಕೆಎಲ್ಇ ಟಿ-20 ಕ್ರಿಕೆಟ್ ಪಂದ್ಯಾವಳಿಗೆ ವಿವಿ ಕುಲಪತಿ ಪಿ.ಜಿ. ತೇವರಿ ಚಾಲನೆ ನೀಡಿದರು. ಆಟವನ್ನು ಉತ್ಸಾಹ ಹಾಗೂ ಪ್ರಾಮಾಣಿಕವಾಗಿ ಆಡಬೇಕು. ಗೆದ್ದಾಗ ವಿನಮ್ರತೆಯಿಂದ, ಸೋತಾಗ ಗೌರವದಿಂದ ಸ್ವೀಕರಿಸಬೇಕು. ಅಂತಿಮವಾಗಿ ಫಲಿತಾಂಶಕ್ಕಿಂತ ನೀವು ಆಡುವ ರೀತಿ ಬಹಳ ಮುಖ್ಯ ಎಂದರು. ಈ ಪಂದ್ಯಾವಳಿಯಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ವಿವಿಧ ಕೆಎಲ್ಇ ಸಂಸ್ಥೆಗಳ 23 ತಂಡಗಳು ಭಾಗವಹಿಸಿದ್ದು, ಸ್ನೇಹ ಭಾವ, ಸಂಪರ್ಕ ಹಾಗೂ ಕ್ರೀಡಾ ಸ್ಫೂರ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಅಕಾಡೆಮಿ ಡೀನ್ ಡಾ. ಬಿ.ಬಿ. ಕೊಟ್ಟುರುಶೆಟ್ಟರ, ವಿದ್ಯಾರ್ಥಿ ವ್ಯವಹಾರಗಳ ಡೀನ್ ಸಂಜಯಕೊಟಬಾಗಿ, ವಿಜಯಕುಮಾರ, ಜಯದೇವ, ಮಲ್ಲಿಕಾರ್ಜುನ ತಾರಿಹಾಳ, ಗುರುರಾಜ ಪುರಾಣಿಕ್, ಶ್ರೀದೇವಿ ಪಾಟೀಲ, ನೇತ್ರಾವತಿ ಗಾಯಕ್ವಾಡ್ ಇದ್ದರು.

ಸಮಾರೋಪ ಇಂದು

ಧಾರವಾಡ: ಧಾರವಾಡ ಜಿಲ್ಲಾ 18ನೇ ಸಾಹಿತ್ಯ ಸಮ್ಮೇಳನದಲ್ಲಿ ಮಾ.31ರ ಬೆಳಗ್ಗೆ 9.30ಕ್ಕೆ ಶಿವಶಂಕರ ಹಿರೇಮಠ ಅವರ ಅಧ್ಯಕ್ಷತೆಯಲ್ಲಿ ಕನ್ನಡವನೆ ಗೋಷ್ಠಿ, ಬೆಳಗ್ಗೆ 11.30ಕ್ಕೆ ಹೊರಳು ದಾರಿಯಲ್ಲಿ ಮಹಿಳಾ ಸಾಹಿತ್ಯ ಗೋಷ್ಠಿ, ಮಧ್ಯಾಹ್ನ 2ಕ್ಕೆ ಸಮಕಾಲಿನ ಸಾಹಿತ್ಯ ಚಿಂತನೆ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಷಯಗಳನ್ನು ಮಂಡಿಸಲಿದ್ದು, ಮಧ್ಯಾಹ್ನ 3.30ಕ್ಕೆ ಸಮ್ಮೇಳನದ ಸವಾಧ್ಯಕ್ಷರ ಮಾತು, ಸಂಜೆ 4.30ಕ್ಕೆ ಬಹಿರಂಗ ಅಧಿವೇಶನ, ಸಂಜೆ 5.30ಕ್ಕೆ ಸಮಾರೋಪ, ಸಂಜೆ 7ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಮಹಾವೀರ ಜಯಂತಿ



ಅಳ್ನಾವರ: ಭಗವಾನ್ ಮಹಾವೀರರ ಶಾಂತಿ ಮತ್ತು ಅಹಿಂಸಾ ತತ್ವಗಳು ಪ್ರಸ್ತುತ ದಿನಮಾನಕ್ಕೆ ಅತಿ ಅವಶ್ಯವಿದೆ ಎಂದು ಜೈನ ಸಮಾಜದ ಮುಖಂಡ ಭರತೇಶ ಪಾಟೀಲ ಹೇಳಿದರು. ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಮಹಾವೀರ ಜಯಂತಿ ಸಮಾರಂಭದಲ್ಲಿ ಅವರು ಮಾತನಾಡಿ, ಜೀವನದಲ್ಲಿ ತ್ಯಾಗದ ಮನೋಭಾವನೆ ಅಳವಡಿಸಿಕೊಳ್ಳುವದರಿಂದ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದಾಗಿದೆ. ಅಹಿಂಸೆಯಿಂದ ಜೀವನ ಸುಂದರವಾಗುತ್ತದೆ. ಮಹಾವೀರರ ಜೀವನ ಆದರ್ಶ ಅಳವಡಿಸಿಕೊಳ್ಳಬೇಕಿದೆ ಎಂದರು. ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ, ಶಿರಸ್ತೇದಾರ ಅಜ್ಜಪ್ಪ ಮಂಗಳಗಟ್ಟಿ, ನಾಗರಾಜ ಗುರ್ಲಹೋಸುರ, ಗುರುರಾಜ ಗಾಳಿ, ವಿನಾಯಕ ಮಾಯಣ್ಣವರ, ಸಮಾಜದ ಮುಖಂಡರಾದ ಶೀತಲ ಬೆಟದೂರ, ಅಜೀತ ಕುತ್ತೆ, ರಾಹುಲ ಅರವಡೆ, ಅಜೀತ ಬೆಟದೂರ ಇತರರಿದ್ದರು.



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆ ವಾಸವಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಹು-ಧಾ ಪೂರ್ವ ವಿಧಾನ ಸಭ ಕ್ಷೇತ್ರದ ವತಿಯಿಂದ ಪಂಡಿತ್ ದಿನದಯಾಳ ಉಪಾಧ್ಯ ಪ್ರಶಿಕ್ಷಣ ಅಭಿಯಾನ-2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ ನಡೆಯಿತು. ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ, ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಪ್ರಶಿಕ್ಷಣ ವರ್ಗದ ಧಾರವಾಡ ವಿಭಾಗದ ಸಹ ಸಂಯೋಜಕ ಶ್ರೀಪತಿ ಉಡುಪಿ, ರಾಜ್ಯ ಓಬಿಸಿ ಮೋರ್ಚಾ ಉಪಾಧ್ಯಕ್ಷ ಸತೀಶ್ ಶೇಜವಾಡಕರ, ಪಕ್ಷದ ಹಿರಿಯ ಮುಖಂಡರಾದ ಲಿಂಗರಾಜ ಪಾಟೀಲ್, ನಾರಾಯಣ ಜರಯಾರಘುರ್, ರಂಗಾ ಬದ್ದಿ, ಸೇರಿದಂತೆ ಇತರರಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿ ಎಐ ಹೊಸ ಕ್ರಾಂತಿ

ಧಾರವಾಡ: ಸಮ್ಮೇಳನದಲ್ಲಿ ಹಿರಿಯ ವಿಜ್ಞಾನಿ ಹಾಗೂ ಧಾರವಾಡ ಐಐಐ ಡೀನ್ ಡಾ. ಎಸ್.ಎಂ.ಶಿವಪ್ರಸಾದ ಅಧ್ಯಕ್ಷತೆಯಲ್ಲಿ ಕೃತಕ ಬುದ್ಧಿಮತ್ತೆ; ಸವಾಲು ಮತ್ತು ಅವಕಾಶ ಕುರಿತು ತಾಂತ್ರಿಕ ಗೋಷ್ಠಿ ಜರುಗಿತು. ಸಾಹಿತ್ಯ ಸೃಷ್ಟಿ ಮತ್ತು ಭಾಷಾಂತರದ ಮೇಲೆ ಎಐ ಪ್ರಭಾವದ ವಿಷಯ ಮಂಡಿಸಿದ ಐಟಿ ಕಂಪನಿ ಮುಖ್ಯಸ್ಥ ಸಂಕೇಶ ಪಾಟೀಲ, ಕೃತಕ ಬುದ್ಧಿಮತ್ತೆ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸೀಮಿತವಾಗಿಲ್ಲ, ಇಂದಿನ ಸಾಹಿತ್ಯ ಸೃಷ್ಟಿ, ಭಾಷಾಂತರದಲ್ಲೂ ಹೊಸ ಕ್ರಾಂತಿ ಸೃಷ್ಟಿಸಿದೆ ಎಂದರು. ಇಂದು ತಂತ್ರಜ್ಞಾನ ಜನರಲ್ಲಿ ಆತಂಕ ಸೃಷ್ಟಿಸಿದೆ. ಆದರೆ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಕೊಡುಗೆ ಅಗಾಧ. ಹಿಂದೆ ಬೃಹತ್ ಕೃತಿ ಭಾಷಾಂತರಕ್ಕೆ ವರ್ಷಗಳೇ ಬೇಕಿತ್ತು. ಆದರೆ ಇಂದು ಕೆಲ ಕ್ಷಣಗಳಲ್ಲಿ ಭಾಷಾಂತರ ಮಾಡುವ ಅವಕಾಶ ಎಐ ತಂತ್ರಜ್ಞಾನ ಒದಗಿಸಿದ್ದಾಗಿ ತಿಳಿಸಿದರು. ಕನ್ನಡ ಭಾಷೆಯ ಡಿಜಿಟಲೀಕರಣ ವೇಗವಾಗಿ ನಡೆಯಬೇಕಿದೆ. ಎಐ ತಂತ್ರಜ್ಞಾನಕ್ಕೆ ನಾವು ಹೆಚ್ಚೆಚ್ಚು ಕನ್ನಡ ಪಠ್ಯಗಳನ್ನು ನೀಡಿದಷ್ಟೂ, ಭವಿಷ್ಯದಲ್ಲಿ ಕನ್ನಡದ ಭಾಷಾಂತರ ಮತ್ತು ಭಾಷಾ ತಂತ್ರಾಂಶಗಳು ಬಹಳಷ್ಟು ನಿಖರವಾಗುತ್ತವೆ ಎಂದರು. ಎಐ : ಶಿಕ್ಷಣ, ಉದ್ಯೋಗ ಹಾಗೂ ಭವಿಷ್ಯದ ಬದುಕು ವಿಷಯ ಮಂಡಿಸಿದ ಸಂಚಯ ರಾಷ್ಟ್ರೀಯ ಸಾಹಿತ್ಯ ಡಿಜಿಟಲಿಕರಣ ಸಂಸ್ಥೆ ಸಂಚಾಲಕ ಎಚ್.ಎಲ್. ಓಂಪ್ರಕಾಶ, ಕಾಲಕ್ಕೆ ತಕ್ಕಂತೆ ತಂತ್ರಜ್ಞಾನದಲ್ಲಾದ ಬದಲಾವಣೆ ಅರಿವಿಲ್ಲದಂತೆ, ಬಳಸುವ ಪರಿಪಾಠ ನಡೆದಿದೆ ಎಂದರು. ಗೋಷ್ಠಿಯ ನಂತರ ಇಬ್ಬರು ಸಂಪನ್ಮೂಲ ವ್ಯಕ್ತಿಗಳು ಸಾರ್ವಜನಿಕರೊಂದಿಗೆ ಸಂವಾದ ನಡೆಸಿದರು. ಜಿಲ್ಲಾ ಡಯಟ್ ಪ್ರಚಾರ್ಯ ಬಸವರಾಜ ನಾಲ್ವತವಾಡ, ಸರ್ಕಾರಿ ಕಾಲೇಜಿನ ಪ್ರಚಾರ್ಯ ಡಾ.ಎಸ್.ಎಸ್.ಅಂಗಡಿ, ಗುರುಕುಲ ಸಂಸ್ಥೆ ನಿರ್ದೇಶಕ ಎನ್. ಎಂ.ಪಾಟೀಲ ಇದ್ದರು.



ಧಾರವಾಡ: ಸಮ್ಮೇಳನದಲ್ಲಿ ಹಿರಿಯ ವಿಜ್ಞಾನಿ ಹಾಗೂ ಧಾರವಾಡ ಐಐಐ ಡೀನ್ ಡಾ. ಎಸ್.ಎಂ.ಶಿವಪ್ರಸಾದ ಅಧ್ಯಕ್ಷತೆಯಲ್ಲಿ ಕೃತಕ ಬುದ್ಧಿಮತ್ತೆ; ಸವಾಲು ಮತ್ತು ಅವಕಾಶ ಕುರಿತು ತಾಂತ್ರಿಕ ಗೋಷ್ಠಿ ಜರುಗಿತು.

ಕಸಾಪ ಸಮ್ಮೇಳನಕ್ಕೆ ವಿಧ್ಯುಕ್ತ ಚಾಲನೆ | ಡಾ.ಸಬಿಹಾ ಭೂಮಿಗೌಡ ಅಭಿಮತ

ಸಾಹಿತ್ಯ ಸಾಮಾಜಿಕ ನ್ಯಾಯದ ಧ್ವನಿಯಾಗಲಿ

ಧಾರವಾಡ (ಗದಗಯ್ಯ ಹೊನ್ನಾಪೂರಮಠ ವೇದಿಕೆ):
ಧಾರವಾಡ: ಸಾಹಿತ್ಯ ಎನ್ನುವುದು ಕೇವಲ ಕಲ್ಪನಾ ಲೋಕವಲ್ಲ, ಅದು ಶೋಷಿತರ, ಮಹಿಳೆಯರ ಮತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಬೇಕು ಎಂದು ಸಾಹಿತಿ ಹಾಗೂ ಮೈಸೂರು ವಿವಿಯ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಪ್ರತಿಪಾದಿಸಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಪಾಟೀಲ ಪುಟ್ಟಪ್ಪ ಭವನದಲ್ಲಿ ಸೋಮವಾರ ಆರಂಭಗೊಂಡ ಧಾರವಾಡ ಜಿಲ್ಲಾ 18ನೇ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿ, ಸಾಹಿತ್ಯ ಲಿಂಗಸಮಾನತೆ-ಸಾಮಾಜಿಕ ನ್ಯಾಯದ ಧ್ವನಿಯೂ ಆಗಬೇಕು ಎಂದರು.

ಇಂದಿನ ಸಾಹಿತ್ಯ ಕ್ಷೇತ್ರಕ್ಕೆ ಕೇವಲ ಸೃಜನಶೀಲ ಬರವಣಿಗೆಯಷ್ಟೇ ಅಲ್ಲ, ವಾಸ್ತವವನ್ನು ತೆರೆದಿಡುವ ಗಂಭೀರ ಸಂಶೋಧನೆಗಳ ಅಗತ್ಯವಿದೆ ಎಂದರು. ಸಮ್ಮೇಳನಾಧ್ಯಕ್ಷ ಸಾಹಿತ್ಯ ಪುಸ್ತಕ ಲೋಕಾರ್ಪಣೆಗೊಳಿಸಿದ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ.ಸೋಮಶೇಖರ ಮಾತನಾಡಿ, ಸರ್ಕಾರ ರೂ.4 ಲಕ್ಷ ಕೋಟಿ ಬಜೆಟ್ ಮಂಡಿಸಿದೆ. ಅದರಲ್ಲಿ ಶೇ.1ರಷ್ಟು ಸಾಹಿತ್ಯ ಪರಿಷತ್ತಿಗೆ ನೀಡಲು ರಾಜ್ಯ ಸರ್ಕಾರ ಗಮನ ಹರಿಸಲು ಕೋರಿದರು.

ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಸಾಹಿತ್ಯ, ಸಂಗೀತ ಕ್ಷೇತ್ರಕ್ಕೆ ಧಾರವಾಡದ ಕೊಡುಗೆ ಅಪಾರ. ಕನ್ನಡ ಉಳಿಸಲು, ಪಾಲಿಕೆ ಕನ್ನಡ ಮಾಧ್ಯಮದಲ್ಲಿ ಓದಿದ ಹೆಣ್ಣು ಮಕ್ಕಳಿಗೆ ರೂ.25 ಸಾವಿರ ಘೋಷಿಸಿದೆ. ಸಾಹಿತ್ಯ ಒಲವು ಬೆಳೆಸಿಕೊಳ್ಳಲು ಹೇಳಿದರು. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕಿ ಸೀಮಾ ಮಸೂತಿ, ಮಾಜಿ ಮೇಯರ್ ಈರೇಶ ಅಂಚಟಗೇರಿ, ಬಿ.ಮಾರುತಿ, ಶಂಕರ ಹಲಗತ್ತಿ, ನಿಂಗಯ್ಯ ಹಿರೇಮಠ, ಡಾ.ಜಿನದತ್ತ ಹಡಗಲಿ, ಪ್ರಮೀಳಾ ಜಕ್ಕಣ್ಣವರ, ಮಹಾಂತೇಶ ನರೇಗಲ್ಲ ಇದ್ದರು. ಕವಿವಿಯ ಸಂಗೀತ ವಿಭಾಗದ ವಿದ್ಯಾರ್ಥಿಗಳು ನಾಡಗೀತೆ ಪ್ರಸ್ತುಪಡಿಸಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಸ್ವಾಗತಿಸಿದರು. ಪ್ರೊ. ಕೆ.ಎಸ್.ಕೌಜಲಗಿ ನಿರೂಪಿಸಿದರು. ಡಾ.ಎಸ್.ಎಸ್.ದೊಡಮನಿ ವಂದಿಸಿದರು. ಧಾರವಾಡ ಜಿಲ್ಲಾ ಸಮ್ಮೇಳನಕ್ಕೆ ಬಂದ ಸಾಹಿತಿಗಳಿಗೆ, ಸಾಹಿತ್ಯ ಆಸಕ್ತರಿಗೆ ಹಾಗೂ ಕನ್ನಡ ಅಭಿಮಾನಿಗಳಿಗೆ ಭರ್ಜರಿ ಭೋಜನ ಏರ್ಪಡಿಸಲಾಗಿತ್ತು.

- ಸರ್ವಾಧ್ಯಕ್ಷರಾದ ಡಾ. ಹೇಮಾ ಪಟ್ಟಣಶೆಟ್ಟಿ ಹಾಗೂ ಸಿದ್ಧಲಿಂಗ ಪಟ್ಟಣಶೆಟ್ಟಿ ದಂಪತಿ ಮೆರವಣಿಗೆ ಸೋಮವಾರ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು
- ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಹಾಗೂ ಗ್ರಂಥಾಲಯದ ವಿಜ್ಞಾನಿ ಡಾ.ಎಸ್.ಆರ್.ಗುಂಜಾಳ ಅವರು ಡಾ. ಹೇಮಾ ಪಟ್ಟಣಶೆಟ್ಟಿ ಅವರಿಗೆ ಕನ್ನಡ ಧ್ವಜ ಹಸ್ತಾಂತರಿಸಿದರು
- ಕರ್ನಾಟಕ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಡಿಸಿ ಸ್ನೇಹಲ್ ಆರ್. ರಾಷ್ಟ್ರಧ್ವಜ, ಕವಿಸಂ ಉಪಾಧ್ಯಕ್ಷ ಡಾ.ಸಂಜೀವ ಕುಲಕರ್ಣಿ ನಾಡಧ್ವಜ ಹಾಗೂ ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಪರಿಷತ್ ಧ್ವಜಾರೋಹಣ ನೆರವೇರಿಸಿದರು



> ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಂವೇದನೆಗಳು ಇಂದು ಹೊಸ ಆಯಾಮ ಪಡೆಯುತ್ತಿವೆ. ಸ್ತ್ರೀವಾದಿ ಚಿಂತನೆಗಳು ಕೇವಲ ಪ್ರತಿರೋಧವಲ್ಲ, ಅವು ಸಮಾನತೆಯ ಹಾದಿಯನ್ನು ತೋರಿಸುವ ಬೆಳಕು. ಸದಾ ಪ್ರಜ್ವಲಿಸಬೇಕು.
> ■ ಡಾ.ಸಬಿಹಾ ಭೂಮಿಗೌಡ, ಸಾಹಿತಿ

ಅನುದಾನ ಜಮೆ ಮಾಡದಿದ್ದರೆ ಧರಣಿ!
ಕನ್ನಡ ಸಾಹಿತ್ಯ ಪರಿಷತ್ ಭವನ ಸೋರುತ್ತಿದೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗೆ, ಶಾಸಕರಿಗೆ ಮನವಿ ಮಾಡಿದರೂ ಸ್ಪಂದಿಸಿಲ್ಲ. 84ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಉಳಿದಿರುವ ರೂ. 27ಲಕ್ಷ ಅನುದಾನ ಸಾಹಿತ್ಯ ಪರಿಷತ್ತಿಗೆ ಜಮೆ ಮಾಡಬೇಕು. ಇಲ್ಲದಿದ್ದರೆ ಒಂದು ದಿನ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಕಸಾಪ ಜಿಲ್ಲಾಧ್ಯಕ್ಷ ಡಾ. ಲಿಂಗರಾಜ ಅಂಗಡಿ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು.

ಯುದ್ಧದಿಂದ ಮುಗ್ಧ ಜೀವಗಳ ಕಗ್ಗೊಲೆ
ಜಾಗತಿಕವಾಗಿ ತಲ್ಲಣ ಸೃಷ್ಟಿಸಿದ ಇರಾನ್-ಅಮೇರಿಕ-ಇಸ್ರೇಲ್ ಯುದ್ಧದಿಂದ ಅನೇಕ ಅಮಾಯಕ ಮುಗ್ಧ ಜೀವಗಳ ಕಗ್ಗೊಲೆ ನೋವಿನ ಸಂಗತಿ. ಇದರ ಬಗ್ಗೆ ಪ್ರತಿರೋಧ ಒಡ್ಡಬೇಕು. ಹೆಣ್ಣು ಮಕ್ಕಳೇ ಪ್ರತಿರೋಧ ಎತ್ತಿರುವುದು ಸ್ವಾಗತಿಸಿ, ಯುದ್ಧ ನಿಲ್ಲಿಸಲು ಕೋರಿದ ಡಾ.ಸಬಿಹಾ ಭೂಮಿಗೌಡ ಅವರು, ಯುದ್ಧದಿಂದ ಪೆಟ್ರೋಲ್, ಡಿಸೇಲ್, ಗ್ಯಾಸ್ ಇತರೆ ಬೆಲೆ ಏರಿವೆ. ನೊಂದವರ ಪರ, ಇತರರ ನೋವು-ನಲಿವು, ಕಷ್ಟಕ್ಕೂ ಸಾಹಿತ್ಯ ಹಾಗೂ ಸಾಹಿತಿಗಳು ಗಟ್ಟಿಯಾಗಿ ಧ್ವನಿ ಎತ್ತಿ, ಯುವ ಜನರಲ್ಲಿ ಅನುಭೂತಿ ಬೆಳೆಸುವಲ್ಲಿ ಸಮ್ಮೇಳನಗಳು ದಾರಿಯಾಗಬೇಕು ಎಂದರು.

ಕನ್ನಡ ಶಾಲೆ ಉಳಿವಿಗೆ ಶ್ರಮಿಸಿ: ಡಾ.ಹೇಮಾ

ಧಾರವಾಡ (ಗದಗಯ್ಯ ಹೊನ್ನಾಪೂರಮಠ ವೇದಿಕೆ): ದೇಶದಲ್ಲಡೆ ಕನ್ನಡ ಸರ್ಕಾರಿ ಶಾಲೆಗಳು ಮುಚ್ಚುವ ಪ್ರಕ್ರಿಯೆ ನಡೆದಿದೆ. ಈ ವಿಷಯದಲ್ಲಿ ಕರ್ನಾಟಕವೇ ಹೆಚ್ಚು ಧಾವಂತದಲ್ಲಿದೆ. ಶಿಕ್ಷಣವನ್ನು ಮಾರುಕಟ್ಟೆ ಸರಕಾಗಿಸುವ ಸರ್ಕಾರದ ನಡೆ ಸರಿಯಲ್ಲ ಎಂದು ಸಾಹಿತಿ ಡಾ.ಹೇಮಾ ಪಟ್ಟಣಶೆಟ್ಟಿ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಪಾಟೀಲ ಪುಟ್ಟಪ್ಪ ಭವನದಲ್ಲಿ ಸೋಮವಾರ ನಡೆದ ಧಾರವಾಡ ಜಿಲ್ಲಾ 18ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಭಾಷಣ ಮಾಡಿದ ಅವರು, ಕನ್ನಡ ಶಾಲೆ ಮುಚ್ಚುವುದು ಸರಿಯಲ್ಲ ಎಂದರು. ಕನ್ನಡ ಶಾಲೆಗಳ ಮುಚ್ಚುವುದಕ್ಕೆ ಪ್ರತಿರೊಧವೇ ವ್ಯಕ್ತಪಡಿಸಿದ ನಾಗರಿಕ ಸಮಾಜದ ಬಗ್ಗೆ ಬೇಸರಿಸಿದ ಡಾ.ಹೇಮಾ, ನಾಗರಿಕರು ಒಗ್ಗೂಡಿ ಧ್ವನಿ ಎತ್ತದರೆ ಕನ್ನಡ ಶಾಲೆಗಳು ಉಳಿವು ಸಾಧ್ಯ. ಇಲ್ಲವಾದರೆ ಕನ್ನಡ ಅಸ್ಮಿತೆಯೂ ನಶಿಸಲಿದೆ ಎಂದು ಎಚ್ಚರಿಸಿದರು.

ಕನ್ನಡ ಶಾಲೆಗಳ ರಕ್ಷಣೆ ಮತ್ತು ಪೋಷಣೆ ಸರ್ಕಾರದ ಜವಾಬ್ದಾರಿ. ಆದರೆ ಅವುಗಳನ್ನು ಮುಚ್ಚುತ್ತಿರುವ ಸರ್ಕಾರದ ಅರ್ಥಶಾಸ್ತ್ರ ಪ್ರಾಜ್ಞರು, ಚಿಂತಕರು ರಾಜಕೀಯ ಅರಿಯಬೇಕು. ಶಿಕ್ಷಣ ಉದ್ಯಮಿಗಳ ಕೈಸೇರುವುದು ತಪ್ಪಿಸಬೇಕು ಎಂದರು.

ಶಿಕ್ಷಣ, ಉದ್ಯೋಗ ಮತ್ತು ಆಡಳಿತದಲ್ಲಿ ಕನ್ನಡ ಅನಿವಾರ್ಯ. ಈ ನಿಟ್ಟಿನಲ್ಲಿ ಸರ್ಕಾರವೂ ನೀತಿ-ನಿರೂಪಣೆ ರೂಪಿಸಬೇಕು. ಕನ್ನಡ ಭಾಷೆಯ ಕಲಿಕೆ, ಶಿಕ್ಷಣದ ಮಾಧ್ಯಮ, ಉದ್ಯೋಗಕ್ಕೆ ಕನ್ನಡವೇ ಮುಖ್ಯ ಎಂಬ ಮಾನದಂಡ ತರಬೇಕು. ಬಹುರಾಷ್ಟ್ರೀಯ ಕಂಪನಿಗಳಲ್ಲೂ ಕನ್ನಡಿಗರಿಗೆ ಆದ್ಯತೆ ಕೂಡ ನೀಡಿದಾಗ ಮಾತ್ರವೇ ಕನ್ನಡ ಭಾಷೆಗೆ ಉಳಿಗಾಲವಿದೆ ಎಂದರು.

ಎಐ ಬಳಕೆ ಗೊಂದಲ: ಶಿಕ್ಷಣ, ಮಾರುಕಟ್ಟೆ, ವಿವಿಧ ವಸ್ತು ತಯಾರಿಕೆಲ್ಲಿ ಎಐ ಬಳಕೆ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಟಿಸಿದೆ. ಹೀಗಾಗಿ ನಮ್ಮ ಭಾಷೆಯ ಭವಿಷ್ಯ ಹಾಗೂ ಸಾಹಿತ್ಯ ಉಳುವಿನ ಕುರಿತು ಹೆಚ್ಚಿನ ಆಸ್ಥೆ ವಹಿಸುವುದು ಕೂಡ ಅಗತ್ಯವಿದೆ ಎಂದರು.

ಕನ್ನಡದಲ್ಲಿರಲಿ ರುಜು: ಪ್ರತಿಯೊಬ್ಬರೂ ಕನ್ನಡದಲ್ಲಿ ರುಜು ಹಾಕಬೇಕು. ಈ ಮೂಲಕ ಕನ್ನಡದ ಅಸ್ಮಿತೆಯೂ ಉಳಿಸಬೇಕು. ಅಕ್ಷರ ಅರಿವು ನೀಡಿದರೆ, ಸಾಹಿತ್ಯ ಬದುಕಿನ ದಾರಿಯನ್ನು ತೋರಿಸುತ್ತದೆ. ನಾವು ಅಕ್ಷರಸ್ಥರಾಗುವುದರ ಜೊತೆ ಸಾಹಿತ್ಯಾಸಕ್ತರಾಗಬೇಕಿದೆ ಎಂದರು.



ರಂಗಭೂಮಿ ಸಾಮಾಜಿಕ ಬದುಕಿನ ಪಾಠಶಾಲೆ

ಹುಬ್ಬಳ್ಳಿ: ರಂಗಭೂಮಿ ಎಂದರೆ ಸಾಮಾಜಿಕ ಬದುಕಿನ ಪಾಠಶಾಲೆಯಾಗಿದೆ ಎಂದು ಕೆಎಲ್ಇ ಆಸ್ಪತ್ರೆ ನಿರ್ದೇಶಕ ಡಾ.ಎಂ.ಜಿ.ಹಿರೇಮಠ ಹೇಳಿದರು.

ಇಲ್ಲಿನ ಸುನಿಧಿ ಕಲಾ ಸೌರಭ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ದೇಶಪಾಂಡೆ ನಗರದ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ರಂಗ ಸೌರಭ ಪ್ರಶಸ್ತಿ ಪ್ರದಾನ ಹಾಗೂ ಅನಾಥರ ಮಾಯಿ ನಾಟಕ ಪ್ರದರ್ಶನ ಸಮಾರಂಭದಲ್ಲಿ ರಂಗ ಸೌರಭ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ರಂಗಭೂಮಿ ಎಲ್ಲ ಕಲೆಗಳ ತಾಯಿ. ಸಾಮಾಜಿಕ ಬದಲಾವಣೆಗಳಿಗೆ ರಂಗಭೂಮಿ ತನ್ನದೇ ಆದ ಕೊಡುಗೆ ನೀಡುತ್ತಿದೆ. ಇಂದು ರಂಗಭೂಮಿಯ ಬಗೆಗಿನ ಆಸಕ್ತಿ ಕಡಿಮೆಯಾಗುತ್ತಿದ್ದು, ಯುವಕರನ್ನು ನಾಟಕ ರಂಗಕ್ಕೆ ಕರೆತರುವ ಮೂಲಕ ಹಾಗೂ ಹೊಸ ಪ್ರೇಕ್ಷಕರನ್ನು ಸೃಷ್ಟಿಸಿ ರಂಗ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಾವು-ನೀವೆಲ್ಲ ಸೇರಿ ಕೆಲಸ ಮಾಡೋಣ ಎಂದರು.

ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಹಾಗೂ ಪತ್ರಕರ್ತ ಡಾ. ಬಂಡು ಕುಲಕರ್ಣಿ ಮಾತನಾಡಿ, ರಂಗ ಭೂಮಿಯತ್ತ ಯುವಪೀಳಿಗೆಯನ್ನು ಆಕರ್ಷಿಸುವಕಾರ್ಯದಲ್ಲಿ ನಾವು ಇದುವರೆಗೂ ಸಫಲರಾಗಿಲ್ಲ. ನಾವು ಎಲ್ಲಿ ಎಡುವಿದ್ದೇವೆ ಎನ್ನುವುದರ ಕುರಿತು ಇನ್ನು ಮುಂದೆಯಾದರೂ ನಾವು ಆತ್ಮಾವಲೋಕನ ಮಾಡಿಕೊಂಡು ರಂಗಭೂಮಿಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಬೇಕಿದೆ ಎಂದರು.

ಶ್ರೀ ಸಿದ್ಧಾರೂಢ ಮಠದ ಟ್ರಸ್ಟ್ ಕಮೀಟಿ ಚೇರಮನ್ ಚನ್ನವೀರ ಮುಂಗರವಾಡಿ ಮಾತನಾಡಿ, ಸುನಿಧಿ ಕಲಾ ಸೌರಭ ಈ ಭಾಗದಲ್ಲಿ ರಂಗಭೂಮಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಳೆದ 17 ವರ್ಷಗಳಿಂದ ಶ್ರಮಿಸುತ್ತಿದ್ದು, ಇದಕ್ಕೆ ಎಲ್ಲರೂ ಸಹಾಯ ಸಹಕಾರ ನೀಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಖ್ಯಾತ ಭರತನಾಟ್ಯ ಪ್ರವೀಣ ವಿದ್ವಾನ್ ಸುಜಯ ಶಾನಭಾಗ ಅವರಿಗೂ ರಂಗ ಸೌರಭ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ಕಲಾವಿದ, ನಟ, ನಾಟಕಕಾರ ಡಾ. ಗೋವಿಂದ ಮಣ್ಣೂರ ರಂಗಭೂಮಿ ಏಳು ಬೀಳು ಕುರಿತು ಮಾತನಾಡಿದರು. ರಂಗಾಯಣ ಮಾಜಿ ನಿರ್ದೇಶಕ ಹಾಗೂ ಸುನಿಧಿ ಕಲಾ ಸೌರಭದ ಅಧ್ಯಕ್ಷ ಸುಭಾಸ ನರೇಂದ್ರ ಅಧ್ಯಕ್ಷತೆ ವಹಿಸಿದ್ದರು. ಸಂತೋಷ ಮೊಕಾಶಿ, ವಿದ್ವಾನ್ ಸುಜಯ ಕಲಾ ತಂಡದವರಿಂದ ನೃತ್ಯ, ನಂತರ ಅನಾಥರ ಮಾಯಿ ನಾಟಕ ಪ್ರದರ್ಶನ ನಡೆಯಿತು. ಖ್ಯಾತ ಹಿರಿಯ ಕಲಾವಿದೆ ವೀಣಾ ಅಠವಲೆ ಅವರ ಮನೋಜ್ಞ ಅಭಿನಯ ಜನಮನಸೂರೆಗೊಂಡಿತು. ಸತೀಶ್ ಮೂರೂರು ಅವರಿಂದ ಕಾರ್ಯಕ್ರಮ ನಿರೂಪಣೆ ಹಾಗೂ ಕೀರ್ತಿವತಿ ಅವರು ಅತಿಥಿಗಳನ್ನು ಪರಿಚಯಿಸಿ, ವಂದಿಸಿದರು.



ಇಂದಿನಿಂದ ಬಸವ ಪುರಾಣ

ಉಪ್ಪಿನಬೆಟಗೇರಿ: ಲೋಕೂರ ಗ್ರಾಮದ ಶರಣಬಸವೇಶ್ವರರ ಮಠದ ಆವರಣದಲ್ಲಿ ಮಾ.31ರಿಂದ ಏ.20ರವರೆಗೆ ಸಂಜೆ 6.30 ರಿಂದ 8.30ರ ವರೆಗೆ ಬಸವ ಪುರಾಣ ಭಾಸ್ಕರ್ ಎಂದು ಪ್ರಖ್ಯಾತ ಹೊಂದಿದ ಉಪ್ಪಿನಬೆಟಗೇರಿ ಮೂರು ಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷಸ್ವಾಮೀಜಿ ಅಮೃತ ವಾಣಿಯಿಂದ ಭೀಮಕವಿ ವಿರಚಿತ ಬಸವ ಪುರಾಣ ನಡೆಯಲಿದೆ ಎಂದು ಲೋಕೂರ ಬಸವ ಸಮಿತಿ ಸದಸ್ಯರು ತಿಳಿಸಿದ್ದಾರೆ.



ಆಧ್ಯಾತ್ಮಿಕ ಚಿಂತನೆ ರೂಢಿಸಿಕೊಳ್ಳಿ



ಅಣ್ಣಿಗೇರಿ: ಧರ್ಮಕ್ಕೆ ದೊಡ್ಡ ಬೆಲೆ ಇದೆ. ನೈತಿಕತೆಯಿಂದ ತಾವು ಕಾಯಕನಿಷ್ಠೆಯಿಂದ ಬದುಕುತ್ತಿರುವರು ಸದ್ಗುರು ಸಮರ್ಥ ವಾಲಿ ಮಹಾರಾಜರು. ಅವರ ಆಧ್ಯಾತ್ಮಿಕ ಚಿಂತನೆಗಳನ್ನು ರೂಢಿಸಿಕೊಂಡು ಹೋಗಬೇಕೆಂದು ಎಂದು ಶಿಗ್ಗಾವಿ ವಿರಕ್ತಮಠದ ಸಂಗನಬಸವ ಸ್ವಾಮೀಜಿ ಹೇಳಿದರು. ಆದಿಕವಿ ಪಂಪ ಸ್ಮಾರಕ ಭವನದಲ್ಲಿ ನಡೆದ ಇಂಚಗೇರಿ ಸಂಪ್ರದಾಯದ ಸದ್ಗುರು ಸಮರ್ಥ ಬಾವು ಸಾಹೇಬ್ ಮಹಾರಾಜರ ಬ್ರಹ್ಮ ಶಾಲೆ ಆಶ್ರಯದಲ್ಲಿ ನಡೆದ ಜ್ಞಾನ ಯಜ್ಞ ಶತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮಾಜಿ ಶಾಸಕ ಪಿ. ರಾಜೀವ ಮಾತನಾಡಿದರು. ಡಾ. ಎ.ಸಿ.ವಾಲಿ ಮಹಾರಾಜರು ನೇತೃತ್ವ ವಹಿಸಿದ್ದರು. ಸದಾನಂದ ಡಂಗನವರ, ಡಾ.ಮಲ್ಲಿಕಾರ್ಜುನ್ ಬಾಳಿಕಾಯಿ ಕಾರ್ಯಕ್ರಮದ ಕುರಿತು ಮಾತನಾಡಿದರು. ವ್ಯಾಪಾರಸ್ಥ ಮಹಾಬಲೇಶ್ವರ ಹೆಬಸೂರ ಅಧ್ಯಕ್ಷತೆ ವಹಿಸಿದ್ದರು. ಜಗದೀಶ ಉಪ್ಪಿನ, ಮೃತ್ಯುಂಜಯ ಹಿರೇಮಠ, ಎಸ್. ಕುಮಾರಸ್ವಾಮಿ, ಗುರುಪಾದ ಶಿರೂರ, ನಿಂಗರಾಜ್ ಕುಲಕರ್ಣಿ, ದೇವರಾಜ್ ದಾಡಿಬಾವಿ, ವೀರೇಶ್ ಕುಬಸದ, ಮಹೇಶ ಮುಂಡರಗಿ, ಚಿದಾನಂದ ಯತ್ನಳ್ಳಿ, ಚಂಬಣ್ಣ ಸುರಕೋಡ, ನಿಂಗಪ್ಪ ಸಿಂಗೊಟಿ, ಯಲಪ್ಪ ಕಂಬಳಿ, ಬಸಲಿಂಗಪ್ಪ ಮುಂಡರಗಿ, ಸಂಜೀವ ದೊಡ್ಡಮನಿ, ಅಡಿವೆಪ್ಪ ನಾಗನಗೌಡರ, ಈಶ್ವರಪ್ಪ ಉಳ್ಳಾಗಡ್ಡಿ, ಕನಕಪ್ಪ ಅಬ್ಬಿಗೇರಿ ಇನ್ನಿತರ ಉಪಸ್ಥಿತರಿದ್ದರು. ಎಸ್.ಬಿ. ಪಾಟೀಲ ನಿರೂಪಿಸಿದರು.

ನೆಮ್ಮದಿಗೆ ಮಹಾವೀರರ ತತ್ವ ಸಹಕಾರಿ

ಧಾರವಾಡ: ಭಾರತದ ಜನತೆ ನೆಮ್ಮದಿಯಿಂದ ಜೀವನ ಸಾಗಿಸುವಲ್ಲಿ ಭಗವಾನ್ ಮಹಾವೀರರ ಅಹಿಂಸಾ ಮತ್ತು ಬುದ್ಧ, ಬಸವಾದಿ ಶರಣರ ತತ್ವಗಳೇ ಕಾರಣ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ನಗರದ ಜೆಎಸ್ಎಸ್ ಮಂಜುನಾಥೇಶ್ವರ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರ, ಜೆಎಸ್ಎಸ್ ಐಟಿಐ ಮತ್ತು ಎಂಸಿಎ ಕಾಲೇಜುಗಳ ಸಹಯೋಗದಲ್ಲಿ ಸೋಮವಾರ ನಡೆದ ಭಗವಾನ್ ಮಹಾವೀರರ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಮಹಾವೀರರು ಮನುಕುಲಕ್ಕೆ ಶಾಂತಿ, ಅಹಿಂಸೆ ಮತ್ತು ಸತ್ಯದ ಮಾರ್ಗ ತೋರಿದವರು. ಕೋಪ, ಹಿಂಸೆ, ಅಸಹಿಷ್ಣುತೆ ಹೆಚ್ಚುತ್ತಿರುವ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾವೀರರ ಉಪದೇಶಗಳು ಪ್ರಸ್ತುತವಾಗಿವೆ ಎಂದು ಅಭಿಮತ ವ್ಯಕ್ತಪಡಿಸಿದರು. ಜೈನ್ ಧರ್ಮದ ವಿಶೇಷತೆಯೇ ಬೇರೆ. ಅನ್ಯ ಧರ್ಮಗಳಂತೆ ಧರ್ಮದ ಆಚಾರ, ನಿರ್ದಿಷ್ಟ ಜಾತಿ-ಮತಕ್ಕೆ ಸೀಮಿತಗೊಳ್ಳದೆ, ಮನುಕುಲಕ್ಕೆ ಒಳಿತು ಬಯಸುವ ಮಾರ್ಗದರ್ಶನವೂ ನೀಡಲಿದೆ. ಕ್ಷಮೆ, ಪ್ರೀತಿ, ದಯೆ, ಶಾಂತಿ ಆದ್ಯತೆ ನೀಡಿದ್ದಾಗಿ ತಿಳಿಸಿದರು.

ಉಪನ್ಯಾಸಕ ಡಾ. ಆರ್.ವಿ.ಚಿಟಗುಪ್ಪಿ ಮಾತನಾಡಿ, ಜಗತ್ತು ಯುದ್ಧದ ತಲ್ಲಣ ಎದುರಿಸುವ ಇಂದಿನ ಹೊತ್ತಿನಲ್ಲಿ ವಿಶ್ವದ ಶಾಂತಿಗೆ ಜೈನ ಧರ್ಮದ ತತ್ವಗಳ ಅಳವಡಿಕೆ ಬಹಳ ಸೂಕ್ತ. ಹೀಗಾಗಿ ಪ್ರತಿಯೊಬ್ಬರೂ ಮಹಾವೀರರ ಆದರ್ಶಗಳನ್ನು ಬೆಳೆಸಿಕೊಳ್ಳಲು ಹೇಳಿದರು.

ಜೈನ ಧರ್ಮ ಮನುಕುಲಕ್ಕೆ ತನ್ನದಾದ ಕೊಡುಗೆ ನೀಡಿದೆ. ಮಹಾವೀರ ಪ್ರತಿಪಾದಿಸಿದ ನಂಬಿಕೆ, ಜ್ಞಾನ ಹಾಗೂ ಸನ್ನಡತೆ ತತ್ವಗಳು ಸಮಾಜ ಮತ್ತು ಮಾನವನ ಸುಧಾರಿಸುವ ಅಸ್ತ್ರಗಳಾಗಿವೆ. ಇವುಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಎಂಸಿಎ ಕಾಲೇಜಿನ ನಿರ್ದೇಶಕ ಡಾ. ಸೂರಜ್ ಜೈನ್, ಜ್ಯೋತಿ ಅಕ್ಕಿ, ಶೃತಿ ಶೆಟ್ಟಿ, ಡಾ. ರೋನಿಲ್ ಮನೋಹರ್, ಡಾ.ಜಿನ್ನಪ್ಪ ಕುಂದಗೋಳ, ಡಾ.ಮಂಜುನಾಥ ಪೂಜಾರ, ರಜನಿ ತಾಳಿಕೋಟಿ ಸೇರಿ ಬೋಧಕ-ಬೋಧಕೇತರ ಸಿಬ್ಬಂದಿ ಇದ್ದರು. ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ನಿರೂಪಿಸಿ, ವಂದಿಸಿದರು.



ಆಲಿಕಲ್ಲು ಮಳೆ ಹಾನಿ ಪ್ರದೇಶಕ್ಕೆ ಭೇಟಿ

ಕಲಘಟಗಿ: ತಾಲೂಕಿನ ಮಾಚಾಪುರ ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದ ಉಂಟಾದ ಹಾನಿಯನ್ನು ಗ್ರಾಮದ ಉದ್ದಗಲಕ್ಕೂ ಸಂಚರಿಸಿ, ಹಾನಿಗೊಳಗಾದ ಮನೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಭೇಟಿ ನೀಡಿ, ಪರಿಶೀಲಿಸಿದರು. ಗ್ರಾಮಸ್ಥರೊಂದಿಗೆ ಚರ್ಚಿಸಿ, ಮಾಹಿತಿ ಪಡೆದುಕೊಂಡರು.

ಮಾಚಾಪುರ ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದ ತೊಂದರೆಗೆ ಈಡಾದ ಸಾರ್ವಜನಿಕರ ಕುಂದು ಕೊರತೆಗಳನ್ನು ಅವರು ವಿಚಾರಿಸಿದರು. ಹಾನಿಗೊಂಡ ಮನೆಗಳಿಗೆ ತುರ್ತು ನೆರವು ನೀಡಲು ಸಂತೋಷ ಲಾಡ್ ಫೌಂಡೇಶನ್ ಮುಖಾಂತರ ಗ್ರಾಮಕ್ಕೆ 50,000 ಮೇಲ್ಛಾವಣಿ ಹಂಚುಗಳನ್ನು ವಿತರಿಸಲಾಗಿತ್ತು. ಇದರಿಂದ ತಾತ್ಕಾಲಿಕವಾಗಿ ಮನೆ ಹಾನಿಗೊಂಡ ಕುಟುಂಬಗಳು ಸುರಕ್ಷಿತ ವಾಸಸ್ಥಳವನ್ನು ಹೊಂದಿದರೆ ಎಂದು ಅವರು ಪರಿಶೀಲಿಸಿದರು. ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದ ಅವರು, ಸಂಕಷ್ಟದ ಸಮಯದಲ್ಲಿ ಜಿಲ್ಲಾಡಳಿತ ಮತ್ತು ಸರ್ಕಾರ ನಿಮ್ಮೊಂದಿಗಿದೆ ಇರುತ್ತದೆ ಎಂದು ಭರವಸೆ ನೀಡಿದರು. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಗ್ರಾಮದ ಪ್ರತಿ ಹೊಲಕ್ಕೂ ಭೇಟಿ ನೀಡಿ ಶೀಘ್ರ ಹಾನಿಯ ವರದಿಯನ್ನು ಸಿದ್ಧಪಡಿಸಬೇಕು. ಹಾನಿಯ ಪ್ರಮಾಣವನ್ನು ನಿಖರವಾಗಿ ಅಂದಾಜಿಸಿ, ಅರ್ಹ ರೈತರಿಗೆ ವಿಳಂಬ ಮಾಡದೆ ಪರಿಹಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಎಸ್‌ಪಿ ಗುಂಜನ್ ಆರ್ಯ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಕಲಘಟಗಿ ತಹಶೀಲ್ದಾರ್ ಬಸವರಾಜ ಹೊಂಕಣ್ಣವರ, ಕಾರ್ಯನಿರ್ವಾಹಕ ಅಧಿಕಾರಿ ಪಿ.ವೈ. ಸಾವಂತ, ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕಿ ಶ್ರೀದೇವಿ ಎ. ಎಸ್. , ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ, ಬಾಬಣ್ಣ ಅಂಚಟಗೇರಿ ಸೇರಿದಂತೆ ಇತರರಿದ್ದರು.



ಪರಿಹಾರ ಚೆಕ್
ಮಾಚಾಪುರ ಗ್ರಾಮದಲ್ಲಿ ಅನಿರೀಕ್ಷಿತ ಮಳೆಯಿಂದಾಗಿ ಜಾನುವಾರು ಪ್ರಾಣಹಾನಿ ಆಗಿದ್ದ ಫಲಾನುಭವಿಗಳಾದ ಕಲ್ಕಪ್ಪ ಬಸವಂತಪ್ಪ ಹುರಕಡ್ಲಿ, ನಿಂಗಪ್ಪ ತಿಪ್ಪಣ್ಣ ರಾಮನಕೊಪ್ಪ, ನಾಗಪ್ಪ ಫಕೀರಪ್ಪ ಇಂದೂರ ಅವರಿಗೆ ಸ್ಥಳದಲ್ಲಿಯೇ ಜಿಲ್ಲಾಡಳಿತ ವತಿಯಿಂದ ಸಚಿವ ಸಂತೋಷ ಲಾಡ್ , ತಲಾ ರೂ.20 ಸಾವಿರ ಪರಿಹಾರದ ಮೊತ್ತದ ಚೆಕ್ ವಿತರಿಸಿದರು.



ಜಮೀನಿಗೆ ಭೇಟಿ
ಮಾಚಾಪುರ ಗ್ರಾಮದ ರೈತ ಸಂತೋಜಿ ಹುಲಿಹೊಂಡ ಅವರ ಜಮೀನಿಗೆ ಭೇಟಿ ನೀಡಿ ಕಬ್ಬು, ಗೋವಿನಜೋಳ ಮತ್ತು ಮಾವು ಬೆಳೆ ಹಾನಿ ಪರಿಶೀಲಿಸಿದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸಮೀಕ್ಷಿಸಿ, ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಲು ಸೂಚಿಸಿದರು.



ಅಹಿಂಸೆ, ಮಾನವೀಯ ಮೌಲ್ಯ ಅಳವಡಿಸಿಕೊಳ್ಳಿ



ಕುಂದಗೋಳ: ತಾಲೂಕಿನ ಗುಡೇನಕಟ್ಟಿ ಗ್ರಾಮದಲ್ಲಿ ಸೋಮವಾರ ಸಮಾಜದ ವತಿಯಿಂದ ಮಹಾವೀರ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ತಹಶೀಲ್ದಾರ್ ರಾಜು ಮಾವರಕರ ಮಾತನಾಡಿ, ಜಗತ್ತಿಗೆ ಅಹಿಂಸೆ ಮತ್ತು ಶಾಂತಿಯ ಸಂದೇಶವನ್ನು ನೀಡಿದ ಭಗವಾನ್ ಮಹಾವೀರರು ಮಹಾನ್ ತತ್ವಜ್ಞರು. ಅವರ ಉಪದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಶಾಂತಿ, ಸೌಹಾರ್ದಯುತ ಬದುಕು ಸಾಧ್ಯವಾಗುತ್ತದೆ ಎಂದರು.
ಬಸದಿಯಲ್ಲಿ ಭಗವಾನ್ 1008 ಶಾಂತಿನಾಥ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಮಹಿಳೆಯರಿಂದ ಮಹಾವೀರ ತೀರ್ಥಂಕರರ ತೊಟ್ಟಿಲೋತ್ಸವ, ಪದ್ಮಾವತಿ ಮಹಿಳಾ ಮಂಡಳಿಯವರ ಕೋಲಾಟದ ನೃತ್ಯ ನೆಡೆಯಿತು. ಎತ್ತಿನ ಚಕ್ಕಡಿಯಲ್ಲಿ ಮಹಾವೀರ ತೀರ್ಥಂಕರರ ಭಾವಚಿತ್ರವನ್ನು ಅಲಂಕರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಸಲಾಯಿತು. ಕೃಷಿ ಇಲಾಖೆ ಅಧಿಕಾರಿ ಡಾ. ಎಚ್.ಸಿ. ಪಾಟೀಲ, ಲತಾ ಗಡ್ಡದವರ, ಸಮಾಜದ ಅಧ್ಯಕ್ಷ ಬಾಹುಬಲಿ ಮಲ್ಲಿಗವಾಡ, ಭರತೇಶ ಯೋಗಪ್ಪನವರ, ವಿಮಲ ನಾಗರಹಳ್ಳಿ, ಬಾಹುಬಲಿ ಯೋಗಪ್ಪನವರ, ಬಸಪ್ಪ ಯೋಗಪ್ಪನವರ, ಪಾರ್ಶ್ವನಾಥ ಕಾಶಪ್ಪನವರ, ಅಭಿನಂದ ದೊಡ್ಡಮನಿ, ಬಸವರಾಜ ಯೋಗಪ್ಪನವರ, ಸಾಗರ ಮಲ್ಲಿಗವಾಡ, ಸಂಜೀವ ಯೋಗಪ್ಪನವರ, ಮಂಜುನಾಥ ಮಲ್ಲಿಗವಾಡ ಇದ್ದರು.

ಗುರುವಂದನೆ ಕಾರ್ಯಕ್ರಮ ಉದ್ಘಾಟನೆ

ನವಲಗುಂದ: ಶ್ರೀ ಶಂಕರ ಮಹಾ ವಿದ್ಯಾಲಯದಲ್ಲಿ ಹಳೆಯ ವಾಣಿಜ್ಯ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನೆ ಕಾರ್ಯಕ್ರಮ ಉದ್ಘಾಟನೆ ನಡೆಯಿತು.
ಸುಮಾರು ವರ್ಷಗಳ ನಂತರ, ವಿದ್ಯೆಧಾರೆ ಎರೆದ ವಿದಾರ್ಥಿಗಳನ್ನು ನೋಡುವ ಅವಕಾಶ ನಮಗೆ ಸಿಕ್ಕಿದ್ದು ನಮ್ಮೆಲ್ಲರ ಪುಣ್ಯ ತಮಗೆ ಧನ್ಯವಾದಗಳು ಎಂದು ಶಂಕರ ಮಹಾ ವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಡಾ. ಬಿ.ಸಿ. ಪೂಜಾರ, ಬಿ.ಸಿ.ಹೊಂಬಳ, ಕೆ.ಎನ್.ಹದಗಲ, ಸಿ.ಎಸ್. ಹೊಸಮಠ, ಎಸ್.ಕೆ. ಜಂಗಳಪ್ಪಗೌಡ್ರ, ಎಸ್.ಕೆ.ದೋಟಿಕಲ್, ಜಿ.ಎಸ್.ಪಲ್ಲೇದ, ಎಸ್.ಬಿ.ಯಳ್ಳರ, ನಿವೃತ್ತ ಪ್ರಾಧ್ಯಾಪಕರಾದ ಪಿ.ಜಿ.ಹಿರೇಮಠ, ಸಿ.ಬಿ. ಪೂಜಾರ, ಎಂ.ಸಿ.ಹಿರೇಮಠ, ಆರ್.ಎಸ್. ಗುರುಮಠ, ಎಸ್.ಬಿ.ಕುಂದಗೋಳ, ಎಂ.ಆಯ್.ಬುಳಗಣ್ಣವರ, ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಎಸ್ .ವಿ.ಬಡಿಗೇರ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಜೆ.ಪಿ.ಲಮಾಣಿ ಅಭಿಪ್ರಾಯ ವ್ಯಕ್ತಪಡಿಸಿದರು. ವೀಣಾ ಪುರಾಣಿಕ ಪ್ರಾರ್ಥಿಸಿದರು. ಕಾಂತೇಶ ಸ್ವಾಗತಿಸಿದರು. ರವಿ ಮುಗಳಿ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು, ಸುನಿತಾ ಸಿದ್ರಾಮಶೆಟ್ಟರ, ವೇಣುಗೋಪಾಲ ಮದ್ವರಾಯಣ್ಣವರ ಹಾಗೂ ಜ್ಯೋತಿ ಮೇಲಿನಮಠ ಕಾಲೇಜು ಜೀವನದ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಶಾಂತಲಾ ಸೋಮನಕಟ್ಟಿ ನಿರೂಪಿಸಿದರು. ಅನುರಾಧಾ ಹೆಬಸೂರ ವಂದಿಸಿದರು. ಎನ್.ಸಿ.ದ್ಯಾಮನಗೌಡರ, ಬಿ.ಎಫ್.ಕೊಟಗಿ, ಬಿ.ಪಿ.ಮುದಿಗೌಡರ, ಮಲ್ಲಿಕಾರ್ಜುನಗೌಡ ಪಾಟೀಲ, ಚಂದ್ರಿಕಾ ಪಾಟೀಲ, ಸ್ವಪ್ನಾ ಪಾಟೀಲ, ಲಲಿತಾ ಬೆಂಡಿಗೇರಿ, ರಾಜಶ್ರೀ ದೇಸಾಯಿ ಇತರರಿದ್ದರು.



ಕಿರುಸುದ್ದಿ

ಗ್ರೇಡಿಂಗ್ ಪದ್ಧತಿ ಘೋಷಣೆ ಸರಿಯಲ್ಲ: ಸಂಕನೂರ



ಗದಗ: ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಮಾ.31ರಂದು ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರ ಏಕಾಏಕಿಯಾಗಿ ತೃತೀಯ ಭಾಷೆ ಹಿಂದಿಗೆ ಅಂಕಗಳ ಬದಲಾಗಿ ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತರಲು ಕೈಕೊಂಡ ನಿರ್ಧಾರ ವಿದ್ಯಾರ್ಥಿಗಳಲ್ಲಿ ಆತಂಕ ಹಾಗೂ ಗೊಂದಲಕ್ಕೆ ಕಾರಣವಾಗಿದೆ. ಇದು ದುಡಿಕಿನ ನಿರ್ಧಾರ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಶೈಕ್ಷಣಿಕ ವ್ಯವಸ್ಥೆಯಲ್ಲಿ ಏನೇ ಬದಲಾವಣೆ ತರುವುದಿದ್ದರೂ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮಾಡಬೇಕೆ ವಿನಃ ಕೊನೆಯ ಹಂತದಲ್ಲಿ ಅಲ್ಲ. ಹೀಗಾಗಿ ಇದು ಸರ್ಕಾರದ ಏಕಪಕ್ಷೀಯ ಹಾಗೂ ಅವೈಜ್ಞಾನಿಕ ಕ್ರಮವಾಗಿದೆ ಎಂದು ಹೇಳಿದ್ದಾರೆ.

ಈ ರೀತಿಯ ನಿರ್ಧಾರದಿಂದ ಹಿಂದಿ ಭಾಷಾ ಶಿಕ್ಷಕರು ಮುಂಬರುವ ದಿನಮಾನದಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳುವ ಆತಂಕ ಹಾಗೂ ಭಯದ ವಾತಾವರಣದಲ್ಲಿ ಇದ್ದಾರೆ. ನಮ್ಮ ದೇಶದಲ್ಲಿ ಆರಂಭದ ದಿನದಿಂದಲೂ ತ್ರೀಭಾಷಾ ಸೂತ್ರ ಪಾಲಿಸುತ್ತಾ ಬಂದಿದ್ದು, ಈಗ ಏಕಾಏಕಿಯಾಗಿ ದ್ವಿಭಾಷಾ ಸೂತ್ರಕ್ಕೆ ಬದಲಾವಣೆ ಮಾಡುವುದರಿಂದ ಆಗುವ ಸಾಧಕ ಬಾಧಕಗಳ ಕುರಿತು ಪುನರ್ ಚಿಂತನೆ ಮಾಡಲು ಆಗ್ರಹಿಸಿದ್ದಾರೆ.

ಭಾಷಾ ಸೂತ್ರದ ವಿಷಯಕ್ಕೆ ಸಂಬಂಧಿಸಿದಂತೆ ರಾಜಕೀಯ ಬೆರೆಸಬಾರದು ಎಂದು ಹೇಳಿದ ಅವರು, ಸರ್ಕಾರ ಏನೇ ನಿರ್ಣಯಕ್ಕೈಗೊಂಡರೂ ಮಕ್ಕಳ ಭವಿಷ್ಯ ಹಿತದೃಷ್ಟಿಯಿಂದ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

ಸಂಜಯ ದೊಡ್ಡಮನಿ ನೇಮಕ



ರೋಣ: ದಾವಣಗೇರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಗಮನದಲ್ಲಿಟ್ಟುಕೊಂಡು ಕೆಪಿಸಿಸಿ ಸದಸ್ಯರು ಹಾಗೂ ಗದಗ ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ಮಾಧ್ಯಮ ವಕ್ತಾರ ಸಂಜಯ ದೊಡ್ಡಮನಿ ಅವರನ್ನು ಚುನಾವಣಾ ಪ್ರಚಾರ ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ ಮಲ್ಲಿಕಾರ್ಜುನ ಶಾಮನೂರ ಅವರ ಗೆಲುವಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕೆಪಿಸಿಸಿ ರಾಜ್ಯಾಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ಎಸ್.ಸಿ.ಘಟಕದ ರಾಜ್ಯಾಧ್ಯಕ್ಷ ಆರ್.ಧರ್ಮಸೇನ್ ಆದೇಶ ಮಾಡುವ ಮೂಲಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ತಾಂತ್ರಿಕ ಶಿಕ್ಷಣ



ಲಕ್ಷ್ಮೇಶ್ವರ: ಇಲ್ಲಿನ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಏಪ್ರಿಲ್ 1,2026ರಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ದಿವಂಗತ ವೆಂಕಪ್ಪ ಎಂ. ಅಗಡಿ ಅವರ 94ನೇ ಜನ್ಮದಿನದ ಸವಿನೆನಪಾಗಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಭಾರತೀಯ ಸೇನೆಯ ಹುತಾತ್ಮ ಯೋಧರ ಮಕ್ಕಳಿಗೆ 2026-27ನೇ ಶೈಕ್ಷಣಿಕ ವರ್ಷದಿಂದ ವಸತಿ ಸಹಿತ ಸಂಪೂರ್ಣ ಉಚಿತ ತಾಂತ್ರಿಕ ಶಿಕ್ಷಣ ನೀಡಲಾಗುವುದು. ಎಐಯ್‌ಸಿಟಿಇ ಮತ್ತು ವಿಟಿಯು ನಿಯಮಗಳನ್ವಯ ವಿದ್ಯಾರ್ಥಿಗಳು ನಿಗದಿತ ಅರ್ಹತೆ ಹೊಂದಿದ್ದು ಈ ಯೋಜನೆ ಐದು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಹರ್ಷವರ್ಧನ ವಿ. ಅಗಡಿ ತಿಳಿಸಿದ್ದಾರೆ.

ಏ.2ರಂದು ಹನುಮ ಜಯಂತಿ

ನರಗುಂದ: ಪಟ್ಟಣದ ದಂಡಾಪೂರ ಪೇಠ ಗ್ರಾಮದಲ್ಲಿ ವ್ಯಾಸ ಮಹರ್ಷಿಗಳಿಂದ ಸ್ಥಾಪಿಸಲ್ಪಟ್ಟ ಮಾರುತಿ ದೇವಸ್ಥಾನದಲ್ಲಿ ಏ.2ರಂದು ಹನುಮ ಜಯಂತಿ ನಿಮಿತ್ತ ಸಂಜೆ 5.30ಕ್ಕೆ ಪುಣ್ಯಾರಣ್ಯ ಪತ್ರೀವನ ಮಠದ ಡಾ. ಶ್ರೀ ಗುರು ಸಿದ್ಧವೀರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ರಥೋತ್ಸವ ಜರಗುಲಿದೆ.

ಏ.1ರ ಸಂಜೆ 4ಕ್ಕೆ ಮಾರುತೇಶನ ಪಲ್ಲಕ್ಕಿ ಉತ್ಸವ ನಡೆಯಲಿದೆ. ನಂತರ ಮಹಾಪ್ರಸಾದ, ರಾತ್ರಿ ಜಾಗರಣೆ ನಡೆಯಲಿದೆ. ಏ.2ರ ಬೆಳಗ್ಗೆ ಅಭಿಷೇಕ, ಸುಮಂಗಲೆಯರಿಂದ ಮಾರುತಿ ಪೂಜೆ, ತೊಟ್ಟಿಲು ಕಾರ್ಯಕ್ರಮ, ಬೆಳಗ್ಗೆ 7ರಿಂದ 9ರ ವರೆಗೆ ಪವಮಾನ ಹೋಮ ಜರಗುವುದು. ಏ.3ರ ಸಂಜೆ 4ಕ್ಕೆ ಓಕಳಿ ಕಾರ್ಯಕ್ರಮ, ರಾತ್ರಿ 10 ಗಂಟೆಗೆ ಕೊಣ್ಣೂರಿನ ಜೈ ಕಿಸಾನ ಕಲಾ ತಂಡದಿಂದ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮ ಜರಗುವುದು ಎಂದು ದೇವಸ್ಥಾನದ ಸದ್ಭಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	5000-5300
ಉದ್ದಿನಕಾಳು	5200-5200
ಅಲಸಂದೆ	4000-5000
ಹೆಸರುಕಾಳು	1500-7200
ಹೆಸರುಬೇಳೆ	1500-1500
ಹುರಳಿಕಾಳು	4350-4350
ಮೆಕ್ಕೆಜೋಳ	1776-1776
ಕುಸುಬೆ	5000-5800
ಗೋಧಿ	2750-2850



ಗದಗ: ನಗರದ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಜ.ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಐಎಂಎ, ನಿಮಾ, ಆಯುರ್ವೇದಿಕ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರ, ಅಲೋಪತಿಕ ಹಾಗೂ ಆಯುರ್ವೇದ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗಿ

ಗದಗ: ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಬದ್ಧತೆಯಿಂದ ಮುಂದಾಗಬೇಕು ಎಂದು ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ನಗರದ ಜ.ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಐಎಂಎ, ನಿಮಾ, ಆಯುರ್ವೇದಿಕ್ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ, ಅಲೋಪತಿಕ ಹಾಗೂ ಆಯುರ್ವೇದ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರದ ಮುನ್ನ ವ್ಯಸನಮುಕ್ತ ಜಾಗೃತಿ ಜಾಥಾಕ್ಕೆ ತೋಂಟದಾರ್ಯ ಮಠದ ಎದುರಿಗೆ ಚಾಲನೆ ನೀಡಿ ಮಾತನಾಡಿದರು. ಯುವ ಜನಾಂಗ ನಶೆ ಬರುವಂತಹ ಉತ್ಪನ್ನಗಳಿಗೆ ಹೆಚ್ಚು ಆಕರ್ಷಿತರಾಗಿ ತಮ್ಮ ಜೀವವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು. ಖ್ಯಾತ ಮನೋರೋಗ ತಜ್ಞ ಡಾ.ಆನಂದ ಪಾಂಡುರಂಗಿ ಅವರು ಜಾಥಾಕ್ಕೆ ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ ಮಾತನಾಡಿ, ಐಎಂಎ ಸೇರಿದಂತೆ ಇತರ ಸಾಮಾಜಿಕ ಸಂಘಟನೆಗಳ ಸಹಕಾರದೊಂದಿಗೆ ಈ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಜಾಥಾದಲ್ಲಿ ತೋಂಟದಾರ್ಯ ಜಾತ್ರಾ ಸಮಿತಿಯ ಪದಾಧಿಕಾರಿಗಳು, ಐಎಂಎ, ನಿಮಾ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಪದಾಧಿಕಾರಿಗಳು, ಅಲೋಪತಿಕ್ ಹಾಗೂ ಆಯುರ್ವೇದ ಚಿಕಿತ್ಸಾ ಪದ್ಧತಿಯ ಹಿರಿಯ ತಜ್ಞ ವೈದ್ಯರು, ಡಿಜಿಎಂ ಆಯುರ್ವೇದ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಥಾ ಮರಳಿ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರಕ್ಕೆ ಆಗಮಿಸಿ ಸಭೆಯಾಗಿ ಮಾರ್ಪಟ್ಟಿತು.



ಗದಗ: ನಗರದ ಜ.ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಐಎಂಎ, ನಿಮಾ, ಆಯುರ್ವೇದಿಕ್ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ, ಅಲೋಪತಿಕ ಹಾಗೂ ಆಯುರ್ವೇದ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರದ ಮುನ್ನ ವ್ಯಸನಮುಕ್ತ ಜಾಗೃತಿ ಜಾಥಾಕ್ಕೆ ತೋಂಟದಾರ್ಯ ಮಠದ ಎದುರಿಗೆ ಚಾಲನೆ ನೀಡಿದ ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ.

ಕಳುವಾದ 1,912 ಮೊಬೈಲ್‌ಗಳನ್ನು ಪತ್ತೆ ಹಚ್ಚಿದ ಪೊಲೀಸ್ ಇಲಾಖೆ

ಮೊಬೈಲ್ ಸುರಕ್ಷತೆಗೆ 'ಸಂಚಾರ್ ಸಾಥಿ'

ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಮೊಬೈಲ್ ಕಳವು, ನಕಲಿ ಸಾಧನಗಳ ಬಳಕೆ ಹಾಗೂ ಸೈಬರ್ ವಂಚನೆ ಪ್ರಕರಣ ಸಂಖ್ಯೆ ಹೆಚ್ಚು ಆಗುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರದ ಸಂಚಾರ್ ಸಾಥಿ ಪೋರ್ಟಲ್ ನಾಗರಿಕರ ಸುರಕ್ಷತೆಗೆ ಪರಿಣಾಮಕಾರಿ ಆಯ್ಕೆಯಾಗಿ ಪರಿಣಮಿಸಿದೆ. ಸಂಚಾರಿ ಸಾಥಿ ಸಹಾಯದಿಂದ ಕಳ್ಳತನವಾದ ಮೊಬೈಲ್‌ಗಳಲ್ಲಿ 1912 ಮೊಬೈಲ್ ಗಳನ್ನು ಪತ್ತೆ ಮಾಡಿ ಮಾಲೀಕರಿಗೆ ನೀಡಿದ ಘಟನೆ ನಿಜಕ್ಕೂ ಶ್ಲಾಘನೀಯ ಎನ್ನುತ್ತಿದ್ದಾರೆ ಸಾರ್ವಜನಿಕರು.

ಕೇಂದ್ರ ಸರ್ಕಾರವು ದೇಶದಲ್ಲಿಹೆಚ್ಚುತ್ತಿರುವಸೈಬರ್ ಅಪರಾಧಗಳನ್ನು ತಡೆಯಲು ಒಂದು ಮಹತ್ವದ ಹೆಜ್ಜೆ ಇಟ್ಟಿದೆ. ದೂರಸಂಪರ್ಕ ಇಲಾಖೆ ವತಿಯಿಂದ ಆರಂಭಿಸಲಾದ ಈ ಪೋರ್ಟಲ್, ಜನರು ತಮ್ಮ ಮೊಬೈಲ್ ಭದ್ರತೆ ಸುಲಭವಾಗಿ ಪರಿಶೀಲಿಸಿಕೊಳ್ಳಲು ನೆರವಾಗುತ್ತಿದೆ.

ಮೊಬೈಲ್ ಕಳುವಾದರೆ ಅಥವಾ ಕಳೆದುಹೋದರೆ, ತಕ್ಷಣವೇ ಪೋರ್ಟಲ್‌ನಲ್ಲಿ ದೂರು ದಾಖಲಿಸಿ ಸಾಧನವನ್ನು ಬ್ಲಾಕ್ ಮಾಡುವ ಸೌಲಭ್ಯವಿದೆ. ಸೆಂಟ್ರಲ್ ಇಕ್ವಿಪ್ಮೆಂಟ್ ಐಡೆಂಟಿಟಿ ರಿಜಿಸ್ಟರ್ (CEIR) ವ್ಯವಸ್ಥೆಯ ಮೂಲಕ ದೇಶದಾದ್ಯಂತ ಆ ಮೊಬೈಲ್ ನಿಷ್ಕ್ರಿಯಗೊಳಿಸಲಾಗುತ್ತದೆ. ಇದರಿಂದ ಕಳ್ಳತನಗೊಂಡ ಮೊಬೈಲ್ ದುರುಪಯೋಗ ತಡೆಯಲು ಸಾಧ್ಯವಾಗುತ್ತದೆ.



ಐಎಂಇಐ ಸಂಖ್ಯೆ ಪರಿಶೀಲನೆ



ಹೊಸ ಮೊಬೈಲ್ ಖರೀದಿಸುವ ಮೊದಲು ಐಎಂಇಐ ಸಂಖ್ಯೆಯನ್ನು ಪರಿಶೀಲಿಸುವ ವ್ಯವಸ್ಥೆಯೂ ಈ ಪೋರ್ಟಲ್‌ನಲ್ಲಿ ಲಭ್ಯವಿದೆ. ಇದರಿಂದ ನಕಲಿ ಅಥವಾ ಕಳುವಾದ ಸಾಧನ ಖರೀದಿಸುವ ಅಪಾಯ ತಪ್ಪುತ್ತದೆ. ಇತ್ತೀಚೆಗೆ ಹೆಚ್ಚುತ್ತಿರುವ ವಿದೇಶಿ ಕರೆಗಳ ಮೂಲಕ ನಡೆಯುವ ವಂಚನೆಗಳನ್ನು ತಡೆಗಟ್ಟಲು, ಅನುಮಾನಾಸ್ಪದ ಕರೆಗಳನ್ನು ಗುರುತಿಸಿ ವರದಿ ಮಾಡುವ ವ್ಯವಸ್ಥೆಯೂ ಈ ಪೋರ್ಟಲ್‌ನಲ್ಲಿದೆ.

ಇದರ ಜೊತೆಗೆ ನಾಗರಿಕರು ತಮ್ಮ ಹೆಸರಿನಲ್ಲಿ ಎಷ್ಟು ಸಿಮ್ ಕಾರ್ಡ್‌ಗಳು ನೋಂದಾಯಿತವಾಗಿವೆ ಎಂಬುದನ್ನು ತಿಳಿದುಕೊಳ್ಳಬಹುದು. ಸಾರ್ವಜನಿಕರು ತಮ್ಮ ಸಿಮ್ ಕಾರ್ಡ್ ಗಳಿಗೆ ಪರ್ಯಾಯವಾಗಿ ಮತ್ತೊಂದು ಮೊಬೈಲ್ ನಂಬರ್‌ನ್ನು ಲಿಂಕ್ ಮಾಡಿಸಿಕೊಳ್ಳಬೇಕು. ಇದರಿಂದ ಕಳ್ಳತನವಾದ ಸಿಮ್ ಕಾರ್ಡನ್ನು ಕೂಡಲೇ ಬಂದ ಮಾಡಿಸಬಹುದಾಗಿದೆ.ಅನಧಿಕೃತ ಸಂಖ್ಯೆಗಳು ಕಂಡುಬಂದರೆ ಅವುಗಳನ್ನು ತಕ್ಷಣವೇ ನಿಷ್ಕ್ರಿಯಗೊಳಿಸಲು ಅವಕಾಶ ನೀಡಲಾಗಿದೆ.

- 2023ರಿಂದ ಜಾರಿಗೆ ಬಂದ ಈ ವ್ಯವಸ್ಥೆಯಡಿ ಸಾವಿರಾರು ಕಳುವಾದ ಮೊಬೈಲ್‌ಗಳು ಪತ್ತೆ
- ಲಕ್ಷಾಂತರ ಸಂಪರ್ಕಗಳನ್ನು ಪರಿಶೀಲಿಸಿ ಅನಧಿಕೃತ ಸಿಮ್‌ಗಳ ವಿರುದ್ಧ ಕ್ರಮ
- ಡಿಜಿಟಲ್ ಯುಗದಲ್ಲಿ ಮೊಬೈಲ್ ಸುರಕ್ಷತೆ ಅತ್ಯಂತ ಮುಖ್ಯ
- ವೈಯಕ್ತಿಕ ಮಾಹಿತಿ ರಕ್ಷಣೆ ಅಗತ್ಯ

2023 ರಿಂದ ಇಲ್ಲಿಯವರೆಗೆ 5056 ಮೊಬೈಲ್‌ಗಳನ್ನು ಸಿಇಐಆರ್‌ನಲ್ಲಿ ಬ್ಲಾಕ್ ಮಾಡಿದೆ. 3203 ಮೊಬೈಲ್‌ಗಳನ್ನು ಪತ್ತೆ ಹಚ್ಚಲಾಗಿದೆ. ಸಿಕ್ಕ ಮೊಬೈಲ್‌ಗಳನ್ನು ಜಪ್ತಿ ಮಾಡಿ ಇಲ್ಲಿಯವರೆಗೆ 1912 ಮೊಬೈಲ್‌ಗಳನ್ನು ಮಾಲೀಕರಿಗೆ ಹಸ್ತಾಂತರಿಸಲಾಗಿದೆ.
■ ರೋಹನ್ ಜಗದೀಶ, ಎಸ್ಪಿ

ದಿನದಿಂದ ದಿನಕ್ಕೆ ಮೊಬೈಲ್ ಕಳವು, ನಕಲಿ ಸಾಧನಗಳ ಬಳಕೆ ಹಾಗೂ ಸೈಬರ್ ವಂಚನೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಂಚಾರ್ ಸಾಥಿ,ಪೋರ್ಟಲ್ ನಾಗರಿಕರ ಸುರಕ್ಷತೆಗೆ ಸಹಾಯಕವಾಗಿದೆ. ಸಾರ್ವಜನಿಕರು ಅದರ ಕುರಿತು ಮಾಹಿತಿ ತಿಳಿದುಕೊಂಡು ಸಂಚಾರ್ ಸಾಥಿ ಪೋರ್ಟಲ್‌ನ ಸದುಪಯೋಗ ತೆಗೆದುಕೊಳ್ಳಬೇಕು.
■ ಮಹಾಂತೇಶ ಸಜ್ಜನ, ಡಿವೈಎಸ್ಪಿ

ನಿಯಮ ಬದ್ಧವಾಗಿ ಜಯಂತಿ ಆಚರಿಸಿ

ಮುಂಡರಗಿ: ಡಾ.ಬಾಬು ಜಗಜೀವನ್‌ರಾವ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಇವರು ಸಮ ಸಮಾಜದ ನಿರ್ಮಾಣಕ್ಕೆ, ದೀನದಲಿತರಉದ್ಧಾರಕ್ಕಾಗಿ, ಮಹಿಳೆಯರ ಬಲವರ್ಧನೆಗಾಗಿ ಈ ನಾಡಿಗೆ ತಮ್ಮದೆಯಾದ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಹೀಗಾಗಿ ಈ ಇಬ್ಬರೂ ಮಹನೀಯರ ಜಯಂತಿಯನ್ನು ತಾಲೂಕಿನ ಎಲ್ಲಾ ಇಲಾಖೆಯಲ್ಲಿ ನಿಯಮ ಬದ್ಧವಾಗಿ ವಿಜೃಂಭಣೆಯಿಂದ ಆಚರಿಸಬೇಕು ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು.

ಅವರು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಜರುಗಿದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್‌ರಾವ್ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸುವ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮುಖಂಡ ಆನಂದಗೌಡ ಪಾಟೀಲ್ ಮಾತನಾಡಿ, ಡಾ.ಬಾಬು ಜಗಜೀವನ್ ರಾವ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಯಶಸ್ವಿಗಾಗಿ ಎಲ್ಲರೂ ಒಗ್ಗಟ್ಟಾಗಿ ಎಲ್ಲಾ ಸಮಾಜದವರೂ ಕೈಜೋಡಿಸಬೇಕು. ಈ ಮೂಲಕ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರಲ್ಲೂ ತಿಳಿಸಬೇಕು ಎಂದರು.

ಪುರಸಭೆಯ ಮಾಜಿ ಸದಸ್ಯ ನಾಗರಾಜ ಹೊಂಬಳಗಟ್ಟಿ ಮಾತನಾಡಿ, ಪುರಸಭೆಯು ಡಾ.ಬಿ.ಆರ್.ಅಂಬೇಡ್ಕರ್ ಮೂರ್ತಿ ಸ್ಥಾಪನೆ ಮಾಡುವುದಕ್ಕೆ ಪುರಸಭೆ ಆವರಣದಲ್ಲಿ ಜಾಗ ನೀಡುವುದರೊಂದಿಗೆ 15 ಲಕ್ಷ ರೂ. ಅನುದಾನ ನೀಡಲಾಗಿದೆ. ಈಗಾಗಲೇ ಮೂರ್ತಿ ಕೆಲಸ ಪೂರ್ಣಗೊಂಡಿದ್ದು, ಏಪ್ರಿಲ್ 14ರಂದು ಡಾ.ಬಿ.ಆರ್.ಅಂಬೇಡ್ಕರ್ ಮೂರ್ತಿ ಸ್ಥಾಪನೆ ಮಾಡುವ ಕೆಲಸವೂ ಮಾಡಬೇಕು ಎಂದರು.

ಹಿರಿಯ ದಲಿತ ಮುಖಂಡ ಎಚ್.ಡಿ.ಪೂಜಾರ, ದಲಿತ ಮುಖಂಡ ಸೋಮಣ್ಣ ಹೈತಾಪೂರ ಮಾತನಾಡಿದರು. ನಾಗೇಶ ಹುಬ್ಬಳ್ಳಿ, ರುದ್ರಗೌಡ ಪಾಟೀಲ್, ಮೈಲಾರಪ್ಪ ಕಲಕೇರಿ, ಬಸವರಾಜ ನವಲಗುಂದ, ಬಸವರಾಜ ದೇಸಾಯಿ, ಲಕ್ಷ್ಮಣ್ಣ ತಗಡಿಮನಿ, ಬಸವಂತಪ್ಪ ಹೊಸಮನಿ, ಬಾಬಣ್ಣ ಗಟ್ಟಿ, ಚಂದ್ರು ಪೂಜಾರ್, ರಾಘವೇಂದ್ರ ವಡ್ಡರ್, ಬಿ.ಎಫ್. ಈಟಿ, ಜ್ಯೋತಿ ಹಾನಗಲ್ ರಾಮಣ್ಣ ಕೋಳಿ, ದ್ಯಾಮಣ್ಣ ವಾಲಿಕಾರ, ಮರಿಯಪ್ಪ ಸಿದ್ದಣ್ಣವರ, ಗಣೇಶ ಭರಮಕ್ಕನವರ, ನಿಂಗರಾಜ ಹಾಲಿನವರ, ಕುಮಾರ ತಳವಾರ, ಫಕೀರಪ್ಪ ಹಾರೋಗೇರಿ, ಮಳ್ಳಪ್ಪ ಕಲ್ಲೂರು ಸೇರಿದಂತೆ ಇತರರಿದ್ದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಉದಯಕುಮಾರ ಯಲಿವಾಳ ಸ್ವಾಗತಿಸಿ, ಸಭೆ ನಡೆಸಿಕೊಟ್ಟರು.



ಪಠ್ಯಪುಸ್ತಕಗಳಲ್ಲಿ ಬೀಚಿ ಸಾಹಿತ್ಯ ಅಳವಡಿಕೆಯಾಗಲಿ

ನರೇಗಲ್ಲ: ಏಕತಾನತೆಯಿಂದ ಕೂಡಿರುವ ಪಠ್ಯಪುಸ್ತಕಗಳಲ್ಲಿನ ಪಠ್ಯವನ್ನು ಬದಲಾಯಿಸುವ ಕಾಲ ಬಂದಿದೆ. ಇದನ್ನು ಪಠ್ಯಪುಸ್ತಕ ಸಮಿತಿಯವರು ಗಮನಿಸಿ ಹಾಸ್ಯ ಸಾಹಿತಿ ಬೀಚಿಯವರ ಸಾಹಿತ್ಯವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು ಎಂದು ಡಯಟ್‌ನ ನಿವೃತ್ತ ಪ್ರಾಧ್ಯಾಪಕ ಕಾಶಿನಾಥ ಸಾಲಿಮಠ ಹೇಳಿದರು.

ಪಟ್ಟಣದ ಹಿರೇಮಠ ಸಭಾಭವನದಲ್ಲಿ ಜರುಗಿದ ಬೀಚಿ ಬಳಗದ ಮಾಸಿಕ ಸಭೆಯಲ್ಲಿ ಅವರು ಕನ್ನಡ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು.


ಮಕ್ಕಳಿಗೆ ಓದಿಗೆ ಪೂರಕವಾಗುವ, ಅವರಲ್ಲಿ ಚೈತನ್ಯ ತುಂಬುವ ಅನೇಕ ವಿಷಯಗಳು ಬೀಚಿಯವರ ಸಾಹಿತ್ಯದಲ್ಲಿದೆ. ಇದನ್ನು ಪಠ್ಯಪುಸ್ತಕದಲ್ಲಿ ಅಳವಡಿಸುವದರಿಂದ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ಬೀಚಿ ಎಲ್ಲ ವಯೋಮಾನದವರೂ ಓದುವಂತಹ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳ ಕಡೆಗೆ ಗಮನ ನೀಡಿ ಪಠ್ಯಪುಸ್ತಕ ಸಿದ್ಧತೆ ಮಾಡುವಂತಾಗಬೇಕು ಎಂದರು.

ನಿವೃತ್ತ ಶಿಕ್ಷಕ ಎಂ. ಎಸ್. ಧಡೇಸೂರಮಠ ಮಾತನಾಡಿ, ಜನಪದ ಸಾಹಿತ್ಯ ಅತ್ಯಂತ ಸೊಗಡಿನಿಂದ ಕೂಡಿದ ಸಾಹಿತ್ಯವಾಗಿದೆ. ಅದನ್ನು ಮಕ್ಕಳಿಗೆ ತಿಳಿಸಿದರೆ ಮುಂದೆ ಅವರು ಜೀವನದಲ್ಲಿ ಹೇಗೆ ಬದುಕಬೇಕೆಂಬುದನ್ನು ಕಲಿಯುತ್ತಾರೆ ಎಂದರು. ಜನಪದದ ಅನೇಕ ಸಂಗತಿಗಳನ್ನು ಅವರು ಸಭೆಗೆ ವಿವರಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಅರುಣ ಕುಲಕರ್ಣಿ ಮಾತನಾಡಿ, ಬೀಚಿ ಬಳಗವನ್ನು ಹುಟ್ಟು ಹಾಕಿದ್ದು ಎಲ್ಲರಲ್ಲಿಯೂ ಓದುವ ಹವ್ಯಾಸವನ್ನು ಬೆಳೆಸಲು. ಆದರೊಂದಿಗೆ ವೇದಿಕೆಯಲ್ಲಿ ಎಲ್ಲರೂ ಮಾತನಾಡಲಿ ಎಂದು. ಇದರ ಸದುಪಯೋಗವನ್ನು ಬಳಗದ ಎಲ್ಲ ಸದಸ್ಯರೂ ಪಡೆದುಕೊಳ್ಳಬೇಕೆಂದರು.

ಅಧ್ಯಕ್ಷ ಶಿವಯೋಗಿ ಜಕ್ಕಲಿ ಮಾತನಾಡಿ, ಮುಂದಿನ ತಿಂಗಳಿನಲ್ಲಿ ಮನೆಮನೆಗಳಲ್ಲಿ, ಓಣಿಗಳಲ್ಲಿ ಬೀಚಿ ಸಾಹಿತ್ಯವನ್ನು ಪರಿಚಯಿಸುವಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸೋಣ ಎಂದರು.

ವೀರಭದ್ರಪ್ಪ ಕೆರಿಯವರ ನಿರೂಪಿಸಿದರು. ಸಂಚಾಲಕ ಜೆ. ಎ. ಪಾಟೀಲ ಸ್ವಾಗತಿಸಿದರು. ಶಿಕ್ಷಕ ಸುರೇಶ ಹಳ್ಳಿಕೇರಿ ಪ್ರಾಸ್ತಾವಿಸಿದರು. ಸಭೆಯಲ್ಲಿ ಗುರುಪಾದಪ್ಪ ಬೆಲ್ಲದ, ಡಾ. ರಾಜೇಂದ್ರ ಗಚ್ಚಿನಮಠ, ಡಾ. ಲಿಂಗಯ್ಯ ಗೌರಿಮಠ, ಬಸವರಾಜ ಕುರಿ, ಶಿವಪುತ್ರಪ್ಪ ಸಂಗನಾಳ, ವೀರಭದ್ರಪ್ಪ ಕುಂಬಾರ, ಈಶ್ವರ ಬೆಟಗೇರಿ, ಬಿ.ಟಿ. ತಾಳಿ, ಸಂಗಯ್ಯ ಪ್ರಭುಸ್ವಾಮಿಮಠ, ಬಸಪ್ಪ ಉಪ್ಪಿನ, ದೊಡ್ಡಯ್ಯ ಅರವಟಗಿಮಠ ಮುಂತಾದವರಿದ್ದರು. ಶಿಕ್ಷಕ ಮಹಾದೇವಪ್ಪ ಬೇವಿನಕಟ್ಟಿ ವಂದಿಸಿದರು.



ರಾಜು ಖಾನಪ್ಪನವರ ಹೇಳಿಕೆಗೆ ವಿರೋಧ

ಗದಗ: ಜಿಲ್ಲೆಯಲ್ಲಿ ನಡೆಯುವ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವವನ್ನು ಕೇವಲ 6 ದಿನಕ್ಕೆ ಸೀಮಿತ ಮಾಡಬೇಕು ಎಂದು ಹೇಳುವ ರಾಜು ಖಾನಪ್ಪನವರ ಹೇಳಿಕೆಯನ್ನು ವಿವಿಧ ರೈತ ಸಂಘಟನೆಗಳ ವತಿಯಿಂದ ವಿರೋಧಿಸಲಾಗುತ್ತದೆ ಎಂದು ರೈತ ಮುಖಂಡ ಶಿವಲಿಂಗಪ್ಪ ಬೋಪಳಪುರ ಹೇಳಿದರು.

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಎಲ್ಲ ಜನಾಂಗದವರನ್ನು ಒಂದು ಗೂಡಿಸಿ ಹಲವಾರು ದಶಕಗಳಿಂದ ತೋಂಟದಾರ್ಯ ಜಾತ್ರೆಯನ್ನು ತಿಂಗಳಾನುಗಟ್ಟಲೆ ನಡೆಸುತ್ತಿದೆ. ಆದರೆ ಇದನ್ನು ವಿರೋಧಿಸಿ ಜಾತ್ರೆಯನ್ನು ಕೇವಲ 6 ದಿನಕ್ಕೆ ಸೀಮಿತ



ಗೊಳಿಸಬೇಕು ಎನ್ನುವ ರಾಜು ಖಾನಪ್ಪನವರ ಮಾತಿನಲ್ಲಿ ಸತ್ಯವಿಲ್ಲ ಎಂದು ಆರೋಪಿಸಿದರು.

ರೈತ ಮುಖಂಡ ಸಂಗಣ್ಣ ದಂಡಿನ , ಮಲ್ಲಪ್ಪ ಚಳಗೇರಿ, ಬಸವರಾಜ ಶಾಲವಾಡಿ, ವಿಜಯಕುಮಾರ ಸುಂಕದ, ಕಾವ್ಯ ಸೋಮನಕಟ್ಟಿ, ವಸಂತ ಮಾರಬಸರಿ, ವೀರೇಶ ಕಾಗಹಾಳ, ರುದ್ರಯ್ಯ ಸಾಲಿಮಠ್, ಯಮನೂರ್ ಸಾಬ್, ಬಸವರಾಜ ಬಸವಗೋಯ್, ರಾಮಣ್ಣ ಸೂಡಿ ಇದ್ದರು.

ಇಂದಿನಿಂದ ಉರುಸು ಕಾರ್ಯಕ್ರಮ

ಲಕ್ಷ್ಮೇಶ್ವರ: ಹಿಂದೂ-ಮುಸ್ಲಿಂ ಭಾವೈಕ್ಯತೆಯ ಕೇಂದ್ರವಾದ ಲಕ್ಷ್ಮೇಶ್ವರದಲ್ಲಿ ಸೂಫಿ ಸಂತರಾದ ಹಜರತ್ ದೂದಪೀರಾಂ ಅವರ 137ನೇ ಉರುಸು ಕಾರ್ಯಕ್ರಮ ಮಾ.31 ರಿಂದ ಏ.5ರವರೆಗೆ ನಡೆಯಲಿದೆ ಎಂದು ದೂದಪೀರಾಂ ದರ್ಗಾ ಕಮಿಟಿ ಅಧ್ಯಕ್ಷ ಸುಲೇಮಾನಸಾಬ ಕಣಿಕೆ ಹೇಳಿದರು.

ಅವರು ಸೋಮವಾರ ದರ್ಗಾದಲ್ಲಿ ಕರೆದ ಪೂರ್ವಭಾವಿ ಸಭೆಯಲ್ಲಿ ಮಾಹಿತಿ ನೀಡಿ, ಮಹಾತ್ಮರಾದ ಹಜರತ್ ದೂದಪೀರಾಂ ಅವರ ಆಧ್ಯಾತ್ಮಿಕ, ಧಾರ್ಮಿಕ ಶಕ್ತಿ ಕೇಂದ್ರವಾದ ದೂದನಾನಾ ದರ್ಗಾದ ಉರುಸು ಕಾರ್ಯಕ್ರಮದ ಮೊದಲ ದಿನ ಮಾ.31 ರಂದು ಮಂಗಳವಾರ ರಾತ್ರಿ 9ಕ್ಕೆ ಘುಸ್ರಾಗಳು, ಗಂಧ ಕಾರ್ಯಕ್ರಮ ನೆರವೇರಲಿದೆ. ಏ.1ರಂದು ರಾತ್ರಿ 9 ಗಂಟೆಯಿಂದ ಬೆಳಗ್ಗೆ 7 ಗಂಟೆವರೆಗೆ ಪ್ರಸಿದ್ಧ ಬ್ಯಾಂಡ್ ಕಂಪನಿಗಳೊಂದಿಗೆ ತಾಜಮಹಲ್ ಮೆರವಣಿಗೆ ನಂತರ ಗಲೀಫ ಕಾರ್ಯಕ್ರಮ ನಡೆಯಲಿದೆ. ಏ.4ರ ರಾತ್ರಿ ಉತ್ತರಪ್ರದೇಶದ ಕಿಚೋಚಾ ಶರೀಫ ಹಜರತ್ ಅಲ್ಲಾಮ ಮೌಲಾನಾ ಹಾಶ್ಮೀಮಿಯ್ಯಾ ಅಶ್ರಫಿ ಮತ್ತು ಅವರ ಮಗ ಮುಯೀಜ್ ಆಶ್ರಫಿ ಇವರಿಂದ ವಾಜಬಯಾನ್ ನಡೆಯಲಿದೆ. ಏ.5ರಂದು ರಾತ್ರಿ 9ಕ್ಕೆ ಮುಂಬಯಿ ಇಪ್ತೆಕಾರಿ ಸಹೋದರರು ಮತ್ತು ಸೂಪಿ ಮುಜ್ತಭಾ ಅಜೀಜ ನಾಜಾ ಅವರಿಂದ ಖವ್ವಾಲಿ ನಡೆಯಲಿದೆ ಎಂದರು. ದರ್ಗಾ ಕಮೀಟಿ ಕಾರ್ಯದರ್ಶಿ ಸಾಹಬಜಾನ್ ಸಾಬ ಹವಾಲ್ದಾರ , ಸಮಾಜದ ಹಿರಿಯ ಮುಖಂಡ ದಾದಾಪೀರ ಮುಚ್ಚಾಲೆ ಮಾತನಾಡಿದರು. ದರ್ಗಾ ಕಮೀಟಿಯ ಉಪಾಧ್ಯಕ್ಷ ಇರ್ಫಾನಬೇಗ ಮಿರ್ಜಾ, ದಾದಪೀರ ಕಾರಡಗಿ, ನೂರಹ್ಮದ ಸಿದ್ದಿ, ಖಲಂದರ ಸೂರಣಗಿ, ಫಹೀಮ ಮುಲ್ಲಾ, ಸಾಧಿಕ ಶಮಲೇವಾಲೆ, ರಫೀಕ ಸಿದ್ದಾಪುರ, ಅಕ್ಬರಬಾಷಾ ಸೂರಣಗಿ, ಮೆಹಬೂಬಸಾಬ ಮುಳಗುಂದ, ದಾದಾಪೀರ ಜಮಖಂಡಿ ಇತರರಿದ್ದರು.

ಮಹಾವೀರರ ತತ್ವ, ಸಿದ್ಧಾಂತ ಪಾಲಿಸಿ

ಶಿರಹಟ್ಟಿ: ಭಗವಾನ್ ಮಹಾವೀರರ ಜೀವನವು ಶಾಂತಿಯ ದೀಪವಾಗಿದೆ. ಅವರು ಜೀವನದುದ್ದಕ್ಕೂ ಅಹಿಂಸೆ, ಸತ್ಯ, ಕರುಣೆ ಮತ್ತು ಸ್ವಯಂ ಕೃಷಿಯ ಅದ್ಭುತ ತತ್ವಗಳನ್ನು ಪ್ರಸ್ತುತಪಡಿಸಿದರು. ಅವರ ಬೋಧನೆಗಳು ಇಂದಿಗೂ ಪ್ರತಿಯೊಬ್ಬ ವ್ಯಕ್ತಿಗೂ ಸ್ಫೂರ್ತಿಯ ಸೆಲೆಯಾಗಿವೆ ಎಂದು ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಸೋಮವಾರ ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಭಗವಾನ್ ಮಹಾವೀರ ತೀರ್ಥಂಕರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಅಹಿಂಸೆ, ಸಹನಶೀಲತೆ ಹಾಗೂ ಸೌಹಾರ್ದತೆಯ ಮೌಲ್ಯಗಳನ್ನು ಜೈನವಾಣಿ ಹೆಸರಿನಲ್ಲಿ ನಾವು ಅಳವಡಿಸಿಕೊಳ್ಳಬೇಕು ಎಂದರು. ದೇಶದ ಬಾಹ್ಯ ಅಭಿವೃದ್ಧಿ ಜೊತೆಗೆ ಒಗ್ಗಟ್ಟನ್ನು ಕಾಪಾಡುವ ಆಂತರಿಕ ಸಾಮರ್ಥ್ಯವೃದ್ಧಿಸಿಕೊಳ್ಳಲು ಮಹಾವೀರರ ಉಪದೇಶಗಳು ಹಿಂದೆಂದಿಗಿಂತಲೂ ಇಂದು ಪ್ರಸ್ತುತವಾಗಿವೆ. ಭಾರತವು ಸಮೃದ್ಧ, ಸಮರ್ಥ ದೇಶವಾಗಲು ಮಹಾವೀರರಂತಹ ಮಹನೀಯರ ತತ್ವಗಳನ್ನು ಪಾಲಿಸಬೇಕು ಎಂದರು.

ಈ ವೇಳೆ ಬೆಳ್ಳಟ್ಟಿ ಗ್ರಾಪಂ ಸದಸ್ಯ ಶಿವನಗೌಡ ಪಾಟೀಲ ಹಾಗೂ ಸಮಾಜದ ಮುಖಂಡರು ಮತ್ತು ತಹಶೀಲ್ದಾರ್ ಕಚೇರಿ ಸಿಬ್ಬಂದಿ ಇದ್ದರು.



ಸಿಲಿಂಡರ್ ವಿತರಣೆ ಕೇಂದ್ರದಲ್ಲಿ ಗದ್ದಲ: ನೂಕು ನುಗ್ಗಲು

ರೋಣ: ಗೃಹ ಬಳಕೆಯ ಸಿಲಿಂಡರ್ ವಿತರಣೆಯಲ್ಲಿ ಸಮಸ್ಯೆಗಳಿಲ್ಲ ಎಂದು ಆಡಳಿತ ವರ್ಗ ಹೇಳಿದೆ. ಆದರೆ ಜನರು ಮಾತ್ರ ಸಿಲಿಂಡರ್ ಪಡೆಯಲು ಬೆಳಗಿನ ಜಾವಾ ಕೇಂದ್ರದ ಮುಂದೆ ಸರದಿ ಸಾಲಲ್ಲಿ ನಿಲ್ಲುವುದು ಮಾತ್ರ ತಪ್ಪುತ್ತಿಲ್ಲ.ಇದಕ್ಕೆ ಸಾಕ್ಷಿ ಎನ್ನುವುವಂತೆ ಪಟ್ಟಣದ ವಿತರಣೆ ಕೇಂದ್ರದ ಮುಂದೆ ಗ್ರಹ ಬಳಕೆಯ ಸಿಲಿಂಡರ್ ಗಳನ್ನು ಪಡೆಯಲು ನೂಕು ನುಗ್ಗಲು ಉಂಟಾಗಿದ್ದು,ಕೊನೆಗೆ ಪೊಲೀಸರ ಮಧ್ಯಸ್ಥಿಕೆಯಿಂದ ವಾತವರಣ ತಿಳಿಗೊಂಡಿದೆ.

ಕಳೆದ 15 ದಿನಗಳಿಂದ ಪಟ್ಟಣದಲ್ಲಿ ಗೃಹ ಬಳಕೆಯ ಸಿಲಿಂಡರ್‌ಗಳನ್ನು ಪಡೆಯಲು ಬೆಳಗಿನ ಜಾವಾ ವಿತರಣೆ ಕೇಂದ್ರದ ಮುಂದೆ ಸಾಲುಗಟ್ಟಿ ನಿಂತು ಸಿಲಿಂಡರ್ ಪಡೆಯಲು ಹರಸಾಹಸ ಪಡುತ್ತಿದ್ದಾರೆ. ಕೆಲವರಿಗೆ ಸಿಗುವ ಸಿಲಿಂಡರ್ ಮತ್ತೊಬ್ಬರಿಗೆ ಸಿಗುತ್ತಿಲ್ಲ ಎನ್ನುವ ವಾದ ಕೂಡ ನಾಗರಿಕರಿಂದ ಕೇಳಿಬರುತ್ತಿದ್ದು, ಸೋಮವಾರ ಸಿಲಿಂಡರ್ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಗದ್ದಲಕ್ಕೆ ಕಾರಣ ಎನ್ನುವುದು ಸರತಿ ಸಾಲಲ್ಲಿ ನಿಂತ ಬಳಕೆದಾರರ ಮಾತಾಗಿದೆ.



ಸಮರ್ಪಕ ಸಿಗದ ಗೃಹ ಬಳಕೆ ಸಿಲಿಂಡರ್

ಈಗಾಗಲೇ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಸ್ಥಗಿತ ಮಾಡಿರುವುದರಿಂದ ಪಟ್ಟಣದಲ್ಲಿ ಅನೇಕ ಹೊಟೆಲ್‌ಗಳು ಬಂದ್ ಆಗಿವೆ. ಇನ್ನು ಕೆಲ ಸಣ್ಣ ಪುಟ್ಟ ಹೊಟೆಲ್‌ನವರು ಮನೆಯಲ್ಲಿ ತಿಂಡಿಗಳನ್ನು ಮಾಡಿಕೊಂಡು ಬಂದ್ ಮಾರಾಟ ಮಾಡುವ ಮೂಲಕ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದಾರೆ. ಆದರೂ ಸಹ ಗೃಹ ಬಳಕೆಯ ಸಿಲಿಂಡರ್ ಗಳು ಸಮರ್ಪಕವಾಗಿ ಸಿಗುತ್ತಿಲ್ಲ, ಬೆಳಗ್ಗೆನೇ ಎದ್ದು ಬಂದು ವಿತರಣಾ ಕೇಂದ್ರದ ಮುಂದೆ ನಿಂತರು ಸಿಲಿಂಡರ್‌ಗಳು ಸಿಗದಿದ್ದಾಗ ಗ್ರಾಹಕರು ತಾಳ್ಮೆ ಕಳೇದುಕೊಂಡಿದ್ದು ಇದರಿಂದ ಸ್ವಲ್ಪ ಗದ್ದಲ ಉಂಟಾಗಲು ಕಾರಣವಾಗಿದೆ ಎನ್ನುತ್ತಾರೆ ಸಿಲಿಂಡರ್ ಗ್ರಾಹಕರು.





ಅಗತ್ಯ ಕ್ರಮ

ಗೃಹ ಬಳಕೆಯ ಸಿಲಿಂಡರ್ ಗಳನ್ನು ಪಡೆಯಲು ಮೊದಲೇ ಬುಕಿಂಗ್ ಮಾಡಬೇಕು ಎಂಬ ಮಾತನ್ನು ಕೂಡ ಹರಿಬಿಡಲಾಗಿದೆ. ಬುಕಿಂಗ್ ವಿಚಾರವಾಗಿ ಕೂಡ ಗ್ರಾಹಕರು ವಿತರಣಾ ಕೇಂದ್ರದ ಬಳಿ ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದು ಕೂಡ ಸಮರ್ಪಕ ಗ್ಯಾಸ ವಿತರಣೆಗೆ ತೊಂದರೆಯಾಗಿದೆ. ಬುಕಿಂಗ್ ಸಂದರ್ಭದಲ್ಲಿ ನೆಟ್ ವರ್ಕ್ ಕೈ ಕೊಡುತ್ತಿರುವ ಪರಿಣಾಮ ಒಟಿಪಿ ಕೂಡಾ ಬರುತ್ತಿಲ್ಲ, ಒಟಿಪಿ ಬರದಿದ್ದರೆ ಗ್ಯಾಸ್ ಬುಕಿಂಗ್ ಆಗುವುದಿಲ್ಲ, ಹೀಗಾಗಿ ಗ್ರಾಹಕರಲ್ಲಿ ಗದ್ದಲ ಶುರುವಾಗಿದ್ದು, ಇದರಿಂದ ವಿತರಣಾ ಕೇಂದ್ರದವರು 112ಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಸಕಾಲಕ್ಕೆ ಆಗಮಿಸಿದ ಗಸ್ತು ಸಿಬ್ಬಂದಿ ಸ್ಥಳೀಯವಾಗಿ ಕರ್ತವ್ಯದಲ್ಲಿ ಮತ್ತಷ್ಟು ಪೊಲೀಸ್ ಬಲವನ್ನು ಉಪಯೋಗಿಸಿಕೊಂಡು ವಾತವರಣ ತಿಳಿಗೊಳಿಸಿ ಬುಕಿಂಗ್ ಮತ್ತು ವಿತರಣೆಗೆ ಅಗತ್ಯ ಕ್ರಮ ತೆಗೆದುಕೊಂಡರು.

ಸಂರಕ್ಷಣಾ ಪ್ರವೃತ್ತಿ ಸರ್ವರೂ ಬೆಳೆಸಿಕೊಳ್ಳಲಿ: ಸಿಸಿಪಾ



ನರಗುಂದ: ಪರಿಸರದಲ್ಲಿ ಜನತೆ ಗಿಡಗಳನ್ನು ದತ್ತು ಪಡೆದು ಬೆಳೆಸಬೇಕು. ಸಂರಕ್ಷಣಾ ಪ್ರವೃತ್ತಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಜಿಟಿಟಿಸಿ ಕಾಲೇಜು ಆವರಣದಲ್ಲಿ ಅರಣ್ಯ ಇಲಾಖೆ ಸಹಯೋಗದೊಂದಿಗೆ ನೂರು ಗಿಡಗಳನ್ನು ನೆಡಲಾಗಿದೆ. ಪರಿಸರವನ್ನು ಸಂರಕ್ಷಿಸಿದರೆ, ಅದು ನಮ್ಮನ್ನು ರಕ್ಷಿಸುತ್ತದೆ ಎಂದು ಮಾಜಿ ಸಚಿವ, ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಸೋಮವಾರ ಪಟ್ಟಣದ ಅಳಗವಾಡಿ ರಸ್ತೆಯಲ್ಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಆವರಣದಲ್ಲಿ ಮೊಮ್ಮಗನ ಜನನ ನಿಮಿತ್ತ ನೂರು ಗಿಡಗಳನ್ನು ಬಿಜೆಪಿ ಕಾರ್ಯಕರ್ತರೊಂದಿಗೆ ನೆಟ್ಟು ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದರು. ನನ್ನ ಜ್ಯೇಷ್ಠ ಪುತ್ರ ಉಮೇಶಗೌಡನಿಗೆ ಹನ್ನೆರಡು ವರ್ಷಗಳ ನಂತರ ಗಂಡು ಮಗು ಜನಿಸಿದ ನಿಮಿತ್ತ ಪರಿಸರದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲಾಗುತ್ತಿದೆ. ನನ್ನ ಜನ್ಮದಿನದ ಸಂದರ್ಭದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಎಪಿಎಮ್ಸಿ ಆವರಣದಲ್ಲಿ ಐದನೂರು ಗಿಡಗಳನ್ನು ನೆಟ್ಟು ಬೆಳೆಸಿದ್ದಾರೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಇದ್ದಾಗ ನಾನು ಅರಣ್ಯ ಸಚಿವನಿದ್ದೆ ಆಗ ನರಗುಂದ ಗುಡ್ಡದ ಹಿಂಭಾಗದಲ್ಲಿ 10 ಕೋಟಿ ವೆಚ್ಚದ ಸಾಲುಮರದ ತಿಮ್ಮಕ್ಕನ ಉದ್ಯಾನವನ (ಟ್ರೀ ಪಾರ್ಕ್) ನಿರ್ಮಿಸಿದ್ದರಿಂದ ಅದು ಈಗ ಪ್ರವಾಸಿ ತಾಣವಾಗಿದೆ ಎಂದರು.

ಬಿ.ಬಿ. ಐನಾಪೂರ, ಪವಾಡೆಪ್ಪ ವಡ್ಡಿಗೇರಿ, ಸಂಗಪ್ಪ ಪೂಜಾರ, ಎಸ್.ಎಸ್. ಪಾಟೀಲ, ಬಸಪ್ಪ ಮಳಗಿ, ಎಸ್.ಆರ್. ಪಾಟೀಲ, ಚಂದ್ರು ದಂಡಿನ, ಉಮೇಶಗೌಡ ಪಾಟೀಲ, ಸತೀಶಗೌಡ ಪಾಟೀಲ, ಮಂಜು ಮೆಣಸಗಿ, ಸಿದ್ದೇಶ ಹೂಗಾರ, ವಿಠ್ಠಲ ಹವಾಲ್ದಾರ, ಅರಣ್ಯಾಧಿಕಾರಿ ಮುತ್ತಪ್ಪ ಗಡ್ಡಿ, ಪ್ರಾಂಶುಪಾಲ ಮಾರುತಿ ಭಜಂತ್ರಿ ಹಾಗೂ ಸಿಬ್ಬಂದಿ ಸುದೀರ ಚವ್ಹಾಣ, ಷಣ್ಮುಖಗೌಡ ಪಾಟೀಲ ಇತರರಿದ್ದರು.

ಹೊಸ ಆವೃತ್ತಿಯಲ್ಲೂ ಮುಂದುವರಿದ ಸಿಎಸ್‌ಕೆ ಕಳಪೆ ಬ್ಯಾಟಿಂಗ್

ಚೆನ್ನೈಗೆ ಹೀನಾಯ ಸೋಲು





ಗುವಾಹಟಿ: ಮಹೇಂದ್ರ ಸಿಂಗ್ ಧೋನಿ ಅನುಪಸ್ಥಿತಿಯಲ್ಲಿ ಸೋಮವಾರ ಮೈದಾನಕ್ಕಿಳಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ರಾಜಸ್ಥಾನ ರಾಯಲ್ಸ್ ವಿರುದ್ಧ ಹೀನಾಯ ಪ್ರದರ್ಶನವನ್ನು ನೀಡಿತು. ಇದರೊಂದಿಗೆ ಐಪಿಎಲ್ 2026ರಲ್ಲಿ ಸೋಲಿನೊಂದಿಗೆ ಆರಂಭಿಸಿದೆ. 128 ರನ್‌ಗಳ ಸುಲಭ ಗುರಿಯನ್ನು ಬೆನ್ನತ್ತಿದ ರಾಯಲ್ಸ್, ಐದು ಬಾರಿಯ ಚಾಂಪಿಯನ್ ಸಿಎಸ್‌ಕೆ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ರಾಜಸ್ಥಾನ ರಾಯಲ್ಸ್ ಪವರ್‌ಪ್ಲೇನಲ್ಲಿ 74 ರನ್ ಕಲೆಹಾಕಿತು. ರಾಯಲ್ ಗೆಲುವಿನೊಂದಿಗೆ ರಾಜಸ್ಥಾನ ಭರ್ಜರಿ ಶುಭಾರಂಭ ಮಾಡಿ ಹಿರಿಹಿರಿ ಹಿಗ್ಗಿದೆ.

ಸಿಎಸ್‌ಕೆ 127ಕ್ಕೆ ಸರ್ವಪತನ!: ಟಾಸ್ ಗೆದ್ದ ರಾಜಸ್ಥಾನ ನಾಯಕ ರಿಯಾನ್ ಪರಾಗ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದರು. ಭಾರತದ ಟಿ20 ವಿಶ್ವಕಪ್ ಗೆಲುವಿನ ರೂವಾರಿಯಾಗಿ ಬೀಗಿದ್ದ ಸಂಜು ಸ್ಯಾಮ್ಸನ್ (6) ಐಪಿಎಲ್ 2026ರ ಆವೃತ್ತಿಯ ಮೊದಲ ಪಂದ್ಯದಲ್ಲಿ ಬೇಗನೆ ಪೆವಿಲಿಯನ್ ಸೇರಿ ನಿರಾಸೆ ಮೂಡಿಸಿದರು. ಒಂದು ಬೌಂಡರಿ ಹೊಡೆದಿದ್ದ ಸ್ಯಾಮ್ಸನ್ ವೇಗಿ ನ್ಯಾಂಡ್ರೆ ಬರ್ಗರ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆಗಿದ್ದರು. ವೇಗಿ ಜೊಫ್ರಾ ಆರ್ಚರ್ ಎಸೆತವನ್ನು ಆಕರ್ಷಕ ಕವರ್ ಡ್ರೈ ಹೊಡೆದಿದ್ದ ನಾಯಕ ಋತುರಾಜ್ ಗಾಯಕ್ವಾಡ್ (6) ಮುಂದಿನ ಎಸೆತದಲ್ಲೇ ಬೌಲ್ಡ್ ಆಗಿದ್ದರು. ಗಾಯಕ್ವಾಡ್ ಬಳಿಕ ಕ್ರೀಸ್‌ಗಿಳಿದ ಯುವ ಬ್ಯಾಟರ್ ಆಯುಷ್ ಮಾತ್ರೆ (0) ಎತ್ತರದಲ್ಲಿ ಬಂದಿದ್ದ ಎಸೆತವನ್ನು ಹುಕ್ ಮಾಡುವ ಯತ್ನದಲ್ಲಿ ಬರ್ಗರ್‌ಗೆ ವಿಕೆಟ್ ಒಪ್ಪಿಸಿದರು.

ವೈಭವ್ 15 ಎಸೆತಗಳ ಫಿಫ್ಟಿ

ಸೂಪರ್ ಕಿಂಗ್ಸ್ ಬೌಲರ್‌ಗಳನ್ನು ನೆಟ್ಸ್‌ನಲ್ಲಿ ಆಡುವಂತೆ ದಂಡಿಸಿದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ 15 ಎಸೆತಗಳಲ್ಲೇ ಅರ್ಧಶತಕ ದಾಖಲಿಸಿದರು. ನೂರ್ ಅಹ್ಮದ್ ಎಸೆತವನ್ನು ಲಾಂಗ್ ಆನ್ ಕ್ಷೇತ್ರದಲ್ಲಿ ಸಿಕ್ಸರ್‌ಗೆ ಎತ್ತುವುದರೊಂದಿಗೆ ತಮ್ಮ ಎಂದಿನ ಶೈಲಿಯಲ್ಲೇ ಅರ್ಧಶತಕ ಪೂರೈಸಿದರು. ಕಂಬೋಜ್ ಎಸೆತದಲ್ಲಿ ಡೀಪ್ ಎಕ್ಸ್‌ಟ್ರಾ ಕವರ್‌ನಲ್ಲಿ ಬೌಂಡರಿ ಹೊಡೆಯುವ ಪ್ರಯತ್ನದಲ್ಲಿದ್ದಾಗ ಸರ್ಫರಾಜ್ ಅಹ್ಮದ್ ಮುಂದಕ್ಕೆ ಓಡುತ್ತಾ ಡೈವ್ ಮಾಡಿ ಅದ್ಭುತ ಕ್ಯಾಚ್ ಪಡೆದಿದ್ದರು. 17 ಎಸೆತಗಳನ್ನು ಎದುರಿಸಿದ್ದ ವೈಭವ್ 4 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 305.88 (306) ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ್ದರು.

- ಸೂರ್ಯವಂಶಿ 306 ಸ್ಟ್ರೈಕ್‌ರೇಟ್, 2026ರ ಆವೃತ್ತಿಯಲ್ಲಿ ಅತ್ಯಧಿಕ ಸ್ಟ್ರೈಕ್‌ರೇಟ್ ದಾಖಲೆ
- ಟಾಸ್‌ಗೆ ಮುನ್ನ ಮಳೆ, ಪಂದ್ಯ ತುಸು ತಡವಾಗಿ ಆರಂಭ
- ಮಾಜಿ ತಂಡದ ವಿರುದ್ಧ 2 ಪ್ರಮುಖ ವಿಕೆಟ್ ಕಿತ್ತು ಜಡೇಜ ಶೈನ್

ಪವರ್‌ಪ್ಲೇ ಓವರ್‌ಗಳಲ್ಲಿ ಸಿಎಸ್‌ಕೆ 4 ವಿಕೆಟ್ ಕಳೆದುಕೊಂಡು 41 ರನ್ ಗಳಿಸಿ ಸಂಕಷ್ಟದಲ್ಲಿತ್ತು. ಆದರೆ ಮತ್ತೆ ಇನ್ನಷ್ಟು ಸಂಕಷ್ಟಗಳನ್ನು ಎದುರಿಸಿತು. ಕೇವಲ 2 ರನ್ ಮಾಡಿದ್ದ ಮ್ಯಾಥ್ಯೂ ಶಾರ್ಟ್ ತಮ್ಮ ಹೆಸರಿನಂತೆ ಶಾರ್ಟ್ ಇನ್ನಿಂಗ್ಸ್ ಆಡಿದ್ದು, ಸಂದೀಪ್ ಶರ್ಮಾಗೆ ವಿಕೆಟ್ ಒಪ್ಪಿಸಿದರು. ಕ್ರೀಸ್‌ಗಿಳಿದ ಶಿವಂ ದುಬೆ (6) ಸ್ಫೋಟಕ ಆಟ ಆಡುವಂತೆ ತೋರಿಸಿದ್ದು, ಮಾಜಿ ಸಿಎಸ್‌ಕೆ ಆಟಗಾರ ರವೀಂದ್ರ ಜಡೇಜ ಮೇಲೆ ಒತ್ತಡ ಹಾಕುವ ಪ್ರಯತ್ನದಲ್ಲಿ ತಾವೇ ವಿಕೆಟ್ ಒಪ್ಪಿಸಿದ್ದರು. ಸ್ಫೋಟಕ ಆಟ ಪ್ರದರ್ಶಿಸಲು ಹೊರಟ ಸರ್ಫರಾಜ್ (17) ಸಹ ಜಡೇಜ ಸ್ಪಿನ್ ಮೋಡಿಗೆ ಬೆಪ್ಪಾಗಿ ಪೆವಿಲಿಯನ್ ಸೇರಿದ್ದರು. ಮೊದಲ ಹತ್ತು ಓವರ್‌ಗಳಲ್ಲಿ ಸಿಎಸ್‌ಕೆ ಸ್ಕೋರ್ 6 ವಿಕೆಟ್ ನಷ್ಟಕ್ಕೆ 70 ರನ್, ಮುಂದಿನ 10 ಓವರ್‌ಗಳಲ್ಲಿ ಸಿಎಸ್‌ಕೆ ಕಲೆಹಾಕಿದ ರನ್ ಕೇವಲ 57 ರನ್.

ಓವರ್‌ಟನ್ ಹೋರಾಟ ವ್ಯರ್ಥ: ಇಂಗ್ಲೆಂಡ್ ಬ್ಯಾಟರ್ ಜೇಮಿ ಓವರ್‌ಟನ್ ಅವರ ಏಕಾಂಗಿ ಹೋರಾಟದ ಫಲವಾಗಿ ಸಿಎಸ್‌ಕೆ ಸ್ಕೋರ್ 120 ದಾಟಿತು. 36 ಎಸೆತಗಳನ್ನು ಎದುರಿಸಿದ್ದ ಓವರ್‌ಟನ್ 2 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ 43 ರನ್ ಗಳಿಸಿದ್ದು, ಕೊನೆಯ ಓವರ್‌ನಲ್ಲಿ ಎರಡನೇ ರನ್ ಕಸಿಯುವ ಯತ್ನದಲ್ಲಿ ರನೌಟಾಗಿದ್ದರು.

ಸಂಕ್ಷಿಪ್ತ ಸ್ಕೋರ್

ಚೆನ್ನೈ ಸೂಪರ್ ಕಿಂಗ್ಸ್ 127/10 (19.4)
ಓವರ್‌ಟನ್ 43(36), ಕಾರ್ತಿಕ್ 18(15), ಸರ್ಫರಾಜ್ 17(12), ಆರ್ಚರ್ 19ಕ್ಕೆ 2, ಬರ್ಗರ್ 26ಕ್ಕೆ 2, ಜಡೇಜ 18ಕ್ಕೆ 2
ರಾಜಸ್ಥಾನ್ ರಾಯಲ್ಸ್ 128/2 (12.1)
ಜೈಸ್ವಾಲ್ 38(36)*, ವೈಭವ್ 52(17), ಜ್ಯೂರೆಲ್ 18(9), ಪರಾಗ್ 14(11)*
ಕಂಬೋಜ್ 27ಕ್ಕೆ 2

ಭಾರತ ಟಿ20 ತಂಡದಿಂದ ಕಡೆಗಣಿಸಲ್ಪಟ್ಟ ಐಕಾನ್ ಆಟಗಾರರ ನಡುವೆ ಸ್ಪರ್ಧೆ

ಕಿಂಗ್ಸ್ ತವರಿನಲ್ಲಿ ಟೈಟನ್ಸ್ ಕದನ

ಚಂಡೀಗಢ: ಐಪಿಎಲ್ 19ನೇ ಆವೃತ್ತಿಯ ನಾಲ್ಕನೇ ಪಂದ್ಯದಲ್ಲಿ ಮಂಗಳವಾರ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ಮತ್ತು ಶುಭ್ಮನ್ ಗಿಲ್ ನೇತೃತ್ವದ ಗುಜರಾತ್ ಟೈಟನ್ಸ್ ಸೆಣಸಾಡಲಿವೆ. ಪಂಜಾಬ್ ತನ್ನ ತವರಿನ ಗೆಲುವಿನ ದಾಖಲೆ ಉತ್ತಮಗೊಳಿಸಲು ಹೋರಾಡಲಿದೆ.

ಟಿ20 ರಾಷ್ಟ್ರೀಯ ತಂಡದಿಂದ ಕಡೆಗಣಿಸಲ್ಪಟ್ಟ ಬ್ಯಾಟರ್‌ಗಳಾದ ಶುಭ್ಮನ್ ಮತ್ತು ಶ್ರೇಯಸ್ ಸದ್ಯ ಐಪಿಎಲ್‌ನಲ್ಲಿ ಫ್ರಾಂಚೈಸಿಗಳ ನಾಯಕತ್ವ ವಹಿಸಿದ್ದು, ಮಂಗಳವಾರ ಚಂಡೀಗಢದಲ್ಲಿ ನಡೆಯಲಿರುವ ಹೈ-ವೋಲ್ಟೇಜ್ ಆರಂಭಿಕ ಪಂದ್ಯದಲ್ಲಿ ಸಾಮರ್ಥ್ಯ ಪ್ರದರ್ಶನಕ್ಕೆ ಸಿದ್ಧರಾಗಿದ್ದಾರೆ.

ಹೊಸ ಆವೃತ್ತಿಯಲ್ಲಿ ಶುಭಾರಂಭಕ್ಕಾಗಿ ಸೆಣಸಾಟ

ಟೈಟನ್ಸ್‌ನಲ್ಲಿ ಜೋಸ್ ಬಟ್ಲರ್, ಸಾಯಿ ಸುದರ್ಶನ್‌ ಸೇರಿದಂತೆ ಬಲಿಷ್ಠ ಬ್ಯಾಟಿಂಗ್ ಇರುವ ಸ್ಥಿರ ತಂಡವೆಂದೇ ಪರಿಗಣಿಸಲ್ಪಟ್ಟಿದೆ. ಪ್ರಭ್‌ಸಿಮ್ರನ್ ಸಿಂಗ್ ಮತ್ತು ಪ್ರಿಯಾಂಶ್ ಆರ್ಯಾ ಅವರ ಸ್ಫೋಟಕ ಆರಂಭಿಕ ಜೋಡಿ ಪಂಜಾಬ್ ಕಿಂಗ್ಸ್‌ನಲ್ಲಿದೆ. ಬ್ಯಾಟಿಂಗ್ ಆಲ್‌ರೌಂಡರ್ ಮಾರ್ಕಸ್ ಸ್ಟೊಯ್ನಿಸ್, ಲೆಗ್ ಸ್ಪಿನ್ನರ್ ಯುಜ್ವೇಂದ್ರ ಚಹಲ್ ಅವರಂತಹ ಅನುಭವಿ ಟಿ20 ಆಟಗಾರರಿದ್ದಾರೆ.

ಶುಭ್ಮನ್‌ಗೆ ಟಿ20 ಅಗ್ನಿಪರೀಕ್ಷೆ: ಭಾರತದ ಟೆಸ್ಟ್ ಮತ್ತು ಏಕದಿನ ನಾಯಕ ಗಿಲ್, ಟಿ20 ಉಪನಾಯಕನಾಗಿ ನೇಮಕಗೊಂಡಿದ್ದರೂ ಕಳಪೆ ಬ್ಯಾಟಿಂಗ್ ಪ್ರದರ್ಶನದ ಕಾರಣದಿಂದ ಟಿ20 ವಿಶ್ವಕಪ್ ತಂಡದಿಂದ ಹೊರಗುಳಿಯಬೇಕಾಯಿತು. ಹೀಗಾಗಿ ಟಿ20 ಮಾದರಿಯಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಬೇಕಾದ ಒತ್ತಡದಲ್ಲಿದ್ದಾರೆ. ಭಾರತವು ದಾಖಲೆಯ ಮೂರನೇ ಐಸಿಸಿ ಟಿ20 ವಿಶ್ವಕಪ್ ಗೆದ್ದಿದ್ದರೂ, ಗಿಲ್ ಈ ಆವೃತ್ತಿಯಲ್ಲಿ ತನ್ನ ಟಿ20 ವೃತ್ತಿಜೀವನದ ಮಹತ್ವದ ಹಂತದಲ್ಲಿ ಪ್ರವೇಶಿಸುತ್ತಿದ್ದಾರೆ.

2023ರಿಂದ ಈವರೆಗೆ ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ ಮಾತ್ರ ಗಿಲ್‌ಗಿಂತ ಹೆಚ್ಚು ರನ್ ಗಳಿಸಿದ್ದಾರೆ. ಆದರೆ ಗಮನ ಸ್ಥಿರತೆಯಿಂದ ಸ್ಟ್ರೈಕ್‌ರೇಟ್ ಕಡೆಗೆ ತಿರುಗಿದೆ. ಮ್ಯಾಥ್ಯೂ ಹೇಡನ್ ಟೈಟನ್ಸ್ ಹೊಸ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದು, ಗಿಲ್ ಸಿಕ್ಸರ್ ಹೊಡೆಯುವ ಸಾಮರ್ಥ್ಯ ಮತ್ತು ಆರಂಭಿಕ ಹಂತದಲ್ಲಿನ ಆಕ್ರಮಣಕಾರಿ ಇರಾದೆ ಮೇಲೆ ಹೆಚ್ಚಿನ ಗಮನವಿರಲಿದೆ.

ಪಿಚ್ ರಿಪೋರ್ಟ್

ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಸ್ಟೇಡಿಯಂ ಸಮತೋಲನದ ಪಿಚ್ ಹೊಂದಿದ್ದು, ಇಲ್ಲಿ ತಂಡಗಳು 180ರಿಂದ 200 ರನ್ ಸ್ಕೋರ್ ಮಾಡುವ ನಿರೀಕ್ಷೆಯಿದೆ. ದ್ವಿತೀಯ ಇನ್ನಿಂಗ್ಸ್‌ನಲ್ಲಿ ಮಂಜಿನ ಹನಿ ಬೀಳುವ ಕಾರಣ ಬೌಲಿಂಗ್ ಕಷ್ಟವಾಗಲಿದ್ದು, ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡುವ ಸಾಧ್ಯತೆಯಿದೆ.

ಪಂದ್ಯದ ಮಾಹಿತಿ
(ಪಂಜಾಬ್-ಗುಜರಾತ್), ಚಂಡೀಗಢ, ಸಂಜೆ 7.30ಕ್ಕೆ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್





ಟೈಟನ್ಸ್‌ಗೆ ಸುದರ್ಶನ ಬಲ

ಗುಜರಾತ್ ಟೈಟನ್ಸ್ ಅತ್ಯಂತ ಸಮತೋಲನದ ತಂಡವಾಗಿ ಕಾಣಿಸಿಕೊಂಡಿದೆ. 20 ಆಟಗಾರರನ್ನು ಉಳಿಸಿಕೊಂಡಿದ್ದು ಟೈಟನ್ಸ್ ಸ್ಥಿರತೆಯನ್ನು ತೋರಿಸುತ್ತದೆ. ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಆರಂಭಿಕ ಜೋಡಿ ಗುಜರಾತ್ ತಂಡದ ಪ್ರಮುಖ ಶಕ್ತಿ. 2025ರ ಆರೆಂಜ್ ಕ್ಯಾಪ್ ಪಡೆದಿದ್ದ ಸುದರ್ಶನ್ 1 ಶತಕ ಮತ್ತು 6 ಅರ್ಧಶತಕಗಳ ಸಹಿತ ಒಟ್ಟು 759 ರನ್ ಕಲೆಹಾಕಿದ್ದರು. ನಾಲ್ಕನೇ ಸ್ಥಾನದಲ್ಲಿದ್ದ ಶುಭ್ಮನ್ ಗಿಲ್ 6 ಅರ್ಧಶತಕಗಳೊಂದಿಗೆ 650 ರನ್ ಪೇರಿಸಿದ್ದರು. ಪಕ್ಕೆಲುಬಿನ ಗಾಯದಿಂದ ಮರಳಿದ ಸುದರ್ಶನ್, ಗಾಯಕ್ಕೂ ಮೊದಲು ದೇಶೀಯ ಕ್ರಿಕೆಟ್‌ನಲ್ಲಿ ಶತಕ (ಔಟಾಗದೆ 101) ಮತ್ತು ಹಲವು ಅರ್ಧಶತಕಗಳೊಂದಿಗೆ ಉತ್ತಮ ಫಾರ್ಮ್‌ನಲ್ಲಿ ಇದ್ದರು.

ಬೌಲಿಂಗ್: ವೇಗಿಗಳಾದ ಮೊಹಮ್ಮದ್ ಸಿರಾಜ್, ಕನ್ನಡಿಗ ಪ್ರಸಿದ್ಧ್ ಕೃಷ್ಣ, ಕಗಿಸೋ ರಬಾಡ ಮತ್ತು ಅನುಭವಿ ಇಶಾಂತ್ ಶರ್ಮಾ ಅವರಿದ್ದಾರೆ. ಆಫ್‌ಸ್ಪಿನ್ ಮಾಂತ್ರಿಕ ರಶೀದ್ ಖಾನ್ ತಂಡದಲ್ಲಿದ್ದು, ಅಗತ್ಯಬಿದ್ದಾಗ ಬ್ಯಾಟ್ ಬೀಸಿ ಸಿಕ್ಸರ್ ಹೊಡೆಯುವ ಸಾಮರ್ಥ್ಯ ಹೊಂದಿದ್ದಾರೆ.

ಪಂಜಾಬ್‌ಗೆ ಅಯ್ಯರ್ ಕಿಂಗ್

ಪಂಜಾಬ್ ಕಿಂಗ್ಸ್ ತಂಡಕ್ಕೆ ಮತ್ತೆ ನಾಯಕ ಶ್ರೇಯಸ್ ಅಯ್ಯರ್ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಅವರು ಈಗಾಗಲೇ ಮೂರು ವಿಭಿನ್ನ ತಂಡಗಳನ್ನು ಫೈನಲ್‌ಗೆ ಕೊಂಡೊಯ್ದಿರುವ ನಾಯಕ (2020ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್, 2024ರಲ್ಲಿ ಕೆಕೆಆರ್, ಮತ್ತು ಕಳೆದ ಸೀಸನ್‌ನಲ್ಲಿ ಪಂಜಾಬ್ ಕಿಂಗ್ಸ್). ನಿರಂತರ ಉತ್ತಮ ಪ್ರದರ್ಶನ ನೀಡಿದ್ದರೂ, ಅಜಿತ್ ಆಗರ್ಕರ್ ನೇತೃತ್ವದ ಆಯ್ಕೆ ಸಮಿತಿಯಿಂದ ಶ್ರೇಯಸ್ ಇನ್ನೂ ಕಡೆಗಣಿಸಲ್ಪಡುತ್ತಿದ್ದಾರೆ. ಅವರು ಕೊನೆಯ ಬಾರಿ ಡಿಸೆಂಬರ್ 2023ರಲ್ಲಿ ಟಿ20 ಅಂತಾರಾಷ್ಟ್ರೀಯ ಪಂದ್ಯವನ್ನು ಆಡಿದ್ದರು.

ಕಳೆದ ಆವೃತ್ತಿಯಲ್ಲಿ ಶ್ರೇಯಸ್ 604 ರನ್ ಗಳಿಸಿ, 175ಕ್ಕಿಂತ ಹೆಚ್ಚು ಸ್ಟ್ರೈಕ್‌ರೇಟ್‌ನಲ್ಲಿ ಸ್ಫೋಟಕ ಪ್ರದರ್ಶನ ನೀಡಿದ್ದರು. ಅಯ್ಯರ್ ಸ್ಟ್ರೈಕ್‌ರೇಟ್ ಕಳೆದ ಆವೃತ್ತಿಯ ಅಗ್ರ-10 ಅತ್ಯಧಿಕ ರನ್ ಸ್ಕೋರರ್‌ಗಳಲ್ಲೇ ಅತ್ಯಧಿಕವಾಗಿದ್ದರೂ ಭಾರತದ ಏಷ್ಯಾ ಕಪ್ ಮತ್ತು ಟಿ20 ವಿಶ್ವಕಪ್ ತಂಡಗಳಲ್ಲಿ ಅವರಿಗೆ ಸ್ಥಾನ ಸಿಗಲಿಲ್ಲ.

ಬೌಲಿಂಗ್: ವೇಗಿ ಅರ್ಷದೀಪ್ ಸಿಂಗ್, ಕನ್ನಡಿಗ ವಿಜಯ್‌ಕುಮಾರ್ ವೈಶಾಕ್, ಬ್ರಾರ್ ಮತ್ತು ಲೆಗ್‌ಸ್ಪಿನ್ನರ್ ಚಹಲ್ ಬಲ ತುಂಬಲಿದ್ದಾರೆ. ಬೆನ್ನು ನೋವಿನಿಂದ ಚೇತರಿಸಿಕೊಂಡ ಬ್ಯಾಟಿಂಗ್ ಆಲ್‌ರೌಂಡರ್ ಕೂಪರ್ ಕ್ಯಾನೊಲಿ ಅವರಿಗೆ ಬೌಲಿಂಗ್ ಮಾಡದಂತೆ ಕ್ರಿಕೆಟ್ ಆಸ್ಟ್ರೇಲಿಯಾ ತಾಕೀತು ಮಾಡಿದೆ.

ಕಿರುಸುದ್ದಿ

ಪ್ರಸಿದ್ಧ ರಿಯಲ್ ಬೆಟಿಸ್ ಕ್ಲಬ್ ಶಿಬಿರಕ್ಕೆ ಫೆರ್ನಾಂಡಿಸ್

ಹೊಸದಿಲ್ಲಿ: ಭಾರತೀಯ ಮಹಿಳಾ ಫುಟ್ಬಾಲರ್ ವಲ್ಲೈನಾ ಫೆರ್ನಾಂಡಿಸ್ ಅವರ ಸ್ಪೇನ್‌ನ ಪ್ರಸಿದ್ಧ ರಿಯಲ್ ಬೆಟಿಸ್ ಕ್ಲಬ್‌ನ ಫುಟ್ಬಾಲ್ ತರಬೇತಿ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ. 16ರ ಹರೆಯದ ಭಾರತೀಯ ಆಟಗಾರ್ತಿ ವಲ್ಲೈನಾ, ಎಎಫ್‌ಸಿ 17 ವರ್ಷದೊಳಗಿನ ವನಿತೆಯರ ಏಷ್ಯಾ ಕಪ್ 2026ಕ್ಕೆ ಅರ್ಹತೆ ಪಡೆದ ಭಾರತ ಅ-17 ತಂಡದ ಸದಸ್ಯೆಯಾಗಿದ್ದಾರೆ.



ಬೆನ್ನುನೋವಿನ ಕಾರಣದಿಂದ ಬೌಲಿಂಗ್ ಮಾಡಿಲ್ಲ ಗ್ರೀನ್

ಮುಂಬೈ: ಕೋಲ್ಕತ ನೈಟ್ ರೈಡರ್ಸ್ (ಕೆಕೆಆರ್) ಪರ ಪದಾರ್ಪಣೆಗೈದ ದುಬಾರಿ ಬ್ಯಾಟಿಂಗ್ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್‌ರಿಗೆ ಬೌಲಿಂಗ್ ಯಾಕೆ ನೀಡಿಲ್ಲವೆಂಬ ಪ್ರಶ್ನೆಗೆ ನಾಯಕ ಅಜಿಂಕ್ಯಾ ರಹಾನೆ ಸ್ಪಷ್ಟನೆಯನ್ನು ನೀಡಿದ್ದಾರೆ. ಈ ಆವೃತ್ತಿಯ ಹರಾಜಿನಲ್ಲಿ 25.2 ಕೋಟಿ ರೂ. ದಾಖಲೆ ಬೆಲೆಗೆ ಕೆಕೆಆರ್ ಕ್ಯಾಮರೂನ್ ಗ್ರೀನ್ ಅವರನ್ನು ಖರೀದಿಸಿತ್ತು. ದುಬಾರಿ ಬೆಲೆ ನೀಡಿ ಖರೀದಿ ಮಾಡಿದ ಆಟಗಾರನನ್ನು ಆತನ ಸಾಮರ್ಥ್ಯಕ್ಕೆ ತಕ್ಕಂತ ಬಳಸಿಕೊಳ್ಳಬೇಕೆಂದು ಎಲ್ಲರ ಅಭಿಪ್ರಾಯವಾಗಿದೆ.

ಆದರೆ ಪಂದ್ಯದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗೆ ಉತ್ತರಿಸಿದ ರಹಾನೆ, ಗ್ರೀನ್ ಅವರಿಗೆ ಯಾಕೆ ಬೌಲಿಂಗ್ ಕೊಟ್ಟಿಲ್ಲವೆಂಬ ಪ್ರಶ್ನೆಯನ್ನು ನೀವು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ)ಗೆ ಕೇಳಬೇಕು. ದುರದೃಷ್ಟವಶಾತ್ ಅವರು ಬೌಲಿಂಗ್ ನಡೆಸುವಂತಿಲ್ಲ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಬೆನ್ನುನೋವಿನಿಂದ ಪೂರ್ತಿ ಗುಣಮುಖರಾಗದ ಕ್ಯಾಮರೂನ್ ಅವರಿಗೆ ಬೌಲಿಂಗ್ ಮಾಡದಂತೆ ಕ್ರಿಕೆಟ್ ಆಸ್ಟ್ರೇಲಿಯಾ ತಾಕೀತು ಮಾಡಿದೆ. ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಆಸೀಸ್ ತಂಡದ ಹಿತದೃಷ್ಟಿಯಿಂದ ತಮ್ಮ ಪ್ರಮುಖ ಆಟಗಾರ ಗ್ರೀನ್ ಬೆನ್ನುನೋವಿನಿಂದ ಸಂಪೂರ್ಣ ಗುಣಮುಖರಾಗುವವರೆಗೆ ಅವರಿಂದ ಬೌಲಿಂಗ್ ಮಾಡಿಸದಂತೆ ಕೆಕೆಆರ್ ಫ್ರಾಂಚೈಸಿಗೆ ಈಗಾಗಲೇ ಕ್ರಿಕೆಟ್ ಆಸ್ಟ್ರೇಲಿಯಾ ಮನವಿ ಮಾಡಿಕೊಂಡಿದೆ. ಇದೇ ಕಾರಣದಿಂದ ಗ್ರೀನ್ ಅವರಿಗೆ ಮುಂಬೈ ವಿರುದ್ಧ ಬೌಲಿಂಗ್ ನೀಡಿರಲಿಲ್ಲ. ಮುಂದಿನ ಎರಡು ವಾರಗಳೊಳಗೆ ಗ್ರೀನ್ ಪುನಃ ಬೌಲಿಂಗ್ ನಡೆಸಲು ಆರಂಭಿಸುವ ಸಾಧ್ಯತೆಯಿದೆ. ಆದರೆ ಸದ್ಯ ಕೆಕೆಆರ್ ಪರ ಬ್ಯಾಟ್ ಬೀಸಲಿದ್ದಾರೆ.

ಕ್ರಿಕೆಟ್ ಆಸ್ಟ್ರೇಲಿಯಾ ಸ್ಪಷ್ಟನೆ: ಕೆಕೆಆರ್ ನಾಯಕ ರಹಾನೆ ಪತ್ರಿಕಾಗೋಷ್ಠಿಯ ಬಳಿಕ ಕ್ರಿಕೆಟ್ ಆಸ್ಟ್ರೇಲಿಯಾವು ಗ್ರೀನ್‌ಗೆ ಬೌಲಿಂಗ್ ನೀಡದಿರುವ ಕುರಿತು ಸ್ಪಷ್ಟನೆಯನ್ನು ನೀಡಿದೆ. ಕ್ಯಾಮರೂನ್ ಅವರಿಗೆ ಬೆನ್ನುನೋವು ಇರುವುದರಿಂದ ಕೆಲವು ದಿನಗಳವರೆಗೆ ಬೌಲಿಂಗ್ ಮಾಡುವುದು ಸೂಕ್ತವಲ್ಲ. ಈ ಸಂಬಂಧ ಕೆಕೆಆರ್ ಜತೆ ಮಾತುಕತೆ ನಡೆಸಿದ್ದೇವೆ ಎಂದು ತಿಳಿಸಿದೆ.

ಯಶಸ್ಸಿನ ರಹಸ್ಯ ತಿಳಿಸಿದ ರಹಾನೆ: ಟೀಕೆಗಳಿಗೆ ತಲೆಕೆಡಿಸುವುದಿಲ್ಲ, ಯಾರನ್ನೂ ಮೆಚ್ಚಿಸಲೂ ನಾನು ಕ್ರಿಕೆಟ್ ಆಡುತ್ತಿಲ್ಲ, ಪಂದ್ಯದಿಂದ ಪಂದ್ಯಕ್ಕೆ ನನ್ನ ಆಟವನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದಲೇ ಮೈದಾನಕ್ಕೆ ಇಳಿಯುತ್ತೇನೆಯೇ ಹೊರತು ಯಾರಿಗೂ ಯಾವುದನ್ನೂ ಸಾಬೀತುಪಡಿಸಲು ಆಡುತ್ತಿಲ್ಲ, ಜನರು ನನ್ನ ಆಟ ನೋಡುತ್ತಾರೆ, ಮಾತನಾಡುತ್ತಾರೆ, ಅವರಿಗೆ ಮಾತನಾಡಲು ಬಿರಬೇಕು ಎಂದು 37 ವರ್ಷದ ರಹಾನೆ ಪ್ರತಿಕ್ರಿಯಿಸಿದ್ದಾರೆ.

2012ರ ಬಳಿಕ ಆರಂಭಿಕ ಪಂದ್ಯ ಗೆದ್ದ ಮುಂಬೈ | ರೋಹಿತ್, ರಿಕ್ಕೆಲ್ಟನ್ ಮಿಂಚು

ಮುಂಬೈಗೆ 6 ವಿಕೆಟ್ ಗೆಲುವು

ಮುಂಬೈ: ಮಾಜಿ ನಾಯಕ ರೋಹಿತ್ ಶರ್ಮಾ (78) ಮತ್ತು ರಿಯಾನ್ ರಿಕ್ಕೆಲ್ಟನ್ (81) ಅಬ್ಬರದ ಅರ್ಧಶತಕಗಳ ನೆರವಿನಿಂದ ಮುಂಬೈ ಇಂಡಿಯನ್ಸ್, ಕೆಕೆಆರ್ ವಿರುದ್ಧ 5 ಎಸೆತಗಳು ಉಳಿದಿರುವಂತೆಯೇ 6 ವಿಕೆಟ್‌ಗಳ ಜಯ ಸಾಧಿಸಿತು. ಕಳೆದ 13 ಆವೃತ್ತಿಗಳಲ್ಲಿ ಆರಂಭಿಕ ಪಂದ್ಯಗಳ ಸೋಲಿನ ಸರಣಿಯನ್ನು ಮುಂಬೈ ಈ ಪಂದ್ಯ ಗೆದ್ದು ಮುರಿದಿದೆ.

2012ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದ ಬಳಿಕ ಕಳೆದ ಆವೃತ್ತಿಯವರೆಗೆ ಎಲ್ಲಾ ಆರಂಭಿಕ ಪಂದ್ಯಗಳನ್ನು ಸೋತಿದ್ದ ಮುಂಬೈ, 221 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟುವಲ್ಲಿ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. 19.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 224 ರನ್ ಕಲೆಹಾಕುವುದರೊಂದಿಗೆ ಮುಂಬೈ ಗೆಲುವು ಸಾಧಿಸಿತು. ಸಮತಟ್ಟಾದ ಪಿಚ್‌ನಲ್ಲಿ ಶಾರ್ದೂಲ್ ಠಾಕೂರ್ (39ಕ್ಕೆ 3) ನಿರಂತರ ಪ್ರಮುಖ ವಿಕೆಟ್‌ಗಳನ್ನು ಕಬಳಿಸುವ ಮೂಲಕ ಕೆಕೆಆರ್ ರನ್ ಗತಿಯನ್ನು ಕಡಿತಗೊಳಿಸಿದರು ಹಾಗೂ ಮುಂಬೈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.




ಮಿಂಚಿದ ಹಿಟ್‌ಮ್ಯಾನ್, ರಿಕ್ಕೆಲ್ಟನ್: ಕಳೆದ ಐಪಿಎಲ್‌ನ ನಂತರ ತನ್ನ ಮೊದಲ ಟಿ20 ಪಂದ್ಯ ಆಡಿದ ರೋಹಿತ್, 38 ಚೆಂಡುಗಳಲ್ಲಿ 6 ಸಿಕ್ಸರ್ ಮತ್ತು 6 ಬೌಂಡರಿಗಳೊಂದಿಗೆ 78 ರನ್ ಗಳಿಸಿ ಮತ್ತಷ್ಟು ಆಕ್ರಮಣಕಾರಿ ಆಟವನ್ನು ತೋರಿಸಿದರು. ಇನ್ನೊಂದು ತುದಿಯಲ್ಲಿ ರಿಕ್ಕೆಲ್ಟನ್ 43 ಎಸೆತಗಳಲ್ಲಿ 8 ಸಿಕ್ಸರ್ ಮತ್ತು 4 ಬೌಂಡರಿಗಳೊಂದಿಗೆ 81 ರನ್ ಸಿಡಿಸಿ, ದೊರೆತ ಎರಡು ಜೀವದಾನಗಳನ್ನು ಸದುಪಯೋಗಪಡಿಸಿ ಮುಂಬೈಗೆ ಮೊದಲ ಪಂದ್ಯದಲ್ಲೇ ಅಮೂಲ್ಯ ಎರಡು ಅಂಕಗಳನ್ನು ತಂದುಕೊಟ್ಟರು. ರೋಹಿತ್ ಮತ್ತು ರಿಕ್ಕೆಲ್ಟನ್ 72 ಚೆಂಡುಗಳಲ್ಲಿ 148 ರನ್‌ಗಳ ಜತೆಯಾಟ ಆಡಿದ್ದರು.

ಯಾನಿಕ್ ಸಿನ್ನರ್, ಸೆಬಲೆಂಕಾಗೆ ಮಯಾಮಿ ಕಿರೀಟ

ಮಯಾಮಿ: ಇತ್ತೀಚೆಗೆ ಇಂಡಿಯನ್ ವೆಲ್ಸ್‌ನಲ್ಲಿ ಚಾಂಪಿಯನ್ನರಾಗಿ ಹೊರಹೊಮ್ಮಿದ್ದ ಇಟಲಿಯ ಯಾನಿಕ್ ಸಿನ್ನರ್ ಹಾಗೂ ಸರ್ಬಿಯಾದ ಆರೀನಾ ಸೆಬಲೆಂಕಾ, ಮಯಾಮಿ ಓಪನ್‌ನಲ್ಲೂ ಚಾಂಪಿಯನ್ ಕಿರೀಟ ಮುಡಿಗೇರಿಸಿದ್ದಾರೆ. ಒಂದೇ ಋತುವಿನಲ್ಲಿ ಅಮೆರಿಕದಲ್ಲಿ ಸತತ ಎರಡು ಟೂರ್ನಿಗಳಲ್ಲಿ ಪ್ರಶಸ್ತಿ ಮುಡಿಗೇರಿಸಿದ ಸಾಧನೆಗೈದರು.

ಒಂದೇ ಋತುವಿನಲ್ಲಿ ಅಮೆರಿಕದಲ್ಲಿ ಸತತ ಎರಡು ಪ್ರಶಸ್ತಿ ಗೆದ್ದ ದ್ವಿತೀಯ ಪುರುಷ ಟೆನಿಸಿಗನೆಂಬ ದಾಖಲೆ ಬರೆದಿದ್ದಾರೆ. ಈ ಹಿಂದೆ 2017ರಲ್ಲಿ ರೋಜರ್ ಫೆಡರರ್ ಈ ದಾಖಲೆಯನ್ನು ಬರೆದಿದ್ದರು. ಆದರೆ ಎರಡೂ ಟೂರ್ನಿಗಳಲ್ಲಿ ಒಂದೂ ಸೆಟ್ ಸೋಲದೆ ಈ ಸಾಧನೆಗೈದ ಮೊದಲ ಪುರುಷರ ಆಟಗಾರನೆಂಬ ದಾಖಲೆಯನ್ನು ಸಿನ್ನರ್ ಬರೆದಿದ್ದಾರೆ.





ಭಾನುವಾರ ತಡರಾತ್ರಿ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ತವರಿನ ಆಟಗಾರ್ತಿ ಕೊಕೊ ಗಾಫ್ ಅವರನ್ನು ಸೋಲಿಸುವ ಮೂಲಕ ಸೆಬಲೆಂಕಾ ಪ್ರಶಸ್ತಿಗೆ ಮುತ್ತಿಟ್ಟರು. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಜಿರಿ ಲೆಹೆಕ್ಕಾರನ್ನು 6-4, 6-4 ನೇರ ಸೆಟ್‌ಗಳ ಅಂತರದಿಂದ ಮಣಿಸಿದ ಸಿನ್ನರ್ ಚಾಂಪಿಯನ್ ಆದರು. ಇಂಡಿಯನ್ ವೆಲ್ಸ್ ಮತ್ತು ಮಯಾಮಿ ಓಪನ್ ಗೆದ್ದ 8ನೇ ಪುರುಷ ಆಟಗಾರನೆಂಬ ದಾಖಲೆಯನ್ನು ಬರೆದಿದ್ದಾರೆ. 2016ರಲ್ಲಿ ಜೊಕೊವಿಚ್ ಮತ್ತು ವಿಕ್ಟೋರಿಯಾ ಅಜರೆಂಕಾ ಈ ಸಾಧನೆಗೈದ ನಂತರ ಸಿನ್ನರ್ ಮತ್ತು ಸೆಬಲೆಂಕಾ ಅವರು ಒಂದೇ ಋತುವಿನಲ್ಲಿ ದಾಖಲೆ ಬರೆದಿದ್ದಾರೆ. ಫೈನಲ್ ಪಂದ್ಯದಲ್ಲಿ ಗಾಫ್‌ರನ್ನು 6-2, 4-6, 6-3 ಸೆಟ್‌ಗಳ ಅಂತರದಿಂದ ಸೆಬಲೆಂಕಾ ಸೋಲಿಸಿದ್ದಾರೆ.

2025ನೇ ಸಾಲಿನ ಸಾಧನೆ ಪರಿಗಣಿಸಿ ಘೋಷಣೆ

ಶೀತಲ್ ದೇವಿ ಜಗತ್ತಿನ ಶ್ರೇಷ್ಠ ಪ್ಯಾರಾ ಆರ್ಚರ್



> ವಿಶ್ವದ ಅಗ್ರ-6 ಪ್ಯಾರಾ ಆರ್ಚರ್‌ಗಳ ಸಾಲಿನಲ್ಲಿ ನಾಮನಿರ್ದೇಶನದ ಗೌರವ ಪಡೆದಿದ್ದು, ಇದೀಗ ವರ್ಷದ ಶ್ರೇಷ್ಠ ಪ್ಯಾರಾ ಆರ್ಚರ್ ಎಂದು ವಿಶ್ವ ಆರ್ಚರಿ ಘೋಷಿಸಿರುವುದು ನನಗೆ ಬಹಳ ಆನಂದವನ್ನು ನೀಡಿದೆ. ಹೃದಯಪೂರ್ವಕ ಕೃತಜ್ಞತೆಗಳು.
> ■ ಶೀತಲ್ ದೇವಿ, ಪ್ಯಾರಾ ಆರ್ಚರ್.

ಹೊಸದಿಲ್ಲಿ: ಭಾರತದ ಶೀತಲ್ ದೇವಿ ಅವರನ್ನು 2025ನೇ ಸಾಲಿನ ಶ್ರೇಷ್ಠ ಪ್ಯಾರಾ ಆರ್ಚರ್ ಎಂದು ವಿಶ್ವ ಆರ್ಚರಿ ಘೋಷಿಸಿದೆ. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಸ್ವರ್ಣ ಗೆಲ್ಲುವುದರೊಂದಿಗೆ ಒಟ್ಟಾರೆ ಅವರ ಅಂತಾರಾಷ್ಟ್ರೀಯ ಆರ್ಚರಿ ಪ್ರದರ್ಶನವನ್ನು ಗಮನದಲ್ಲಿಟ್ಟು, ಶೀತಲ್ ಹೆಸರನ್ನು ಆಯ್ಕೆ ಮಾಡಿದೆ.

ಜಮ್ಮು ಕಾಶ್ಮೀರದ 19ರ ಹರೆಯದ ಪ್ಯಾರಾ ಆರ್ಚರ್ ಶೀತಲ್ ದೇವಿ ಅವರು ವಿಶ್ವ ಪ್ಯಾರಾ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಸ್ವರ್ಣ ಪದಕ ಗೆದ್ದ ಮೊದಲ ಮತ್ತು ಏಕೈಕ ಭಾರತೀಯ ಪ್ಯಾರಾ ಆರ್ಚರ್ ಎಂಬ ದಾಖಲೆಯನ್ನು ಬರೆದಿದ್ದರು. ಕಳೆದ ವರ್ಷ ದಕ್ಷಿಣ ಕೊರಿಯಾದ ಗ್ವಾಂಗ್ಜುನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಶಿಪ್‌ನ ಮಹಿಳೆಯರ ಕಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದ್ದರು.

ಜನ್ಮತಃ ಕೈಗಳಿಲ್ಲದ ಶೀತಲ್ ತಮ್ಮ ಕಾಲುಗಳು ಮತ್ತು ಭುಜದ ಸಹಾಯದಿಂದ ಪ್ಯಾರಾ ಆರ್ಚರಿಯಲ್ಲಿ ಸಾಧನೆಗೈದಿದ್ದಾರೆ. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಮಹಿಳಾ ತಂಡದ ರಜತ ಮತ್ತು ಮಿಶ್ರ ತಂಡದ ಕಂಚಿನ ಪದಕವನ್ನೂ ಗೆದ್ದಿದ್ದಾರೆ. ಇವುಗಳಲ್ಲದೆ, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮಿಶ್ರ ತಂಡ ಕಂಚು, ಬ್ಯಾಂಕಾಕ್‌ನಲ್ಲಿ ನಡೆದ 2022ರ ಏಷ್ಯನ್ ಪ್ಯಾರಾ ಗೇಮ್ಸ್ ಮತ್ತು 2023ರ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ರಜತ ಪದಕಗಳನ್ನು ಗೆದ್ದುಕೊಂಡಿದ್ದರು.


> ಗ್ವಾಂಗ್ಜುನಲ್ಲಿ ವಿಶ್ವ ಕಿರೀಟವನ್ನು ಮುಡಿಗೇರಿಸುವುದರ ಜತೆಗೆ ಕಳೆದ ಋತುವಿನಲ್ಲಿ ಅದ್ಭುತ ಪ್ರದರ್ಶನ ನೀಡಿದ ಭಾರತದ ಶೀತಲ್ ದೇವಿಯವರು ವರ್ಷದ ಶ್ರೇಷ್ಠ ಪ್ಯಾರಾ ಆರ್ಚರ್ ಗೌರವವನ್ನು ಸಂಪಾದಿಸಿದ್ದಾರೆ.
> ■ ವಿಶ್ವ ಆರ್ಚರಿ ಸಂಸ್ಥೆ

ಮುಂಬೈನಲ್ಲಿ ಟಾಸ್ ಫಿಕ್ಸಿಂಗ್?

ಮುಂಬೈ: ವಾಂಖೇಡೆ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ ನೈಟ್ ರೈಡರ್ಸ್ ನಡುವಿನ ಐಪಿಎಲ್ ಪಂದ್ಯ ಹಲವು ಕಾರಣಗಳಿಗೆ ಸುದ್ದಿಯಾಗಿದ್ದು, ಅದರಲ್ಲಿ ಟಾಸ್ ವಿವಾದವೇ ಪ್ರಮುಖ ವಿಚಾರವಾಗಿದೆ. ಮುಂಬೈ 300ನೇ ಪಂದ್ಯದಲ್ಲಿ ಟಾಸ್ ಫಿಕ್ಸಿಂಗ್ ನಡೆಸಿರುವ ಬಗ್ಗೆ ಕ್ರಿಕೆಟ್ ಅಭಿಮಾನಿಗಳು ಸಂಶಯ ವ್ಯಕ್ತಪಡಿಸಿದ್ದಾರೆ. ಟಾಸ್ ಸಮಯದಲ್ಲಿ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ, ಕೆಕೆಆರ್ ನಾಯಕ ಅಜಿಂಕ್ಯಾ ರಹಾನೆ, ಮ್ಯಾಚ್ ರೆಫರಿ ಮತ್ತು ವೀಕ್ಷಕ ವಿವರಣೆಗಾರ ರವಿ ಶಾಸ್ತ್ರಿ ಸ್ಥಳದಲ್ಲಿದ್ದರು. ಪಾಂಡ್ಯ ನಾಣ್ಯ ಹಾರಿಸಿದ್ದು, ಟೇಲ್ಸ್ ಎಂಬುದು ಸ್ಪಷ್ಟವಾಗಿ ರಹಾನೆ ಅವರ ಕರೆಯಾಗಿತ್ತು. ಆದರೆ ನಾಣ್ಯ ನೆಲದಲ್ಲಿ ಬಿದ್ದಾಗ ಐಪಿಎಲ್ ಪ್ರಸಾರಕರು ಕ್ಯಾಮರಾ ಆ್ಯಂಗಲ್ ಬದಲಿಸಿದ್ದು, ವೀಕ್ಷಕರಿಗೆ ಏನೂ ಕಾಣಿಸಿಲ್ಲ. ಈ ವೇಳೆ ಮೈದಾನದ ದೊಡ್ಡ ಪರದೆಯಲ್ಲೂ ಏನೂ ಪ್ರಸಾರವಾಗಿಲ್ಲ. ಇದೇ ಸಂದರ್ಭ ಇನ್ನೂ ನಾಣ್ಯ ತೋರಿಸಿದಿದ್ದರೂ ಪಾಂಡ್ಯ, ನಾವು ಬೌಲಿಂಗ್ ಎಂದು ಅಸ್ಪಷ್ಟವಾಗಿ ಹೇಳಿದ ಆಡಿಯೋ ಪ್ರಸಾರವಾಗಿದೆ. ಇದಾದ ಬಳಿಕವಷ್ಟೇ ರವಿ ಶಾಸ್ತ್ರಿ, ಟಾಸ್ ನೀವು ಗೆದ್ದಿದ್ದೀರಿ ನಿಮ್ಮ ನಿರ್ಧಾರವೇನೆಂದು ಪಾಂಡ್ಯರನ್ನು ಕೇಳಿದ್ದಾರೆ. ಪಾಂಡ್ಯ ಬೌಲಿಂಗ್ ಆಯ್ದುಕೊಂಡಿದ್ದಾಗಿ ತಮ್ಮ ನಿರ್ಧಾರ ಪುನರುಚ್ಚರಿಸಿದ್ದಾರೆ. ಈ ಬಗ್ಗೆ ಕೆಕೆಆರ್ ನಾಯಕ ರಹಾನೆಯೂ ತುಟಿಪಿಟಿಕ್ ಅಂದಿಲ್ಲ, ಐಪಿಎಲ್ ಪ್ರಸಾರಕ ಜಿಯೋ ಹಾಟ್‌ಸ್ಟಾರ್ ಸಂಸ್ಥೆ, ಐಪಿಎಲ್ ಸಂಘಟಕರು ಐದು ಬಾರಿಯ ಚಾಂಪಿಯನ್ ಪರವಾಗಿದ್ದಾರೆ ಎಂದು ಕ್ರಿಕೆಟ್ ಅಭಿಮಾನಿಗಳು ಆರೋಪಿಸಿದ್ದರೆ, ಇನ್ನು ಕೆಲವರು ಇದನ್ನು ಫಿಕ್ಸಿಂಗ್ ನಡೆಸಿರುವುದಾಗಿ ಆರೋಪಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5939

ಎಡದಿಂದ ಬಲಕ್ಕೆ
3.ಒಂದೇ ಸ್ಥಳದಲ್ಲಿಟ್ಟ ದೀಪ (5)
5.ಗುರುವಿನ ನಡುವೆ ಹೂಂಕರಿಸುವಿಕೆಯಿದೆ (3)
6.ಹಿಂದೂಸ್ತಾನಿ ಸಂಗೀತದಲ್ಲಿ ಬಳಸುವ ಚರ್ಮವಾದ್ಯ (3)
7.ಕೈಯಲ್ಲಿ ಹುಟ್ಟಿದುದು- ಕೈಯಿಂದ ಮಾಡಿದುದು (3)
9.ಶತ್ರುಗಳು ಯುದ್ಧ ಮಾಡುವ ಬಯಲು (4)
11.ಆಲಸ್ಯ-ಸೋಮಾರಿತನದಿಂದ ಕೂಡಿದ್ದು (4)
14.ಖರ್ಜೂರದಂತೆ ಸಿಹಿಹಣ್ಣು ಕೊಡುವ ಮರ (3)
16.ಕಲ್ಲು ಕಡೆದು ವಿಗ್ರಹ ಮಾಡುವವ ಉಲ್ಟಾ ಕುಳಿತಿದ್ದಾನೆ (3)
17.ಬಲಭಾಗ-ತೆಂಕಣ ದಿಕ್ಕಿದು (3)
18.ಹೆಬ್ಬಾಗಿಲು-ಮಹಾದ್ವಾರ (5)

ಮೇಲಿನಿಂದ ಕೆಳಕ್ಕೆ
1.ಹಾಡಿನ ಮೂಲಕ ಮನ ತಣಿಸುವವನು (5)
2.ಹಳೆಯ ಕಾಲದ ಹೆಬ್ಬೆರಳಿನ ಅಳತೆಯ ಪ್ರಮಾಣ (3)
3.ಅಸ್ತವ್ಯಸ್ತ-ಗೊಂದಲದಿಂದ ಕೂಡಿದ್ದು (4)
4.ಪ್ರಕಾಶಗೊಳಿಸುವಂಥಾದ್ದು ಒಂದು ರಾಗದ ಹೆಸರಾಗಿದೆ (3)
8.ವಿರಳವಾಗಿ ಹರಿಯುತ್ತಿರುವ ರಕ್ತ (3)
10.ದೇವರ-ಹಿರಿಯರ ಪಾದವಿಲ್ಲಿ ತಲೆಕೆಳಗಾಗಿದೆ (3)
12.ಕಾಲಿನಿಂದ ತಲೆಮುಡಿಯವರೆಗೆ-ಆಮೂಲಾಗ್ರವಾಗಿ (5)
13.ಶತ್ರು ನಗರಗಳನ್ನು ನಾಶ ಮಾಡಿದವನು (4)
15. ವಸ್ತು-ವ್ಯಕ್ತಿಯ ಗುರುತಿಸಲು ಸಹಕರಿಸುವ ಗುಣ (3)
16. ಲೆಕ್ಕಕ್ಕೆ ತೆಗೆದುಕೊಳ್ಳುವಿಕೆ (3)

5938 ಉತ್ತರ

ಎಡದಿಂದ ಬಲಕ್ಕೆ:
1.ಸಮಾಚಾರ 3.ಸುಲಿಗೆ
5.ವಾರ್ಧಕ 7.ಬಾಲಿಶ
8.ಮಧುಮತಿ 10.ಕಲಿತನ
12.ಸಂಕೋಲೆ 14.ಕುಟಿಲ
15.ಲಕೋಟೆ 16.ಕಬಳಿಸು

ಮೇಲಿನಿಂದ ಕೆಳಕ್ಕೆ :
1.ಸತ್ಯಾಂಶ 2.ಶನಿವಾರ
4.ಗೆಜ್ಜೆಪಂತಿ 6.ಮರುಕ
7.ಬಾನುಲಿ 9.ಮಸಾಲೆ
10.ಕಪಿಂಜಲ 11.ನರಕು
12.ಸಂಚಾಲಕ
13.ತೋರಿಸು

ಕಿರುಸುದ್ದಿ

ಮಹಾವೀರ ಜಯಂತಿ ಆಚರಣೆ



ಬ್ಯಾಡಗಿ: ಜೈನ ಧರ್ಮವು ಕ್ರಿ.ಶ. ಪೂರ್ವ 600 ರಲ್ಲೇ ಪ್ರಚಲಿತದಲ್ಲಿತ್ತು. ಭಗವಾನ ಮಹಾವೀರರ ವೈಜ್ಞಾನಿಕ ಬೋಧನೆಗಳಿಂದ ಇಂದಿನ ಆಧುನಿಕ ಯುಗದಲ್ಲೂ ಕೂಡ ಜೈನ ಧರ್ಮದ ತತ್ವ-ಸಂದೇಶಗಳು ಬಹು ಪ್ರಸ್ತುತವಾಗಿವೆ ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಅಭಿಪ್ರಾಯಪಟ್ಟರು. ಪಟ್ಟಣದ ತಾಲೂಕ ಕಚೇರಿ ಆವರಣದಲ್ಲಿ ಭಗವಾನ್ ಮಹಾವೀರರ ಜಯಂತ್ಯುತ್ಸವ ದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಒಂದು ಕ್ಷ ಣದ ಕೆಟ್ಟ ಘಟನೆ ಅಥವಾ ಸಂಗತಿ ಮರುಕ್ಷ ಣವೇ ಉತ್ತಮವಾಗಿರುವ ಸಾಧ್ಯತೆಯನ್ನು ಜೈನ ಧರ್ಮ ತೆರೆದಿಡುತ್ತದೆ. ಈ ತತ್ವವನ್ನು ಸರಿಯಾಗಿ ಅರಿತು ಆಚರಣೆಗೆ ತಂದಲ್ಲಿ ಬಹಳಷ್ಟು ಯುದ್ಧ, ಪರಸ್ಪರ ದ್ವೇಷ ಸಾಧನೆ, ಅಸೂಯೆಗಳನ್ನು ನಿಲ್ಲಿಸಬಹುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜೈನ ಸಂಘದ ಉಪಾಧ್ಯಕ್ಷ ಶಿವ ರಾಯಪ್ಪ ಅಪ್ಪಣ್ಣನವರ್, ತಾಲೂಕು ಕಾರ್ಯದರ್ಶಿ ಶಿವಾನಂದಪ್ಪ ಕಡೂರ್, ಹೈಕೋರ್ಟ್ ನ್ಯಾಯವಾದಿ ನಾಗರಾಜ್ ಅಪ್ಪಣ್ಣನವರ್, ಶಿಶು ಅಭಿವೃದ್ಧಿ ಅಧಿಕಾರಿ ಚಂದ್ರಶೇಖರ್, ಬಿಸಿಎಂ ಇಲಾಖೆಯ ಅಧಿಕಾರಿ ಪ್ರಸಾದಿಮಠ. ನಾಗರಾಜ್ ಗೂಳೇರ ತಹಶೀಲ್ದಾರ್ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಶಾಂತಿಯ ಸಂದೇಶ ಸಾರಿದ ಮಹಾವೀರ



ಹಾನಗಲ್ಲ: ಶಾಸಕ ಶ್ರೀನಿವಾಸ ಮಾನೆ ಅವರ ಇಲ್ಲಿನ ಜನಸಂಪರ್ಕ ಕಚೇರಿಯಲ್ಲಿ ಸೋಮವಾರ ಭಗವಾನ್ ಮಹಾವೀರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಶಾಸಕ ಮಾನೆ, ಭಗವಾನ್ ಮಹಾವೀರರು ಮಾನವಕುಲಕ್ಕೆ ನೀಡಿದ ಅಹಿಂಸೆ, ಸತ್ಯ ಮತ್ತು ಶಾಂತಿಯ ಸಂದೇಶಗಳು ಯುಗಾಂತರಗಳಿಗೂ ಮಾರ್ಗದರ್ಶಕವಾಗಿವೆ. ಮಹಾವೀರರ ತತ್ವಗಳು ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹಜೀವನವನ್ನು ಬಲಪಡಿಸುವ ಶಕ್ತಿಯಾಗಿದೆ. ಸತ್ಯದ ಮಾರ್ಗದಲ್ಲಿ ನಡೆದು ಪ್ರಾಮಾಣಿಕತೆಯಿಂದ ಜೀವನ ನಡೆಸಿದರೆ ಮಾತ್ರ ವ್ಯಕ್ತಿಯೂ, ಸಮಾಜವೂ ಅಭಿವೃದ್ಧಿ ಹೊಂದಲು ಸಾಧ್ಯ. ಅತಿಯಾದ ಆಸೆ-ಆಕಾಂಕ್ಷೆಗಳನ್ನು ತ್ಯಜಿಸಿ ಸರಳ ಜೀವನ ನಡೆಸುವುದು ಇಂದಿನ ಪೀಳಿಗೆಗೆ ಅತ್ಯಂತ ಅವಶ್ಯಕವಾಗಿದೆ. ಇದರಿಂದ ಮಾನಸಿಕ ಶಾಂತಿ ದೊರೆಯುವುದರ ಜೊತೆಗೆ ಸಮಾಜದಲ್ಲಿ ಸಮಾನತೆ ಬೆಳೆಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ನಗರ ಕಾಂಗ್ರೆಸ್ ಅಧ್ಯಕ್ಷರು, ಮುಖಂಡರು, ಜೈನ ಸಮಾಜದ ಪದಾಧಿಕಾರಿಗಳು ಇದ್ದರು.

ಪರಿವರ್ತನ ಕಲಿಕಾ ಕೇಂದ್ರಕ್ಕೆ ಭೇಟಿ



ಹಾನಗಲ್ಲ: ಪ್ರೀತಿ, ವಿಶ್ವಾಸ ತೋರಿ ಆಶೀರ್ವದಿಸಿದ ತಾಲೂಕಿನ ಜನರ ಋಣ ತೀರಿಸಲು, ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳ ಭವಿಷ್ಯ ಸದೃಢಗೊಳಿಸಲು ಹಾನಗಲ್‌ನಲ್ಲಿ ಪರಿವರ್ತನ ಕಲಿಕಾ ಕೇಂದ್ರ ತೆರೆದು ಸ್ಪರ್ಧಾತ್ಮಕ ಜಗತ್ತಿಗೆ ವಿದ್ಯಾರ್ಥಿಗಳು, ಯುವಕರನ್ನು ಸಜ್ಜುಗೊಳಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.ಇಲ್ಲಿನ ಗುರುಭವನದಲ್ಲಿನ ಪರಿವರ್ತನ ಕಲಿಕಾ ಕೇಂದ್ರದಲ್ಲಿ ನಡೆದಿರುವ ಸಿಇಟಿ, ನೀಟ್ ಉಚಿತ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಅವರು ಮಾತನಾಡಿದರು. ಕೇಂದ್ರದ ಆಡಳಿತಾಧಿಕಾರಿ ಪ್ರೊ.ಮಾರುತಿ ಶಿಡ್ಲಾಪೂರ ಮಾತನಾಡಿ, ಕಳೆದ 3 ವರ್ಷಗಳಿಂದ ಕೇಂದ್ರದಲ್ಲಿ ಸಿಇಟಿ, ನೀಟ್ ತರಬೇತಿ ಉಚಿತವಾಗಿ ನೀಡಲಾಗುತ್ತಿದೆ. ಜಾಗತಿಕ ಸ್ಪರ್ಧೆಯ ಎಲ್ಲ ರೀತಿಯ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಆತ್ಮಸ್ಥೈರ್ಯ ವಿದ್ಯಾರ್ಥಿಗಳಲ್ಲಿ ಮೂಡಿಸಲಾಗುತ್ತಿದೆ ಸ್ಥಳೀಯವಾಗಿ ದೊರಕಿಸುತ್ತಿರುವುದು ತಾಲೂಕಿನ ವಿದ್ಯಾರ್ಥಿಗಳ ಸೌಭಾಗ್ಯ ಎಂದರು. ವ್ಯವಸ್ಥಾಪಕ ಗಿರೀಶ ಅಂಬಿಗೇರ ಇದ್ದರು.



ನಗರದ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ನೇಮಿನಾಥ ದಿಗಂಬರ ಜೈನ್ ಮಂದಿರ ಕಮೀಟಿ ಸಹಯೋಗದಲ್ಲಿ ಆಯೋಜಿಸಲಾದ ಭಗವಾನ್ ಮಹಾವೀರ ಜಯಂತಿಯನ್ನು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ ಉದ್ಘಾಟಿಸಿದರು.

ಯಕ್ಷಗಾನ ಕಲೆ ಉಳಿಸುವ ಕಾರ್ಯವಾಗಲಿ

ಕುಮಟಾ: ಕಲಾವಿದ ಶಾಶ್ವತನಲ್ಲದೇ ಇರಬಹುದು, ಕಲೆ ಶಾಶ್ವತವಾದದ್ದು. ಯಕ್ಷಗಾನ ಸಮಾಜದ ಕಲೆ, ಅದನ್ನು ಉಳಿಸುವ ಕಾರ್ಯವೂ ಸಮಾಜದಿಂದಲೇ ಆಗಬೇಕು. ಯಕ್ಷಗಾನದ ಕವಿಗೆ ಕೆಲವು ಭಾವಗಳಿದೆ. ಆ ಭಾವವನ್ನು ಅರಿತು ಕಲಾವಿದ ಯಕ್ಷಗಾನದ ರಂಗ ಪ್ರಯೋಗ ನಡೆಸಬೇಕು. ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದೂ ಕಲಾವಿದರ ಜವಾಬ್ದಾರಿ ಎಂದು ಕಲಾಗಂಗೋತ್ರಿಯ ನಿಕಟಪೂರ್ವ ಅಧ್ಯಕ್ಷ, ನಿವೃತ್ತ ಉಪನ್ಯಾಸಕ ಡಾ. ಎಂ.ಆರ್ ನಾಯಕ ಅಭಿಪ್ರಾಯಪಟ್ಟರು. ಅವರು ಯಕ್ಷಗಾನ ಸಂಶೋಧನಾ ಕೇಂದ್ರದ ವತಿಯಿಂದ ಪಟ್ಟಣದ ಹವ್ಯಕ ಸಭಾಭವನದಲ್ಲಿ ನಡೆದ ಸನ್ಮಾನ ಹಾಗೂ ಯಕ್ಷಗಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಖ್ಯಾತ ವಿದ್ವಾಂಸ ಡಾ. ಗೋಪಾಲಕೃಷ್ಣ ಶರ್ಮಾ ಆತಿಥ್ಯ ವಹಿಸಿ ಮಾತನಾಡಿ, ಬುಧನ ಅನುಗ್ರಹ ಇದ್ದವನು ಕಲಾವಿದನಾಗುತ್ತಾನೆ. ಗುರುವೂ ಜೊತೆಗೆ ಸೇರಿದರೆ ಅವನು ಖ್ಯಾತ ಬರಹಗಾರ, ವಾಗ್ಮಿ ಆಗುವನು. ಡಾ.ಜಿ.ಎಲ್ ಹೆಗಡೆ ಯಕ್ಷಗಾನಕ್ಕಾಗಿ ತಮ್ಮನ್ನು ತೊಡಗಿಸಿಕೊಂಡವರು. ಅವರ ಜೀವನ, ಬರಹಗಳೇ ನಮ್ಮೆಲ್ಲರಿಗೆ ಪ್ರೇರಣೆ. ಇದೊಂದು ಸುವರ್ಣ ಕಾರ್ಯಕ್ರಮವಾಗಿದ್ದು, ಯಕ್ಷಗಾನದ ಚಂಡೆಯ ಶಬ್ದ ನಮ್ಮನ್ನು ಪುಳಕಗೊಳಿಸುವಂತಿದೆ. ಇದನ್ನು ಉಳಿಸಿಕೊಳ್ಳುವಲ್ಲಿ ನಾವೆಲ್ಲಾ ಶ್ರಮಿಸಬೇಕು ಎಂದರು. ಸೌರಭ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಭಟ್ಟ ಮಾತನಾಡಿದರು. ಯಕ್ಷಗಾನ ಸಂಶೋಧನಾ ಕೇಂದ್ರದ ಸಂಸ್ಥಾಪಕ ನಿರ್ದೇಶಕ ಡಾ. ಜಿ.ಎಲ್ ಹೆಗಡೆ ಸ್ವಾಗತಿಸಿ, ಕೇಂದ್ರದ ಕಾರ್ಯಗಳ ಬಗ್ಗೆ ವಿವರಿಸಿ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯದರ್ಶಿ ವಸಂತ ಭಟ್ಟ ವಂದಿಸಿದರು. ಸತ್ವಾಧಾರ ಫೌಂಡೇಶನ್‌ನ ಸಂಸ್ಥಾಪಕ ಗಣೇಶ ಜೋಶಿ ಸಂಕೊಳ್ಳಿ ನಿರೂಪಿಸಿದರು.



ರಾಣೇಬೆನ್ನೂರ: ನಗರದ ಹೊರವಲಯದ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬೆಂಗಳೂರಿನ ಪ್ರೆಷರ್ ಪ್ರೊಫೈಲ್ಸ್‌ನ ಮುಖ್ಯಸ್ಥರಾದ ಶಿವಪ್ರಸಾದ್ ಕಂಬಳಿಮಠ ರವರು ಮೂರನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉದ್ಯೋಗ ತರಬೇತಿ ನೀಡಿದರು. ಪ್ರಾಂಶುಪಾಲ ಡಾ.ಎಸ್. ಜಿ. ಮಾಕನೂರು, ಉದ್ಯೋಗ ಮತ್ತು ತರಬೇತಿ ಅಧಿಕಾರಿ ಡಾ. ಡಿ.ಎಸ್.ವಿಶ್ವನಾಥ್ ಉಪಸ್ಥಿತರಿದ್ದರು.

ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಲು ಮುಂದಾದ ಪೊಲೀಸ್ ಇಲಾಖೆ

ಅಪರಾಧ ತಡೆಗೆ ಸಿಸಿ ಕ್ಯಾಮರಾ ಅಳವಡಿಕೆ

ಮಲ್ಲಿಕಾರ್ಜುನ ಸುಣಗಾರ

ದಿಗಂತ ವಿಶೇಷ

ಹಾನಗಲ್ಲ: ಅಪರಾಧಿಕ ಕೃತ್ಯಗಳ ತಾಣವಾಗಿದ್ದ ಪಟ್ಟಣ ಸಮೀಪದ ನಾಲ್ಕರ್ ಕ್ರಾಸ್‌ಗೆ ಸಿಸಿ ಟಿವಿ ಕ್ಯಾಮೆರಾ ಅಳವಡಿಕೆಯಾಗಿದ್ದು, ಪುಂಡರ ಅಕ್ರಮ ಚಟುವಟಿಕೆಗಳಿಗೆ ಇನ್ಮುಂದೆ ಬ್ರೇಕ್ ಬೀಳಲಿದೆ.

ಪೊಲೀಸ್ ಇಲಾಖೆಯ ಸ್ವಯಂ ಆಸಕ್ತಿಯ ಪರಿಣಾಮವಾಗಿ ನಾಲ್ಕರ್ ಕ್ರಾಸ್‌ನಲ್ಲಿ 5 ಎಂಪಿ ಸಾಮರ್ಥ್ಯದ 4 ಸುಧಾರಿತ ಎಚ್‌ಡಿ ಸಿಸಿ ಕ್ಯಾಮೆರಾ ಅಳವಡಿಕೆಯಾಗಿದೆ. ಸಿಸಿ ಕ್ಯಾಮೆರಾದ ನೇರ ವೀಕ್ಷಣೆ ಹಾನಗಲ್ಲ ಪೊಲೀಸ್ ಠಾಣೆಯ ಅಧಿಕಾರಿಗಳ ಮೊಬೈಲ್‌ನಲ್ಲಿ ಸಾಧ್ಯವಾಗುತ್ತಿದೆ.

ಶಿರಸಿ, ಶಿವಮೊಗ್ಗ, ಹಾವೇರಿ ಮತ್ತು ಹಾನಗಲ್ಲ ಭಾಗದ ಮುಖ್ಯ ರಸ್ತೆಗಳು ಒಂದುಗೂಡುವ ನಾಲ್ಕರ್ ಕ್ರಾಸ್ ಇತ್ತೀಚೆಗೆ ಜನನಿಬೀಡವಾಗುತ್ತಿದೆ.

ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಾಹನಗಳು ಸಂಚರಿಸುತ್ತದೆ. ಹೊಟೆಲ್, ಧಾಬಾ ಮತ್ತಿತರ ಅಂಗಡಿಗಳು ಇಲ್ಲಿ ತಲೆ ಎತ್ತಿವೆ. ಹೀಗಾಗಿ ದೂರ ಪ್ರಯಾಣದ ವಾಹನಗಳು ಇಲ್ಲಿ ನಿಲ್ಲುತ್ತವೆ. ಈ ಕ್ರಾಸ್‌ನಲ್ಲಿ ಶಾಲೆ, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ವಾಹನಕ್ಕಾಗಿ ಕಾಯ್ದು ನಿಲ್ಲುತ್ತಾರೆ. ಈ ಕ್ರಾಸ್ ಸಮೀಪದಲ್ಲಿ ರಾಜ್ಯದ ಪ್ರಸಿದ್ಧ ಭುತೇಶ್ವರ ದೇವಸ್ಥಾನವಿದೆ.

ನಾಲ್ಕರ್ ಕ್ರಾಸ್‌ನಲ್ಲಿ ಈಗೀಗ ಅಪರಾಧಿ ಕೃತ್ಯಗಳು ಘಟಿಸುತ್ತಿದ್ದವು. ಈ ಹಿಂದೆ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಘಟನೆ ಇದೇ ಸ್ಥಳದಿಂದ ಘಟಿಸಿತ್ತು.

ನಾಲ್ಕರ್ ಕ್ರಾಸ್‌ನಲ್ಲಿ ಕಾನೂನು ಸುವ್ಯವಸ್ಥೆ ತರುವ ನಿಟ್ಟಿನಲ್ಲಿ ಸಿಸಿ ಕ್ಯಾಮೆರಾ ಅತ್ಯಗತ್ಯವಾಗಿತ್ತು. ಆದರೆ ಇದಕ್ಕೆ ಬೇಕಾದ ಅನುದಾನ ಇಲಾಖೆಯಿಂದ ಲಭ್ಯವಾಗದ ಕಾರಣ ಪೊಲೀಸ್ ಇಲಾಖೆ ಮತ್ತು ಸ್ಥಳೀಯ ವ್ಯಾಪಾರಸ್ಥರು ಸೇರಿಕೊಂಡು ಸಿಸಿ ಕ್ಯಾಮೆರಾ ಅಳವಡಿಕೆ ಮಾಡಿದ್ದಾರೆ.

ಕಳ್ಳತನ, ವಿದ್ಯಾರ್ಥಿನಿಯರನ್ನು ಚುಡಾಯಿಸುವುದು, ಪುಂಡರ ಪರಸ್ಪರ ಹೊಡೆದಾಟ ಮತ್ತಿತರ ಅಪರಾಧಿಕ ಕೃತ್ಯಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಸಿಸಿ ಕ್ಯಾಮೆರಾ ಸಹಾಯಕವಾಗಲಿದೆ.





> ನಾಲ್ಕು ದಿನಗಳ ಹಿಂದೆ ಸಿಸಿ ಕ್ಯಾಮೆರಾ ಸೇವೆ ಚಾಲನೆಗೊಂಡಿದೆ. ಈ ಕ್ರಾಸ್‌ನಲ್ಲಿ ಕತ್ತಲು ಹೊತ್ತಿನಲ್ಲಿ ವಿದ್ಯುತ್ ದೀಪಗಳ ಬೆಳಕಿನ ವ್ಯವಸ್ಥೆಗಾಗಿ ಗೆಜ್ಜಿಹಳ್ಳಿ ಗ್ರಾಪಂ ಆಡಳಿತಕ್ಕೆ ಮನವಿ ಮಾಡಿದ್ದೇವೆ
>
> ■ ಸಂಪತ್‌ಕುಮಾರ ಆನಿಕಿವಿ, ಪಿಎಸ್ಐ ಹಾನಗಲ್ಲ

> ಪೊಲೀಸ್ ಇಲಾಖೆ ಸೂಚನೆಯ ಬೆನ್ನಲ್ಲೆ ನಾಲ್ಕರ್ ಕ್ರಾಸ್‌ನಲ್ಲಿ ವಿದ್ಯುತ್ ವ್ಯವಸ್ಥೆ ಮಾಡಲಾಗಿದೆ. ಹೈಮಾಸ್ಟ್ ದೀಪಗಳು ರಾತ್ರಿ ಹೊತ್ತಿನಲ್ಲೂ ಇಡೀ ವೃತ್ತಕ್ಕೆ ಬೆಳಕು ನೀಡುತ್ತಿವೆ. ಇದರಿಂದ ರಾತ್ರಿ ಹೊತ್ತಿನಲ್ಲಿ ಸಿಸಿ ಟಿವಿ ಕವರೇಜ್ ಉತ್ತಮಗೊಳ್ಳುತ್ತದೆ.
>
> ■ ಬಂಗಾರೆಪ್ಪ ಕನಕ್ಕನವರ, ಪಿಡಿಒ ಗ್ರಾಪಂ ಗೆಜ್ಜಿಹಳ್ಳಿ

ಭಗವಾನ್ ಮಹಾವೀರರ ಸಂದೇಶ ಸಾರ್ವಕಾಲಿಕ

ಹಾವೇರಿ: ಜಗತ್ತಿಗೆ ಅಹಿಂಸೆ, ಸತ್ಯ ಮತ್ತು ತ್ಯಾಗದ ಮಾರ್ಗವನ್ನು ತೋರಿಸಿದವರು ಮಹಾವೀರರು, ಅವರ ಸಂದೇಶ ಸಾರ್ವಕಾಲಿಕವಾಗಿದೆ ಎಂದು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ ಹೇಳಿದರು.ನಗರದ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ನೇಮಿನಾಥ ದಿಗಂಬರ ಜೈನ್ ಮಂದಿರ ಕಮೀಟಿ ಸಹಯೋಗದಲ್ಲಿ ಆಯೋಜಿಸಲಾದ ಭಗವಾನ್ ಮಹಾವೀರ ಜಯಂತಿ ಉದ್ಘಾಟಿಸಿ ಮಾತನಾಡಿದರು.ಮಹಾತ್ಮಗಾಂಧೀಜಿಅವರು ಅಹಿಂಸಾ ಮಾರ್ಗದಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಅಹಿಂಸಾ ಮಾರ್ಗಕ್ಕೆ ದೊಡ್ಡ ಶಕ್ತಿ ಇದೆ. ಆದರೆ ಇಂದು ಗಲ್ಫ್ ರಾಷ್ಟಗಳಲ್ಲಿ ಯುದ್ಧ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ. ಜೀವನದಲ್ಲಿ ಸತ್ಯ, ಅಹಿಂಸೆ, ತ್ಯಾಗದ ಮನೋಭಾವ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸೋಣ ಎಂದು ಕರೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಅವರು ಮಾತನಾಡಿ, ಜೈನ ಧರ್ಮ ಶ್ರೇಷ್ಠ ಧರ್ಮವಾಗಿದೆ ಹಾಗೂ ಜೈನ ಪರಂಪರೆ ಕೊಡುಗೆ ಅಪಾರವಾಗಿದೆ. ಭಗವಾನ್ ಮಹಾವೀರರು 'ಜೀವಿಸು, ಜೀವಿಸಲು ಬಿಡು' ಎಂಬ ಉತ್ತಮ ಸಂದೇಶ ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ತತ್ವಾದರ್ಶಗಳನ್ನು ತಿಳಿದುಕೊಳ್ಳಬೇಕು ಹಾಗೂ ಬದುಕಿನಲ್ಲಿ ಅಳವಡಿಕೊಳ್ಳಬೇಕು ಎಂದು ಹೇಳಿದರು. ವಿದ್ಯಾ ಹಳ್ಳಿಯವರ ಭಗವಾನ್ ಮಹಾವೀರರ ಬಗ್ಗೆ ಉಪನ್ಯಾಸ ನೀಡಿದರು. ನೇಮಿನಾಥ ದಿಗಂಬರ ಜೈನ್ ಮಂದಿರ ಕಮೀಟಿ ಅಧ್ಯಕ್ಷ ಚಂದ್ರನಾಥ ಕಳಸೂರ ಅಧ್ಯಕ್ಷತೆ ವಹಿದ್ದರು. ಕಾರ್ಯಕ್ರಮದಲ್ಲಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳಾ ಜೈನ್, ಶಿರಸ್ತೇದಾರ ನಾಗರಾಜ ಕನವಳ್ಳಿ, ಹಾವೇರಿ ಜಿಲ್ಲಾ ದಿಗಂಬರ ಜೈನ ಸಂಘದ ಅಧ್ಯಕ್ಷ ಮಂಜಪ್ಪ ತಡಸದ, ರತ್ನತ್ರಯ ಮಹಿಳಾ ಸಮಾಜದ ಅಧ್ಯಕ್ಷರಾದ ಪುಷ್ಪಕಳಸೂರ, ಮಿಠಲಾಲ್ ಜೈನ್ ಇತರರು ಉಪಸ್ಥಿತರಿದ್ದರು. ವಿಮಲ್ ಭೋಗಾರ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಮೆರವಣಿಗೆಗೆ ಚಾಲನೆ

ಭಗವಾನ್ ಮಹಾವೀರರ ಜಿನಬಿಂಬ ಮೆರವಣಿಗೆಗೆ ಚಾಲನೆ ನೀಡಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು. ಮೆರವಣಿಗೆಯಲ್ಲಿ ಜೈನ ಸಮುದಾಯದ ಯುವಕ, ಯುವತಿಯರು, ಹಿರಿಯರು ಪಾಲ್ಗೊಂಡಿದ್ದರು.



ಕಾಮಗಾರಿ ಉದ್ಘಾಟಿಸಿದ ಶಾಸಕ ಮಾನೆ

ಹಾನಗಲ್ಲ: ಅಕ್ಕಿಆಲೂರು ಭಾಗಕ್ಕೆ ಹೆಸ್ಕಾಂ ಉಪವಿಭಾಗ ಹಾಗೂ ಹಾನಗಲ್ಲ ಪಟ್ಟಣದಲ್ಲೇ ವಿದ್ಯುತ್ ಟ್ರಾನ್ಸಫಾರ್ಮರ್ ಸರ್ವಿಸ ಸೆಂಟರ್ ಅಗತ್ಯವಿದ್ದು ಕೂಡಲೆ ಮಂಜೂರು ಮಾಡಲು ಹೆಸ್ಕಾಂಗೆ ಮನವಿ ಮಾಡಿದ್ದು ಕೂಡಲೇ ಈಡೇರುವ ಭರವಸೆ ಇದೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ಸೋಮವಾರ ಹಾನಗಲ್ಲಿನಲ್ಲಿ 2.5 ಕೋಟಿ ರೂ ವೆಚ್ಚದ ಹೆಸ್ಕಾಂ ಹಾನಗಲ್ಲ ಉಪವಿಭಾಗದ ನೂತನ ಕಚೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ವಸತಿ ಮನೆ, ಅಂಗಡಿಗಳು, ರೈತರ ಪಂಪಸೆಟ್‌ಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಅದಕ್ಕನುಗುಣವಾಗಿ ವ್ಯವಸ್ಥೆಯನ್ನೂ ಕೂಡ ಹೆಚ್ಚಿಸಬೇಕಾಗಿದೆ. ಹತ್ತಾರು ವರ್ಷಗಳಿಂದ ಈ ಕೆಲಸ ನಡೆದಿದ್ದರೆ ಈಗ ಸಮಸ್ಯೆಯಾಗುತ್ತಿರಲಿಲ್ಲ. ಆದಾಗ್ಯೂ ಈಗಾಗಲೇ ಬಹಳಷ್ಟು ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ನೀಡಲಾಗಿದೆ. ಎರಡು 110 ಕೆವಿ ಸ್ಟೇಶನ್‌ಗಳು ಈಗ ಟೆಂಡರ್ ಹಂತದಲ್ಲಿವೆ. ಲೈನ್‌ಮನ್‌ಗಳ ಕೊರತೆ ಇದ್ದು ಈಗ ತರಬೆತಿಯಲ್ಲಿರುವ ಲೈಮನ್‌ಗಳು ಶೀಘ್ರ ಇಲ್ಲಿಗೆ ಬಂದು ಹಾಜರಾಗಲಿದ್ದಾರೆ. ರೈತರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಒದಗಿಸಲು ನಾವು ಬದ್ಧವಾಗಿದ್ದು ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧ್ಯಕ್ಷ ಸೈಯದ ಅಜೀಮ್‌ಪೀರ ಎಸ್.ಖಾದ್ರಿ, ರೈತ ಸಂಘದ ತಾಲೂಕು ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿದರು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಅಡಿವೆಪ್ಪ ಆಲದಕಟ್ಟಿ, ಮಾಜಿ ಪುರಸಭೆ ಅಧ್ಯಕ್ಷ ಯಲ್ಲಪ್ಪ ಕಿತ್ತೂರ, ತಾಲೂಕ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಹೆಸ್ಕಾಂ ಅಧೀಕ್ಷಕ ಇಂಜನೀಯರ್ ತಿಪ್ಪಣ್ಣ ಹಾಗೂ ನಾರಾಯಣ ಕಳ್ಳಿಮನಿ, ಅಧಿಕಾರಿಗಳಾದ ಸಿ.ಬಿ.ಹೊಸಮನಿ, ಶಿವರಾಜ ಸತ್ತಿಕರ, ವಿ.ಎಸ್.ಮರಿಗೌಡರ, ಸುರೇಶ ಆವಟಿ, ಆನಂದ ಸುಮಾಕರ, ಮಂಜುನಾಥ ಕೆ, ಸಾಗರ ಗಣೇಶಗುಡಿ, ಕೃಷ್ಣ ಕಲ್ಲೇರ, ಎ.ಡಿ.ಸೋಮಾಪುರ, ಪ್ರದೀಪ ಗುಡ್ಡದ, ಎಸ್.ಬಿ.ಮೂಲಿಮನಿ, ಎಂ.ಆರ್. ಸುಂಕದ, ಮಲ್ಲಿಕಾರ್ಜುನ, ಕೆ.ಚಾಮರಾಜ, ಎಚ್.ಡಿ.ಪ್ರಕಾಶ, ಎಂ.ಬಿ.ಕಾಕಸೆ ಮಲ್ಲೇಶ ಒಗ್ಗಣ್ಣನವರ ಇದ್ದರು.



ಮಹಾವೀರರ ಸಂಯಮದ ಸಂದೇಶ ಇಂದಿಗೂ ಪ್ರಸ್ತುತ

ಹಾವೇರಿ: ಜಗತ್ತಿಗೆ ಸತ್ಯ,ಅಹಿಂಸೆ, ಸಂಯಮಗಳ ನೀತಿ ಬೋಧನೆ ಮಾಡಿರುವ ಮಹಾವೀರ ಪ್ರಭುಗಳು ಮಹಾನ್ ಮಾನವತಾವಾದಿಗಳಾಗಿದ್ದಾರೆ ಎಂದು ಕರ್ನಾಟಕ ಅಲ್ಪ ಸಂಖ್ಯಾತ ಆಯೋಗದ ಸದಸ್ಯೆ ಪರಿಮಳ ಜೈನ ಅಭಿಪ್ರಾಯಪಟ್ಟರು.

ಸೋಮವಾರ ನಗರದ ಪ್ರವಾಸಿ ಮಂದಿರದದಲ್ಲಿಸಮಾನ ಮನಸ್ಕ ಪ್ರಗತಿಪರ ಸಂಘಟನೆಗಳ ವೇದಿಕೆ ವತಿಯಿಂದ ನಡೆದ ವರ್ಧಮಾನ ಮಹಾವೀರ ಅವರ 2625ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ಜಗತ್ತಿನಲ್ಲಿಂದು ಅಮೇರಿಕ, ಇಸ್ರೇಲ್, ಇರಾನ್‌ನಲ್ಲಿ ಯುದ್ಧದ ಕಾರ್ಮೋಡದಿಂದಾಗಿ ಹಿಂಸೆ, ಸಾವು-ನೋವುಗಳು ಸಂಭವಿಸುತ್ತಿದ್ದು ಕ್ಷೋಭೆ ಹಾಗೂ ದುಃಖದ ಸನ್ನಿವೇಶಗಳು ಸಾಮಾನ್ಯ ಎಂಬಂತಾಗಿವೆ. ಈ ಸಂದರ್ಭದಲ್ಲಿ ಮಹಾವೀರ ಸ್ವಾಮಿಯವರು ಬೋಧಿಸಿದ ಅಹಿಂಸೆ, ಶಾಂತಿ, ಸಂಯಮದ ಮಂತ್ರಗಳು ಬಹಳಷ್ಟು ಪ್ರಸ್ತುತವಾಗುತ್ತವೆ ಎಂದರು.

ಹಿಂಸೆ, ಭ್ರಷ್ಟತೆ, ಅನೈಕ್ಯತೆಗಳು ತಾಂಡವಾಡುತ್ತಿರುವ ಈ ದಿನಮಾನಗಳಲ್ಲಿ ಮಹಾವೀರ ಅವರು ಬೋಧಿಸಿದ ನಮೋಕಾರ ಮಂತ್ರಗಳು ಹಾಗೂ ಸಂದೇಶಗಳು ಜಗತ್ತಿನ ಮನುಕುಲದ ಏಳಿಗೆಯ ತತ್ವಗಳಾಗಿವೆ. ಜನತೆ ಸತ್ಯ, ಅಹಿಂಸೆ, ಸಂಯಮಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಶಾಂತಿ ಹಾಗೂ ನೆಮ್ಮದಿಯ ಬದುಕು ಕಂಡಿತವಾಗಿಯೂ ದೊರೆಯುತ್ತದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಮಹಾವೀರ ತೀರ್ಥಂಕರರ ಭಾವಚಿತ್ರಕ್ಕೆ ಪುಷ್ಪಾರ್ಪಣೆಮಾಡಿ ಗೌರವನಮನಗಳನ್ನು ಸಲ್ಲಿಸಲಾಯ್ತು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ನಿವೃತ್ತ ಡಿಡಿಪಿಯು ಎಂ.ಆಂಜನೇಯ, ಮುಖಂಡರಾದ ಉಡಚಪ್ಪ ಮಾಳಗಿ, ಬಸವರಾಜ ಎಸ್, ಸುರೇಶ ಛಲವಾದಿ, ಮಂಜುಳಾ ಅಕ್ಕಿ, ಆಶಾ ಜೋಷಿ, ಚೈತ್ರಾ ಕೊರವರ, ಸಂಗೀತಾ ಮೋಟಳ್ಳಿ, ಧನುಷ್ ದೊಡ್ಡಮನಿ, ವಿಠ್ಠಲ ಗೌಳಿ ಇತರರು ಉಪಸ್ಥಿತರಿದ್ದರು.



ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ

ಗೋಕರ್ಣ: ಇಲ್ಲಿನ ಮುಖ್ಯ ಕಡಲತೀರದ ಬಳಿ ಹಲವು ವರ್ಷಗಳಿಂದ ಸರ್ಕಾರಿ ಜಾಗದಲ್ಲಿ ವಾಸವಿರುವ ಬಡ ಮೀನುಗಾರರಿಗೆ ಪಟ್ಟಾ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಭಾನುವಾರ ಸಂಜೆ ಇಲ್ಲಿನ ದಂಡೆಭಾಗದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಬೆಳ್ಳಿ ಹಬ್ಬದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಿಂದುಳಿದ ಮೀನುಗಾರರೇ ಹೆಚ್ಚು ವಾಸವಿರುವ ಈ ಪ್ರದೇಶದಲ್ಲಿ ಈ ಸಮಾಜದವರ ಶೈಕ್ಷಣಿಕ ಪ್ರಗತಿಗೆ ಇಲ್ಲಿರುವ ಸರ್ಕಾರಿ ಶಾಲೆ ಉತ್ತಮ ಶಿಕ್ಷಣ ನೀಡುತ್ತಾ 25 ವರ್ಷ ಪೂರೈಸಿರುವುದು ಸಂತಸ ತಂದಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿಯಾಗಲಿ ಎಂದು ಆಶಿಸಿದರು. ಮುಖ್ಯ ಅತಿಥಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಉದಯ ನಾಯ್ಕ ಮಾತನಾಡಿ, ಸರ್ಕಾರ ಸರ್ಕಾರಿ ಶಾಲೆಯಲ್ಲಿ ಎಲ್ಲ ರೀತಿ ಸೌಲಭ್ಯ ಒದಗಿಸಿದ್ದು ಸರ್ಕಾರಿ ಶಾಲೆಗಳಲ್ಲಿಯೇ ಮಕ್ಕಳಿಗೆ ಶಿಕ್ಷಣ ನೀಡುವಂತೆ ಪಾಲಕರಿಗೆ ಕರೆ ನೀಡಿದರು. ತಾಪಂ ಕಾರ್ಯನಿರ್ವಹಣಾಧಿಕಾರಿ ರಾಜೇಂದ್ರ ಭಟ್, ಮಾಜಿ ಗ್ರಾಪಂ ಅಧ್ಯಕ್ಷ ಮಂಜುನಾಥ ಜನ್ನು, ನ್ಯಾಯವಾದಿ ಮಂಗಲಮೂರ್ತಿ ಸಭಾಹಿತ, ಮಾಜಿ ತಾಪಂ ಸದಸ್ಯ ಮಹೇಶ ಶೆಟ್ಟಿ, ಉದ್ಯಮಿ ಕುಮಾರ ದೀವಟಗಿ , ಮಾಜಿ ಗ್ರಾಪಂ ಅಧ್ಯಕ್ಷ ನಾಗರಾಜ ಹಿತ್ತಲಮಕ್ಕಿ ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಜಾತಾ ಅಂಬಿಗ ಅಧ್ಯಕ್ಷತೆ ವಹಿಸಿದ್ದರು.ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಲತಾ ನಾಯಕ ಹಸ್ತಪ್ರತಿ ಬಿಡುಗಡೆ ಮಾಡಿದರು. ಬಿ.ಆರ್.ಸಿ. ವಿಜಯಲಕ್ಷ್ಮೀ ಹೆಗಡೆ,ಮಾಜಿ ಗ್ರಾಪಂ ಸದಸ್ಯ ಉಮೇಶ ಅಂಬಿಗ, ಸತೀಶ ದೇಶಭಂಡಾರಿ ,ಪಾರ್ವತಿ ಶೆಟ್ಟಿ, ಮಹೇಶ ಅಂಬಿಗ, ಮಲ್ಲಿಕಾರ್ಜುನ ಹೊನ್ನಾವರಕರ, ಗಿರೀಶ ದೇಶಭಂಡಾರಿ, ಶಿಕ್ಷಣ ಸಂಯೋಜಕಿ ದೀಪಾ ಕಾಮತ್, ಸಿ.ಆರ್.ಪಿ. ಮೋಹಿನಿ ಗೌಡ, ಭದ್ರಕಾಳಿ ಪ್ರೌಢಶಾಲೆ ಮುಖ್ಯಾಧ್ಯಾಪಕ ಸಿ.ಜಿ. ನಾಯಕ ದೊರೆ, ಪತ್ರಕರ್ತ ಗಜಾನನ ನಾಯಕ ಉಪಸ್ಥಿತರಿದ್ದರು. ಶಾಲಾ ಮುಖ್ಯಾಧ್ಯಾಪಕ ಜಿ.ಆರ್. ನಾಯ್ಕ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕರಾದ ಎಮ್. ಎನ್. ನಾಯ್ಕ, ಎಮ್.ಎಮ್ . ನಾಯ್ಕ ನಿರ್ವಹಿಸಿದರು. ಸಿ.ಆರ್.ಪಿ. ಮೋಹಿನಿ ಗೌಡ ವಂದಿಸಿದರು.



ವಿವಿ ಕ್ಯಾಂಪಸ್‌ನಲ್ಲೇ ಘಟಿಕೋತ್ಸವ ನಡೆಸಲು ಒತ್ತಾಯ

ಹಾವೇರಿ: ಜಿಲ್ಲೆಯ ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮವನ್ನು ವಿವಿ ಆವರಣದಲ್ಲಿಯೇ ನಡೆಸಬೇಕು ಎಂದು ವಿವಿ ಉಳಿಸಿ ಹೋರಾಟ ಸಮಿತಿ ಮುಖಂಡರು ಒತ್ತಾಯಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ವಿವಿ ಉಳಿಸಿ ಹೋರಾಟ ಸಮಿತಿಯ ಸಮಾಲೋಚನೆ ಸಭೆಯಲ್ಲಿ ಮುಖಂಡರು ವಿವಿಯಲ್ಲಿಯೇ ಘಟಿಕೋತ್ಸವ ನಡೆಸಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ವಿವಿ ಉಳಿಸಿ ಹೋರಾಟ ಸಮಿತಿಯ ಸಂಚಾಲಕ ಬಸವರಾಜ ಪೂಜಾರ ಮಾತನಾಡಿ, ವಿವಿ ಕ್ಯಾಂಪಸ್‌ನಲ್ಲಿ ಸಭಾಂಗಣವಿಲ್ಲ ಎಂಬ ಕಾರಣ ಸಮಂಜಸವಲ್ಲ, ಇದೀಗ ಮಳೆ, ಗಾಳಿಗಳಿಂದ ರಕ್ಷಿಸಲು ಅತ್ಯಾಧುನಿಕ ಜರ್ಮನ್ ಟೆಂಟ್ ಸೌಲಭ್ಯಗಳಿವೆ, ಇದನ್ನು ಬಳಸಿಕೊಂಡು ಪ್ರಥಮ ಘಟಿಕೋತ್ಸವದ ತಯಾರಿಯನ್ನು ಕ್ಯಾಂಪಸ್‌ನಲ್ಲಿಯೇ ನಡೆಸಬೇಕು. ವಿವಿ ಆವರಣದಲ್ಲಿಯೇ ಘಟಿಕೋತ್ಸವ ಮಾಡುವುದರಿಂದ, ರಾಜ್ಯಪಾಲರು, ಶಿಕ್ಷಣ ಸಚಿವರು ಸೇರಿ ಗಣ್ಯರು ಆಗಮಿಸುವ ಮಾಹಿತಿಯಿದೆ. ಇದರಿಂದ ರಸ್ತೆ ರಿಪೇರಿ, ಮೂಲಭೂತ ಸೌಲಭ್ಯಗಳಿಗೆ ಸರ್ಕಾರದ ಗಮನ ಸೆಳೆಯಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ತೀವ್ರ ಪ್ರತಿಭಟನೆ ಅನಿವಾರ್ಯ ಎಂದರು.

ಸಮಿತಿಯ ಮುಖಂಡರಾದ ಪರಿಮಳ ಜೈನ್ ಮಾತನಾಡಿ, ನಮ್ಮ ಭಾಗದ ಹೆಣ್ಣುಮಕ್ಕಳು ಉನ್ನತ ಶಿಕ್ಷಣಕ್ಕೆ ಸಾಕಷ್ಟು ಹೋರಾಟ ಮಾಡಿ ಹಾವೇರಿ ವಿವಿ ಉಳಿಸಿಕೊಳ್ಳಲಾಗಿದೆ. ಸರ್ಕಾರಿ ಸಂಸ್ಥೆಯಾದ ವಿವಿ ಕ್ಯಾಂಪಸ್‌ನಲ್ಲಿಯೆ ಘಟಿಕೋತ್ಸವ ಆಯೋಜಿಸಬೇಕು ಎಂದರು. ಇಲ್ಲವಾದಲ್ಲಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದರು.

ಡಿಎಸ್ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಉಡಚಪ್ಪ ಮಾಳಗಿ, ಕರ್ನಾಟಕ ರಾಜ್ಯ ರೈತ ಸಂಘಟನೆ ಶಹರ ಘಟಕದ ಅಧ್ಯಕ್ಷ ಸುರೇಶ ಛಲವಾದಿ, ಮಂಜುಳಾ ಅಕ್ಕಿ, ಜಿಲ್ಲಾ ಕಲಾವಿದರ ಬಳಗದ ಅಧ್ಯಕ್ಷ ಡಾ.ತಿಪ್ಪೆಸ್ವಾಮಿ ಹೊಸಮನಿ, ಬಿಎಸ್ಪಿ ಜಿಲ್ಲಾಧ್ಯಕ್ಷ ಮಕಬುಲ್ ಎಂ.ಕೆ, ಅಲೆಮಾರಿ ಸಮುದಾಯ ಸಂಘಟನೆಯ ಜಿಲ್ಲಾಧ್ಯಕ್ಷ ಶೆಟ್ಟಿ ವಿಭೂತಿ ನಾಯಕ, ಡಿವೈಎಫ್ಐ ಮುಖಂಡ ಖಲಂದರ್ ಅಲ್ಲಿಗೌಡ್ರ, ವಿಶ್ವಾಸ್ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್ ಬಡಿಗೇರ, ಕೊರಚ ಕೊರಮ ಸಮುದಾಯದ ಜಿಲ್ಲಾ ಮುಖಂಡರಾದ ವೆಂಕಟೇಶ ಬಿಜಾಪುರ, ತೆರೆದ ತಂಗುದಾಣದ ಮುಖ್ಯಸ್ಥರಾದ ಪುಟ್ಟಪ್ಪ ಹರವಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಎಸ್ಎಫ್ಐ ಜಿಲ್ಲಾಧ್ಯಕ್ಷ ಬಸವರಾಜ ಮಾತನಾಡಿದರು. ನಿವೃತ್ತ ಡಿಡಿಪಿಯು ಎಂ.ಆಂಜನೇಯ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯಲ್ಲಿ ಮಲ್ಲಪ್ಪ ಕಾಟೇನಹಳ್ಳಿ, ಆಶಾ ಜೋಷಿ, ಚೈತ್ರಾ ಕೊರವರ, ಸಂಗೀತಾ ಮೋಟಳ್ಳಿ, ಧನು? ದೊಡ್ಡಮನಿ, ವಿಠ್ಠಲ ಗೌಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮನವಿಗೆ ಸ್ಪಂದಿಸದಿದ್ದರೆ ಹೋರಾಟ

ಹಾವೇರಿ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿಯೆ ಘಟಿಕೋತ್ಸವ ನಡೆಸಲು ಒತ್ತಾಯಿಸಿ, ರಾಜ್ಯಪಾಲರಿಗೆ, ಮುಖ್ಯಮಂತ್ರಿಗಳಿಗೆ ಮತ್ತು ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ವಿವಿಯ ಉಪಕುಲಪತಿಗಳಿಗೆ ಮನವಿ ಸಲ್ಲಿಸುವುದು. ಮನವಿಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸುವುದು

ಜನ ಮತ್ತೊಮ್ಮೆ ಅವಕಾಶ ನೀಡಿದರೇ ನಾನೇ ಶಾಸಕ

ಬ್ಯಾಡಗಿ: ವಿಧಾನಸಭಾ ಕ್ಷೇತ್ರದ ಮತದಾರರು ಮತ್ತೊಮ್ಮೆ ನನಗೆ ಅವಕಾಶ ನೀಡಿದರೆ ನಾನೇ ಮತ್ತೊಮ್ಮೆ ಶಾಸಕನಾಗಿ ನಿಮ್ಮ ಸೇವೆಯನ್ನು ಮಾಡುತ್ತೇನೆ ಎಂದು ಶಾಸಕ ಬಸವರಾಜ್ ಶಿವಣ್ಣನವರ್ ಅಭಿಪ್ರಾಯ ಪಟ್ಟರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಫೆಬ್ರವರಿ ತಿಂಗಳಲ್ಲಿ ನನಗೆ ಹೃದಯ ಸಂಬಂಧಿ ಕಾಯಿಲೆಯಿಂದ ನನ್ನ ಆರೋಗ್ಯದಲ್ಲಿ ಏರುಪೇರಾಗಿತ್ತು ಕಾರಣ ನಾನು ಕೆಲ ತಿಂಗಳು ಕ್ಷೇತ್ರಕ್ಕೆ ಆಗಮಿಸಿರಲಿಲ್ಲ ಹೀಗಂತ ಕ್ಷೇತ್ರದಲ್ಲಿ ಅನೇಕ ಜನರು ನನ್ನ ಬಗ್ಗೆ ಊಹಾಪೋಹಗಳನ್ನು ಮಾತನಾಡುತ್ತಿದ್ದರು ಅದಕ್ಕೆ ಇಂದು ನಾನು ತೆರೆ ಎಳೆಯುವ ಕೆಲಸ ಮಾಡಿದ್ದೇನೆ ಇದೀಗ ಅನಾರೋಗ್ಯದಿಂದ ಮುಕ್ತನಾಗಿ ಕ್ಷೇತ್ರಕ್ಕೆ ಮರಳಿ ಆಗಮಿಸಿದ್ದೇನೆ ಎಂದಿನಂತೆ ಎಲ್ಲಾ ಕಾರ್ಯಕ್ರಮಗಳಲ್ಲಿ ನಾನು ಭಾಗಿಯಾಗಿ ನನ್ನ ಕ್ಷೇತ್ರದ ಕೆಲಸಗಳನ್ನು ನಾನು ಮಾಡುತ್ತೇನೆ ಎಂದು ಹೇಳಿದರು.

ನನಗೆ ಮರುಜನ್ಮ ಬಂದಂಗಾಗಿದೆ ಇನ್ನು ನನಗೆ 20 ವರ್ಷ ಆಯಸ್ಸು ಹೆಚ್ಚಾಗಿದೆ ಜನರ ಆಶೀರ್ವಾದದಿಂದ ನಾನು ಆರೋಗ್ಯವಾಗಿದ್ದೇನೆ.



ಜನರ ಅಪೇಕ್ಷೆಯ ಮೇರೆಗೆ ನಾನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧನಾಗಿದ್ದೇನೆ ನನಗೆ ಟಿಕೆಟ್ ಕೊಟ್ಟರೆ ಮತ್ತೊಮ್ಮೆ ನಾನು ಕ್ಷೇತ್ರದಲ್ಲಿ ಆರಿಸಿ ಬಂದು ನಿಮ್ಮ ಸೇವೆ ಮಾಡಲು ಸಿದ್ಧನಿದ್ದೇನೆ ಎಂದು ಹೇಳಿದರು.

ಶೀಘ್ರದಲ್ಲಿಯೇ ಕಾಕೋಳ ರಸ್ತೆಯಲ್ಲಿ ನೂತನ ಬಸ್ ನಿಲ್ದಾಣಕ್ಕೆ ಈಗಾಗಲೇ ಜಾಗವನ್ನು ವಾಯುವ್ಯ ಸಾರಿಗೆ ಸಂಸ್ಥೆಗೆ ನೀಡಲಾಗಿದ್ದು, ಎರಡು ಕೋಟಿ ಹಣವನ್ನು ನೀಡಲಾಗುತ್ತದೆ ಎಂದರು.

ಗುಡ್ಡದ ಮಲ್ಲಾಪುರ ಏತ ನೀರಾವರಿ ಕೆರೆಗಳ ಜೋಡಣೆಗೆ ಶೀಘ್ರದಲ್ಲಿಯೇ 115 ಕೋಟಿ ರೂ. ಅನುದಾನ ಬಿಡುಗಡೆಯಾಗಲಿದ್ದು, ಕೆಲವೇ ದಿನಗಳಲ್ಲಿ ಕಾಮಗಾರಿ ಉದ್ಘಾಟನೆ ಆಗಲಿದೆ ಎಂದು ಹೇಳಿದರು.

ತಾಲೂಕು ಕಾಂಗ್ರೆಸ್ ಅಧ್ಯಕ್ಷ ದಾನಪ್ಪ ಚೂರಿ, ಕಾಗಿನೆಲೆ ಬ್ಲಾಕ್ ಅಧ್ಯಕ್ಷ ಶಿವನಗೌಡ ಪಾಟೀಲ್ ಕಾರ್ಯದರ್ಶಿ ರಮೇಶ್ ಸುತ್ತುಕೋಟಿ, ಬೀರಪ್ಪ ಬಣಕಾರ್, ಡಿ ಎಚ್ ಬುಡ್ಡನಗೌಡ, ಡಾ. ಎ ಎಂ ಸೌಧಾಗರ್, ಶಂಬನಗೌಡ ಪಾಟೀಲ, ದುರ್ಗೇಶ್ ಗೋಣೆಮ್ಮನವರ್, ಚನ್ನಬಸಪ್ಪ ಹುಲ್ಲತ್ತಿ, ಅಬ್ದುಲ್ ಮುನಾಫ್ ಎರಿಸೀಮೆ, ಖಾದರ್ ಸಾಬ್ ದೊಡ್ಡಮನಿ, ಮಜಿದ್ ಮುಲ್ಲಾ, ಜೈ ಭೀಮ್ ರಾರಾವಿ ಹಾಗೂ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ತೃತೀಯ ಭಾಷೆಗೆ ಗ್ರೇಡಿಂಗ್ ಪದ್ಧತಿ ಸರಿಯಲ್ಲ: ಸಂಕನೂರ



◆ **ಯಲ್ಲಾಪುರ:** ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರ ಏಕಾಏಕಿಯಾಗಿ ತೃತೀಯ ಭಾಷೆ ಹಿಂದಿಗೆ ಅಂಕಗಳ ಬದಲಾಗಿ ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತರಲು ಕೈಗೊಂಡ ನಿರ್ಧಾರ ವಿದ್ಯಾರ್ಥಿಗಳಲ್ಲಿ ಆತಂಕ ಹಾಗೂ ಗೊಂದಲಕ್ಕೆ ಕಾರಣವಾಗಿದೆ ಮತ್ತು ಇದು ದುಡಿಕಿನ ನಿರ್ಧಾರ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ತಿಳಿಸಿದ್ದಾರೆ. ಅವರು ಸೋಮವಾರ ಪಟ್ಟಣಕ್ಕೆ ಆಗಮಿಸಿದ ವೇಳೆ ಈ ಕುರಿತು ಮಾತನಾಡಿ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಏನೇ ಬದಲಾವಣೆ ತರುವುದಿದ್ದರೂ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮಾಡಬೇಕೆ ವಿನಃ ಕೊನೆಯ ಹಂತದಲ್ಲಿ ಅಲ್ಲ, ಹೀಗಾಗಿ ಇದು ಸರ್ಕಾರದ ಏಕಪಕ್ಷೀಯ ಹಾಗೂ ಅವೈಜ್ಞಾನಿಕ ಕ್ರಮವಾಗಿದೆ. ಈ ರೀತಿಯ ನಿರ್ಧಾರದಿಂದ ಹಿಂದಿ ಭಾಷಾ ಶಿಕ್ಷಕರು ಮುಂಬರುವ ದಿನಮಾನದಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳುವ ಆತಂಕ ಹಾಗೂ ಭಯದ ವಾತಾವರಣ ಸೃಷ್ಟಿಯಾಗಿದೆ. ನಮ್ಮ ದೇಶದಲ್ಲಿ ಆರಂಭದ ದಿನದಿಂದಲೂ ತ್ರಿಭಾಷಾ ಸೂತ್ರ ಪಾಲಿಸುತ್ತಾ ಬಂದಿದ್ದು, ಈಗ ಏಕಾಏಕಿಯಾಗಿ ದ್ವಿಭಾಷಾ ಸೂತ್ರಕ್ಕೆ ಬದಲಾವಣೆ ಮಾಡುವುದರಿಂದ ಆಗುವ ಸಾಧಕ ಬಾಧಕಗಳ ಕುರಿತು ಪುನರ್ ಚಿಂತನೆ ಮಾಡಲು ಆಗ್ರಹಿಸಿದ್ದಾರೆ. ಭಾಷಾ ಸೂತ್ರದ ವಿಷಯಕ್ಕೆ ಸಂಬಂಧಿಸಿದಂತೆ ರಾಜಕೀಯ ಬೆರೆಸಬಾರದು. ಸರ್ಕಾರ ಏನೇ ನಿರ್ಣಯ ಕೈಗೊಂಡರೂ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕೈಗೊಳ್ಳಬೇಕೆಂದು ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈಜಲು ತೆರಳಿದ್ದ ಬಾಲಕರಿಬ್ಬರ ಸಾವು

◆ **ಬೆಳಗಾವಿ:** ಜಿಲ್ಲೆಯ ಯಮಕನಮರಡಿಯ ಘಟಪ್ರಭಾ ನದಿಯ ಹಿನ್ನೀರಿನಲ್ಲಿ ಈಜಲು ತೆರಳಿದ್ದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆಯೊಂದು ಸೋಮವಾರ ಯಮಕನಮರಡಿ ಸಮೀಪದ ಹಳೆ ಗುಡಗನಟ್ಟಿ ಗ್ರಾಮದಲ್ಲಿ ನಡೆದಿದೆ. ಕೃಷ್ಣ ವಿಠ್ಠಲ್ ಖಾನಾಪುರಿ (14) ಮತ್ತು ಪ್ರಜ್ವಲ್ ಗೋಕಾರ್ (13) ಮೃತ ದುರ್ದೈವಿ ಬಾಲಕರು. ಐವರು ಸ್ನೇಹಿತರ ಗುಂಪು ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಈಜಲು ಹೋದಾಗ ಈ ಅವಘಡ ಸಂಭವಿಸಿದೆ. ಈ ಇಬ್ಬರೂ ಬಾಲಕರು ಹಳೆ ಗುಡಗನಟ್ಟಿ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಆಟವಾಡುತ್ತಾ ನದಿಗೆ ಇಳಿದಾಗ ನೀರಿನ ಆಳ ತಿಳಿಯದೇ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಘಟನಾ ಸ್ಥಳಕ್ಕೆ ಯಮಕನಮರಡಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣವನ್ನು ದಾಖಲಿಸಿಕೊಂಡು ಎನ್‌ಡಿಆರ್‌ಎಫ್ ತಂಡದಿಂದ ಮೃತ ಬಾಲಕರನ್ನು ಹೊರ ತೆಗೆದಿದ್ದಾರೆ.

ಮಹಿಳೆ ಹತ್ಯೆ: ದೂರು ದಾಖಲು

◆ **ರಾಯಚೂರು:** ನಗರದ ಉಪ ವಿಜ್ಞಾನ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿದ್ಯಾ ಎನ್ನುವ ಮಹಿಳೆಯನ್ನು ಗಂಡ ಮತ್ತು ಅತ್ತೆ ಸೇರಿ ಹತ್ಯೆ ಮಾಡಿ ನೇಣು ಹಾಕಿದ್ದಾರೆ ಎಂದು ವಿದ್ಯಾರ ಕುಟುಂಬದವರು ನಗರದ ಮಹಿಳಾ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ನಗರದ ಐಬಿ ಕಾಲೋನಿಯಲ್ಲಿ ನಿವಾಸಿಗಿದ್ದ ವಿದ್ಯಾ (30) ಭಾನುವಾರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿದ್ಯಾರನ್ನು ಅವರ ಪತಿ ಮಂಜುನಾಥ ಕರೆ ತಂದಿದ್ದಾರೆ. ಈ ಸಮಯದಲ್ಲಿ ಮಂಜುನಾಥ ಮದ್ಯಪಾನ ಮಾಡಿದ್ದರು. ಈ ಕುರಿತು ವಿದ್ಯಾರವರು ಅವರ ಅತ್ತೆಗೆ ದೂರನ್ನು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಮಗುವಿಗೆ ವಿದ್ಯಾರವರು ಹಾಲುಣಿಸಿದ್ದಾರೆ. ಹಾಲುಣಿಸಿದ ಸ್ವಲ್ಪ ಸಮಯದಲ್ಲಿನೇ ಪತಿ ಮಂಜುನಾಥ ಹಾಗೂ ಅತ್ತೆ ಸೇರಿ ವಿದ್ಯಾರನ್ನು ಕೊಲೆ ಮಾಡಲಾಗಿದೆ ಎಂದು ವಿದ್ಯಾರ ತವರು ಮನೆಯವರು ಆರೋಪಿಸಿದ್ದಾರೆ. ವಿದ್ಯಾ ಹಾಗೂ ಮಂಜುನಾಥ ಜೊತೆ ಕಳೆದ ಎರಡು ವರ್ಷಗಳ ಹಿಂದೆ ಮದುವೆ ಆಗಿತ್ತು ಅಂದಿನಿಂದಲೂ ವರದಕ್ಷಿಣೆಗಾಗಿ ಪೀಡಿಸುತ್ತಿದ್ದರೆಂದು ದೂರಿದ್ದು, ಈಗ 11 ತಿಂಗಳ ಮಗು ತಾಯಿ ಇಲ್ಲದ ತಬ್ಬಲಿಯಾಗಿದೆ. ಮದುವೆ ಸಂದರ್ಭದಲ್ಲಿ ವಿದ್ಯಾರ ತವರುಯ ಮನೆಯವರು 30 ಗ್ರಾಂ ಚಿನ್ನಾಭರಣ, ಅರ್ಧ ಕೆಜಿ ಬೆಳ್ಳಿ ಆಭರಣ ವರದಕ್ಷಿಣೆ ನೀಡಿದ್ದರು ಆದರೂ ವರದಕ್ಷಿಣೆಗಾಗಿ ಗಂಡ ಮತ್ತು ಅತ್ತೆ ಕಿರುಕುಳ ನೀಡುತ್ತಿದ್ದರಂತೆ. ಸದ್ಯ ಗಂಡ ಮಂಜುನಾಥ, ಅತ್ತೆ ವಿದ್ಯಾ ವಿರುದ್ಧ ನಗರದ ಮಹಿಳಾ ಠಾಣೆಯಲ್ಲಿ ದೂರು ದಾಖಲಾಗಿದೆ. ಡಿವೈಎಸ್‌ಪಿ ಶಾಂತವೀರ ನೇತೃತ್ವದಲ್ಲಿ ತನಿಖೆ ಮಾಡಲಾಗುತ್ತಿದೆ.

ಬಿಜೆಪಿಗೆ ಭಾರೀ ಬೆಂಬಲ | ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ

ದೇಶದ್ರೋಹಿಗಳ ರಕ್ಷಣೆ ಕಾಂಗ್ರೆಸ್ ಸಾಧನೆ



◆ **ಬಾಗಲಕೋಟೆ:** ದೇಶದ್ರೋಹಿಗಳ ರಕ್ಷಣೆ, ಹಿಂದು ಮತ್ತು ದಲಿತರ ಶೋಷಣೆಗಳು ಕಾಂಗ್ರೆಸ್ ದುರಾಡಳಿತದ ಸಾಧನೆಯಾಗಿದ್ದು, ಭ್ರಷ್ಟಾಚಾರ ಮತ್ತು ಹಗರಣಗಳ ಸರದಾರರಾಗಿ ಬಾಗಲಕೋಟೆಯಲ್ಲಿ ಮತ ಕೇಳುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಕಾಂಗ್ರೆಸ್‌ನ್ನು ಬುಡ ಸಮೇತ ಕಿತ್ತು ಹಾಕಿ ಭದ್ರತೆಯ ಮತ್ತು ಭರವಸೆಯ ಬಿಜೆಪಿಯನ್ನು ಗೆಲ್ಲಿಸಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಭರ್ಜರಿ ರೋಡ್ ಶೋ

ಶಿರೂರ ಪಟ್ಟದಲ್ಲಿ ಮತ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮತದಾರರು ಇಟ್ಟುಕೊಂಡ ನಿರೀಕ್ಷೆಗಳನ್ನು ಮಣ್ಣು ಮಾಡಿದ್ದು ಕಿಸಾನ್ ಯೋಜನೆಗೆ, ರೈತ ಮಿತ್ರ ಯೋಜನೆಗಳಂತಹ ರೈತ ಯೋಜನೆಗಳನ್ನು ಮಣ್ಣು ಮಾಡಿ ಅನ್ನದಾತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ. ಗ್ಯಾರಂಟಿಗಳಿಗೆ ಹಣ ಕೊಡಲಾಗದೇ ಅಬಕಾರಿ ಇಲಾಖೆಯ ಸುಂಕ ಏರಿಸಿ ಆಸ್ಪತ್ರೆಗಳಿಗಿಂತ ಹೆಚ್ಚು ಮದ್ಯದ ಅಂಗಡಿಯನ್ನು ತೆರೆದಿದ್ದಾರೆ ಎಂದರು.

ದಲಿತ ಮಹಿಳೆಯರ ಹತ್ಯೆಯಾದರೂ ಸಾಂತ್ವನ ಹೇಳುವ ಕೆಲಸವನ್ನು ಕಾಂಗ್ರೆಸ್ ಮಾಡಿಲ್ಲ, ಹಿಂದು ಮೆರವಣಿಗೆಯ ಮೇಲೆ ಕಲ್ಲು ಎಸೆಯುವ ಕ್ರೂರಿಗಳ ರಕ್ಷಣೆ ಮಾಡುತ್ತಿದ್ದಾರೆ. ದೇಶ ವಿರೋಧಿ ಘೋಷಣೆ ಕೂಗುವ ದೇಶದ್ರೋಹಿಗಳ ಪರವಾಗಿ ನಿಲ್ಲುತ್ತಿದೆ. ಬಾದಾಮಿಯು ಮುಖ್ಯಮಂತ್ರಿಗಳಿಗೆ ರಾಜಕೀಯದಲ್ಲಿ ಪುನರ್ಜನ್ಮ ನೀಡಿದರೂ ಬಾಗಲಕೋಟೆಗೆ ವಿಶೇಷ ಅನುದಾನ ಕೊಡದೇ ಈ ಭಾಗಕ್ಕೂ ಮಲತಾಯಿ ಧೋರಣೆ ಮಾಡಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಮೂರು ವರ್ಷದ ಆಡಳಿತದಲ್ಲಿ ಕಾಂಗ್ರೆಸ್ ಸರ್ಕಾರ ನಿರಾಶಾಭಾವ ಹುಟ್ಟಿಸುವ ಕೆಲಸವ ಮಾಡಿದೆ. ನೀರಾವರಿ ಮತ್ತು ರೈತರ ಬಗ್ಗೆ ನಿರ್ಲಕ್ಷ್ಯ ಧೋರಣೆಮಾಡಿದ್ದು ಶಿರೂರ ಗುಡ್ಡವನ್ನು ವಕ್ಫ್ ಆಸ್ತಿಯನ್ನಾಗಿ ಮಾಡಿ ಹಿಂದುಗಳಿಗೆ ಮೋಸ ಮಾಡಿದೆ. ಇತ್ತಕಡೆ ಪ.ಪಂ ಚುನಾವಣೆಗಳನ್ನು ಮಾಡದೇ ಅದರಲ್ಲೂ ಹಗರಣ ಮಾಡಲು ಮುಂದಾಗಿದೆ. ಅದಕ್ಕೆ ತಕ್ಕಪಾಠ ಕಲಿಸಲು ಬಿಜೆಪಿ ಗೆಲ್ಲಿಸಬೇಕು ಎಂದರು.

> ಬಡವರ ಹೆಸರಿನಲ್ಲಿ ಮೊಸಳೆ ಕಣ್ಣೀರು ಸುರಿಸುತ್ತಿರುವ ಕಾಂಗ್ರೆಸ್ ಅಧಿಕಾರ ದಾಹಕ್ಕಾಗಿ ಬಡವರನ್ನೇ ಬಲಿ ಪಡೆಯುತ್ತಿದ್ದಾರೆ. ಭ್ರಷ್ಟ ಆಡಳಿತಕ್ಕೆ ಹೆಸರಾದ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದಲ್ಲಿ ಒಂದೇ ಒಂದು ಸಮರ್ಪಕವಾದ ಯೋಜನೆ ನೀಡಲು ಸಾಧ್ಯವಾಗಿಲ್ಲ.
> ■ **ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಮಾಜಿ ಶಾಸಕ ಮುರಗೇಶ ನಿರಾಣಿ ಮಾತನಾಡಿ, ಕೋಟ್ಯಂತರ ಹಣವನ್ನು ಸಾಲ ಮಾಡಿರುವುದೇ ಕಾಂಗ್ರೆಸ್ ಸಾಧನೆಯಾಗಿದೆ. ದೇಶವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದ ಕಾಂಗ್ರೆಸ್ ಆಡಳಿತದ ನಂತರ ಜಗತ್ತಿನಲ್ಲಿಯೇ ಮೂರನೇ ಸ್ಥಾನಕ್ಕೆ ತಂದು ನಿಲ್ಲಿಸಿದ ಕೀರ್ತಿ ಮೋದಿಯವರದ್ದಾಗಿದೆ. ಬಾಗಲಕೋಟೆ ಮತಕ್ಷೇತ್ರದಲ್ಲಿ ಚರಂತಿಮಠರ ಆಡಳಿತದಲ್ಲಿ ಜಾರಿಯಾದ ಗುತ್ತಿಗೆ ಕೆಲಸಗಳನ್ನು ಕೂಡ ಮಾಡುವಲ್ಲಿ ಅಸಮರ್ಪಕವಾಗಿದೆ. ಈ ಭಾರಿ ವೀರಣ್ಣ ಚರಂತಿಮಠರಿಗೆ ಕುಟುಂಬ ಸಮೇತ ಮತನೀಡಿ ಎಂದು ಮನವಿ ಮಾಡಿದರು.

ವೀರಣ್ಣ ಚರಂತಿಮಠ ಮಾತನಾಡಿ, ಬಿಜೆಪಿ ಆಡಳಿತದಲ್ಲಿ ಆದ ದೇವಸ್ಥಾನಗಳ ಪುನರುಜ್ಜೀವನ, ನೀರಾವರಿ, ಪಪಂ ನಿರ್ಮಾಣ, ರಸ್ತೆ ಕಾಮಗಾರಿ ಆದೇಶದ ಅಭಿವೃದ್ಧಿ ಕೆಲಸ ಮಾಡಿದ್ದೇವೆ. ಆದರೆ ಕಾಂಗ್ರೆಸ್ ಸರ್ಕಾರಕ್ಕೆ ಅವುಗಳನ್ನು ಕೂಡ ಸಂಪೂರ್ಣವಾಗಿಸಲು ಸಾಧ್ಯವಾಗದೆ ಸೋತು ಹೋಗಿದ್ದು ಬಿಜೆಪಿ ಬೆಂಬಲಿಸಿ ಅಭಿವೃದ್ಧಿಪರ ಪಕ್ಷ ಗೆಲ್ಲಿಸಿ ಎಂದರು.

ಮಾಜಿ ಸಚಿವ ಬಿ.ಶ್ರೀರಾಮಲು,ಸಂಸದ ಗೋವಿಮದ ಕಾರಜೋಳ ಮಾತನಾಡಿದರು.

ಜಮಖಂಡಿ ಶಾಸಕ ಜಗದೀಶ ಗುಡಗುಂಟಿ, ಬಾದಾಮಿ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಪ್ರದಾನ ಕಾರ್ಯದರ್ಶಿ ರಾಜು ನಾಯಕ, ಸರಸ್ವತಿ ಕುರಬರ,ಶೀವಲೀಲಾ ಪಟ್ಟಣಶೆಟ್ಟಿ ಕಿರಣ ಕೋರಿ, ಮಲ್ಲು ಕಾಂಭಳೆ, ವಿಶ್ವನಾಥ ವಿಜಾಪುರ, ಸೇರಿದಂತೆ ಬಿಜೆಪಿ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಂಗ್ರೆಸ್ ಗೆಲುವು ಖಚಿತ: ರಾಯರೆಡ್ಡಿ

◆ **ಕುಕನೂರು:** ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ 50 ಸಾವಿರ ಲೀಡ್‌ನಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುತ್ತೇವೆ ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿದರು.

ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಜನಪರ ಕಾರ್ಯ ಎಲ್ಲರಿಗೂ ಹಿಡಿಸಿವೆ. ಬಿಜೆಪಿ ಸರ್ಕಾರದಿಂದ ಯಾವುದೇ ಅಭಿವೃದ್ಧಿಗಳಿಲ್ಲ. ಉಪ ಚುನಾವಣೆಯಲ್ಲೂ ಸಹ ಜನ ಬಿಜೆಪಿಗೆ ಮತ ಹಾಕುವುದಿಲ್ಲ. ಜನ ಎಂದೂ ಜಾತಿ, ಮತಗಳನ್ನು ನೋಡಿ ವೋಟ್ ಮಾಡುವುದಿಲ್ಲ. ಅಭಿವೃದ್ಧಿಗಾಗಿ ವೋಟ್ ಹಾಕುತ್ತಾರೆ ಎಂದರು.

ಸಿಎಂ ಸಿದ್ದರಾಮಯ್ಯ ಅವರ ಜನಪರ ಆಡಳಿತದ ಗೆಲುವು ಉಪಚುನಾವಣೆ ಆಗಲಿದೆ ಇನ್ನೂ 2 ವರ್ಷ ಸಿಎಂ ಸಿದ್ದರಾಮಯ್ಯ ರಾಜ್ಯಕ್ಕೆ ಜನಪರ ಆಡಳಿತ ನೀಡುತ್ತಾರೆ. ಅದರಲ್ಲಿ ಯಾವುದೇ ಮಾತಿಲ್ಲ. ಡಿಸಿಎಂ ಡಿಕೆಶಿ ನೇತೃತ್ವದಲ್ಲಿ ಮುಂದಿನ 2028 ಚುನಾವಣೆ ಸಹ ಜರುಗುತ್ತದೆ. ಅಲ್ಲದೆ, ಸಂಸತ್ ಚುನಾವಣೆಯಲ್ಲಿ ಮುಂದಿನ ಸಲ ಬಿಜೆಪಿ ಹೆಚ್ಚು ಸ್ಥಾನ ಗೆಲ್ಲಲು ಆಗುವುದಿಲ್ಲ. 2024ರ ಚುನಾವಣೆಯಲ್ಲಿ ಪ್ರಧಾನಿ ಮೋದಿ 400ಕ್ಕೂ ಹೆಚ್ಚು ಸ್ಥಾನ ಗೆಲ್ಲುವೆ ಅನ್ನುತ್ತಿದ್ದರು. ಆದರೆ, ಗೆದ್ದಿದ್ದು 240 ಮಾತ್ರ. ಇಂಡಿಯಾ ಒಕ್ಕೂಟ ಇರದಿದ್ದರೇ ಅಧಿಕಾರಕ್ಕೆ ಬರುತ್ತಿರಲಿಲ್ಲ. ಮುಂದಿನ ಸಲ ಜನ ಕೇಂದ್ರದಲ್ಲಿ ಬಿಜೆಪಿಗೆ ಒಲವು ತೋರಿಸುವುದಿಲ್ಲ ಎಂದಿದ್ದಾರೆ. ರಾಜ್ಯದಲ್ಲಿ ಡಿಸೇಲ್ ದರ ಕಡಿಮೆ ಆಗಿಲ್ಲ, ಬದಲಿಗೆ ಡಿಸೇಲ್ ಕಂಪನಿಗಳಿಗೆ 3 ರೂಪಾಯಿ ದರವನ್ನು ಕಡಿಮೆ ಮಾಡಿದ್ದಾರೆ. ಇದರಿಂದ ಜನರಿಗೆ ಅನುಕೂಲ ಇಲ್ಲ. ರಾಜ್ಯದಲ್ಲಿಯೇ ಇನ್ನೂ ಡಿಸೇಲ್ ದರ ಪಕ್ಕದ ಮಹಾರಾಷ್ಟ್ರ, ಆಂಧ್ರ, ಕೇರಳ ರಾಜ್ಯಕ್ಕಿಂತ ಕಡಿಮೆ ಇದೆ ಎಂದರು.



ವಾಣಿಜ್ಯ ತೆರಿಗೆ ಇಲಾಖೆ ಡಿಸಿ ಲೋಕಾ ಬಲೆಗೆ

◆ **ಹುಬ್ಬಳ್ಳಿ:** ವಾಣಿಜ್ಯ ತೆರಿಗೆ ಇಲಾಖೆ ಡಿಸಿ ಭರತ್ ಹೆಗಡೆ ಎಂಬುವವರು ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದ ಘಟನೆ ಸೋಮವಾರ ನಡೆದಿದೆ.

ಬೆಂಗಳೂರು ಲೋಕಾಯುಕ್ತ ಅಧಿಕಾಗಳು ದಾಳಿ ಮಾಡಿ ಟ್ರ್ಯಾಪ್ ಮಾಡಿದ್ದು, 6 ಲಕ್ಷ ಹಣದ ಸಮೇತ ಹಿಡಿದಿದ್ದಾರೆ. ವಿಶ್ವಜಿತ್ ನಾಯಕ್ ಎಂಬುವವರು ಬೆಂಗಳೂರಿನಲ್ಲಿ ದೂರು ನೀಡಿದ್ದರು.

ಪೆಟ್ರೋಲ್ ಪಂಪ್ ಮಾಲೀಕರಾಗಿರುವ ವಿಶ್ವಜಿತ್ ನಾಯಕ್ ಅವರು 2019ರಲ್ಲಿ 8 ಟಿಪ್ಪರ್ ಖರೀದಿ ಮಾಡಿದ್ದರು. ಇದರ ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ 60 ಲಕ್ಷ ಬಂದಿತ್ತು ಎನ್ನಲಾಗಿದೆ.


60 ಲಕ್ಷ ರೂಗಳ ತೆರಿಗೆಯಲ್ಲಿ ಕಡಿಮೆ ಮಾಡಲು 10 ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಇದಕ್ಕಾಗಿ ನಾಲ್ಕು ಬಾರಿ ವಿಚಾರಣೆಗೆ ಕರೆದಿದ್ದು, ಐದನೇ ಬಾರಿಗೆ ಹಣ ತೆಗೆದುಕೊಂಡು ಬನ್ನಿ ಕೇಸ್ ಕ್ಲೋಸ್ ಮಾಡುತ್ತೇನೆ ಎಂದು ಹೇಳಿದ್ದರು. ಹೀಗಾಗಿ ಬೆಂಗಳೂರು ಲೋಕಾಯುಕ್ತಕ್ಕೆ ವಿಶ್ವಜಿತ್ ದೂರು ಸಲ್ಲಿಸಿದ್ದು, ಕಾರ್ಯಚರಣೆ ಮಾಡಿರುವ ಲೋಕಾಯುಕ್ತ ಪೊಲೀಸರು ಹುಬ್ಬಳ್ಳಿಯ ನವನಗರದ ಬಳಿ ಇರುವ ಕಚೇರಿಯಲ್ಲಿ ಬಲೆಗೆ ಕೆಡವಿದ್ದಾರೆ.

ವಿಶ್ವಜಿತ್ ನಾಯಕ್ ಎಂಬುವರಿಗೆ 60 ಲಕ್ಷ ತೆರಿಗೆ ಹಣ ಕಟ್ಟುವಂತೆ ಹಾಗೂ ಹಣ ಕಟ್ಟದಂತೆ ಮಾಡಲು ಭರತ್ ಹೆಗ್ಗಡೆ ನೋಟಿಸ್ ನೀಡಿದ್ದರು.

6 ಲಕ್ಷ ಹಣದ ಸಮೇತ ವಶಪಡಿಸಿಕೊಂಡಿರುವ ಲೋಕಾಯುಕ್ತ ಪೊಲೀಸರು ಅಧಿಕಾರಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಬೆಂಗಳೂರು ಲೋಕಾಯುಕ್ತ ಎಸ್ಪಿ ಶಿವಪ್ರಕಾಶ ದೇವರಾಜ್, ಡಿವೈಎಸ್ಪಿ ಮಲ್ಲಿಕಾರ್ಜುನ ಚುಕ್ಕಿ, ಪ್ರದೀಪಕುಮಾರ, ಇನ್ಸಪೆಕ್ಟರ್ ರಾಜು ನೇತೃತ್ವದ ತಂಡ ದಾಳಿ ಮಾಡಿದೆ.

ರಾಜ್ಯೋತ್ಸವ ಅನುದಾನ ದುರ್ಬಳಕೆ ಜಿಲ್ಲಾಡಳಿತದ ವಿರುದ್ಧ ಕನ್ನಡಪರ ಸಂಘಟನೆಗಳ ಆಕ್ರೋಶ



◆ **ಬೆಳಗಾವಿ:** ರಾಜ್ಯ ಸರ್ಕಾರ ಬೆಳಗಾವಿಯ ಕನ್ನಡ ರಾಜ್ಯೋತ್ಸವಕ್ಕೆ 50 ಲಕ್ಷ ರೂ. ಅನುದಾನ ನೀಡಿತ್ತು. ಆದರೆ ಜಿಲ್ಲಾಡಳಿತವು ಆದರಲ್ಲಿನ ಹಣ ದುರ್ಬಳಕ್ಕೆ ಮಾಡಿಕೊಂಡಿದೆ ಎಂದು ಆರೋಪಿಸಿದರು.

ಸೋಮವಾರಸರ್ಕಿಟ್‌ಹೌಸ್‌ನಲ್ಲಿಕನ್ನಡ ಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಅವರ ನೇತೃತ್ವದಲ್ಲಿ 12 ಕನ್ನಡಪರ ಸಂಘಟನೆಗಳ ಸದಸ್ಯರುಗಳು ಸೇರಿ ಕನ್ನಡ ರಾಜ್ಯೋತ್ಸವಕ್ಕೆ ರಾಜ್ಯ ಸರ್ಕಾರ ನೀಡಿರುವ ಹಣ ಜಿಲ್ಲಾಡಳಿತ ದುರ್ಬಳಕ್ಕೆ ಮಾಡಿಕೊಂಡಿರುವುದ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಲಾಯಿತು.

ಏಪ್ರಿಲ್ ಎರಡನೇ ವಾರದಲ್ಲಿ 12 ಸಮಾನ ಮನಸ್ಕ ಕನ್ನಡ ಸಂಘಟನೆಗಳ ನಿಯೋಗವು ಸಿಎಂ, ಎಚ್ಕೆ ಪಿ, ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡುವುದಾಗಿ ಸಭೆಯಲ್ಲಿ ತೀರ್ಮಾಣಿಸಲಾಗಿದೆ ಎಂದು ಅಶೋಕ ಚಂದರಗಿ ಹೇಳಿದರು.

ಇದಕ್ಕೂ ಮೊದಲು ಬೆಳಗಾವಿಯ ಮಹಾನಗರ ಪಾಲಿಕೆಯ ಸರ್ವಸಾಧಾರಣ ಸಭೆಯಲ್ಲಿ ಕರ್ನಾಟಕ ಪರವಾದ ನಿರ್ಣಯಗಳನ್ನು ಅಂಗಿಕರಿಸುವಂತೆ ಆಗ್ರಹಿಸಿ ಈಗಾಗಲೇ ಮನವಿ ಸಲ್ಲಿಸಲಾಗಿದೆ ಎಂದು ಕನ್ನಡಪರ ಸಂಘಟನೆಗಳ ಸದಸ್ಯರು ಒಪ್ಪಿಗೆ ವ್ಯಕ್ತ ಪಡಿಸಿ, ಮಹಾ ನಗರ ಪಾಲಿಕೆಯ ನೂತನ ಕನ್ನಡದ ಮಾಹಾಪೌರ, ಉಪಮಾಹಾಪೌರರಿಗೆ ಪ್ರತ್ಯೇಕವಾಗಿ ಮನವಿ ಮಾಡಿಕೊಳ್ಳಲಿದ್ದಾರೆ.

ಇದೇ ವೇಳೆ ರಾಜ್ಯೋತ್ಸವ ಅನುದಾನದ ದುರ್ಬಳಕೆಯ ಬಗ್ಗೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಗಡಿ ಉಸ್ತುವಾರಿ ಸಚಿವರಿಗೆ, ಅನುದಾನ ನೀಡಿದ ಪ್ರವಾಸೋದ್ಯಮ ಕಾರ್ಯದರ್ಶಿಗೆ ದೂರು ನೀಡಿದ್ದು, ಈ ಸಂಬಂಧ ಉನ್ನತ ಮಟ್ಟದಲ್ಲಿ ಚರ್ಚೆ ಹಾಗೂ ಕ್ರಮದ ಬಗ್ಗೆ ತಮಗೆ ಅಂಕೃತ ಮಾಹಿತಿಯನ್ನು ಒದಗಿಸಲಾಗಿದೆ ಎಂದು ಬಲರಾಮ ಮಾಸೇನಟ್ಟಿ ಸಭೆಗೆ ತಿಳಿಸಿದರು.

ಈ ಹಿನ್ನೆಲೆಯಲ್ಲಿ ಬೆಂಗಳೂರಿಗೆ ನಿಯೋಗ ಒಯ್ದ ಸಂದರ್ಭದಲ್ಲಿ ದಾಖಲೆ ಸಹಿತ ಚರ್ಚಿಸಲು ಆಗ್ರಹಿಸಲಾಗುವದೆಂದು ಅಶೋಕ ಚಂದರಗಿ ಅಭಿಪ್ರಾಯವನ್ನು ತಿಳಿಸಿದರು.

ಕನ್ನಡ ಭವನ ಸರ್ಕಾರದ ಅಸ್ತಿಯಾಗಿದ್ದು ಅದರ ರಕ್ಷಣೆ ಹಿರಿಯ ಅಂಕಾರಿಗಳ ಕರ್ತವ್ಯ. ಆದರೆ, ಉದ್ದೇಶ ಪೂರ್ವಕವಾಗಿ ಖಾಸಗಿ ಸಂಘದವರ ಜೊತೆಗೆ ಶಾಮೀಲಾದ ಅಕಾರಿಗಳ ಮುಖವಾಡವನ್ನು ಸಿಎಂ, ಗಡಿ ಉಸ್ತುವಾರಿ ಸಚಿವರು ಮತ್ತು ಮುಖ್ಯ ಕಾರ್ಯದರ್ಶಿ ಎದುರು ಬಯಲು ಮಾಡಲು ಸಭೆಯಲ್ಲಿ ಅನೇಕರು ಆಗ್ರಹಿಸಿದರು.

ಈ ವೇಳೆ ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಮಹಾದೇವ ತಳವಾರ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಬಲರಾಮ ಮಾಸೇನಾಟ್ಟಿ, ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ಜಿಲ್ಲಾಧ್ಯಕ್ಷ ವಾಜಿದ ಹಿರೇಕೋಡಿ, ಸರ್ವೋದಯ ಸಂಘದ ಅಧ್ಯಕ್ಷ ಶ್ರೀನಿವಾಸ ತಾಳೂಕರ, ನಾಗೇಶ ಕೊಪ್ಪದ, ದಯಾನಂದ ಪವಾರ, ಈಶ್ವರಗೌಡ ಪಾಟೀಲ, ಸಣ್ಣತಮ್ಮ ಮೂಕನವರ, ಬಾಳಪ್ಪ ಗುಡಗನಟ್ಟಿ, ಮಲ್ಲಪ್ಪ ಗುಡಗನಟ್ಟಿ, ಅರವಿಂದಸಿಂಗ್ ನೇರಲಿ, ಸತೀಶ ನಾಯಕ, ಫಾರಿದಾ ನದಾಫ್ ಸಂಗೀತ ಕಾಂಬಳೆ, ರಾಣಿ ಬಿಟಿ ಸೇರಿದಂತೆ ಹಲವರು ಸಭೆಯಲ್ಲಿ ಭಾಗಿಯಾಗಿದ್ದರು.


ತಾಂತ್ರಿಕ ದೋಷ: ಕಾರ್‌ಗೆ ಬೆಂಕಿ

◆ **ಧಾರವಾಡ:** ತಾಂತ್ರಿಕ ದೋಷದಿಂದ ಇಲ್ಲಿಯ ಬೈಪಾಸ್ ರಸ್ತೆಯಲ್ಲಿ ಕಾರೊಂದರಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಕಾರು ಸಂಪೂರ್ಣ ಸುಟ್ಟ ಘಟನೆ ಸೋಮವಾರ ನಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ. ಹುಬ್ಬಳ್ಳಿಯ ಆನಂದ ನಗರ ನಿವಾಸಿ ಆಶೀಫ್ ಎಂಬುವರಿಗೆ ಸಂಬಂಧಿಸಿದ ಕಾರು ಇದಾಗಿದ್ದು, ಬೆಳಗಾವಿಗೆ ಹೊರಟಾಗ ದಾರಿ ಮಧ್ಯೆ ಕಾರಿನ ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಬೆಂಕಿ ಇಡೀ ಕಾರನ್ನು ಆವರಿಸಿಕೊಂಡಿದೆ. ಗ್ರಾಮೀಣ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ನಂತರ ಅಗ್ನಿಶಾಮಕ ದಳದವರು ಆಗಮಿಸಿ ಬೆಂಕಿ ಆರಿಸಿದ್ದಾರೆ.

ಸಚಿವ ಡಾ.ಶರಣಪ್ರಕಾಶ್ ಪಾಟೀಲ ಹೇಳಿಕೆ

ರಾಜ್ಯಾದ್ಯಂತ ಮಧುಮೇಹ ಪಾದ ತಪಾಸಣೆ ವಿಸ್ತರಣೆ

◆ **ಕಲಬುರಗಿ:** ಮಧುಮೇಹದಿಂದ ಉಂಟಾಗುವ ಪಾದ ಸಂಬಂಧಿತ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಪ್ರೈಯಾಸ್ (ಪೋಡಿಯಾಟ್ರಿ ರೀಚ್ ಅಕ್ರಾಸ್ ಇಂಡಿಯಾ ಫಾರ್ ಅವೇರ್‌ನೆಸ್ ಆ್ಯಂಡ್ ಸ್ಕ್ರೀನಿಂಗ್) ರಾಷ್ಟ್ರೀಯ ಅಭಿಯಾನಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಕಲಬುರಗಿಯ ಗುಲ್ಬರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್)ಯಲ್ಲಿ ಅಧಿಕೃತ ಚಾಲನೆ ನೀಡಿದರು.



ಬಳಿಕ ಮಾತನಾಡಿದ ಅವರು, ದೇಶದಲ್ಲೇ ಮೊದಲ ಬಾರಿಗೆ ಪರಿಚಯಿಸಲಾಗುತ್ತಿರುವ 'ಡಿಜಿಟಲ್ ಪೋಡಿಯಾಟ್ರಿ ತಪಾಸಣಾ ವ್ಯಾನ್'ಗೆ ಹಸಿರು ನಿಶಾನೆ ತೋರಿಸಿದ್ದು, ಈ ವ್ಯಾನ್ ಮೂಲಕ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಧು ಮೇಹ ಪಾದ ತಪಾಸಣೆ ಸೇವೆಯನ್ನು ಜನರ ಬಳಿಗೆ ಕೊಂಡೊಯ್ಯಲಾಗುತ್ತದೆ ಎಂದರು.

ಬೆಂಗಳೂರಿನ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಎಂಡೋಕ್ರೈನಾಲಜಿ ಮಾದರಿಯಲ್ಲಿ ಕಲಬುರಗಿ ಹಾಗೂ ಮೈಸೂರಿನಲ್ಲಿ ಶಾಖಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಪಂಚದಲ್ಲಿ ಪ್ರತಿ 20 ಸೆಕೆಂಡಿಗೆ ಒಬ್ಬ ವ್ಯಕ್ತಿಯ ಕಾಲು ಮಧುಮೇಹದಿಂದ ಕತ್ತರಿಸಲಾಗುತ್ತಿದ್ದು, ಭಾರತದಲ್ಲಿ ಪ್ರತಿ 12 ಸೆಕೆಂಡಿಗೆ ಹೊಸ ಡಯಾಬಿಟಿಕ್ ಫೂಟ್ ಪ್ರಕರಣಗಳು ಕಂಡು ಬರುತ್ತಿವೆ ಎಂಬ ಆತಂಕಕಾರಿ ಅಂಕಿ-ಅಂಶಗಳನ್ನು ಸಚಿವರು ಉಲ್ಲೇಖಿಸಿ, ದೇಶದಲ್ಲಿ ಸುಮಾರು 10 ಕೋಟಿ ಜನರು ಮಧುಮೇಹದಿಂದ ಬಳಲುತ್ತಿರುವ ಹಿನ್ನೆಲೆ ಪಾದಗಳ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದರು.

ಡಾ.ಪವನ್ ಬೇಲೆಹಳ್ಳಿ ಮಾತನಾಡಿದರು. 'ಪ್ರೈಯಾಸ್' ಅಭಿಯಾನದ ಮೂಲಕ ಜಾಗೃತಿ, ತಪಾಸಣೆ ಹಾಗೂ ಚಿಕಿತ್ಸಾ ಮಾರ್ಗದರ್ಶನವನ್ನು ಜನರಿಗೆ ತಲುಪಿಸುವ ಗುರಿ ಹೊಂದಲಾಗಿದೆ. ಈ ಮೂಲಕ ಮಧುಮೇಹ ಪಾದ ಸಮಸ್ಯೆಗಳಿಂದ ಉಂಟಾಗುವ ಅಂಗವೈಕಲ್ಯವನ್ನು ಕಡಿಮೆ ಮಾಡುವ ನಿರೀಕ್ಷೆ ವ್ಯಕ್ತವಾಗಿದೆ ಎಂದರು.

ಜಿಮ್ಸ್‌ನ ಡೀನ್ ಹಾಗೂ ನಿರ್ದೇಶಕ ಡಾ.ಉಮೇಶ್ ಎಸ್.ಆರ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಶಿವಕುಮಾರ್ ಸಿ.ಆರ್, 'ಫೂಟ್-ಸ್ಕ್ಯೊರ್' ಸ್ಥಾಪಕ ಡಾ.ಸಂಜಯ್ ಶರ್ಮ ಮತ್ತು 'ಸ್ಪ್ರೆಡ್ ಏಯ್ಡ್' ಸ್ಥಾಪಕ ಡಾ.ಪವನ್ ಬೇಲೇಹಳ್ಳಿ ಸೇರಿದಂತೆ ಹಲವು ಗಣ್ಯರ ಈ ಮಹತ್ವದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಡಯಾಬಿಟಿಕ್ ಫೂಟ್ ಕೇರ್‌ಗಾಗಿ ಪೋಡಿಯಾಟ್ರಿ ವಿಭಾಗಗಳನ್ನು ಆರಂಭಿಸಲಾಗುವುದರ ಜೊತೆಗೆ ಮಧುಮೇಹ ಪಾದ ತಪಾಸಣೆ ವ್ಯವಸ್ಥೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದು.
> ■ **ಡಾ.ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ**

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದಿನಿಂದ ಜಾತ್ರೆ

• **ಯಮಕನಮರಡಿ:** ಸ್ಥಳೀಯ ಜಾಗೃತ ದೇವಸ್ಥಾನ ಶ್ರೀ ರೇಣುಕಾ ಎಲ್ಲಮ್ಮ ದೇವತೆಯ ಜಾತ್ರೆಯು ಪ್ರತಿವರ್ಷದ ಪದ್ಧತಿಯಂತೆ ಮಾ.31ರಂದು ಪ್ರಾರಂಭವಾಗಲಿದ್ದು, ಜಾತ್ರಾ ಮಹೋತ್ಸವ ಅಂಗವಾಗಿ ವಿವಿಧ ಸ್ಪರ್ಧೆಗಳು ಹಾಗೂ ಮನರಂಜನ ಕಾರ್ಯಕ್ರಮಗಳು ಜರುಗಲಿದ್ದು ಮಹಾಪ್ರಸಾದ ಇತ್ಯಾದಿ ಕಾರ್ಯಕ್ರಮ ರಾತ್ರಿ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಾತ್ರಾ ಕಮಿಟಿ ತಿಳಿಸಿದೆ.



ಶಿಕ್ಷಕಿ ದೀಪಿಕಾಗೆ ವಿದ್ಯಾ-ವಾರಿಧಿ ಪ್ರಶಸ್ತಿ

• **ಬೆಳಗಾವಿ:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ಘಟಕ, ಬೆಳಗಾವಿ ಮತ್ತು ಅಖಿಲ ಕರ್ನಾಟಕ ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘ, ಜಿಲ್ಲಾ ಘಟಕ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಕುಮಾರ ಗಂಧರ್ವ ಹಾಲ್ ನಲ್ಲಿ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಗ್ರಾಮೀಣ ಭಾಗದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಪ್ರತಿಮ ಸೇವೆಯನ್ನು ಗಮನಿಸಿ ಚಚಡಿ ಸರಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆಯ ಪದವೀಧರ ಶಿಕ್ಷಕಿ ದೀಪಿಕಾ ಹಾಲಪ್ಪನವರ ಅವರಿಗೆ ಜಿಲ್ಲಾ ಮಟ್ಟದ ವಿದ್ಯಾ ವಾರಿಧಿ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಡಿ.ಡಿ.ಪಿ.ಐ. ಲೀಲಾವತಿ ಹಿರೇಮಠ, ಬೆಳಗಾವಿ ಮಹಾನಗರ ಪಾಲಿಕೆಯ ಮಹಾಪೌರ ಪ್ರೀತಿ ಕಾಮಕರ, ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಜಿಲ್ಲಾ ಅಧ್ಯಕ್ಷ ಜಯಕುಮಾರ ಹೆಬಳಿ, ಪ್ರಧಾನ ಕಾರ್ಯದರ್ಶಿ ರಮೇಶ ಗೋಣಿ, ಶಿಕ್ಷಕರ ಸಂಘದ ಎಂ.ಎಫ್. ಸಿದ್ದನಗೌಡರ, ಮಲ್ಲಿಕಾರ್ಜುನ ಕೋಳಿ ಒಳಗೊಂಡಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿಕ್ಷಕರ ಸಂಘದ ಪಧಾಧಿಕಾರಿಗಳು, ಜಿಲ್ಲೆಯ ಶಿಕ್ಷಕರು ಉಪಸ್ಥಿತರಿದ್ದರು.



ಭಗವಾನ ಮಹಾವೀರ ಜಯಂತಿ ಆಚರಣೆ



• **ತೆಲಸಂಗ:** ತೆಲಸಂಗ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ಸೋಮವಾರ ಭಗವಾನ್ ಮಹಾವೀರರ ಜಯಂತಿ ಕಾರ್ಯಕ್ರಮ ನಡೆಯಿತು. ಕಾರ್ಯದರ್ಶಿ ಭೀಮಾಶಂಕರ ದಂದರಗಿ, ಗ್ರಾಮ ಪಂಚಾಯಿತಿ ಸದಸ್ಯರಾದ ವಿಲಾಸ್ ಮೋರೆ, ಸಿದ್ದಲಿಂಗ ಮಾದರ್, ರಾಮು ನಿಡೋಣಿ, ಪರಸು ಕಂಡರೆ, ಶಿವಾನಂದ್ ಬನಗೊಂಡ, ರಾಜು ಕುಮುಟಳ್ಳಿ, ಮಹೇಶ್ ಕುಂಬಾರ್ ಸೇರಿದಂತೆ ಪಂಚಾಯಿತಿ ಸಿಬ್ಬಂದಿ ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

ಜಂಗೀ ನಿಖಾಲಿ ಕುಸ್ತಿಗೆ ಚನ್ನರಾಜ ಹಟ್ಟಿಹೊಳಿ ಚಾಲನೆ



• **ಬೆಳಗಾವಿ:** ತಾಲೂಕಿನ ಹಿರೇಬಾಗೇವಾಡಿ ಗ್ರಾಮದ ಆರಾಧ್ಯ ದೈವ ಶ್ರೀ ಫಡಿಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಭಾರಿ ಜಂಗೀ ನಿಖಾಲಿ ಕುಸ್ತಿ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭಾನುವಾರ ಸಂಜೆ ಚಾಲನೆ ನೀಡಿದರು. ನಮ್ಮ ಮಣ್ಣಿನ ಸಾಂಪ್ರದಾಯಿಕ ಕಲೆಯಾದ ಕುಸ್ತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಲಕ್ಷ್ಮೀತಾಯಿ ಫೌಂಡೇಶನ್ ವತಿಯಿಂದ ದೇಣಿಗೆಯನ್ನು ನೀಡಿ, ಕುಸ್ತಿ ಪಟುಗಳಿಗೆ ಬೆಂಬಲ ನೀಡಲಾಗುತ್ತಿದ್ದು, ಗ್ರಾಮೀಣ ಕ್ಷೇತ್ರದಲ್ಲಿ ಶೀಘ್ರದಲ್ಲೇ ಕುಸ್ತಿ ಆಖಾಡ ನಿರ್ಮಾಣ ಮಾಡಲಾಗುವುದು ಎಂದು ಅವರು ತಿಳಿಸಿದರು. ಈ ವೇಳೆ ಗ್ರಾಮದ ಹಿರಿಯರು, ಯುವಕರು, ದೇವಸ್ಥಾನ ಸಮಿತಿಯ ಸದಸ್ಯರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.



ಯಮಕನಮರಡಿ: ಸ್ಥಳೀಯ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಭಗವಾನ್ ಮಹಾವೀರರ 2624 ನೇ ಜಯಂತಿಯನ್ನು ಭಕ್ತಿ ಪೂರ್ವಕ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಿಬ್ಬಂದಿ ವರ್ಗ ಉಪಚುತರಿದ್ದರು.

ಸತ್ಯ, ಅಹಿಂಸೆ ತತ್ವ ಪಾಲಿಸೋಣ

• **ಕಕಮರಿ:** ಭಗವಾನ ಮಹಾವೀರರು ಮಾನವ ಕಲ್ಯಾಣಕ್ಕಾಗಿ ಬೋಧಿಸಿದ ಸತ್ಯ, ಅಹಿಂಸೆ, ಮತ್ತು ಅಪರಿಗ್ರಹ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದು ಶ್ರೀ ಅಮ್ಮಾಜೇಶ್ವರಿ ದೇವಸ್ಥಾನ ಅಧ್ಯಕ್ಷ ಅಪ್ಪುಗೌಡ ಪಾಟೀಲ ಹೇಳಿದರು. ಅವರು ಸೋಮವಾರ ಭಗವಾನ ಮಹಾವೀರ ವೃತ್ತದಲ್ಲಿ 1008 ಭಗವಾನ ಮಹಾವೀರರ 2625ನೇ ಜನ್ಮಕಲ್ಯಾಣ ಮಹೋತ್ಸವದ ಪೋಟೋ ಪೂಜಾ ನೇರವೇರಿಸಿ ಮಾತನಾಡಿದ ಅವರು, ಮಹಾವೀರರು ಮಾನವ ಕಲ್ಯಾಣಕ್ಕಾಗಿ ವಿಶ್ವಶಾಂತಿ ಸಂದೇಶ ನೀಡಿದ್ದಾರೆ. ಆ ಸಂದೇಶ ಜೈನರಿಗಷ್ಟೆ ಅಲ್ಲ, ಇಡೀ ಮಾನವರಿಗೆ ನೀಡಲಾಗಿದೆ. ಅಹಂಕಾರ, ಕ್ರೋಧ, ಮೋಹದಿಂದ ನಾವು ದೂರವಿರಬೇಕು. ನಮ್ಮ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಬೇಕು. ಆಗ ನಾವೆಲ್ಲರೂ ಸಹ ಮಹಾವೀರರಂತೆ ಆಗಲು ಸಾಧ್ಯ ಎಂದರು. ಜಿಪಂ ಮಾಜಿ ಸದಸ್ಯ ಗುರಪ್ಪ ದಾಶ್ಯಾಳ ಮಾತನಾಡಿ ಭಗವಾನ ಮಹಾವೀರರು ತಮ್ಮ ಜೀವನವನ್ನು ಮಾನವ ಕಲ್ಯಾಣಕ್ಕಾಗಿ ಮೀಸಲಿಟ್ಟು ವಿಶ್ವದ ಶಾಂತಿಗೆ ಶ್ರಮಿಸಿದರು. ಇಂತಹ ಮಹಾನ್ ಪರುಷರ ಜೀವನ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗೋಣ ಎಂದರು. ಹಿರಿಯರಾದ ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಅಣ್ಣಪ್ಪ ತಂಗಡಿ, ಅಪ್ಪಾಸಾಬ ಈರಗೌಡ, ಬುಜಪ್ಪ ಸವದತ್ತಿ, ಜಿನ್ನಪ್ಪ ಕೋರಬು, ಮಹಾವೀರ ಕೋರಬು, ಕುಮಾರ ಕೋರಬು, ನರಸಪ್ಪ ಕೋರಬು, ರಾಯಗೊಂಡ ದುರ್ಗಣ್ಣವರ, ರವಿ ಸವದತ್ತಿ, ವಿಧ್ಯಾಸಾಗರ ಕೋರಬು, ಅಣ್ಣಪ್ಪ ಚಿಗದೊಳ್ಳಿ ಇತರರಿದ್ದರು ಶಿಕ್ಷಕ ಮಹಾಂತೇಶ ಮಠಪತಿ ಸ್ವಾಗತಿಸಿ ನಿರೂಪಿಸಿದರು.



ಕಕಮರಿ: ಭಗವಾನ ಮಹಾವೀರ ವೃತ್ತದಲ್ಲಿ 1008 ಭಗವಾನ ಮಹಾವೀರರ 2625ನೇ ಜನ್ಮಕಲ್ಯಾಣ ಮಹೋತ್ಸವದ ಧ್ವಜಾರೋಹಣ ನೇರವೆರಿಸಿ ಶ್ರೀ ಅಮ್ಮಾಜೇಶ್ವರಿ ದೇವಸ್ಥಾನ ಅಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿದರು.

ಸಂಭ್ರಮದ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವ

ಗಮನ ಸೆಳೆದ ಬೃಹತ್ ಶೋಭಾಯಾತ್ರೆ

• **ಬೆಳಗಾವಿ:** ಕುಂದಾನಗರಿಯಲ್ಲಿ ಜೈನ ಸಮಾಜದ ವತಿಯಿಂದ ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವವನ್ನು ಅತ್ಯಂತ ಸಂಭ್ರಮ ಸಡಗರದಲ್ಲಿ ಆಚರಿಸಲಾಯಿತು.

ಸೋಮವಾರ ಬೆಳಗಾವಿಯ ಟಿಳಕಚೌಕದಲ್ಲಿ ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವದ ಶೋಭಾಯಾತ್ರೆಯನ್ನು ಅದ್ದೂರಿ ಯಾಗಿ ಮಾಜಿ ಶಾಸಕ ಸಂಜಯ್ ಪಾಟೀಲ, ಶಾಸಕ ಅಭಯ್ ಪಾಟೀಲ ನೇತೃತ್ವದಲ್ಲಿ ಚಾಲನೆ ನೀಡಿದರು.

ಸಮಾರಂಭಕ್ಕೆಮುಖ್ಯ ಅತಿಥಿಯಾಗಿಆಗಮಿಸಿದ್ದ ಆದಾಯ ತೆರಿಗೆ ಇಲಾಖೆಯ ನಿವೃತ್ತ ಆಯುಕ್ತ ನರೇಂದ್ರ ಜೈನ ಮಾತನಾಡಿ, ಬೆಳಗಾವಿಯಲ್ಲಿ ಜೈನ ಸಮಾಜ ಕಳೆದ 28 ವರ್ಷಗಳಿಂದ ಮಹೋತ್ಸವ ವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತ ಬಂದಿದ್ದು ಇಡಿ ದೇಶಕ್ಕೆ ಮಾದರಿಯಾಗಿದೆ . ಇದೆ ರೀತಿ ಈ ಮಹೋತ್ಸವ ಸಮಾರಂಭ ಮುಂದುವರಿಯಲಿ ಎಂದು ಹಾರೈಸಿದರು.

ಮಾಜಿ ಶಾಸಕ ಅನಿಲ ಬೆನಕೆ ಮಾತನಾಡಿ, ಜೈನ ಸಮಾಜ ಬಾಂಧವರು ತನು,ಮನ , ಧನದಿಂದ ಈ ಆಚರಣೆ ನಡೆಸುತ್ತಿದ್ದು ಇತರೆ ಸಮಾಜಕ್ಕೆ ಮಾದರಿಯಾಗಿದೆ ಎಂದು ಹೇಳಿದರು.



ಸಮಾರಂಭದಲ್ಲಿ ಶಾಸಕ ಅಭಯ ಪಾಟೀಲ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಮೋದ ಪಾಟೀಲ ಅತಿಥಿಗಳನ್ನು ಸ್ವಾಗತಿಸಿದರು. ವೇದಿಕೆ ಮೇಲೆ ಮಹಾಪೌರ ಪ್ರೀತಿ ಕಾಮಕರ, ಉಪಮಹಾಪೌರ ಹನುಮಂತ ಕೊಂಗಾಲಿ, ಸುನಿಲ ಹಣಮನ್ನವರ, ರಾಜೇಂದ್ರ ಜೈನ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಬಳಿಕ ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವದ ಶೋಭಾ ಯಾತ್ರೆಗೆ ಚಾಲನೆ ನೀಡಿ ದರು. ಈ ಶೋಭಾ ಯಾತ್ರೆಯು ಟಿಳಕ ಚೌಕ, ಶೇರಿ ಗಲ್ಲಿ, ಶನಿ ಮಂದಿರ, ಎಸ.ಪಿ.ಎಂ ರೋಡ, ಕೋರೆ ಗಲ್ಲಿ, ಶಹಾಪೂರ, ಬಸವೇಶ್ವರ ವೃತ್ತ ದ ಮುಖಾಂತರ ಮಹಾವೀರ ಭವನಕ್ಕೆ ತಲುಪಿತು .ಈ ಶೋಭಾ ಯಾತ್ರೆಯಲ್ಲಿ ಸುಮಾರು 50 ಕ್ಕೂ ಹೆಚ್ಚು ಸ್ತಬ್ಧ ಚಿತ್ರರಥಗಳು ಭಾಗವಹಿಸಿ ಭಗವಾನ ಮಹಾವೀರರ ಸಂದೇಶ ವನ್ನು ಸಾರುವ ದೃಶ್ಯ ವನ್ನು ಪ್ರದರ್ಶಿಸಿದರು. ಈ ವೇಳೆ ಜೈನ ಸಮುದಾಯದ ಮುಖಂಡರುಗಳು ನೂರಾರು ಜನರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

• **ಬೆಳಗಾವಿ:** ಗ್ರಾಮೀಣ ಕ್ಷೇತ್ರದ ಹಿರೇಬಾಗೇವಾಡಿಯ ಶ್ರೀ ಫಡಿಬಸವೇಶ್ವರ ಮಂದಿರದಿಂದ ಸ್ಮಶಾನದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭಾನುವಾರ ಸಂಜೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಗ್ರಾಮಸ್ಥರ ಬಹುದಿನಗಳ ಬೇಡಿಕೆಯ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಶೇಷ ಅನುದಾನ ಒದಗಿಸಿದ್ದಾರೆ. ಸುಮಾರು 1 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣಗೊಳ್ಳುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಹಳ್ಳಿಯಲ್ಲೂ ಸುಸಜ್ಜಿತ ರಸ್ತೆಗಳು ನಿರ್ಮಾಣವಾಗುತ್ತಿದ್ದು, ಆದ್ಯತೆಯ ಮೇಲೆ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಇತಿಹಾಸದಲ್ಲೇ ಮೊದಲಬಾರಿಗೆ ಕ್ಷೇತ್ರದ ಚಿತ್ರಣವೇ ಸಕಾರಾತ್ಮಕವಾಗಿ ಬದಲಾವಣೆ ಕಾಣುತ್ತಿದೆ. ಕ್ಷೇತ್ರದ ಅಭಿವೃದ್ಧಿ ಹಿನ್ನೆಲೆಯಲ್ಲಿ ಪಕ್ಷಾತೀತವಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಜನರು ಬೆಂಬಲಿಸುತ್ತಿದ್ದಾರೆ. ಈ ವೇಳೆ ಹಿರೇಬಾಗೇವಾಡಿ ಗ್ರಾಮದ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಸೇರಿದಂತೆ ಅನೇಕರು ಇದ್ದರು.



ಬೆಂಗಳೂರು - ಬೆಳಗಾವಿ ವಿಶೇಷ ರೈಲು ಸಂಚಾರ



• **ಬೆಳಗಾವಿ:** ನೈರುತ್ಯ ರೈಲ್ವೆಯು ಗುಡ್ ಫ್ರೈಡೇ ಹಾಗೂ ಈಸ್ಟರ್ ಹಬ್ಬದ ಹಿನ್ನೆಲೆಯಲ್ಲಿ ಪ್ರಯಾಣಿಕರದಟ್ಟಣೆಯನ್ನು ನಿಯಂತ್ರಿಸಲು ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಬೆಳಗಾವಿ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನಿರ್ಧರಿಸಿದೆ. ರೈಲು ಸಂಖ್ಯೆ 06503, ಏಪ್ರಿಲ್ 2ರ ಗುರುವಾರ ಸಂಜೆ 7ಗಂಟೆಗೆ ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಹೊರಟು, ಮರುದಿನ ಶುಕ್ರವಾರ ಬೆಳಿಗ್ಗೆ 7:35ಕ್ಕೆ ಬೆಳಗಾವಿಗೆ ತಲುಪಲಿದೆ (ಏಕಮುಖ ಸಂಚಾರ). ರೈಲು ಸಂಖ್ಯೆ 06504, ಏಪ್ರಿಲ್ 5ರ ಭಾನುವಾರ ಸಂಜೆ 5:30ಕ್ಕೆ ಬೆಳಗಾವಿ ನಿಲ್ದಾಣದಿಂದ ಹೊರಟು, ಮರುದಿನ ಸೋಮವಾರ ಬೆಳಿಗ್ಗೆ 5:00 ಗಂಟೆಗೆ ಬೆಂಗಳೂರು ಎಸ್‌ಎಂವಿಟಿ ನಿಲ್ದಾಣಕ್ಕೆ ಆಗಮಿಸಲಿದೆ (ಏಕಮುಖ ಸಂಚಾರ). ಈ ವಿಶೇಷ ರೈಲುಗಳು ಒಟ್ಟು 19 ಐಸಿಎಫ್ (ಐಆಊ) ಬೋಗಿಗಳನ್ನು ಹೊಂದಿದ್ದು, ತನ್ನ ಮಾರ್ಗ ಮಧ್ಯದ ಸಂಚಾರದಲ್ಲಿ ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ , ಬೀರೂರು, ದಾವಣಗೆರೆ , ಹರಿಹರ, ಹಾವೇರಿ , ಹುಬ್ಬಳ್ಳಿ, ಧಾರವಾಡ, ಅಳ್ನಾವರ , ಲೋಂಡಾ ಹಾಗೂ ಖಾನಾಪುರ ರೈಲು ನಿಲ್ದಾಣಗಳ ಮೂಲಕ ಸಂಚರಿಸಲಿವೆ.



ಕಬ್ಬೂರು: ಪಟ್ಟಣದಲ್ಲಿ ಸೋಮವಾರ ಭಗವಾನ್ ಮಹಾವೀರ ಜನ್ಮೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆಯ ಜೊತೆ ಅಭಿಷೇಕ ಮಾಡಲಾಯಿತು.ಭಗವಾನ ಮಹಾವೀರ ಸ್ವಾಮಿಯ ಪಲ್ಲಕ್ಕಿ ಮೆರವಣಿಗೆ ಸಕಲ ವಾದ್ಯ ಮೇಳದೊಂದಿಗೆ, ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಮಹಾವೀರ ಜಯಂತಿ ಆಚರಣೆ



• **ಹಳ್ಳೂರ:** ಶ್ರೀ 1008 ಭಗವಾನ ಮಹಾವೀರರ ಜಯಂತಿಯನ್ನು ಶ್ರಾವಕ-ಶ್ರಾವಕಿಯರುಸ್ತುತಿಸ್ತೋತ್ರ ಪೂಜೆಯೊಂದಿಗೆ ಆಚರಿಸಿದರು.

ಗ್ರಾಮದಲ್ಲಿ ಮಹಾವೀರ ಜಯಂತಿ ಅಂಗವಾಗಿ ಭ.ಆದಿನಾಥ ಜೈನ ಬಸದಿಯಲ್ಲಿ ಬೆಳಿಗ್ಗೆ 5 ಗಂಟೆಗೆ ಮಂಗಲ ವಾದ್ಯ ಘೋಷ, ಧ್ವಜಾರೋಹಣ, ಜಲಾಭಿಷೇಕ, ಪಂಚಾಮೃತ ಅಭಿಷೇಕ, ನಾಮಕರಣ ಮಾಡಿದರು. ನಂತರ ಅನ್ನ ಪ್ರಸಾದ ಜರುಗಿತು.

ಸಂಜೆ 4 ಗಂಟೆಗೆ ಭಗವಾನ ಮಹಾವೀರ ಪಲ್ಲಕ್ಕಿ ಉತ್ಸವ, ಶ್ರಾವಕಿಯರಿಂದ ಆರತಿ ಮೇಳ, ಮಂಗಲಕುಂಭ, ಕುಂಭ ಮೇಳ, ಹಾಗೂ ಮಂಗಲ ವಾಧ್ಯದೊಂದಿಗೆ ಗ್ರಾಮದ ವಿವಿಧ ಬಡಾವಣೆಗಳಲ್ಲಿ ಬೃಹತ್ ಮೆರವಣಿಗೆ ಜರುಗಿತ್ತು. ಗ್ರಾಮದಲ್ಲಿ ಹಬ್ಬದ ಸಡಗರ ಸಂಭ್ರಮದಂತೆ ತುಂಬಿತ್ತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಸಮಾಜ ಬಾಂಧವರು, ಕಾರ್ಯಕರ್ತರು, ಗ್ರಾಮಸ್ಥರು ಪಾಲ್ಗೊಂಡಿದ್ದರು.



ಹಿರೇಬಾಗೇವಾಡಿ: ಇಲ್ಲಿಯ ಶ್ರೀ ಪಡಿಬಸವೇಶ್ವರ ರಥೋತ್ಸವ ಸೋಮವಾರ ಸಂಜೆ ವಿಜೃಂಭಣೆಯಿಂದ ಜರುಗಿತು. ಜೋಡೆತ್ತುಗಳ ಮಜಲು, ಕರಡಿ ಮಜಲು, ಗೊಂಬೆ ಕುಣಿತದ ತಂಡಗಳು ಮೆರವಣಿಗೆಯಲ್ಲಿ ಭಾಗಿಯಾಗಿದ್ದವು. ಎಲ್ಲನಗೌಡ ಪಾಟೀಲ, ಬಸನಗೌಡ ಪಾಟೀಲ, ಈರಣ್ಣ ರೊಟ್ಟಿ, ಪ್ರಶಾಂತ ದೇಸಾಯಿ, ಪ್ರಕಾಶ ಜಪ್ತಿ, ಬಿ.ಎನ್. ಪಾಟೀಲ ರಘು ಪಾಟೀಲ ಇತರರು ಇದ್ದರು.

ಈಜುಕೊಳ ಶೀಘ್ರದಲ್ಲೇ ಲೋಕಾರ್ಪಣೆ: ಶಾಸಕ ಸೇಠ್

• **ಬೆಳಗಾವಿ:** ನನ್ನ ಕ್ಷೇತ್ರದಲ್ಲಿ ಮಾದರಿ ಕೆಲಸ ಮಾಡಿದವರನ್ನು ಮತ್ತು ಸದಾ ಜನರಿಗಾಗಿ ಶ್ರಮಿಸುವವರನ್ನು ಸದಾ ಸ್ಮರಿಸಬೇಕು, ಎಂದು ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸಿಫ್ ಸೇಠ್ ಹೇಳಿದರು.

ಸೋಮವಾರ ನಗರದ ಹನುಮಾನ ನಗರ ರಹವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಭಾಗದ ಈಜುಕೊಳದ ತಾಂತ್ರಿಕ ದೋಷ ಸರಿಪಡಿಸಿ ಶೀಘ್ರವೇ ಸಾರ್ವಜನಿಕರಿಗೆ ಮುಕ್ತಗೊಳಿಸಿ ಇಲ್ಲಿನ ಜನತೆಗೆ ಅನಕೂಲ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯ ಮಹಾಪೌರ ಪ್ರೀತಿ ಕಾಮಕರ, ಉಪ ಮಹಾಪೌರ ಹಣಮಂತ ಕೊಂಗಾಲಿ, ನಗರಸೇವಕಸಂದೀಪ ಅ. ಜೀರಿಗಾಳ ಹಾಗೂ ಸಂಘದ ಅಧ್ಯಕ್ಷರಾದ ಎಸ್. ಡಿ. ಸುಲಿಗಾವಿ ಸೇರಿದಂತೆ ಹಲವು ಗಣ್ಯರ ನೇತ್ರದಲ್ಲಿ ಕಾರ್ಯಕ್ರಮ ಉದ್ಘಾಟನೆ ಗೊಳಿಸಿದರು.



ಈ ವೇಳೆ ಕಾರ್ಯಕ್ರಮದಲ್ಲಿ ಶಾಸಕ ಆಸೀಫ್ ಸೇಠ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಮಾದರಿ ಕೆಲಸಗಳನ್ನು ಜನತೆ ಮಾಡುವವರನ್ನು ಸ್ಮರಿಸಬೇಕು. ಸಹೋದರ ಫಿರೋಜ್ ಸೇಠ ಅವರ ನುಡಿಗಳನ್ನು ನೆನಪಿಸಿಕೊಂಡ ಅವರು ಜನಪರ ಕೆಲಸಗಳನ್ನು ಮಾಡಬೇಕೆಂದು ಅವರ ಹೇಳಿದ ದಾರಿಯಲ್ಲಿ ನಾವು ನಡೆಯುತ್ತಿದ್ದೇನೆ ಎಂದರು.

ಹನುಮಾನ ನಗರದಲ್ಲಿ ನಿರ್ಮಿಸಿದ ಈಜುಕೊಳದಕೆಲತಾಂತ್ರಿಕದೋಷವನ್ನು ಪರಿಹರಿಸಿ ಶೀಘ್ರವೇ ಲೋಕಾರ್ಪಣೆಗೊಳಿಸಲಾಗುವುದು. ಜನರಿಂದ ಆಯ್ಕೆಯಾದ ನಾವು ಪ್ರಾಮಾಣಿಕವಾಗಿ ನಮ್ಮಕರ್ತವ್ಯವನ್ನು ಪೂರ್ಣಗೊಳಿಸಲಾಗುವುದು. ಅಭಿವೃದ್ಧಿಯಲ್ಲಿ ಯಾವುದೇ ರಾಜಕಾರಣ ಮಾಡಲ್ಲ ಎಂದು ತಿಳಿಸಿದರು.

ಶ್ರೀ ಲಕ್ಷ್ಮೀದೇವಿ ಜಾತ್ರೆಗೆ ಚಾಲನೆ



• **ಬೆಳಗಾವಿ:** ತಾಲೂಕಿನ ತಾರಿಹಾಳ ಗ್ರಾಮದ ಶ್ರೀ ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸೋಮವಾರ ಜಾತ್ರೆಯ ಕಂಬ ನೆಡುವ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು.

ಗ್ರಾಮಸ್ಥರಸಮ್ಮುಖದಲ್ಲಿಅತ್ಯಂತಸಡಗರ-ಸಂಭ್ರಮದಿಂದ ಜಾತ್ರೆಯ ವಿಧಿ ವಿಧಾನಗಳಿಗೆ ಚಾಲನೆ ನೀಡಲಾಯಿತು. ಅಗತ್ಯ ಮೂಲಭೂತ ಸೌಕರ್ಯಗಳನ್ನು ಈಗಾಗಲೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕಾರ್ಯಪ್ರವೃತ್ತರಾಗಿದ್ದು, ಗ್ರಾಮಸ್ಥರ ಸಂಭ್ರಮವನ್ನು ಇಮ್ಮಡಿಗೊಳಿಸಿದ್ದಾರೆ.

ಮಹಾವೀರರ ತೊಟ್ಟಿಲೋತ್ಸವ

• **ಮೂಡಲಗಿ:** ತಾಲೂಕಿನ ಕಲ್ಲೋಳಿಯ ತ್ರಿಕೂಟ ಜೈನ ಬಸದಿಯಲ್ಲಿ ಭಗವಾನ ಮಹಾವೀರರ 2625ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬಾಲ ಮಹಾವೀರ ಸ್ವಾಮಿಯ ತೊಟ್ಟಿಲು ಹಾಕುವ ಕಾರ್ಯಕ್ರಮ ಸೋಮವಾರ ಜರುಗಿತು.

ಮಹಾವೀರನ ಸ್ವಾಮೀಜಿಯ ತಾಯಿಯಾಗಿ ಶ್ರಾವಕಿ ಜ್ಯೋತಿ ಬೆಲ್ಲದ ವಹಿಸಿದ್ದರು. ಬಸದಿಯ ಭ ಮಹಾವೀರ ಸ್ವಾಮಿಯ, ಶಾಂತಿನಾಥ ತೀರ್ಥಂಕರ,ಪಾರ್ಶ್ವನಾಥ ತೀರ್ಥಂಕರ, ಜಲಾ ಅಭಿಷೇಕ, ಕ್ಷೀರಾಭಿಷೇಕ ನಂತರ ಬಾಲ ಮಹಾವೀರನ ರಾಜ ಪೋಷಾಕ್ ತೊಡಿಸಿ ನೃತ್ಯದ ಮೂಲಕ ತೊಟ್ಟಿಲು



ಹಾಕುವ ಕಾರ್ಯಕ್ರಮ ನಡೆಯಿತು.

ಶ್ರಾವಕರಾದ ಪ್ರಕಾಶ ಗರಗಟ್ಟಿ, ರತ್ನಾಕರ್ ಅಥಣಿ, ಸುನಿಲ್ ಕುಸನಾಳೆ, ತವಣಪ್ಪ ಉಂದ್ರಿ , ಶ್ರಾವಕಿಯಿಯರಾದ ವಿಲಾಸಿನಿ ಗರಗಟ್ಟಿ , ವಿದ್ಯಾ ಶೀತಲ್ ಅಥಣಿ, ತೇಜಸ್ವಿನಿಗರಗಟ್ಟಿ, ಶ್ರುತಿಕುಸನಾಳೆ , ಲಕ್ಷ್ಮೀ ಉಂದ್ರಿ ಭಾಗವಹಿಸಿದ್ದರು.

ವಿಶ್ವದ ಶಾಂತಿಗೆ ಶ್ರಮಿಸಿದ್ದ ಮಹಾತ್ಮ



• **ಯರಗಟ್ಟಿ:** ಭಗವಾನ ಮಹಾವೀರರು ತಮ್ಮ ಸಂಪೂರ್ಣ ಜೀವನ ಮನುಷ್ಯರ ಕಲ್ಯಾಣಕ್ಕಾಗಿ ಮೀಸಲಿಟ್ಟು, ವಿಶ್ವದ ಶಾಂತಿಗೆ ಶ್ರಮಿಸಿದ್ದರು ಎಂದು ಗ್ರಾಪಂ ಅಭಿವೃದ್ಧಿ ಅಧಿಕಾರಿ ರಾಘವೇಂದ್ರಕುಮಾರ ಎಸ್ .ಪಿ ಹೇಳಿದರು.

ಸಮೀಪದ ತಲ್ಲೂರ ಗ್ರಾಮ ಪಂಚಾಯತ ಸಭಾ ಭವನದಲ್ಲಿ ಸೋಮವಾರ ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಕ್ಲಾರ್ಕ ರಾಜಶೇಖರ ಅಣ್ಣಿಗೇರಿ, ಮುಖಂಡ ನೀಲಕಂಠ ಶಿವಪೂಜಿ, ವಿಠ್ಠಲ ಬಡಿಗೇರ, ಮಹೇಶ ರೊಕ್ಕದಕಟ್ಟಿ, ಮುತ್ತು ಮಡಿವಾಳರ, ಪವಿತ್ರ ಈಟಿ, ಮಹಾಂತೇಶ ಸಾಲಿ, ದೀಪಾ ಸಾಲಿ, ಮಹೇಶ ಇಟ್ನಾಳ ಸಿಬ್ಬಂದಿ ಇದ್ದರು.

ಭಗವಾನ್ ಮಹಾವೀರ ಜಯಂತಿ ಆಚರಣೆ

• **ಚಿಕ್ಕೋಡಿ:** ಪಟ್ಟಣದ ಜೈನಪೇಟೆಯ ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಭಗವಾನ್ ಮಹಾವೀರ ಜಯಂತಿ ನಿಮಿತ್ಯವಾಗಿ ಸೋಮವಾರ ನೂರಾರು ಶ್ರಾವಕ ಶ್ರಾವಕಿಯರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಬೆಳಿಗ್ಗೆ ಅಭಿಷೇಕ, ನಂತರದಲ್ಲಿ ಭಗವಾನ್ ಮಹಾವೀರರ ಪಲ್ಲಕ್ಕಿಯ ಮೆರವಣಿಗೆಯನ್ನು ಸಕಲ ವಾದ್ಯ ವೈಭವದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮಧ್ಯಾಹ್ನ ಮಹಾಪ್ರಸಾದ, ಸಂಜೆ ತೊಟ್ಟಿಲು ಕಾರ್ಯಕ್ರಮ ಸೇರಿದಂತೆ ವಿವಿಧ ಮನರಂಜನೆ ಕಾರ್ಯಕ್ರಮಗಳು ನೆರವೇರಿದವು.

ಈ ಸಂದರ್ಭದಲ್ಲಿ ಜೈನ ಸಮುದಾಯದ ಮುಖಂಡ ವರ್ಧಮಾನ ಸದಲಗೆ, ಸಂಜಯ ಪಾಟೀಲ, ಶೀತಲ ಹಜಾರೆ, ರಾಮಚಂದ್ರ ಚೌಗುಲೆ, ಪದ್ಮರಾಜ ಪಾಟೀಲ, ಬಾಹುಬಲಿ ನಸಲಾಪೂರೆ, ರಾಜು ರೋಖಡೆ, ಎಸ್ ಟಿ ಮುನ್ನೋಳಿ, ಬಿ ಬಿ ಹಜಾರೆ, ಶಿರೀಶ ಮಹೆತಾ, ಅಮಿತ ಶಹಾ, ಚಂದ್ರಕಾಂತ ಹುಕ್ಕೇರಿ ಇತರರು ಇದ್ದರು.



ಸಹಬಾಳ್ವೆ ತತ್ವ ಸಾರಿದ ಮಹಾತ್ಮ



• **ರಾಯಬಾಗ:** ತಹಶೀಲ್ದಾರ್ ಕಾರ್ಯಾಲಯದಲ್ಲಿ ಭಗವಾನ್ ಮಹಾವೀರರ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಮಹಾದೇವ ಸನಮುರಿ ಮಾತನಾಡಿ, ಮಹಾವೀರರು ಎಲ್ಲ ಜೀವಿಗಳ ನಡುವೆ ಪರಸ್ಪರ ಸಹಬಾಳ್ವೆ ಮತ್ತು ಸಹಕಾರದ ಸಂದೇಶವನ್ನು ತಿಳಿಸಿದ್ದಾರೆ. ಕಠಿಣ ತಪಸ್ಸು ಧ್ಯಾನ ಮತ್ತು ಮೌನ ಧ್ಯಾನದ ಮೂಲಕ ಆತ್ಮ ಶುದ್ಧಿಯ ಮಾರ್ಗವನ್ನು ಅನುಸರಿಸಿದ ಅವರು ಮಾನವ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಪರಮಾನಂದ ಮಂಗಸೂಳಿ ತಹಶೀಲ್ದಾರ್ ಕಾರ್ಯಾಲಯದ ಅಧಿಕಾರಿಗಳಾದ ಮಲ್ಲಪ್ಪ ಸನದಿ , ವಿಶ್ವನಾಥ್ ಹಾರುಗೇರಿ , ಸೋಮಶೇಖರ್ ಜೋರೆ , ವಿನಾಯಕ ಬಾಟೆ, ಜೈನ ಸಮುದಾಯದ ಮುಖಂಡರಾದ ಅನಿಲ್ ಶೆಟ್ಟಿ , ಸಮ್ಮತಿ ಶೆಟ್ಟಿ , ಶೀತಲ ಬೆಡಕಿಹಾಳೆ, ಉದಯ ಬಡೊರೆ, ಭರತೇಶ್ ಶೆಟ್ಟಿ, ಶೀತಲ ಕುಡಚಿ , ಸಂತೋಷ್ ಪಾಟೀಲ ಇನ್ನಿತರು ಉಪಸ್ಥಿತರಿದ್ದರು.

ಮಹಾವೀರ ಜಯಂತಿ: ಶೋಭಾಯಾತ್ರೆ

• **ಕೊಕಟನೂರ:** ಗ್ರಾಮ ಪಂಚಾಯತಿಯಲ್ಲಿ ಭಗವಾನ ಶ್ರೀ 1008 ಮಹಾವೀರ ತೀರ್ಥಂಕರ 2625ನೇ ಜನ್ಮ ಕಲ್ಯಾಣ ಮಹೋತ್ಸವದ ಫೋಟೋ ಪೂಜೆ ಹಾಗೂ ಜಯಂತಿ ಶೋಭಯಾತ್ರೆ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಸಿದ್ದಪ್ಪ ಮುದಕಣ್ಣವರ, ಅಪ್ಪಾಸಾಬ ಅವತಾಡೆ, ಮುತ್ತಪ್ಪ ಕಾಡದೇವರಮಠ, ದೇವರಾಜ್ ದೇಸಾಯಿ, ಮಹೇಶ್ ಕಾಡದೇವರಮಠ, ಅರ್ಜುನ್ ಪೂಜಾರಿ, ಅನಿಲ ಮುಳಿಕ, ಮಲ್ಲಿಕಾರ್ಜುನ ಪರಾಂಡೆ, ಸುಭಾಷ್ ಸೋಣರ್ಕ, ಸತೀಶ್ ದೊಡ್ಡಮನಿ, ಶಿವಗೌಡ ನೇಮಗೌಡ, ತೀರ್ಥಪ್ಪ ವೀರಗೌಡ, ಪಪ್ಪು ಚವಾಣ್, ನಾನಪ್ಪ ವೀರಗೌಡ, ಕುಮಾರ್ ವೀರಗೌಡ, ರಸೂಲ್ ಕಾಳೆ. ಸೇರಿದಂತೆ ಹಲವರು ಇತರು ಇದ್ದರು.



ಕಿರುಸುದ್ದಿ

ಅಕ್ರಮ ಪತ್ತೆ ಹಚ್ಚಲು ಧನಶ್ರೀ ದೇಸಾಯಿ ಆಗ್ರಹ

ಖಾನಾಪುರ: ತಾಲೂಕಿನ ವಿವಿಧ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪಂಚವಾರ್ಷಿಕ ಚುನಾವಣೆಯಲ್ಲಿ ಮೃತಪಟ್ಟವರ ಹೆಸರಲ್ಲಿ ಮತದಾನ ನಡೆದಿದ್ದು, ಈ ಕುರಿತು ವಿವರವಾದ ತನಿಖೆ ನಡೆಸಿ ಅಕ್ರಮವನ್ನು ಪತ್ತೆ ಹಚ್ಚಬೇಕು ಎಂದು ಜಾಂಬೋಟಿ-ನೀಲಾವಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷೆ ಧನಶ್ರೀ ದೇಸಾಯಿ ಸಹಕಾರ ಸಂಘಗಳ ಉಪ ನಿಬಂಧಕರನ್ನು ಆಗ್ರಹಿಸಿದ್ದಾರೆ.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ''ಕಳೆದ ಮಾ.22ರಂದು ನಡೆದ ಜಾಂಬೋಟಿ-ನೀಲಾವಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಬಿನ್ ಸಾಲಗಾರರ ಕ್ಷೇತ್ರದಲ್ಲಿ 147 ಮತದಾರರಿದ್ದು, ಅವರಲ್ಲಿ 25 ಮತದಾರರು ಮೃತಪಟ್ಟಿದ್ದರು. ಆದರೆ ಚುನಾವಣೆಯ ಮತದಾನ ಮುಗಿದಾಗ ಮೃತಪಟ್ಟವರ ಪೈಕಿ ಒಬ್ಬರ ಹೆಸರಲ್ಲಿ ಮತದಾನ ನಡೆದಿರುವುದು ಗಮನಕ್ಕೆ ಬಂದ ಕೂಡಲೇ ತಾವು ಚುನಾವಣಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದು, ಚುನಾವಣಾಧಿಕಾರಿಗಳು ತನಿಖೆ ನಡೆಸಿದಾಗ ಮೃತಪಟ್ಟವರ ಹೆಸರಲ್ಲಿ ಒಬ್ಬ ವ್ಯಕ್ತಿ ಮತದಾನ ಮಾಡಿರುವುದು ಬೆಳಕಿಗೆ ಬಂದಿದೆ. ಜೊತೆಗೆ ಬಿಡಿಸಿಸಿ ನಿರ್ದೇಶಕ ಅರವಿಂದ ಪಾಟೀಲ ಅವರು ಈ ಚುನಾವಣೆಯಲ್ಲಿ ತಮ್ಮ ಬೆಂಬಲಿಗರೇ ಜಯಗಳಿಸಬೇಕು ಎಂಬ ಉದ್ದೇಶದಿಂದ ಸೆ.11, 2024ರಂದು ಒಂದೇ ದಿನ ಸಂಘಕ್ಕೆ 107 ಜನರನ್ನು ಹೊಸದಾಗಿ ಸದಸ್ಯರನ್ನಾಗಿ ಸೇರಿಸಿಕೊಂಡಿದ್ದಾರೆ. ಅದರಲ್ಲಿ ಕೆಲವರಿಗೆ ಸಾಲ ವಿತರಿಸಲಾಗಿದೆ. ಆದರೆ ಇವುಗಳ ದಾಖಲೆ ನಿರ್ವಹಿಸಿಲ್ಲ ಎಂದು ವಿವರಿಸಿ ಸಂಬಂಧಪಟ್ಟ ದಾಖಲೆ ಪ್ರದರ್ಶಿಸಿದರು.

ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ''ಬಿಡಿಸಿಸಿ ನಿರ್ದೇಶಕ ಅರವಿಂದ ಪಾಟೀಲ ಸಹಕಾರ ಕ್ಷೇತ್ರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ ಎಂದರು.ಈ ಸಂದರ್ಭದಲ್ಲಿ ಜಾಂಬೋಟಿ-ನೀಲಾವಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರು, ನಿರ್ದೇಶಕರು ಇದ್ದರು.

ನಿಂಗಾಣಿ ಬೆಳಗಾವಿ ಡಿಎಫ್‌ಒ

ಬೆಳಗಾವಿ : ಅರಣ್ಯ ಇಲಾಖೆಯಲ್ಲಿ ನಾಲ್ಕು ದಶಕಗಳ ಕಾಲ ಸ್ತುತ್ಯಾರ್ಹ ಸೇವೆ ಸಲ್ಲಿಸಿದ ದಕ್ಷ ಅಧಿಕಾರಿ ಎಸ್.ಎಸ್.ನಿಂಗಾಣಿ ಅವರಿಗೆ ಈಗ ಡಿಎಫ್‌ಒ ಆಗಿ ಪದೋನ್ನತಿ ದೊರೆತಿದೆ. ಬೆಳಗಾವಿ ಜಾಗೃತ ದಳದ ನೂತನ ಡಿಎಫ್‌ಒ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಖಾನಾಪೂರ ತಾಲೂಕಿನಲ್ಲಿ ಸುಮಾರು ಇಂಪತ್ತು ವರ್ಷಗಳ ಹೆಚ್ಚಿನ ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಎಸ್.ಎಸ್.ನಿಂಗಾಣಿ ಹೊನ್ನಾವರ ಎಸಿಎಫ್ ಆಗಿ ಸೇವೆ ಸಲ್ಲಿಸಿ ತದನಂತದಲ್ಲಿ ಶಿರಸಿ ಎಸಿಎಫ್ ಆಗಿ ಕಾರ್ಯಗೃತವಾಗಿದರು. ಸುಮಾರು ನಾಲ್ವತ್ತು ವರ್ಷಗಳ ಕಾಲ ಅರಣ್ಯ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಎಸ್.ಎಸ್.ನಿಂಗಾಣಿ ಈಗ ಡಿಎಫ್‌ಒ ಆಗಿ ಬಡ್ತಿಹೊಂದಿ ಬೆಳಗಾವಿ ಜಾಗೃತದಳದ ಡಿಎಫ್ ಒ ಆಗಿ ವರ್ಗಾವಣೆಗೊಂಡಿದ್ದಾರೆ ತನ್ನ ಕಾರ್ಯದಕ್ಷತೆಯಿಂದ ದಕ್ಷ ಅಧಿಕಾರಿಗಳಾಗಿ ಗುರುತಿಸ್ಪಟ್ಟಿರುವ ಎಸ್.ಎಸ್.ನಿಂಗಾಣಿ ಅವರು ಎಲ್ಲಿ ಸೇವೆ ಸಲ್ಲಿಸಿದಲ್ಲಿ ತಮ್ಮ ಅಪಾರ ಅಭಿಮಾನಿಗಳ ಬಳಗವನ್ನೆ ಹೊಂದಿದ್ದಾರೆ ಖಾನಾಪೂರ ತಾಲೂಕಿನಲ್ಲಿ ಸುಮಾರು ವರ್ಷಗಳ ಕಾಲ ದಕ್ಷತೆಯಿಂದ ಸೇವೆ ಸಲ್ಲಿಸಿದ ಎಸ್.ಎಸ್.ನಿಂಗಾಣಿ ಮನೆ ಮಗನಾಗಿ ತನ್ನ ಛಾಪು ಮೂಡಿಸಿದ್ದಾರೆ.

ಸಂಗೀತದಿಂದ ನೆಮ್ಮದಿ

ಗೋಕಾಕ: ಸಂಗೀತ ಕೇಳುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುವುದಲ್ಲದೇ ಮನಸ್ಸಿಗೆ ಶಾಂತಿ, ನೆಮ್ಮದಿ ತಂದು ಕೊಡುತ್ತದೆ ಎಂದು ನ್ಯಾಯವಾದಿ ವಿಷ್ಣು ಲಾತೂರ ಅಭಿಪ್ರಾಯಿಸಿದರು. ನಗರದ ರೋಟರಿ ಸಭಾ ಭವನದಲ್ಲಿ ಆಯೋಜಿಸಿದ ಸಂಗೀತ ಕಲಾವಿದ ಜಿ.ಕೆ.ಕಾಡೇಶಕುಮಾರ ಕಲಾ ಸೇವೆಯಲ್ಲಿ ಐವತ್ತೈದು ವರ್ಷ ಪೂರೈಸಿದ ಹಾಗೂ ಸಬ ಕಾ ಆಶೀರ್ವಾದ ಸಾಂಸ್ಕೃತಿಕ ವೇದಿಕೆ ಉದ್ಘಾಟನೆ ಮಾಡುವುದರ ಮೂಲಕ ಮಾತನಾಡಿದ ಅವರು ಕಲಾವಿದ ಕಾಡೇಶಕುಮಾರ ತಮ್ಮ ಜೀವನವನ್ನು ಸಂಗೀತಕ್ಕಾಗಿ ಮುಡಿಪಾಗಿಟ್ಟು, ಸಂಗೀತ ಸೇವೆ ಮಾಡುತ್ತಿದ್ದಾರೆ ಎಂದು ಹೇಳಿದರು. ವೇದಿಕೆ ಮೇಲೆ ಸಿರಿಗನ್ನಡ ಮಹಿಳಾ ರಾಜ್ಯಾಧ್ಯಕ್ಷೆ ರಜನಿ ಜೀರಗ್ಯಾಳ, ಜಿ.ಇ.ಎಸ್. ಸಂಸ್ಥೆಯ ನಿರ್ದೇಶಕ ಎಂ.ಡಿ. ಚುನಮರಿ, ರೋಟರಿ ಸೇವಾ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಕಲ್ಲೋಳಿ, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಉಪನಿರ್ದೇಶಕ ಬಸವರಾಜ ಹಿರೇಮಠ ಇದ್ದರು.

ಮಟಕಾ: ಇಬ್ಬರ ಬಂಧನ

ಬೆಳಗಾವಿ : ತಾಲೂಕಿನ ಮಾರಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಟಕಾ ದಂಧೆ ನಡೆಸಲಾಗುತ್ತಿದೆ ಎಂಬುವುದರ ಕಚ್ಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ಮಟಕಾ ಚಟುವಟಿಕೆಗೆ ಬಳಸುತ್ತಿದ್ದ ನಗದು ಮತ್ತು ಇತರ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದ್ದು ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಚನ್ನಮ್ಮನ ಕಿತ್ತೂರ : ಸಮೀಪದ ಇಟಗಿ ಗ್ರಾಮದಲ್ಲಿ ಸೋಮವಾರ ಮಹಾವೀರ ಜಯಂತಿ ಆಚರಿಸಲಾಯಿತು. ಜಿನಮಂದಿರದಲ್ಲಿ ಪಂಡಿತ ಕೋಮಲ ಉಪಾಧ್ಯ ಪೂಜೆ ನೆರವೇರಿಸಿದರು. ನಂತರ ಭಗವಾನ ಮಹಾವೀರರ ಭವ್ಯ ಮೆರವಣಿಗೆ ಜರುಗಿತು. ಕಾರ್ಯಕ್ರಮದಲ್ಲಿ ಯು.ಡಿ.ಹಾರೂಗೊಪ್ಪ, ಭೂಷಣ ಧಡೋತಿ, ನೇಮಿನಾಥ ಹಟ್ಟಿಹೊಳಿ , ಬಿ.ಆರ,ಪಾಟಿಲ, ರತ್ನಾಕರ ಠಕಾಯಿ, ಜಂಬು ಠಕಾಯಿ, ಬಾಹುಬಲಿ ಮಾರ್ಗನಕೊಪ್ಪ ಭರತೇಶ ಗಾಳಿ, ಸಂತೋಷ ನೇಮಗೊಂಡ, ಸುಭಾಸ ಡಮ್ಮಣಗಿ, ಸುರೇಶ ಹಾರೋಗೊಪ್ಪ, ಅರ್ಜುನ ಹುಲಮನಿ, ಭರತೇಶ ಮಾರ್ಗನಕೊಪ್ಪ ಹಾಗೂ ಇತರರು ಇದ್ದರು.

ಮಠಗಳಿಂದ ಹಿಂದು ಧರ್ಮ ಸಂಸ್ಕೃತಿ ಉಳಿವು

ರಾಯಬಾಗ: ಮಠಗಳ ಮತ್ತು ಸಂತರಿಂದ ನಮ್ಮ ಹಿಂದೂ ಧರ್ಮ, ಸಂಸ್ಕೃತಿ ಇನ್ನುವರೆಗೂ ಉಳಿದುಕೊಂಡಿದೆ ಎಂದು ಹಂಚಿನಾಳ ಭಕ್ತಿಯೋಗಾಶ್ರಮದ ಮಹೇಶಾನಂದ ಸ್ವಾಮೀಜಿ ಹೇಳಿದರು.ಭಾನುವಾರ ರಾತ್ರಿ ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದಲ್ಲಿ 39ನೇ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಜ್ಞಾನ ಜೊತೆಗೆ ಒಳ್ಳೆಯ ಸಂಸ್ಕಾರ, ಸಂಸ್ಕೃತಿ ನೀಡಿ, ಅವರನ್ನು ಉತ್ತಮ ನಾಗರಿಕರನ್ನಾಗಿ ರೂಪಿಸಿ, ದೇಶ ಪ್ರೇಮವನ್ನು ಬೆಳೆಸಬೇಕು ಎಂದರು.ವಾಗ್ಮಿ ಬೆಂಗಳೂರಿನ ಹಾರಿಕಾ ಮಂಜುನಾಥ ಮಾತನಾಡಿ, ಭಾರತೀಯರಾದ ನಾವೆಲ್ಲರೂ ಹಿಂದೂ, ನಾವೆಲ್ಲ ಒಂದು ಎಂಬ ಭಾವನೆ ನಮ್ಮಲ್ಲಿ ಮೂಡಿದಾಗ ಮಾತ್ರ ಸನಾತನ ಹಿಂದೂ ಧರ್ಮ ಉಳಿಯಲು ಸಾಧ್ಯ. ನಮ್ಮ ಮಕ್ಕಳಲ್ಲಿ ನಮ್ಮ ಧರ್ಮ, ಪರಂಪರೆ, ಇತಿಹಾಸದ ಬಗ್ಗೆ ಜಾಗೃತ ಮೂಡಿಸಬೇಕಾಗಿದೆ ಎಂದರು.

ಚಿಕ್ಕೋಡಿ ಸಂಪಾದನಾ ಚರಮೂರ್ತಿಮಠದ ಸಂಪಾದನಾ ಸ್ವಾಮೀಜಿ, ಅಥಣಿ ಕಾಡಸಿದ್ದೇಶ್ವರ ಮಠದ ಡಾ.ಕಾಡಯ್ಯ ಸ್ವಾಮೀಜಿ ಮಾತನಾಡಿದರು.ಪಂಚಲಿಂಗೇಶ್ವರ ಮಠದ ವೀರಭದ್ರೇಶ್ವರ ಸ್ವಾಮಿಜೀಯವರು ಸಾನಿಧ್ಯ ವಹಿಸಿದ್ದರು.ಕಾರ್ಯಕ್ರಮದಲ್ಲಿ ಜೈನಾಪುರದ ಸಿದ್ದಲಿಂಗ ಸ್ವಾಮಿಜೀ, ವಿಜಯಪುರದ ಶಂಕರ ಸ್ವಾಮಿಜೀ, ನರಸಿಂಹರಾಜ ಸ್ವಾಮೀಜಿ, ವಿಶ್ವ ಹಿಂದೂ ಪರಿಷತ್ ಪ್ರಾಂತ ಗೋರಕ್ಷಾ ಪ್ರಮುಖ ವಿಠ್ಠಲಜಿ ಮಾಳಿ, ವಕೀಲರ ಸಂಘದ ಅಧ್ಯಕ್ಷ ಕೆ.ಆರ್.ಕೋಟಿವಾಲೆ, ರಘು ಮಾಳಿ, ಅಮಿತ ಜಾಧವ, ಸಂಗಣ್ಣ ದತ್ತವಾಡೆ, ಕೇದಾರಿ ಮಾಳಿ ಹಾಗೂ ಸಾವಿರಾರು ಭಕ್ತಾದಿಗಳು ಭಾಗವಹಿಸಿದ್ದರು.



ರಾಯಬಾಗ: ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದಲ್ಲಿ 39ನೇ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಹಂಚಿನಾಳ ಭಕ್ತಿಯೋಗಾಶ್ರಮದ ಮಹೇಶಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ನಾಡಿನ ವಿವಿಧ ಪೂಜ್ಯರು ಇದ್ದರು.

ಸಾವಯವ ಕೃಷಿ ಅಳವಡಿಸಿಕೊಳ್ಳಿ

ರಾಮದುರ್ಗ: ಕೃಷಿಯಿಂದ ಯುವಕರು ವಿಮುಖರಾಗುತ್ತಿರುವುದಲ್ಲದೆ ಭೂಮಿಗೆ ರಾಸಾಯನಿಕ ಮಿಶ್ರಿತ ರಸಗೊಬ್ಬರದ ಅತಿಯಾದ ಬಳಕೆಯ ಪರಿಣಾಮ ಬೆಳೆಯುವುದೆಲ್ಲ ವಿಷವಾಗುತ್ತಿದೆ ರೈತರೆಲ್ಲ ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು.

ಸೋಮವಾರ ತಾಲೂಕಿನ ಸುಕ್ಷೇತ್ರ ಕುಳ್ಳೂರಿನಲ್ಲಿ ಶ್ರೀ ಗುರು ಶಿವಯೋಗೀಶ್ವರರ 118 ನೇ ಪುಣ್ಯಾರಾಧನೆ, ಶ್ರೀ ಗುರು ರೇವಯ್ಯ ಶಿವಯೋಗಿಗಳ 150 ನೇ ಜಯಂತ್ಯುತ್ಸವ, ಶ್ರೀ ಸಿದ್ದರಾಮ ಶಿವಯೋಗಿಗಳ 50 ನೇ ಪುಣ್ಯಾರಾಧನೆ ಹಾಗೂ ಶ್ರೀ ಶಿವಯ್ಯ ಮಹಾಸ್ವಾಮಿಗಳ 6ನೇ ಪುಣ್ಯಾರಾಧನೆ ಕಾರ್ಯಕ್ರಮದ 2ನೇ ದಿನದ ಕೃಷಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ ಕುಳ್ಳೂರು ಗ್ರಾಮವು ಆಧ್ಯಾತ್ಮಿಕ ಕೇಂದ್ರವಾಗಿದೆ. ಶ್ರೀಮಠದಲ್ಲಿ ಮೇಲು ಕೀಳು ಎನ್ನುವ ಭಾವನೆ ಹೊಡೆದು ಹಾಕಿ ವಿಶ್ವಗುರು ಬಸವಣ್ಣನವರ ಸಮಾನತೆ ಕಂಡು ಬರುತ್ತಿದೆ ಸಮಾನತೆ ಸಾರುವ ಪೂಜ್ಯರ ಮಾರ್ಗದರ್ಶನದಲ್ಲಿ ಪ್ರತಿಯೊಬ್ಬರು ನಡೆದು ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಪ್ರಗತಿಪರ ರೈತಮಹಿಳೆ ಕವಿತಾ ಮಿಶ್ರಾ ಮಾತನಾಡಿ, ರೈತರು ಯಾರನ್ನು ನಂಬದೆ ಭೂಮಿ ತಾಯಿ ನಂಬಿ ಜೀವನ ನಡೆಸಬೇಕು. ಸಹಜ ಕೃಷಿ ಮಾಡದೆ ಬಹುಬೆಳೆ ಬೆಳೆಯಬೇಕು ಎಂದು ತಿಳಿಸಿದರು.

ಯುವಕರು ಕೆಲಸ ಹುಡಕಿ ಪಟ್ಟಣಗಳಿಗೆ ತೆರಳುವ ಬದಲು ಗ್ರಾಮೀಣ ಪ್ರದೇಶದಲ್ಲಿ ಇರುವ ಜಮೀನುಗಳಲ್ಲಿ ಕೃಷಿ ಕೆಲಸ ಮಾಡಬೇಕು. ತಾಂತ್ರಿಕತೆ ಮತ್ತು ವಿವಿಧ ವೃತ್ತಿಗಿಂತ ಕೃಷಿ ಕ್ಷೇತ್ರ ಶ್ರೇಷ್ಠವಾಗಿದೆ. ಜಗತ್ತಿನಲ್ಲಿ ರೈತರ ಸ್ವಾಭಿಮಾನದಿಂದ ಬದುಕವ ವ್ಯಕ್ತಿ ರೈತನಾಗಿದ್ದು, ರೈತನ ಮಕ್ಕಳಿಗೆ ಹೆಣ್ಣು ಕೊಡುವಂತಾಗಬೇಕು ಕಲಿತ ಹೆಣ್ಣು ಮಕ್ಕಳು ಕೃಷಿ ವಲಯಕ್ಕೆ ಬಂದರೆ ಸ್ಮಾರ್ಟ ಕೃಷಿಯಾಗಲು ಸಾಧ್ಯ ಎಂದು ಹೇಳಿ ಸಮಗ್ರ ಕೃಷಿ ಪದ್ದತಿ ಅಳವಡಿಸಲು ಮನವಿ ಮಾಡಿದರು.



» ಶ್ರೀ ಗುರು ಶಿವಯೋಗೀಶ್ವರರ 118 ನೇ ಪುಣ್ಯಾರಾಧನೆ
» ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ

ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗದ ಕಭೀರಾನಂದಾಶ್ರಾಮದ ಶಿವಲಿಂಗಾನಂದ ಸ್ವಾಮೀಜಿ ಮಾತನಾಡಿ, ರೈತರು ಕಷ್ಟಪಟ್ಟು ಬೆಳೆದ ಬೆಳೆಗೆ ಬೆಲೆ ನಿರ್ಧಾರ ಮಾಡುವಂತಾಗಬೇಕು ಅಂದರೆ ಮಾತ್ರ ಎಲ್ಲರೂ ಕೃಷಿಯತ್ತ ಒಲವು ತೋರಲು ಸಾಧ್ಯವಾಗುತ್ತದೆ ಆದರೆ ಇಂದು ಹಗಲಿರಳು ಶ್ರಮ ಪಟ್ಟು ರೈತರು ಬೆಳೆದ ಬೆಳೆಗೆ ಶ್ರಮದ ಅರಿವು ತಿಳಿಯದವರು ಬೆಲೆ ನಿರ್ಧಾರ ಮಾಡುತ್ತಿರುವದು ಬಂಜೆಗೆ ಏನು ಗೊತ್ತು ಹೆರಿಗೆಯ ನೋವು ಅನ್ನುವಂತಾಗಿದೆ ಎಂದು ಖೇದ ವ್ಯಕ್ತಪಡಿಸಿದ ಶ್ರೀಗಳು ಶ್ರಮ ಪಟ್ಟು ದುಡಿದು ತಿನ್ನುವ ರೈತರು ಮಾರ್ಗದರ್ಶಿಗಳಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಟಕೋಳ ವೀರಕ್ತಮಠದ ಸಚ್ಚಿದಾನಂದ ಸ್ವಾಮಿಗಳು ಮಾತನಾಡಿ ಫಲವತ್ತಾದ ಭೂಮಿಗೆ ರಾಸಾಯನಿಕ ಗೊಬ್ಬರ ಹಾಕಲು ಹೇಳಿದ ಅಧಿಕಾರಿಗಳಿಗೆ ಗೊತ್ತಿರಲಿಲ್ಲವೆ ವಿಷನ್ನು ಭೂಮಿಗೆ ಹಾಕುತ್ತಿದ್ದೇವೆ ಎಂದು ಪ್ರಶ್ನಿಸಿದ ಶ್ರೀಗಳು ಇಂದು ಪ್ರತಿಯೊಬ್ಬರು ಸಾವಯವ ಕೃಷಿಗೆ ಒಲುವ ಬೆಳಸಿಕೊಳ್ಳಬೇಕೆಂದು ಹೇಳಿದರು.

ಜಂಟಿ ಕೃಷಿ ನಿರ್ದೇಶಕ ಎಚ್. ಡಿ. ಕೋಳೆಕರ ಮಾತನಾಡಿ ಅಧಿಕಾರಿಗಳ ಸಲಹೆ ಪಡೆದು ವೈಜ್ಞಾನಿಕ ಕೃಷಿಯನ್ನು ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದ ಸಾವಯವ ಕೃಷಿ ಪ್ರಶಸ್ತಿ ವಿಜೇತ ಧರೆಪ್ಪ ಕಿತ್ತೂರ, ಕೃಷಿ ಅಧಿಕಾರಿಗಳಾದ ಎ. ಬಿ. ವಾಲಿಕಾರ, ರುದ್ರಪ್ಪ ಕುಂಬಾರ, ಜಾನಪದ ಕೃಷಿಕ ಸಿದ್ದಪ್ಪ ಬಿದರಿ, ನಿಜಗುಣಾನಂದಸ್ವಾಮಿಗಳು, ಚಿದಾನಂದಸ್ವಾಮಿಗಳು, ಪ್ರಭುದೇವರು ಸೇರಿದಂತೆ ಹಲವರಿದ್ದರು.

ರವಿ ಭರಮನಾಯ್ಕರ ಸ್ವಾಗತಿಸಿದರು. ಬಸವಾನಂದಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ಹಟ್ಟಿಹೊಳಿ ಮನವಿಗೆ ಸ್ಪಂದನೆ: 50 ಕೋಟಿ ರೂ. ಸಾಲದ ಭರವಸೆ

ಚನ್ನಮ್ಮನ ಕಿತ್ತೂರು: ಈ ಭಾಗದ ರೈತರ ಜೀವನಾಡಿಯಾದ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ರೂ 50 ಕೋಟಿ ಸಾಲವನ್ನು ಡಿಸಿಸಿ ಬ್ಯಾಂಕ್‌ನಿಂದ ಮಂಜೂರ ಮಾಡಿಸಲಾಗುದೆಂದು ಬೆಳಗಾವಿ ಹಾಲು ಒಕ್ಕೂಟದ ಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಚನ್ನಮ್ಮನ ಕಿತ್ತೂರಿನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಂ.ಎಲ್.ಸಿ ಚನ್ನರಾಜ ಹಟ್ಟಿಹೊಳಿಯವರು ಸಕ್ಕರೆ ಕಾರ್ಖಾನೆ ನಡೆಸಲು ಎಲ್ಲ ಅರ್ಹತೆ ಹೊಂದಿದ್ದಾರೆ. ಅವರ ನೇತೃತ್ವದಲ್ಲಿ ಎಂ.ಕೆ.ಹುಬ್ಬಳ್ಳಿ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಈ ಭಾರಿ ಉತ್ತಮ ಕೆಲಸ ಮಾಡುತ್ತಿದೆ. ಆದ ಕಾರಣ ಕಾರ್ಖಾನೆಯ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವ ಭರವಸೆ ನೀಡಿದರು.

ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ಕಿತ್ತೂರು ಭಾಗದ ರೈತರ ಜೀವನಾಡಿ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಪುನಃ ಚೇತನಕ್ಕೆ ಬೆಳಗಾವಿ ಡಿಸಿಸಿ ಬ್ಯಾಂಕದಿಂದ ಆರ್ಥಿಕ ನೇರವು ನೀಡಲು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರಿಗೆ ಮನವಿ ಮಾಡಿ ಸಹಕಾರ ಸಂಸ್ಥೆ ಉಳಿಸಿ ಈ ಭಾಗದ ರೈತರ ಹಿತ ಕಾಪಾಡಲು ಮನವಿ ಮಾಡಲಾಗಿತ್ತು. ನಮ್ಮ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದಾರೆ ಅವರಿಗೆ ರೈತರ ಪರವಾಗಿ ದನ್ಯವಾದಗಳನ್ನು ಅರ್ಪಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಅವರನ್ನು ಸಹ ಸನ್ಮಾನಿಸಿ ಗೌರವ ಸಲ್ಲಿಸಿದರು. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷ ಶಿವನಗೌಡ ಪಾಟೀಲ, ಆಡಳಿತ ಮಂಡಳಿಯ ನಿರ್ದೇಶಕರು, ಕಾರ್ಖಾನೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಭಗವಾನ್ ಮಹಾವೀರರ ಸ್ಮರಣೆ

ಖಾನಾಪುರ: ಅಹಿಂಸಾ ತತ್ವದ ಹರಿಕಾರ ಭಗವಾನ್ ಮಹಾವೀರರ ಜಯಂತಿಯನ್ನು ಸೋಮವಾರ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ತಾಲೂಕಿನ ವಿವಿಧೆಡೆ ಆಯೋಜಿಸಿದ್ದ ಜಯಂತಿಯಲ್ಲಿ ಭಾಗವಹಿಸಿದ್ದ ಜನರು ಅಹಿಂಸೆಯ ಹರಿಕಾರನಿಗೆ ನಮನಗಳನ್ನು ಸಲ್ಲಿಸಿದರು.

ಮಹಾವೀರ್ ಜಯಂತಿ ಅಂಗವಾಗಿ ತಾಲೂಕಿನ ಕೊಡಚವಾಡ, ಗಾಡಿಕೊಪ್ಪ, ಕಸಮಳಗಿ, ಗಂದಿಗವಾಡ, ಇಟಗಿ, ಪಾರಿಶ್ವಾಡ, ದೇಮಿನಕೊಪ್ಪ, ಕಗ್ಗಣಗಿ, ಚಿಕದಿನಕೊಪ್ಪ ಮತ್ತಿತರ ಗ್ರಾಮಗಳ ಜೈನ ಮಂದಿರಗಳಲ್ಲಿ ಭಗವಾನ ಮಹಾವೀರರ ಭಕ್ತರು ಮಹಾವೀರರ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ತಾಲೂಕಿನ ಐತಿಹಾಸಿಕ ಕ್ಷೇತ್ರ ಕಸಮಳಗಿಯಲ್ಲಿ ಮಹಾವೀರ ಜಯಂತಿ ಅಂಗವಾಗಿ ಪ್ರತಿವರ್ಷದಂತೆ ಕುಂಭ ಮೇಳ ಹಾಗೂ ವಿವಿಧವಾದ್ಯ ವೃಂದಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಗವಾನ ಮಹಾವೀರರ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ನಡೆಸಲಾಯಿತು. ಗ್ರಾಮದ ಭೂಗರ್ಭದಲ್ಲಿ ದೊರೆತ ಶತಮಾನಗಳಷ್ಟು ಪುರಾತನ ಪಾರ್ಶ್ವನಾಥ ತೀರ್ಥಂಕರ ವಿಗ್ರಹಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಗ್ರಾಮದ ಜೈನ ಬಸದಿಯ ಧರ್ಮಗುರುಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶಾಸಕ ವಿಠ್ಠಲ ಹಲಗೇಕರ, ಬಿಜೆಪಿ ಬ್ಲಾಕ್ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ, ಮುಖಂಡರಾದ ಸದಾನಂದ ಪಾಟೀಲ, ಮಲ್ಲಪ್ಪ ಮಾರಿಹಾಳ, ಶ್ರೀಕಾಂತ ಇಟಗಿ, ಸುನೀಲ ಮಡ್ಡೀಮನಿ, ಧನಶ್ರೀ ದೇಸಾಯಿ ಹಾಗೂ ಇತರರು ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಪೂಜೆ ಸಲ್ಲಿಸಿದರು. ಜಯಂತಿ ಅಂಗವಾಗಿ ಜೈನ ಧರ್ಮಿಯರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಆಯೋಜಿಸಿದ್ದ ಮಹಾವೀರರ ಭಾವಚಿತ್ರದ ಮೆರವಣಿಗೆಯಲ್ಲಿ ಬ್ರಹ್ಮಾನಂದ ಕೊಚೇರಿ, ಪ್ರಮೋದ ಕೊಚೇರಿ, ರಮೇಶ ಜೈನ, ಮಹಾವೀರ ಜೈನ್ ಸೇರಿದಂತೆ ಪಟ್ಟಣ ಹಾಗೂ ಸುತ್ತಲಿನ ಭಾಗದ ಜೈನ ಬಾಂಧವರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಶೀಘ್ರದಲ್ಲೇ ರಾಯಣ್ಣನ ಮೂರ್ತಿ ಪ್ರತಿಷ್ಠಾಪಿಸಿ: ಕಲ್ಲಪ್ಪ

ಸುರೇಬಾನ: ಮುಂಬರುವ ದಿನಗಳಲ್ಲಿ ರಾಮದುರ್ಗ ತಾಲೂಕಿನ ಸರ್ವ ಪಕ್ಷಗಳ ನಾಯಕರ ಸಮ್ಮುಖದಲ್ಲಿ ರಾಯಣ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು ಎಂದು ತುಮಕೂರಿನ ನೀಲಗಂಗಾ ಪ್ಯಾರಾ ಮೆಡಿಕಲ್ ಕಾಲೇಜಿನ ಕಾರ್ಯದರ್ಶಿ ಕಲ್ಲಪ್ಪ ಜಗ್ಗಲ ಹೇಳಿದರು.

ಅವರು ಸಮೀಪದ ಕಲಹಾಳ ಗ್ರಾಮದ ಬೀರಲಿಂಗೇಶ್ವರ ದೇವಸ್ಥಾನದ ಹತ್ತಿರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ವೃತ್ತ ಸ್ಥಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸುರೇಬಾನ, ಕಲಹಾಳ, ಕೊಣ್ಣೂರ ಹಾಗೂ ಚಿಕ್ಕೊಪ್ಪ ಎಸ್.ಕೆ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆ ಪಕ್ಕದಲ್ಲಿ ವೃತ್ತಕ್ಕೆ ಗ್ರಾಮಸ್ಥರೆಲ್ಲರೂ ಸೇರಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ರಾಯಣ್ಣ ವೃತ್ತ ಎಂದು ನಾಮಕರಣ ಮಾಡಲಾಯಿತು.



ಈ ವೇಳೆ ಮಲ್ಲಪ್ಪ ಹೂಗಾರ, ಹನಮಂತಗೌಡ ಪಾಟೀಲ, ಶಂಕರಗೌಡ ಪಾಟೀಲ, ಬಸವರಾಜ ಗುಡ್ಡದ, ಗದಿಗೆಪ್ಪ ಗುಡ್ಡದ, ಮಲ್ಲಪ್ಪ ಹಾದಿಮನಿ, ಹನಮಂತ ಮಾದರ, ಶಿವಪ್ಪ ಕಂಬಳಿ, ನಾಗಪ್ಪ ಕಪಲಿ, ಶರಣಪ್ಪ ಮಾದರ, ಈರಣ್ಣ ತಳವಾರ, ಹನಮಂತ ಪೂಜಾರ, ಶಿವಪ್ಪ ಉಳ್ಳಾಗಡ್ಡಿ, ಲಕ್ಷ್ಮಣ ಹಾಗನೂರ, ಸಿದ್ದಪ್ಪ ದಾಡಿಭಾವಿ, ಮಹದಾಯಿ ಹೋರಾಟಗಾರ ಹನಮಂತ ಮಡಿವಾಳರ ಸೇರಿದಂತೆ ಗ್ರಾಮದ ಹಲವರು ಉಪಸ್ಥಿತರಿದ್ದರು.

ಕಣ್ಣಿನ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ: ಮುರಗೇಶ

ಯರಗಟ್ಟಿ: ಕಣ್ಣು ಮನುಷ್ಯನ ಪ್ರಮುಖ ಅಂಗವಾಗಿದ್ದು ಇದನ್ನು ಪ್ರತಿಯೊಬ್ಬರು ಸಂರಕ್ಷಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಮುರಗೇಶ ಶಿವಪೂಜಿ ಹೇಳಿದರು.

ಸಮೀಪದ ತಲ್ಲೂರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕರ್ನಾಟಕ ಪತ್ರಕರ್ತರ ಸಂಘ, ತಾಲೂಕ ಘಟಕ ಯರಗಟ್ಟಿ ಮತ್ತು ಗ್ರಾಮ ಪಂಚಾಯತ, ಜನಪ್ರೀಯ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಇವರ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಹಾಗೂ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಣ್ಣಿನ ತೊಂದರೆಯಾದಾಗ ಕೂಡಲೇ ತಜ್ಞ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಎ.ವಿ.ಇಂಗಳೆ, ಹಿರಿಯ ನೇತ್ರ ಸಹಾಯುಕ ಪಾಂಡು ತಳವಾರ ಮಾತನಾಡಿ, ಪ್ರತಿಯೊಬ್ಬರೂ ಕಣ್ಣಿನ ಆರೈಕೆ ಮಾಡಿಕೊಳ್ಳಿ ಎಂದು ಹೇಳಿದರು.

ತೊರಗಲ್ಲ ಮಠದ ದೀಪಕ್ ಸ್ವಾಮಿ ಸಾನ್ನಿದ್ಯ ವಹಿಸಿದ್ದರು, ಎಸ್‌ಡಿಎಮ್‌ಸಿ ಅಧ್ಯಕ್ಷ ಶ್ಯಾಮ ಚಿಕಾಕಿ ಅದ್ಯಕ್ಷತೆ ವಹಿಸಿದ್ದರು, ಗ್ರಾಪಂ ಮಾಜಿ ಉಪಾಧ್ಯಕ್ಷ



ಬಾಬುಗೌಡ ಅಣ್ಣಿಗೇರಿ, ಪತ್ರಕರ್ತರ ಸಂಘದ ತಾಲೂಕ ಅಧ್ಯಕ್ಷ ಈರಣ್ಣ ಹೂಲ್ಲೂರ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಬಸಪ್ಪ ಅಂಗಡಿ, ಮಹಿಳಾ ಸಂಜೀವಿನಿ ಒಕ್ಕೂಟ ಅಧ್ಯಕ್ಷೆ ಕಸ್ತೂರಿ ಹೊಸುರ, ಮುಖಂಡ ಶಂಕರಗೌಡ ಪಾಟೀಲ, ಗ್ರಾಪಂ ಮಾಜಿ ಸದಸ್ಯ ಬಸವರಾಜ ಪೂಜೇರ, ನಿವೃತ್ತ ಶಿಕ್ಷಕ ಬಸಪ್ಪ ಲಕ್ಕನ್ನವರ ಇತರರಿದ್ದರು. ಶಿಕ್ಷಕ ಬಸನಗೌಡ ಅಣ್ಣಿಗೇರಿ ಸ್ವಾಗತಿಸಿ ವಂದಿಸಿದರು.

ಏ.4ರಿಂದ ಖಣದಾಳ ಕೊರವಂಜಿ ಲಕ್ಷ್ಮೀದೇವಿ ಭಂಡಾರದ ಜಾತ್ರೆ

ಮುಗಳಖೋಡ: ಸಮೀಪದ ಸುಕ್ಷೇತ್ರ ಖಣದಾಳ ಗ್ರಾಮದ ಚಿಗರಿ ತೋಟದಲ್ಲಿ ಏಪ್ರಿಲ್ 4 ಮತ್ತು 5ರಂದು ಶ್ರೀ ಮಹಾಲಕ್ಷ್ಮೀ ಕೊರವಂಜಿ ದೇವಿ ಜಾತ್ರೆಯು ವಿಜೃಂಭಣೆಯಿಂದ ಜರುಗಲಿದೆ ಎಂದು ಎಂದು ಕೊರವಂಜಿ ದೇವಸ್ಥಾನದ ರಾಮಣ್ಣ ಮಹಾರಾಜರು ತಿಳಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.4 ರಂದು ಬೆಳಿಗ್ಗೆ 7 ಗಂಟೆಗೆ ಶ್ರೀ ಮಹಾ ಲಕ್ಷ್ಮಿ ಕೊರವಂಜಿ ದೇವಿಯ ಮೂರ್ತಿಗೆ ಪಂಚಾಮೃತ ಅಭಿಷೇಕ ಮತ್ತು ಹೋಮ ಹವನ ಜರುಗುವುದು. ರಾತ್ರಿ 8ಗಂಟೆಗೆ ಚೌಡಕಿ ಪದಗಳು, ಏ.5ರಂದು ಬೆಳಿಗ್ಗೆ 8 ಗಂಟೆಗೆ ಗ್ರಾಮದೇವರಾದ ಶ್ರೀ ಹುಲಿಕಾಂತೇಶ್ವರ ದೇವಸ್ಥಾನದಿಂದ 11 ಊರಿನ ಯಲ್ಲಮ್ಮದೇವಿ ಜಗದೊಂದಿಗೆ ಕುಂಭಮೇಳ ಕೊರವಂಜಿ ದೇವಸ್ಥಾನಕ್ಕೆ ಆಗಮಿಸುವುದು. ನಂತರ 11 ಗಂಟೆಗೆ 501 ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ 12 ಗಂಟೆಗೆ ಸತ್ಕಾರ ಸಮಾರಂಭ ತದನಂತರ ಮಧ್ಯಾಹ್ನ ಪೂಜ್ಯ ಮಹಾತ್ಮರಿಂದ ಪ್ರವಚನ ಕಾರ್ಯಕ್ರಮ ಹಾಗೂ ಭಂಡಾರ ಎರಚಿ ಜಾತ್ರಾ ಮಹೋತ್ಸವಕ್ಕೆ ಮಂಗಳ ಹಾಡಲಾಗುವುದು ಎಂದರು. ಅಧ್ಯಕ್ಷತೆಯನ್ನು ಕಕಮರಿ ಗ್ರಾಮದ ರಾಯಲಿಂಗೇಶ್ವರ ಸಂಸ್ಥಾನ ಮಠದ ಸದ್ಗುರು ಅಭಿನವ ಗುರುಲಿಂಗಜಂಗಮ ಮಹಾ ಸ್ವಾಮೀಜಿ ವಹಿಸಿಕೊಳ್ಳಲಿದ್ದು, ವಡೇರಹಟ್ಟಿ ಮಠದ ಗುರುಪ್ರಸಾದ ಮಹಾಸ್ವಾಮಿಗಳು, ಖಣದಾಳ ಹುಲಿಕಾಂತೇಶ್ವರ ದೇವಸ್ಥಾನದ ಸ್ವಾಮೀಗಳಾದ ಈರಯ್ಯಾ ಮಹಾಸ್ವಾಮಿಗಳು, ತೆಲಸಂಗದ ಮಹಾ ತಪಸ್ವಿ ಪೂಜ್ಯಶ್ರೀ ಸಂಗಮೇಶ್ವರ ಮಹಾಸ್ವಾಮಿಗಳು ಕುಂಚನೂರಿನ ಡಾ. ಮಾದುಲಿಂಗ ಮಹಾರಾಜರು ಸಾನಿಧ್ಯವನ್ನು ವಹಿಸಿಕೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷರಾದ ಪ್ರತಾಪರಾವ್ ಪಾಟೀಲ್, ಶಿವರಾಜ್ ಪಾಟೀಲ್, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ್ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ ರಾಜೀವ್ ಡಾ. ಬಿ.ಸಿ. ಸರಿಕರ್, ಡಾ. ಅರವಿಂದ್ ಲಮಾಣಿ, ರಾಜು ಮೈಶಾಳೆ, ಹಾರೂಗೇರಿ ಪಿಎಸ್‌ಐ ಮಾಳಪ್ಪ ಪೂಜಾರಿ, ಸುರೇಶ್ ರಾಮಕೃಷ್ಣ ದಳವಾಯಿ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಏ.5ರಂದು ಸಂಜೆ ಸ್ವರಸಂಗಮ ಮೇಲೋಡಿಸ್ ಆರ್ಕೆಸ್ಟ್ರಾ ಮೂಡಲಗಿ ಕಲಾತಂಡದಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಸಿದ್ದಣ್ಣ ಚಿಗರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ರಘುನಾಥ್ ಹಿಡಕಲ್, ಈರಪ್ಪ ವರ್ಡ್ಡ, ಲಕ್ಷ್ಮಣ ಹುಣಸ್ಯಾಳ್, ಶ್ರೀಶೈಲ್ ಮಾಂಗ್, ಲಕ್ಷ್ಮಣ್ ಜೋಡಟ್ಟಿ, ಸಿದ್ದಣ್ಣ ಚಿಗರಿ, ಅಭಿಷೇಕ್ ಚಿಗರಿ, ಲಕ್ಷ್ಮಣ್ ಜೋಡಟ್ಟಿ ಸೇರಿದಂತೆ ಕಮಿಟಿಯ ಸದಸ್ಯರು ಊರಿನ ಹಿರಿಯರು ಇದ್ದರು.

ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದು

ಗೋಕಾಕ: ಮಕ್ಕಳ ಸರ್ವಾಂಗೀಣ ಬೆಳಗಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ ಎಂದು ಇಲ್ಲಿಯ ಚಿಕ್ಕಮಕ್ಕಳ ತಜ್ಞೆ ಡಾ.ಪ್ರೀತಿ ವಣ್ಣೂರ ಹೇಳಿದರು.

ಅವರು, ಸೋಮವಾರದಂದು ನಗರದ ಶ್ರೀ ಚನ್ನಬಸವೇಶ್ವರ ವಿದ್ಯಾಪೀಠದ ಆಂಗ್ಲ ಮಾಧ್ಯಮ ಶಾಲೆಯ ಯುಕೆಜಿ ವಿದ್ಯಾರ್ಥಿಗಳ ಗ್ರಾಜ್ಯುವೇಷನ ಡೇ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಪ್ರತಿ ಮಕ್ಕಳಲ್ಲೂ ಕಲಿಕೆ ವಿಭಿನ್ನವಾಗಿರುತ್ತದೆ ಅದನ್ನು ಅರಿತು ಶಿಕ್ಷಕರು ಪಾಲಕರು ಸಹನೆಯಿಂದ ಸ್ಪಂದಿಸಬೇಕು. ಮಕ್ಕಳಲ್ಲಿಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ. ಶಿಕ್ಷಣದೊಂದಿಗೆ ಅವರಿಗೆ ಉತ್ತಮ ಸಂಸ್ಕಾರ ನೀಡಿ ಒಳ್ಳೆಯ ನಾಗರಿಕರನ್ನಾಗಿ ಮಾಡಿ. ಸಂಸ್ಥೆ ಶಿಕ್ಷಕರು, ಪಾಲಕರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವಂತೆ ಕರೆ ನೀಡಿದರು.ವೇದಿಕೆಯ ಮೇಲೆ ಶ್ರೀ ಬಸವಪ್ರಭು ಸ್ವಾಮಿಜಿ, ಆಡಳಿತ ಅಧಿಕಾರಿ ಅಡವೀಶ ಗವಿಮಠ, ಮುಖ್ಯೋಪಾಧ್ಯಾಯ ಎಸ್ ಕೆ ಮಠದ ಇದ್ದರು.



ರಾಜ್ಯದಲ್ಲಿ ಹಿಂದಿ ಕಡ್ಡಾಯವಲ್ಲ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಕನ್ನಡಪರ ಸಂಘಟನೆಗಳ ಸಂತಸ



ಬೆಳಗಾವಿ : ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಹಿಂದಿ ಹೇರಿಕೆಯೂ ರಾಜ್ಯದಲ್ಲಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿದ್ದು. ರಾಜ್ಯದಲ್ಲಿ ಹಿಂದಿ ಕಡ್ಡಾಯವಲ್ಲ ಎಂದು ನಿರ್ಧಾರ ತೆಗೆದುಕೊಂಡಿರುವುದಕ್ಕೆ ಬೆಳಗಾವಿಯಲ್ಲಿ ಕನ್ನಡಿಗರು ಹಾಗೂ ಕನ್ನಡಪರ ಸಂಘಟನೆಗಳ ಸ್ವಾಗತ ಮಾಡಿಖಂಡಿವೆ.

ನಗರದ ಚೆನ್ನಮ್ಮ ವೃತ್ತದಲ್ಲಿ ಕರವೇ ನೇತ್ರತ್ವದಲ್ಲಿ ರಾಜ್ಯ ಸರ್ಕಾರದ ಹಿಂದಿ ಕಡ್ಡಾಯವಲ್ಲ ಎಂದು ನಿರ್ಧಾರವನ್ನು ತೆಗೆದುಕೊಂಡಿರುವುದಕ್ಕೆ ಸ್ವಾಗತಿಸಿ, ಸಿಹಿ ಹಂಚಿ ಸಂಭ್ರಮಾಚರಿಸಿದರು.

ಈ ವೇಳೆ ಕರವೇ ಜಿಲ್ಲಾಧ್ಯಕ್ಷ ವಾಜೇದ್ ಹಿರೇಕುಡಿ, ಸಂಗೀತಾ ಕಾಂಬಳೆ, ಸೇರಿದಂತೆ ಹಲವು ಕನ್ನಡಪರ ಸಂಘಟನೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ರಾಚೋಟೇಶ್ವರ ಜಾತ್ರೆ: ಕೆಂಡ ಹಾಯ್ದು ಹರಕೆ ತೀರಿಸಿದ ಭಕ್ತರು

ಕೆರೂರ: ಭಕ್ತರ ಇಷ್ಟಾರ್ಥ ಸಿದ್ಧಿಗಳನ್ನು ಈಡೇರಿಸುವ ರಾಚೋಟೇಶ್ವರ ದೇವರ ಅಗ್ನಿ ಉತ್ಸವವು ಭಾನುವಾರ ರಾತ್ರಿ ಸಂಭ್ರಮದಿಂದ ನಡೆಯಿತು.

ಬೆಳಿಗ್ಗೆ ದೇವಸ್ಥಾನದಲ್ಲಿ ರಾಚೋಟೇಶ್ವರ ದೇವರ ಅಗ್ನಿ ಉತ್ಸವದ ಅಂಗವಾಗಿ ಕಿಚಕಣ ಸಂಹಾರದ ಸುಂದರ ಅಂಲಕಾರ ಮಾಡಲಾಗಿತ್ತು. ದೇವಸ್ಥಾನದ ಮುಂದಿರುವ ಆವರಣದಲ್ಲಿ ಅಗ್ನಿ ಕುಂಡವನ್ನು ಮಾಡಲಾಗಿತ್ತು,ಅಗ್ನಿ ಪ್ರಾರಂಭಕ್ಕು ಮುನ್ನ ಸಣ್ಣ ಮಕ್ಕಳ, ಯುವಕರು, ಹಿರಿಯರು ರಾಚೋಟೇಶ್ವರ ದೇವರ ಕಡೆ ಹೇಳಿದರು. ರಾತ್ರಿ 11 ಗಂಟೆಗೆ ಪ್ರಾರಂಭವಾದ ಅಗ್ನಿ ಉತ್ಸವವು ಸುಮಾರು ಒಂದು ಗಂಟೆಗು ಹೆಚ್ಚು ಕಾಲ ನಡೆಯಿತು. ಮೊದಲು ಪತ್ತಾರ ಮನೆತದವರು,ಪಲ್ಲಕ್ಕಿ, ನಂದಿಕೋಲು ಹೊತ್ತವರು 'ರಾಚೋಟೇಶ್ವರ ಮಹರಾಜ ಕೀ ಜೈ' ಎನ್ನುತ ಕೆಂಡವನ್ನು ಹಾಯ್ದರು.ಪಟ್ಟಣದ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ ಆಗಮಿಸಿದ ಭಕ್ತರು ಕೆಂಡವನ್ನು ಹಾಯ್ದು ಹರೆಯನ್ನು ತೀರಿಸಿದರು. ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ರಾತ್ರಿ ಅನ್ನಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಬಿಜೆಪಿಗೆ ಗೆಲುವು ಖಚಿತ: ಪ್ರತಾಪ ಸಿಂಹ



ಬಾಗಲಕೋಟೆ: ವೀರಣ್ಣ ಚರಂತಿಮಠ ಈ ಬಾರಿ ಗೆದ್ದರೆ 2028ರಲ್ಲಿ ಅವರು ಮಂತ್ರಿಯಾಗಿ ಬಾಗಲಕೋಟೆಯ ನಗರವನ್ನು ಮತ್ತಷ್ಟು ಅಭಿವೃದ್ಧಿ ಮಾಡುತ್ತಾರೆ ಎಂದು ಮಾಜಿ ಸಂಸದರಾದ ಪ್ರತಾಪ ಸಿಂಹ ಹೇಳಿದರು.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಅಂಗವಾಗಿ ಬಾಗಲಕೋಟೆಯಲ್ಲಿ ಇಂದು ಏರ್ಪಡಿಸಲಾಗಿದ್ದ ಕಿಲ್ಲಾ ಓಣಿ ಯುವಕರ ಸಭೆ ಹಾಗೂ ಮನೆ ಮನೆ ಸಂಪರ್ಕದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮುಂದಿನ ಬಾರಿ ಖಚಿತವಾಗಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವಲ್ಲಿ ಯಾವುದೇ ಸಂಶಯವಿಲ್ಲಾ, ನೀವು ಇಂದು ಹಾಕುವ ಮತ ಮುಂದೆ ಸಚಿವರಾಗಲಿರುವ ವ್ಯಕ್ತಿಗೆ ಎಂದರು.ನಂದು ಗಾಯಕವಾಡ, ಬಸವರಾಜ ಯಂಕಂಚಿ, ಶ್ರೀನಾಥ ಸಜ್ಜನ, ಚಂದ್ರು ರಾಮವಾಡಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಇಂದಿನಿಂದ ಕರೆಮ್ಮದೇವಿ ಜಾತ್ರಾ ಮಹೋತ್ಸವ

ಹುಲ್ಯಾಳ: ಜಮಖಂಡಿ ತಾಲೂಕಿನ ಸಿದ್ದಾಪುರ ಗ್ರಾಮದಲ್ಲಿ ಮಾ.31ರಿಂದ ಏ.3 ಶುಕ್ರವಾರದವರೆಗೆ ಆದಿಶಕ್ತಿ ಕರೆಮ್ಮದೇವಿಯ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರಗುವುದು. ಜಾತ್ರಾ ಮಹೋತ್ಸವದ ಪ್ರಯುಕ್ತ ಗ್ರಾಮದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮಾ.31ರಂದು ಗ್ರಾಮದ ಸಮಸ್ತ ಗುರು ಹಿರಿಯರ ಸಮ್ಮುಖದಲ್ಲಿದೇವಿಗೆ ಉಡಿ ತುಂಬುವ ಕಾರ್ಯಕ್ರಮ. ಏ.1ರಂದು ರಾತ್ರಿದೇವಿಯ ಭವ್ಯ ರಥೋತ್ಸವ ಹಾಗೂ ರಾತ್ರಿ ಶ್ರೀ ಘತ್ತರಗಿ ಭಾಗ್ಯವಂತಿದೇವಿ ಚರಿತ್ರೆ ಎಂಬ ಭಕ್ತಿ ಪ್ರಧಾನ ಪೌರಾಣಿಕ ನಾಟಕ. ಏ.2ರಂದು ಬೆಳಗ್ಗೆ 9 ಗಂಟೆಗೆ ಬಾಕ್ ಹ್ಯಾಂಡಲ್ ಮಹಿಳೆಯರ ಸೈಕಲ್‌ರೇಸ್ ಸ್ಪರ್ಧೆ ಸಂಜೆ 4 ಗಂಟೆಗೆ ದಿ. ಶಿವಯ್ಯ ಗುಡಗುಂಟಿಮಠ ಇವರ ಸ್ಮರಣಾರ್ಥಜಂಗಿ ನಿಕಾಲಿ ಕುಸ್ತಿಗಳು ರಾತ್ರಿ 10.30 ಕ್ಕೆ ಹುತ್ತದಲ್ಲಿ ಕೈಯಿಟ್ಟ ಮುತ್ತೈದೆ ಎಂಬ ಸಾಮಾಜಿಕ ನಾಟಕ. ಏ.3ರಂದು ಪಲ್ಲಕ್ಕಿ ಸೇವೆ ತದನಂತರ ದೇವಿಯ ಗದ್ದಿಗೆ ಕೂಡಿಸುವ ಕಾರ್ಯಕ್ರಮ ಹಾಗೂ ರಾತ್ರಿ ಬಡವನ ಬದುಕು ಬಂಗಾರದ ಬೆಳಕು ಎಂಬ ಸಾಮಾಜಿಕ ನಾಟಕ ಇರುತ್ತದೆ ಎಂದು ಕಮಿಟಿಯವರು ತಿಳಿಸಿದ್ದಾರೆ.



ರಬಕವಿ-ಬನಹಟ್ಟಿ: ಇಲ್ಲಿನ ವಿದ್ಯಾನಗರ ಬಡಾವಣೆಯಲ್ಲಿರುವ ವಿಶ್ವಕರ್ಮ ಸಮಾಜ ಬಾಂದವರ ಆರಾಧ್ಯ ದೇವಿ ಕಾಳಿಕಾದೇವಿಯ ಅಡ್ಡಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.



ಕೆರೂರ: ಭಕ್ತರ ಇಷ್ಟಾರ್ಥ ಸಿದ್ಧಿಗಳನ್ನು ಈಡೇರಿಸುವ ರಾಚೋಟೇಶ್ವರ ದೇವರ ಅಗ್ನಿ ಉತ್ಸವವು ಭಾನುವಾರ ರಾತ್ರಿ ಸಂಭ್ರಮದಿಂದ ನಡೆಯಿತು.

ಜೀವನದಲ್ಲಿ ಪುಣ್ಯ ಕಾರ್ಯ ಮಾಡಿ: ಸಾವಿತ್ರಮ್ಮ

ಗುಳೇದಗುಡ್ಡ: ಜೀವನದಲ್ಲಿ ದುಃಖದಿಂದ ದೂರವಾಗಿ ಮತ್ತು ಸುಖವನ್ನು ಬಯಸುವುದಾದರೆ ಪುಣ್ಯದ ಮಾರ್ಗದಲ್ಲಿ ನಡೆಯಬೇಕು. ಪರರಿಗೆ ಕೆಟ್ಟದ್ದು ಮಾಡಿದರೆ ಪಾಪ, ಒಳ್ಳೆಯದು ಮಾಡಿದರೆ ಪುಣ್ಯ ಸಿಗುತ್ತದೆ ಎಂದು ಪ್ರವಚನಗಾರ್ತಿ ಸಾವಿತ್ರಮ್ಮ ಹಿರೇಮಠ ಹೇಳಿದರು.

ಅವರು ಪಟ್ಟಣದ ಅಕ್ಕಲಕೋಟೆಯ ರಾಜಯೋಗಿ ಶ್ರೀರೇವಣಸಿದ್ಧ ಶಿವಶರಣರ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿ, ಮನುಷ್ಯನಾದವನು ಜೀವನದಲ್ಲಿ ಅಧರ್ಮದ ಮಾರ್ಗದಲ್ಲಿ ಸಾಗಿ ಕೆಟ್ಟದ್ದನ್ನು, ಪಾಪಕರ್ಮವನ್ನು ಮಾಡದೇ ಪುಣ್ಯದ ಕಾರ್ಯದಲ್ಲಿ ತನ್ನ ಬದುಕು ಸಾಗಿಸಬೇಕು. ಪುಣ್ಯ ಕಾರ್ಯ ಮಾಡಿ ಮುಕ್ತಿ ಸಾಧಿಸಬೇಕು. ಆದಕ್ಕೆ ಪುಣ್ಯದ ಕಾರ್ಯ ಮಾಡಬೇಕು. ಧರ್ಮ ಮಾರ್ಗದಲ್ಲಿ ನಡೆದರೆ ಜೀವನ ಪಾವನವಾಗುತ್ತದೆ ಎಂದರು. ಗುರುಸಿದ್ದೇಶ್ವರ ಮಠದ ಶ್ರೀ ಜ. ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಧರ್ಮದ ಮಾರ್ಗ ವ್ಯಕ್ತಿ ಜೀವನದಲ್ಲಿ ಸಾಕಷ್ಟು ಬದಲಾವಣೆ ತರುತ್ತದೆ. ಶರಣರ, ಸಂತರ ಆದರ್ಶ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಪಾಲಿಸಿಕೊಂಡು ನಡೆದರೆ ಬದುಕು ಸುಂದರವಾಗುತ್ತದೆ ಎಂದರು. ಮೈಂದರಗಿ ಹಿರೇಮಠದ ರೇವಣಸಿದ್ಧ ಶಿವಶರಣ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಶ್ರೀಮಂತ ಭುಜಂಗರಾವ ದೇಸಾಯಿ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತೋಶ್ರೀ ನಾಗಮ್ಮತಾಯಿ, ಭೀಮಮ್ಮ ತಾಯಿ, ನಾರಾಯಣ ಚಿತ್ರಗಾರ, ಗೊರಬಾಳದ ಯಮನವ್ವ ತಾಯಿ, ಶಿವಾನಂದ ಸಿದ್ದಣ್ಣವರ, ರಾಮಲಿಂಗಪ್ಪ ಸಿದ್ದಣ್ಣವರ ಇದ್ದರು.



ಗುಳೇದಗುಡ್ಡ: ಪಟ್ಟಣದ ರೇವಣಸಿದ್ದೇಶ್ವರ ಮಠದಲ್ಲಿ ನಡೆದ ಪ್ರವಚನ ಕಾರ್ಯಕ್ರಮವನ್ನು ಭುಜಂಗರಾವ ದೇಸಾಯಿ ಉದ್ಘಾಟಿಸಿದರು. ಪ್ರವಚನಗಾರ್ತಿ ಸಾವಿತ್ರಮ್ಮ ಹಿರೇಮಠ, ಗುರುಸಿದ್ದೇಶ್ವರ ಮಠದ ಶ್ರೀ ಜ. ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಮೈಂದರಗಿ ಹಿರೇಮಠದ ರೇವಣಸಿದ್ಧ ಶಿವಶರಣ ಮಹಾಸ್ವಾಮಿಗಳು,ಮಾತೋಶ್ರೀ ನಾಗಮ್ಮತಾಯಿ, ಭೀಮಮ್ಮ ತಾಯಿ, ನಾರಾಯಣ ಚಿತ್ರಗಾರ, ಗೊರಬಾಳದ ಯಮನವ್ವತಾಯಿ, ಶಿವಾನಂದ ಸಿದ್ದಣ್ಣವರ, ರಾಮಲಿಂಗಪ್ಪ ಸಿದ್ದಣ್ಣವರ ಸೇರಿದಂತೆ ಇತರರು ಇದ್ದರು.

ಕಟ್ಟೆಕೆರೆಯ ಅಭಿವೃದ್ಧಿ ಕುಂಠಿತ

ಗೋಪಾಲ ಪಾಟೀಲ

ದಿಗಂತ ವಿಶೇಷ

ಜಮಖಂಡಿ: ಅರಣ್ಯ ಇಲಾಖೆಯ ನಿರ್ವಹಣೆಯಲ್ಲಿರುವ ಇತಿಹಾಸ ಸಾರುವ ಕಟ್ಟೆಕೆರೆಯ ಅಭಿವೃದ್ಧಿಯು ಬರುಬರುತ್ತ ಕುಂಠಿತವಾಗುತ್ತಿದೆ. ನಿರ್ವಹಣೆಯಿಲ್ಲದೆ ಪಾಳುಬೀಳುವ ಪರಿಸ್ಥಿತಿಯಲ್ಲಿದೆ. ಗುಡ್ಡದ ಮೇಲಿನ ಸಾಲುಮರದ ತಿಮ್ಮಕ್ಕಳ ಗ್ರಾಮೀಣ ಸೊಬಗಿನ ಉದ್ಯಾನವಂತೂ ಬಣಗುಡುತ್ತಿದೆ. ಇದಕ್ಕೆಲ್ಲ ನಿರ್ವಹಣೆಯ ಕೊರತೆ ಎದ್ದು ಕಾಣುತ್ತಿದೆ.

2013 ರಿಂದ 2018 ರ ಅವಧಿಯಲ್ಲಿ ಶಾಸಕರಾಗಿದ್ದ ದಿ. ಸಿದ್ದು ನ್ಯಾಮಗೌಡರ ಕನಸಿನ ಕೂಸಾದ ಈ ಉದ್ಯಾನವನವನ್ನು ಒಂದು ಐತಿಹಾಸಿಕ ಉದ್ಯಾನವನವನ್ನಾಗಿ ಮಾಡುವ ಅಭಿಲಾಸೆ ಹೊಂದಿ ದಿನನಿತ್ಯ ಸಾರ್ವಜನಿಕರನ್ನು ಒಗ್ಗೂಡಿಸಿ ಈ ಅರಣ್ಯದಲ್ಲಿ ಅಂದು ಸುಮಾರು 25 ಸಾವಿರಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದಾರೆ. ಅದರಲ್ಲಿ ಸರಿ ಸುಮಾರು 20 ಸಾವಿರ ಸಸಿಗಳು ಬೆಳೆದು ನಿಂತಿವೆ. ಆದರೆ, ಅವುಗಳ ನಿರ್ವಹಣೆಯ ಕೊರತೆಯಿಂದ ಬೇಸಿಗೆಯ ಬಿಸಿಲಿನಲ್ಲಿ ಬರಡಾಗುತ್ತಿವೆ.

ಅಂದು ಅವರು ಇದೊಂದು ಸುಂದರ ಪ್ರವಾಸಿ ತಾಣವನ್ನಾಗಿ ಮಾಡುವ ಬೃಹತ್ ಉದ್ದೇಶದಿಂದ ಸರ್ಕಾರದಿಂದ ಕೋಟ್ಯಾಂತರ ಅನುದಾನವನ್ನು ತಂದು ಸುಮಾರು 60 ಎಕರೆ ಪ್ರದೇಶದಲ್ಲಿ ಉದ್ಯಾನವನ್ನು ಮತ್ತು ಸುಮಾರು 20 ಎಕರೆ ವಿಸ್ತೀರ್ಣಹೊಂದಿದ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆಯನ್ನೂ ಸಹ ಮಾಡಿದ್ದರು, ಆ ಬೋಟ್‌ಗಳು ನಡೆಯಲೇಯಿಲ್ಲ.





ಮುಂದೆ 2019 ರ ಅವಧಿಯಲ್ಲಿ ಅಂದಿನ ಶಾಸಕ ಆನಂದ ನ್ಯಾಮಗೌಡ 40 ಆಸನದ ಮಕ್ಕಳ ಪುಟಾಣಿ ರಸ್ತೆಯ ರೈಲನ್ನು ಲೋಕಾರ್ಪಣೆ ಮಾಡಿದರು. ಆದರೆ, ಆ ರೈಲು ಓಡಲೇಯಿಲ್ಲ.

ಕೆಲವೊಂದು ತಿರುಗು ಯಂತ್ರಗಳು ಮತ್ತು ಮಕ್ಕಳ ಆಟದ ವಸ್ತುಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ರಿಪೇರಿ ಕಾಣದೇ ಎಷ್ಟೋ ವರ್ಷದಂತೆ ಕಾಣುತ್ತಿವೆ. ವಾಯು ವಿಹಾರಿಗಳು ಕೂಡಲು ಹಾಕಿದ ಸಿಮೆಂಟ್ ಕಟ್ಟೆಗಳು ಬಿದ್ದು ಹಾಳಾಗಿವೆ. ಅಲ್ಪ ಪ್ರಮಾಣದ ದುರಸ್ಥಿಯನ್ನೂ ಸಹ ಮಾಡಲು ಅಧಿಕಾರಿಗಳು ತಯಾರಿಲ್ಲವೆಂದು ವಾಯುವಿಹಾರಿಗಳು ಹೇಳುತ್ತಾರೆ.

ಈ ಮೊದಲು ಈ ಉದ್ಯಾನವನವನ್ನು ನೋಡಲು ದೂರದಿಂದ ಶಾಲಾ ಮಕ್ಕಳು ಬರುತ್ತಿದ್ದರು. ಆದರೆ ನಿರ್ವಹಣೆಯ ಕೊರತೆಯಿಂದ ಸೊರಗಿದ ಉದ್ಯಾನಕ್ಕೆ ಯಾರೂ ಬರುತ್ತಲೇ ಇಲ್ಲ. ಈಗ ಕೇವಲ ಜೋಡಿ ಹಕ್ಕಿಗಳು ಮಾತ್ರ ಅಲ್ಲಿ ಸೇರಿ ತಮ್ಮ ಪ್ರೇಮ ಸಲ್ಲಾಪ ಮಾಡುತ್ತಾರೆ. ಇದರಿಂದ ಮರ್ಯಾದಸ್ಥರು ಕೂಡಾ ಬರಲು ಹಿಂಜರಿಯುತ್ತಿದ್ದಾರೆ.

> **ಅಧಿಕಾರಿಗಳ ನಿರ್ಲಕ್ಷದಿಂದ ಉದ್ಯಾನವನವು ಹಾಳಾಗುತ್ತಿದೆ. ಈಗಾಗಲೇ ಅರಣ್ಯ ಇಲಾಖೆಯ ಸಚಿವ ಈಶ್ವರ ಖಂಡ್ರೆಯವರಿಗೆ ಈ ಉದ್ಯಾನವನದ ಅಭಿವೃದ್ಧಿಗಾಗಿ ಸುಮಾರು 5 ಕೋಟಿ ರೂ.ಗಳ ಅನುದಾನವನ್ನು ಕೇಳಿದ್ದೇವೆ ಅವರೂ ಕೂಡಾ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅನುದಾನ ಬಂದ ನಂತರ ಎಲ್ಲವನ್ನೂ ಪುನರುತ್ಥಾನ ಮಾಡಲಾಗುವುದು.**
>
> ■ ಆನಂದ ನ್ಯಾಮಗೌಡ. ಮಾಜಿ ಶಾಸಕ

ಗುಡ್ಡದ ಮೇಲೆ ದೂರದಲ್ಲಿ ಸಾಲು ಮರದ ತಿಮ್ಮಕ್ಕಳ ವೃಕ್ಷೋದ್ಯಾನವಿದೆ. ಅಲ್ಲಿ ಗ್ರಾಮೀಣ ಸೊಬಗಿನ ಕಲಾಕೃತಿಯನ್ನು ನಿರ್ಮಿಸಿದ್ದಾರೆ. ಅವುಗಳಂತೂ ಈಗ ಬಣ್ಣ ಕಳೆದುಕೊಂಡು ಮಾಸಿ ನಿಂತಿವೆ. ಈ ಉದ್ಯಾನದ ಸುತ್ತಲೂ ನೀರಿನ ಹರಿವು ಮಾಡಿದ್ದರು ಅದೂ ಕೂಡಾ ಒಣಗಿ ಬಣಗುಡುತ್ತಿದೆ.

ಅಂದು ಭೂತದ ಮನೆಯ ನಿರ್ಮಾಣಕ್ಕೆ ಅಣಿಯಾಗಿದ್ದು, ಇಂದು ಅದರ ಹೆಸರೇ ಕಾಣುತ್ತಿಲ್ಲ, ಅದರ ಕಾಮಗಾರಿಯೇ ನಿಂತು ಹೋಗಿದೆ. ಕೂಡಲು ಸರಿಯಾದ ಆಸನವಿಲ್ಲ, ಒಣಗಿ ನಿಂತ ಕುರುಚಲು ಗಿಡಗಳು ನೀರಿಲ್ಲದೇ ಬಣಗುಡುತ್ತಿವೆ. ಪ್ರತಿ ವರ್ಷ ಸನಾಳ ನೀರೆತ್ತುವ ಪಂಪ್‌ನಿಂದ ಈ ಕೆರೆ ತುಂಬಲು ಯೋಜನೆಯನ್ನು ಮಾಡಿ ಕೆರೆಯ್ನೂ ಸಹ ತುಂಬಲಾಗುತ್ತಿತ್ತು. ಆದರೆ, ಅದು ಕೂಡಾ ಈಗ ನಿಂತಂತಿದೆ.

ಉಮೇಶ ಮೇಟಿ ಪರ ಬಿರುಸಿನ ಪ್ರಚಾರ

ಬಾಗಲಕೋಟೆ: ನಗರದ ಹಳೆಯ ಪ್ರವಾಸಿ ಮಂದಿರ, ಶರಣಬಸವೇಶ್ವರ ಮಠ, ಪಂಚಮುಖಿ ಹನುಮಾನ್ ದೇವಸ್ಥಾನ ಹಾಗೂ ಜಯನಗರ ಬಡಾವಣೆಗಳಲ್ಲಿ ಸೋಮವಾರ ಬೆಳಗ್ಗೆ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ಬಿರುಸಿನ ಪ್ರಚಾರ ಕೈಗೊಂಡರು.

ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಮಾತನಾಡಿ, ವೈದ್ಯಕೀಯ ಮಹಾವಿದ್ಯಾಲಯಎಚ್.ವೈ. ಮೇಟಿ ಅವರ ಕನಸಾಗಿತ್ತು. ಆ ಕನಸು ಸಾಕಾರಗೊಂಡಿದೆ. ಈ ಮಹಾ ವಿದ್ಯಾಲಯದಿಂದ ಎಲ್ಲ ವರ್ಗದ ಬಡಜನರಿಗೆ ಅನುಕೂಲವಾಗಲಿದೆ. ಇಂಥ ಜನಪರ ಕಾಳಜಿ ಹೊಂದಿದ್ದ ಮೇಟಿ ಅವರ ಪುತ್ರ ಉಮೇಶ ಮೇಟಿ ಅವರನ್ನು ಮತ್ತೊಮ್ಮೆ ಬೆಂಬಲಿಸಬೇಕು. ಇದರಿಂದ ಎಚ್.ವೈ. ಮೇಟಿ ಅವರ ಉಳಿದ ಕಾರ್ಯಗಳು ಸಾಕಾರಗೊಳ್ಳಲಿವೆ ಎಂದರು.

ಆನಂದ ಜಿಗಜನ್ನಿ ಇತರರು ಉಪಸ್ಥಿತರಿದ್ದರು.

ನಾಗರಾಜ ಹದ್ಲಿ, ಸಂತೋಷ ಹೊಕ್ರಾಣಿ, ಶಿವಕುಮಾರ ನಂದಿಕೋಲಮಠ, ಬಸವಪ್ರಭುಸರನಾಡಗೌಡ,ಅಬ್ದುಲರಜಾಕ್ ಬೇನೂರ, ಅಕ್ಬರ್ ಮುಲ್ಲಾ, ಜಾಫರ್ ಬೇಪಾರಿ, ಮಲ್ಲಿಕಾರ್ಜುನ ಮೇಟಿ, ಕಲ್ಪನಾ ಮೇಟಿ, ಶ್ರೀಕಾಂತ ಪೂಜಾರ, ಶಿವಾನಂದ ಬಸರಕೋಡ, ಗಿರೀಶ ಹೆಬ್ಬಾಳ, ರಮೇಶ ಪಾಟೀಲ, ಮಲ್ಲಿಕಾರ್ಜುನ ಬೆಳಗಲ್ ಇದ್ದರು.

ಅಮೀನಗಡದಲ್ಲಿ ಪ್ರಚಾರ: ಅಮೀನಗಡ ಹಾಗೂ ಕಮತಗಿ ಪಟ್ಟಣದಲ್ಲಿ ನಡೆದ ಬಹಿರಂಗ ಪ್ರಚಾರದಲ್ಲಿಜಿಪಂ ಮಾಜಿ ಅಧ್ಯಕ್ಷರಾದ ವೀಣಾಕಾಶಪ್ಪನವರ ಹಾಗೂ ಬಾಯಕ್ಕ ಮೇಟಿ ಮಾತನಾಡಿ, ಮಹಿಳೆಯರ ಬದುಕಿಗೆಗ್ಯಾರಂಟಿ ಯೋಜನೆಗಳು ಆಧಾರವಾಗಿದ್ದು, ಈ ಜನಪರಯೋಜನೆ ಜಾರಿಗೊಳಿಸಿದ ಕಾಂಗ್ರೆಸ್ ಪಕ್ಷವನ್ನುಎಲ್ಲರೂ ಬೆಂಬಲಿಸಬೇಕು ಎಂದರು. ಸಚಿವ ಬಾಲಚಂದ್ರ ಜಾರಕಿಹೊಳಿ, ಮಲ್ಲಿಕಾರ್ಜುನ ಚರಂತಿಮಠ, ಸ್ಥಳೀಯ ಮುಖಂಡರು ಇದ್ದರು.

ಐಹೊಳೆಯಲ್ಲಿ ಭಾನುವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರ ದೇಶದ ಪ್ರಜೆಗಳ ಮೇಲಿನ ಸಾಲದ ಹೊರೆಯನ್ನು ಹೆಚ್ಚಿಸಿದೆ. ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ಅಪಪ್ರಚಾರ ಮಾಡುತ್ತಿದೆ.ಇವರಿಗೆ ತಕ್ಕ ಪಾಠ ಕಲಿಸಲು ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಬೇಕು ಎಂದು ಕೋರಿದರು.



ಉಮೇಶ ಎಚ್. ಮೇಟಿಗೆ ಬೆಂಬಲಿಸಿ: ಜಾರಕಿಹೊಳಿ



ಕಮತಗಿ: ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಅಭಿವೃದ್ದಿಗಾಗಿ ತಮ್ಮ ಅತ್ಯಮೂಲ್ಯ ಮತವನ್ನು ಉಮೇಶ ಎಚ್. ಮೇಟಿ ಅವರಿಗೆ ನೀಡಿ ಬೆಂಬಲಿಸಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಪಟ್ಟಣದ ಜನರಲ್ಲಿ ಮನವಿ ಮಾಡಿಕೊಂಡರು.

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಕಮತಗಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಪಟ್ಟಣದಲ್ಲಿ ಎಲ್ಲ ಮುಖಂಡರು ರೋಡ್ ಶೋ ಮಾಡುವ ಮುಖಾಂತರ ಮತಯಾಚಿಸಿದರು.

ನಂತರ ಪಟ್ಟಣದ ಗಾಂಧಿ ಚೌಕ್‌ದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಮಾತನಾಡಿ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ವತಿಯಿಂದ ಚುನಾಯಿತರಾಗಿದ್ದ ದಿ. ಎಚ್.ವೈ. ಮೇಟಿ ಅವರ ನಿಧನದಿಂದಾಗಿ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಇದೇ ಏ. 9ರಂದು ನಡೆಯಲಿರುವ ಚುನಾವಣೆಯ ಮತದಾನದಲ್ಲಿ ದಿ.ಎಚ್.ವೈ. ಮೇಟಿ ಅವರ ಪುತ್ರರಾದ ಉಮೇಶ ಎಚ್. ಮೇಟಿ ಅವರನ್ನು ಬೆಂಬಲಿಸಿ ಎಂದರು.

ಬಾದಾಮಿ ಮತಕ್ಷೇತ್ರದ ಶಾಸಕ ಭೀಮ್‌ಸೇನ ಚಿಮ್ಮನಕಟ್ಟಿ ಅವರು ಮಾತನಾಡಿ, ದಿ. ಎಚ್.ವೈ. ಮೇಟಿ ಅವರು ಬಾಗಲಕೋಟೆ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದ್ದು, ಆ ಹಿರಿಯರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಕೂಡ ಮುನ್ನಡೆದುಕೊಂಡು ಹೋಗುತ್ತಿದ್ದೆವು . ಆದರೆ ವಿಧಿಲಿಖಿತ ಅವರು ನಿಧನರಾದರು. ಅವರು ನಿಧನರಾಗಿದ್ದರಿಂದ, ನಮ್ಮ ಬಾಗಲಕೋಟೆಯು ಅಕ್ಷರ ಸಹ ಅನಾಥವಾಗಿದೆ ಎಂದು ಹೇಳಿದರು.

ಆ ಹಿರಿಯರು ಕನಸು ಕಂಡಿದ್ದಂತಹ ಮೆಡಿಕಲ್ ಕಾಲೇಜನ್ನು ಸಹ ನಾವು ಭೂಮಿಪೂಜೆ ಮಾಡಿದ್ದೇವೆ. ಇನ್ನು ಇಂತಹ ಕಾರ್ಯಗಳು ನಡೆಯಬೇಕಾದರೆ, ನಾವೆಲ್ಲರೂ ಕೂಡಿಕೊಂಡು ಉಮೇಶ ಎಚ್. ಮೇಟಿ ಅವರನ್ನು ಪ್ರಚಂಡ ಬಹುಮತದಿಂದ ಆರಿಸಿ ತರುವಲ್ಲಿ ಪಕ್ಷದ ಎಲ್ಲ ಮುಖಂಡರು ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು. ಈ ಸಭೆಯಲ್ಲಿ ಶಾಸಕ ಕೋನರೆಡ್ಡಿ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಅಭ್ಯರ್ಥಿಯಾದ ಉಮೇಶ ಎಚ್. ಮೇಟಿ, ಜಿಪಂ ಮಾಜಿ ಅಧ್ಯಕ್ಷರಾದ ವೀಣಾ ಕಾಶಪ್ಪನವರ್, ಬಾಯಕ್ಕ ಮೇಟಿ, ಶಂಕರಲಿಂಗಪ್ಪ ಮಂಕಣಿ, ಸಿದ್ದು ಹೊಸಮನಿ, ಮಹಾಂತೇಶ ಅಂಗಡಿ, ದೇವಿಪ್ರಸಾದ ನಿಂಬಲಗುಂದಿ, ಬಸವರಾಜ ಕುಂಬಳಾವತಿ, ನೇತ್ರಾವತಿ ನಿಂಬಲಗುಂದಿ, ನಂದಾ ಲಕ್ಷ್ಮಣ್ ದ್ಯಾಮಣ್ಣವರ್, ನಾಗೇಶ ಮುರಾಳ, ಪಟ್ಟಣದ ಕಾಂಗ್ರೆಸ್ ಪಕ್ಷದ ಎಲ್ಲ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಸಿದ್ಧಾರೂಢರು, ಶ್ರೀರಾಮರು ಆತ್ಮತತ್ವ ಸ್ವರೂಪರು

ಮಹಾಲಿಂಗಪುರ: ಸಿದ್ಧಾರೂಢರು ಹಾಗೂ ಶ್ರೀರಾಮರು ಆತ್ಮತತ್ವ ಸ್ವರೂಪರಾಗಿದ್ದಾರೆ ಎಂದು ಹರಳಕಟ್ಟಿಯ ನಿಜಗುಣ ಸ್ವಾಮೀಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಜರುಗಿದ ಸಿದ್ಧಾರೂಢರ 190ನೇ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಸಿದ್ಧಾರೂಢರು ಕಲಿಯುಗದ ಕಾಮಧೇನು ಕಲ್ಪವೃಕ್ಷವಾಗಿದ್ದಾರೆ. ಭಕ್ತಿಯಿಂದ ಅವರನ್ನು ಆರಾಧಿಸುವವರಿಗೆ ಯಾವುದಕ್ಕೂ ಕೊರತೆ ಇರುವದಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಮಾತನಾಡಿ ರಾಮನವಮಿಯಂದು ಜನ್ಮತಾಳಿದ ಸಿದ್ಧಾರೂಢರು ಜಾತಿ-ಮತ-ಪಂಥಗಳನ್ನು ಮೀರಿ ನಿಂತ ನಿಜವಾದ ಜಗದ್ಗುರುಗಳು. ಮಹಾತ್ಮರ ತತ್ವ, ಚಿಂತನೆ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ, ದಿನಾಚರಣೆಗಳು ಸಾರ್ಥಕ ಪಡೆಯುತ್ತವೆ ಎಂದರು.

ಕಳೆದ 4 ವರ್ಷಗಳಿಂದ ಭಕ್ತರು ಬರೆದ ಕೋಟಿ ಜಪಯಜ್ಞದ ಪುಸ್ತಕಗಳಿಂದ ಪೂಜ್ಯರ ತುಲಾಭಾರ ನಡೆಸಲಾಯಿತು. ಮಹಿಳೆಯರು ತೊಟ್ಟಿಲು ತೂಗಿ ಸಿದ್ಧಾರೂಢರ ನಾಮಕರಣ ಮಹೋತ್ಸವ ನೆರವೇರಿಸಿದರು.

ನೂತನ ಉತ್ತರಾಧಿಕಾರಿ ಘೋಷಣೆ: ಸಿದ್ಧಾರೂಢರ ಜಯಂತಿ ಮತ್ತು ರಾಮನವಮಿ ಶುಭ ಸಮಾರಂಭದಲ್ಲಿ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ನೂತನ ಉತ್ತರಾಧಿಕಾರಿಗಳನ್ನಾಗಿ ಕಲಬುರ್ಗಿಯ ಸೋಮೇಶ್ವರ ಸ್ವಾಮಿಗಳನ್ನು ಘೋಷಿಸಲಾಯಿತು. ಭಕ್ತರು ಪೂಜ್ಯರ ಕಿರೀಟ ಪೂಜೆ ನೇರವೇರಿಸಿದರು.



ರನ್ನಬೆಳಗಲಿಯ ಸದಾಶಿವ ಗುರೂಜಿ, ಚಿಕ್ಕಪಡಸಲಗಿಯ ಅಕ್ಕಮಹಾದೇವಿ ತಾಯಿ, ಲಕ್ಷ್ಮೇಶ್ವರದ ಗೀತಾತಾಯಿ, ಮೂಗಳಖೋಡದ ಬಸವರಾಜ ಶಾಸ್ತ್ರಿಗಳು, ಶರಣ ಮಲ್ಲೇಶಪ್ಪ ಕಟಗಿ ಸಿದ್ಧಾರೂಢರ ಚರಿತ್ರೆಯಾಧರಿಸಿ ಪ್ರವಚನ ನೀಡಿದರು.

ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ.ಡಿ.ಸೋರಗಾಂವಿ, ಖಜಾಂಚಿ ಅಲ್ಲಪ್ಪ ಗುಂಜಿಗಾಂವಿ, ಧರ್ಮದರ್ಶಿಗಳಾದ ಮಲ್ಲೇಶಪ್ಪ ಕಟಗಿ, ಲಕ್ಕಪ್ಪ ಚಮಕೇರಿ, ಮಲ್ಲಪ್ಪ ಭಾವಿಕಟ್ಟಿ, ಚೇತನ ಹಾದಿಮನಿ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳ ಸಾವಿರಾರು ಸದ್ಭಕ್ತರು ಭಾಗವಹಿಸಿದ್ದರು.

ಫಲಾನುಭವಿಗಳಿಗೆ ವಾತ್ಸಲ್ಯ ಮನೆ ಹಸ್ತಾಂತರ

ಬೀಳಗಿ: ಕಡು ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ನೀಡುವುದೇ ನಿಜವಾದ ಧರ್ಮ. ಇದರಿಂದ ನಾವು ಪುಣ್ಯದ ಫಲವನ್ನು ಅನುಭವಿಸುತ್ತೇವೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಪ್ಪಳ ಪ್ರಾದೇಶಿಕ ಕಚೇರಿ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ್ ಜೆ. ಹೇಳಿದರು.

ಪಟ್ಟಣದ ಕಿಲ್ಲಾಗಲ್ಲಿ ಕಾರ್ಯ ಕ್ಷೇತ್ರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ರಚನೆಗೊಂಡಿರುವ ವಾತ್ಸಲ್ಯ ಮನೆಗಳನ್ನು ಬೀಳಗಿ ಪಟ್ಟಣದ ಮಲ್ಲಪ್ಪ ಮಂಕಣಿ, ತುಮ್ಮರಮಟ್ಟಿ ಹನಮಂತ ದಾಸರ ಅವರಿಗೆ ಹಸ್ತಾಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಗ್ರಾಮ ಅಭಿವೃದ್ಧಿ ಯೋಜನೆಯು ಜನಪರವಾಗಿದ್ದು, ಕೆರೆಯ ನೀರನ್ನು ಕೆರೆಗೆ ಚೆಲ್ಲುವ ನಿಯಮದಂತೆ ಭಕ್ತರು ನೀಡಿರುವ ಕಾಣಿಕೆಯನ್ನು ಸಮಾಜದ ಒಳತಿಗೆ ಪೂಜ್ಯರು ವಿನಿಯೋಗ ಮಾಡುತ್ತಿದ್ದಾರೆ. ನಿರ್ಗತಿಕರಿಗೆ ಮಾಶಾಸನ ಸೌಲಭ್ಯ, ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಮಾಡುವವರಿಗೆ ಸುಜ್ಞಾನ ನಿಧಿ ಶಿಷ್ಯವೇತನ, ಶಿಕ್ಷಕರಿಲ್ಲದ ಸರ್ಕಾರಿ ಶಾಲೆಗಳಿಗೆ ಜ್ಞಾನದೀಪ ಶಿಕ್ಷಕರ ಒದಗಣೆ, ಕೆರೆ ಅಭಿವೃದ್ಧಿ, ರುದ್ರಭೂಮಿಯ ವೃದ್ಧಿ ಕಾರ್ಯಕ್ರಮ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಜನರ ಒಳಿತಿಗಾಗಿ ಯೋಜನೆ ಕೆಲಸ ಮಾಡುತ್ತಿದೆ ಎಂದು ಹೇಳಿದರು.



ಜಿಲ್ಲಾ ನಿರ್ದೇಶಕ ಚೆನ್ನಕೇಶವ, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಶ್ರೀಕಾಂತ ಸಂದಿಮನಿ, ಯೋಜನಾಧಿಕಾರಿ ಸುಬ್ರಾಯ ಕೆ., ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಶಿವಪ್ಪ ಅವಟಿ, ಶಿಕ್ಷಕ ಸದಾನಂದ ಏಳಗಂಟಿ, ವಕೀಲ ಗಂಗಾಧರ ಕಲಬುರ್ಗಿ, ಮುತ್ತವ್ವ ಗಾಣಿಗೇರ ಉಪಸ್ಥಿತರಿದ್ದರು. ಜ್ಞಾನವಿಕಾಸ ಸಮನ್ವಯ ಅಧಿಕಾರಿ ಈರಮ್ಮ ವಂದಿಸಿದರು. ಮೇಲ್ವಿಚಾರಕರಾದ ರಿಹಾನ, ಸೇವಾ ಪ್ರತಿನಿಧಿಗಳು, ವಿಪತ್ತು ನಿರ್ವಹಣಾ ಸದಸ್ಯರು, ಊರಿನ ಗಣ್ಯರು, ತಾಯಂದಿರು ಪಾಲ್ಗೊಂಡಿದ್ದರು.

ಸಂಭ್ರಮದ ರಾಚೋಟೇಶ್ವರ ದೇವರ ರಥೋತ್ಸವ

ಕೆರೂರ: ಪಟ್ಟಣದ ಆರಾಧ್ಯದೈವ ಭದ್ರಕಾಳಿ ಸಮೇತ ರಾಚೋಟೇಶ್ವರ ರಥೋತ್ಸವವು ಶನಿವಾರ ಸಂಜೆ ವೈಭವದಿಂದ ಜರುಗಿತು.

ಬೆಳಿಗ್ಗೆ ದೇವಸ್ಥಾನದಲ್ಲಿ ರಾಚೋಟೇಶ್ವರ ದೇವರಿಗೆ ಮಹಾಭಿಷೇಕ,ರುದ್ರಾಭಿಷೇಕ ಹಾಗೂ ವಿವಿಧ ಪೂಜಾ ಕಾರ್ಯಗಳು ನಡೆದವು.ಜಾತ್ರೆಯ ಅಂಗವಾಗಿ ದೇವಸ್ಥಾನವನ್ನು ಶೃಂಗರಿಸಲಾಗಿತ್ತು, ಬೆಳಿಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಳಸದ ಮೆರವಣಿಗೆಯು ಸಕಲ ಮಂಗಲವಾದ್ಯಗಳೊಂದಿಗೆ ನಡೆಯಿತು. ಜಾತ್ರೆಯ ಅಂಗವಾಗಿ ಭಕ್ತರು ಬೆಳಿಗ್ಗೆಯಿಂದಲೆ ಸರತಿ ಸಾಲಿನಲ್ಲಿ ನಿಂತು ದೇವರ ಆಶಿರ್ವಾದ ಪಡೆದರು,ರಥೋತ್ಸವಕ್ಕೆ ಮುಂಚೆ ನಂದಿಕೊಲು ಹಾಗೂ ಶಕ್ತಿ ಗೊಂಬೆಗಳ ಕುಣಿತ ಸಾರ್ವಜನಿಕರನ್ನು ಆಕರ್ಷಿಸುವಂತಿತ್ತು.

ಸಂಜೆ ಗೋಧುಳಿ ಮೂಹುರ್ತದಲ್ಲಿ ರಾಚೋಟೇಶ್ವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ತಂದು ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕ ಬಸಯ್ಯ ಮಠಪತಿ, ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಆರ್.ಆರ್.ಶೆಟ್ಟರ, ಅಶೋಕ ಜಿಗಳೂರ, ಪರಶುರಾಮ ಮಲ್ಲಾಡದ, ಸಿದ್ದನಗೌಡ ಪಾಟೀಲ, ಜಗದೀಶ ಕೊಣ್ಣೂರ, ಪಿಎಸ್‌ಐ ಭೀಮಪ್ಪ ರಬಕವಿ, ಸಿದ್ದಪ್ಪ ಯಡಹಳ್ಳಿ, ಹನಮಂತ ನೆರಳ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಒದಗಿಸಲಾಗಿತ್ತು.



ಕಬ್ಬಿನ ಬಿಲ್ ಪಾವತಿಸಲು ಒತ್ತಾಯಿಸಿ ಧರಣಿ



ಜಮಖಂಡಿ: ನಗರದ ತಾಲೂಕಾಡಳಿತ ಸೌಧದಲ್ಲಿ ಕಬ್ಬಿನ ಬಿಲ್ ಪಾವತಿಸಲು ಒತ್ತಾಯಿಸಿ ರೈತ ಸಂಘಟನೆಗಳಿಂದ ಭಾನುವಾರ ಅಹೋರಾತ್ರಿ ಧರಣಿ ಪ್ರಾರಂಭಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸಕ್ಕರೆ ಕಾರ್ಖಾನೆಯವರು ಕಬ್ಬು ನುರಿಸಿದ ಬಿಲ್ ಸರಿಯಾಗಿ ಪಾವತಿ ಮಾಡುತ್ತಿಲ್ಲ. ಇದರಿಂದ ಕಬ್ಬು ಬೆಳೆಗಾರರು ಸಂಕಷ್ಟಗೀಡಾಗಿದ್ದಾರೆ. ಎಲ್ಲಿಯ ವರೆಗೆ ಬಿಲ್ಲು ನೀಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಅಹೋರಾತ್ರಿ ಪ್ರತಿಭಟನೆಯನ್ನು ನಿಲ್ಲಿಸುವುದಿಲ್ಲ ಎಂದರು.

ತಹಶೀಲ್ದಾರರು ಸ್ಥಳಕ್ಕೆ ಆಗಮಿಸಿ ಎಲ್ಲ ಕಾರ್ಖಾನೆಗಳ ಬಾಕಿ ಬಿಲ್ ವಿವರ ನೀಡಬೇಕು. ಅದರ ಜೊತೆಗೆ ಸರ್ಕಾರ ನೀಡುವ 50 ರೂ. ಗಳ ಸಹಾಯಧನದ ಜೊತೆ ಕಾರ್ಖಾನೆಯವರು ನೀಡುವ ಹಣವನ್ನೂ ಸಹ ಪಾವತಿ ಮಾಡಬೇಕು. ಇಲ್ಲದಿದ್ದರೆ ಈ ಹೋರಾಟವು ಉಗ್ರ ಸ್ವರೂಪಕ್ಕೆ ಹೋಗಬಹುದು ಎಂದು ಎಚ್ಚರಿಕೆ ನೀಡಿದರು. ಬಾಗಲಕೋಟೆಯಲ್ಲಿ ಉಪ ಚುನಾವಣೆ ನಡೆದಿದೆ. ಮುಖ್ಯ ಮಂತ್ರಿಗಳು ಜಿಲ್ಲೆಯಲ್ಲಿದ್ದಾರೆ ಅವರು ಬಂದು ನಮ್ಮ ಹೋರಾಟಕ್ಕೆ ಸ್ಪಂದಿಸಿ ಕಾರ್ಖಾನೆಗಳ ಮಾಲೀಕರಿಂದ ಬಾಕಿ ಹಣ ನೀಡಿಸಬೇಕು. ಒಂದು ವೇಳೆ ಯಾರೂ ಸ್ಪಂದಿಸದಿದ್ದರೆ ಈ ಹೋರಾಟವು ನಿರಂತರವಾಗಿ ನಡೆಯುತ್ತದೆ ಎಂದು ಹೇಳಿದರು.

ಚಿನ್ನಪ್ಪ ಪೂಜಾರಿ, ಮಲ್ಲಪ್ಪ ಅಂಗಡಿ, ಕಿರಣ ಕವಟಗೊಪ್ಪ, ರಾಜು ನದಾಫ್, ತುಕಾರಾಮ ಮ್ಯಾಗಿನಮನಿ, ಅಜೇಯ ಕುಲಕರ್ಣಿ, ಕುಮಾರ ಪವಾರ, ಸಿದ್ದನಗೌಡ ಪಾಟೀಲ, ಶ್ರೀಶೈಲ ದೇಸಾಯಿ, ಶಿವಲಿಂಗತಬಚಿ, ಶ್ರೀಶೈಲ ಭೂಮಾರ, ಹನುಮಂತ ಮಗದುಮ, ಸಿದ್ದಪ್ಪ ಬಣಜನವರ ಸೇರಿದಂತೆ ರೈತರು ಪ್ರತಿಭಟನೆಯಲ್ಲಿದ್ದರು.

ಜನಪದ ಸಾಹಿತ್ಯ ಸಂಸ್ಕೃತಿ, ಪರಂಪರೆ ಪ್ರತಿಬಿಂಬಿಸುವ ಸಂಪತ್ತು

ಮಹಾಲಿಂಗಪುರ: ಜನಪದ ಸಾಹಿತ್ಯವೆಂದರೆ ನಮ್ಮ ಜನರ ಜೀವನ, ಸಂಸ್ಕೃತಿ, ಪರಂಪರೆ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುವ ಅಮೂಲ್ಯ ಸಂಪತ್ತು. ಇದು ಪುಸ್ತಕಗಳಲ್ಲಿ ಹುಟ್ಟಿದ ಸಾಹಿತ್ಯವಲ್ಲ; ಜನರ ಹೃದಯದಿಂದ ಹುಟ್ಟಿದ ಸಾಹಿತ್ಯ. ಪೀಳಿಗೆಯಿಂದ ಪೀಳಿಗೆಗೆ ಮಾತಿನ ಮೂಲಕ ಸಾಗುತ್ತಾ ಬಂದಿರುವುದು ಇದರ ವಿಶೇಷತೆ. ಜನಪದ ಹಾಡುಗಳು, ಕಥೆಗಳು, ಗಾದೆಗಳು, ಒಗಟುಗಳು, ಹಬ್ಬ-ಹರಿದಿನಗಳ ಸಂಪ್ರದಾಯಗಳು ಇತ್ಯಾದಿ. ಈ ಎಲ್ಲಾ ರೂಪಗಳು ನಮ್ಮ ಗ್ರಾಮೀಣ ಬದುಕಿನ ಚಿತ್ರಣವನ್ನು ಕೊಡುತ್ತವೆ. ಜನಪದ ಹಾಡುಗಳು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಜನಪದ ಕಥೆಗಳು ನಮ್ಮಲ್ಲಿ ನೀತಿ, ಧೈರ್ಯ ಮತ್ತು ಸತ್ಯದ ಮೌಲ್ಯಗಳನ್ನು ಬೆಳೆಸುತ್ತವೆ ಎಂದು ಜನಪದ ಸಾಹಿತಿ ಮತ್ತು ಹಾರೂಗೇರಿಯ ಸಿದ್ದೇಶ್ವರ ಪಿ.ಯು ಕಾಲೇಜಿನ ಪ್ರಾಚಾರ್ಯ ಟಿ.ಎಸ್. ಒಂಟಗೋಡಿ ಹೇಳಿದರು.



ಸ್ಥಳೀಯ ಕೆಎಲ್‌ಇ ಸಂಸ್ಥೆಯ ಎಸ್ ಸಿಪಿ ಕಲಾ, ವಿಜ್ಞಾನ ಮತ್ತು ಡಿಡಿ ಶಿರೋಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸಾಂಸ್ಕೃತಿಕ ವಿಭಾಗದ ವತಿಯಿಂದ ಸಿರಿ ಸಾಂಸ್ಕೃತಿಕ ಸಂಭ್ರಮ-2026 ಕಾರ್ಯಕ್ರಮದಲ್ಲಿ ಮಾತನಾಡಿದರು.

ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎನ್. ಬಿ. ಪಾಟೀಲರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮೂರು ದಿನಗಳ ಕಾಲ ಮಹಾವಿದ್ಯಾಲಯದಲ್ಲಿ ಸಿರಿ ಸಾಂಸ್ಕೃತಿಕ ಹಬ್ಬದ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ವಿಭಿನ್ನ ಭಾಷೆ, ಹಲವು ಆಚಾರ, ವಿಚಾರಗಳ ನಡುವೆ ನಾವು ನಮ್ಮ ಸಂಸ್ಕೃತಿಯನ್ನು ವಿಜೃಂಭಣೆಯಿಂದ ಆಚರಿಸಿಕೊಂಡು ಬಂದಿದ್ದೇವೆ. ಎಲ್ಲ ವಿದ್ಯಾರ್ಥಿಗಳಲ್ಲೂ ಕಲೆ, ಪ್ರತಿಭೆ ಇದೆ. ಅದನ್ನು ಹೊರಹಾಕಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ. ಗಾದೆಗಳು ನಮ್ಮ ಅನುಭವದ ಸಾರವನ್ನು ಚಿಕ್ಕ ಪದಗಳಲ್ಲಿ ಹೇಳುವ ಅದ್ಭುತ ರೂಪವಾಗಿದೆ. ಇಂದು ಆಧುನಿಕ ಯುಗದಲ್ಲಿ, ತಂತ್ರಜ್ಞಾನ ಬೆಳವಣಿಗೆಯಿಂದ ಜನಪದ ಸಾಹಿತ್ಯ ಸ್ವಲ್ಪ ಮರೆತು ಹೋಗುತ್ತಿರುವುದು ವಿಷಾದಕರ ಸಂಗತಿ. ಆದರೆ ನಾವು ಇದನ್ನು ಉಳಿಸಿಕೊಳ್ಳಬೇಕು. ಏಕೆಂದರೆ ಇದು ನಮ್ಮ ಗುರುತು, ನಮ್ಮ ಸಂಸ್ಕೃತಿಯ ಪ್ರತಿಬಿಂಬ.

ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಎಲ್ಲ ಕ್ಷೇತ್ರದಲ್ಲೂ ಮುಂದಿದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ವಿದ್ಯಾರ್ಥಿಗಳು ಪಠ್ಯದ ಜೊತೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಗೆಳಲ್ಲಿ ಭಾಗವಹಿಸುವುದರಿಂದ ದೈಹಿಕ ಹಾಗೂ ಮಾನಸಿಕ ಸದೃಢರಾಗುತ್ತಾರೆ ಎಂದರು.

ವಿಡಿಯೋಗ್ರಫಿ, ರಂಗೋಲಿ, ಭಾಷಣ, ನೃತ್ಯ, ಅಗ್ನಿ ರಹಿತ ಅಡುಗೆ, ಗಾಯನ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯಿತು.

ಆಡಳಿತ ಮಂಡಳಿ ಸದಸ್ಯ ಸಂತೋಷ ಹುದ್ದಾರ. ಆಯ್.ಕ್ಯೂ.ಎಸ್.ಸಿ ಸಂಯೋಜಕರಾದ ಸುನಂದಾ ಸೊರಗಾಂವಿ, ಸಾಂಸ್ಕೃತಿಕ ವಿಭಾಗ ಸಂಯೋಜಕರಾದ ಎಸ್. ಎ ಪಾಟೀಲ, ಆಯ್.ಸಿ. ಶಿರೋಳ, ಪೂಜಾ ಮನಗಾಂವಿ, ಪೂಜಾ ಮುತ್ನಾಳಿ ಹಾಗೂ ಮಹಾವಿದ್ಯಾಲಯ ವಿವಿಧ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಂಗಳವಾರ
31 ಮಾರ್ಚ್ 2026
ಹುಬ್ಬಳ್ಳಿ

ವಿಜಯಪುರ ಗರಿಷ್ಠ 35° ಕನಿಷ್ಠ 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಕಿರುಸುದ್ದಿ

ಇಂದಿನಿಂದ ಜಾತ್ರಾ ಮಹೋತ್ಸವ

ಝಳಕಿ: ಸಮೀಪದ ಗೋಟ್ಯಾಳ ಗ್ರಾಮದ ಜೈ ಹನುಮಾನ ದೇವರ ಜಾತ್ರಾ ಮಹೋತ್ಸವ ಅತೀ ವಿಜೃಂಭಣೆಯಿಂದ ನಡೆಯುವುದು. ಮಾ.31ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸುಪ್ರಸಿದ್ಧ ಭಜನೆ ನಡೆಯುವುದು. ರಾತ್ರಿ 10ಕ್ಕೆ ಕಾಶಿವೇಶದಾರಿಗಳಿಂದ ಅಗ್ಗಿ ಪುಟುವ ನಡೆಯುವುದು. ಏ.1ರಂದು ಬೆಳಗ್ಗೆ 6ರಿಂದ ಶ್ರೀನಿವಾಸ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ದೇವರಿಗೆ ರುದ್ರಾಭಿಷೇಕ ಮಹಾಪೂಜೆ ನಡೆಯುವುದು. ಸಕಲ ವಾದ್ಯಗಳೊಂದಿಗೆ ಜೈ ಹನುಮಾನ ದೇವರ ಪಲ್ಲಕ್ಕಿ ಮೆರವಣಿಗೆ ಗ್ರಾಮ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಮಲ್ಲಿಕಾರ್ಜುನ ಬಿರಾದಾರ ಇವರ ಮನೆಯಿಂದ ಮೋಸರು ಗಡಿಗೆ ಮೆರವಣಿಗೆ ಮೂಲಕ ಹನುಮಾನದ ದೇವಸ್ಥಾನಕ್ಕೆ ತಲುಪುವುದು. ನಂತರ ತೊಟ್ಟಿಲು ಕಾರ್ಯಕ್ರಮ ನಂತರ 12ಕ್ಕೆ ಅಗ್ನಿಕುಂಡಲ ಪ್ರವೇಶ ನಂತರ ಮೋಸರು ಗಡಿಗೆ ಒಡುವುದು ನಂತರ ಧರ್ಮ ಸಭೆ ಜರುಗುವುದು. ರಾತ್ರಿ 10ಕ್ಕೆ ಜೈ ಹನುಮಾನ ನಾಟ್ಯ ಸಂಘ ಗೋಟ್ಯಾಳ ಇವರಿಂದ ಆಯೋಜಿಸಿದ್ದ ನಾಟಕ 'ತವರ ಮನೆ ಕುಂಕುಮ' ಅರ್ಥಾತ್ ದೈವಸಂಕಲ್ಪ ಗೆದ್ದವರಾರು ಸುಂದರ ಸಮಾಜಿಕ ನಾಟಕ ನಡೆಯುವುದು ಎಂದು ಜಾತ್ರಾ ಕಮಿಟಿ ಅಧ್ಯಕ್ಷ ಚನ್ನಪ್ಪ ಮೇತ್ರಿ ಹಾಗೂ ಸರ್ವ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರಕ್ಷಕರಿಗೂ ಅವಕಾಶ ನೀಡಿ: ಆಲಗೂರ

ಸಿಂದಗಿ: ನಗರದಲ್ಲಿ ಏ. 27ರಿಂದ ಏ. 28ರವರೆಗೆ ನಡೆಯುವ 21ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಆರಕ್ಷಕಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕವಿಗೋಷ್ಠಿ, ವಿಚಾರಗೋಷ್ಠಿ, ಉಪನ್ಯಾಸ, ಸಂಗೀತ, ಜನಪದ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡಬೇಕು. ಪೊಲೀಸರ ವಿವಿಧ ಕಲೆಗೆ ಪ್ರೋತ್ಸಾಹ ನೀಡಬೇಕು ಎಂದು ಸಾಹಿತಿ, ಆರಕ್ಷಕ ಮೌಲಾಲಿ ಆಲಗೂರ ಮನವಿ



ಮಾಡಿಕೊಂಡರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಬಿಡುವಿಲ್ಲದ ಕರ್ತವ್ಯದ ನಡುವೆಯೂ ಜಿಲ್ಲೆಯ ನೂರಾರು ಆರಕ್ಷಕ ಅಧಿಕಾರಿ ಮತ್ತು ಸಿಬ್ಬಂದಿಗಳು, ಕಥೆ, ಕಾವ್ಯ, ಕಾದಂಬರಿ ಒಳಗೊಂಡ ಸಾಹಿತ್ಯ, ಸಂಗೀತ, ಪ್ರವಚನ, ಜನಪದ, ನೃತ್ಯ, ನಟನೆ ಸೇರಿದಂತೆ ಹಲವು ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ತಮ್ಮ ಬಿಡುವಿನ ಅವಧಿಯನ್ನು ಕಲಾ ಆರಾಧನೆಗೆ ಅರ್ಪಿಸಿದ್ದಾರೆ. ಆದರೆ ಅವರಿಗೆ ಸೂಕ್ತ ವೇದಿಕೆ ಇಲ್ಲದೆ ಕಲೆಗೆ ಬೆಲೆ ಸಿಗದಂತಾಗಿದೆ. ಆದ್ದರಿಂದ ಏಪ್ರಿಲ್ ಕೊನೆಯ ವಾರದಲ್ಲಿ ಜರುಗುವ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಆರಕ್ಷಕರಿಗೆ ಅವಕಾಶ ನೀಡಿ ಅವರ ಕಲೆ ಇಮ್ಮಡಿಗೊಳಿಸಬೇಕು. ಹಂಸಕವಿ ನಾಮದ ಬೀದರ ಜಿಲ್ಲೆ ಹೆಡ್ ಕಾನ್‌ಸ್ಟೇಬಲ್ ಹಣಮಂತರಾಯ ವಲ್ಲೆಪುರ ಇವರನ್ನು ತಾಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡಿ ಪೊಲೀಸರ ಸಾಹಿತ್ಯ ಕೃಷಿಯನ್ನು ಪ್ರೋತ್ಸಾಹಿಸಿದ್ದರು. ಅದೇ ರೀತಿ ನಮ್ಮ ಜಿಲ್ಲೆಯೂ ಕೂಡ ಅಕ್ಷರ ಜಾತ್ರೆಯಲ್ಲಿ ಆರಕ್ಷಕರು ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಲು ಅವಕಾಶ ನೀಡಿ ಪ್ರೋತ್ಸಾಹಿಸಬೇಕು. ವಿಜಯಪುರ ಮಕ್ಕಳ ಸಾಹಿತ್ಯದ ತವರು ಎಂದೇ ಖ್ಯಾತಿ ಹೊಂದಿದೆ ಆದಕ್ಕಾಗಿ ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಮಹಾವೀರ ಜನ್ಮ ಕಲ್ಯಾಣೋತ್ಸವ ಆಚರಣೆ

ಮುದ್ದೇಬಿಹಾಳ: ಪಟ್ಟಣದ ಅರಿಹಂತ ಚಾರಿಟೇಬಲ್ ಟ್ರಸ್ಟಿನ ಸಂಯುಕ್ತ ಮಹಾವಿದ್ಯಾಲಯ ಆವರಣದಲ್ಲಿ ಇರುವ ಭಗವಾನ ಗೋಮ್ಮಟೇಶ ಬಾಹುಬಲಿ ಸ್ವಾಮಿಯ ಸನ್ನಿದಾನದ ಅರಿಹಂತಗಿರಿಯಲ್ಲಿ 2625ನೇ ಮಹಾವೀರ



ತೀರ್ಥಂಕರರ ಜನ್ಮ ಕಲ್ಯಾಣೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅರಿಹಂತ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಮಹಾವೀರ ಸಗರಿ ಮಾತನಾಡಿ, ಮಹಾವೀರ ಭಗವಾನರ ತತ್ವಗಳು ಇಂದಿನ ಮನಕುಲಕ್ಕೆ ದಿವ್ಯ ಸಂದೇಶಗಳಾಗಿವೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಅಪರಿಗ್ರಹ, ಅನೇಕಾಂತವಾದ, ಶಾಧ್ವಾದ ಮೂಲ ತತ್ವಗಳು ಅಹಿಂಸೆಯಿಂದ ಜೀವಿಗಳ ರಕ್ಷಣೆಯಾಗುತ್ತದೆ, ಮಹಾವೀರರ ತತ್ವಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಪರಿಶುದ್ಧದ ಜೊತೆಗೆ ಸನ್ಮಾರ್ಗದ ಕಡೆಗೆ ನಡೆದಂತಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಬಸವರಾಜ ಬಡಿಗೇರ ಹಾಗೂ ರಾಜನಾರಾಯಣ ನಲವಡೆ. ಅನಿಲಕುಮಾರ ಸಗರಿ, ಮಹಾವೀರ ಮಂಕಣಿ, ಸುನೀಲ ಸಗರಿ ಕಾಲೇಜಿನ ಪ್ರಾಚಾರ್ಯರಾದ ವಿಪುಲ್ ಸಗರಿ, ಸಿಬ್ಬಂದಿಗಳಾದ ಅಕ್ಷತಾ ಸಗರಿ, ನಮ್ರತಾ ಸಗರಿ, ಜಿ.ಡಿ.ಬಡಿಗೇರ, ಹೆಚ್.ಎಸ್.ಗೌಡರ್, ಸಮೀರ್ ಬಿ. ರೋಹಿನಿ ನಾಯ್ಕೋಡಿ ಹಾಗೂ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ಬಸವನಬಾಗೇವಾಡಿ: ಭಗವಾನ ಮಹಾವೀರರ ತೀರ್ಥಂಕರರ 2625ನೇ ಜನ್ಮ ಕಲ್ಯಾಣಕ ಮಹೋತ್ಸವ ನಿಮಿತ್ತ ಸೋಮವಾರದಂದು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಲಾಯಿತು.

ಮಹಾವೀರರ ಜನ್ಮ ಕಲ್ಯಾಣಕ ಮಹೋತ್ಸವ

ಬಸವನಬಾಗೇವಾಡಿ: ಭಗವಾನ ಮಹಾವೀರರ ತೀರ್ಥಂಕರರ 2625ನೇ ಜನ್ಮ ಕಲ್ಯಾಣಕ ಮಹೋತ್ಸವ ನಿಮಿತ್ತ ಸೋಮವಾರ ಬೆಳಗ್ಗೆ ಬಾಹುಬಲಿ ದಂಡಾವತಿ ಇವರ ಮನೆಯಿಂದ ಮಹಾವೀರರ ಭಾವಚಿತ್ರ ಮೆರವಣಿಗೆಯ ಮುಖಾಂತರ ಶ್ರೀಕಾಳಿಕಾದೇವಿ ದೇವಸ್ಥಾನಕ್ಕೆ ತೆರಳಿ ಗಾಯಿತ್ರಿ ಕಲ್ಯಾಣ ಮಂಟಪದಲ್ಲಿ ಮಹಿಳೆಯರು ಮಹಾವೀರರನ್ನು ತೊಟ್ಟಿಲಲ್ಲಿ ಹಾಕಿ ಹಾಡು ಹಾಡಿದರು. ಎಚ್.ಎಸ್.ಬಿರಾದಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಾವೀರರ ಅಹಿಂಸೆ ತತ್ವ ಜಾಗಕ್ಕೆಲ್ಲ ಸೂರ್ತಿ ನೀಡಿದೆ, ಯಾವುದೇ ಪ್ರಾಣಿ, ಪಕ್ಷಿಗಳಿಗೆ ಹಿಂಸೆ ನೀಡಬಾರದು, ಯುದ್ಧದ ಸಂದರ್ಭದಲ್ಲಿ ಅಹಿಂಸೆ ತತ್ವ ಅನುಸರಿಸಿದಲ್ಲಿ ಶಾಂತಿ ನೆಲೆಸುವುದು ಎಂದು ಹೇಳಿದರು, ಜೈನ ಸಮಾಜ ಅಧ್ಯಕ್ಷರು ತವನಪ್ಪ (ಅಪ್ಪು)ದಂಡಾವತಿ, ಕೆ.ಬಿ.ಕಡೆಮನಿ, ಸಂಜೀವ ಬೋಗಾರ ಮಾತನಾಡಿದರು. ಜಿನೇಶ ಗೊಂಗಡಿ, ಅಪ್ಪಾಸಾಹೇಬ ಬಂಗಾರಗುಂಡ, ಮಹಾವೀರ ಹೊಸಮನಿ, ಅಜೀತ ಕವಟೇಕರ, ಸುರೇಖಾ ಉಪಾಧ್ಯ, ಸುನಂದಾ ದಂಡಾವತಿ, ಲಕ್ಷ್ಮಿ ಹೊಸಮನಿ ಸೇರಿ ಹೊಸಮನಿ, ದಂಡಾವತಿ, ಉಪಾಧ್ಯ, ಬೋಗಾರ ಮನೆತನದವರು ಇದ್ದರು. ತಹಶೀಲ್ದಾರ ಕಚೇರಿಯಲ್ಲಿ ತಾಲೂಕ ಆಡಳಿತದಿಂದ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಉಪತಹಶೀಲ್ದಾರ ಎಚ್.ಎಸ್.ಅರಕೇರಿ ಸೇರಿ ಸಿಬ್ಬಂದಿ ವರ್ಗದವರು ಹಾಗೂ ಜೈನ ಸಮಾಜದ ಮುಖಂಡರು ಇದ್ದರು. ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ಮಧ್ಯಾಹ್ನ ರೋಗಿಗಳಿಗೆ ಹಾಲು ಹಣ್ಣು ವಿತರಿಸಿದರು. ವಡವಡಗಿ, ದಿಂಡವಾರ, ಬೊಮ್ಮನಹಳ್ಳಿ,ಮನಗೂಳಿ, ಕೊಣ್ಣೂರ ಗ್ರಾಮಗಳ ಮುಖಂಡರು ಪಾಲ್ಗೊಂಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಿದರು.



ನಾಲತವಾಡ: ಪಟ್ಟಣ ಪಂಚಾಯಿತಿಯಲ್ಲಿ ಮಹಾವೀರ ಜಯಂತಿಯನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಬಸವರಾಜ ಗಂಗನಗೌಡರ(ಗಡ್ಡಿ), ಆರೋಗ್ಯ ರಕ್ಷಾ ಸಮಿತಿಯ ಸದಸ್ಯ ಸಿದ್ದಪ್ಪ ಕಟ್ಟಿಮನಿ, ವೀರೇಶ್ ದೊಡಮನಿ (ಜೆ ಇ), ವೀರೇಶ ತಂಗಡಗಿ, ಸಂಜಯ ಹುಡೆದ, ಶಿವರಾಜ ತಾಳಿಕೋಟಿ, ಸದ್ದಾಮ ಹುಸೇನ ತಂಗಡಗಿ ಇದ್ದರು.

ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಭಿಮತ

ಮಹಾವೀರರ ತತ್ವಗಳು ಸಾರ್ವಕಾಲಿಕ

ವಿಜಯಪುರ: ತ್ಯಾಗಕ್ಕೆ ಮತ್ತೊಂದು ಹೆಸರು ಭಗವಾನ್ ಮಹಾವೀರರು. ಅವರು ಈ ಸಮಾಜಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ನಗರದ ಕಂದಗಲ್ ಹನಮಂತರಾಯ ರಂಗಮಂದಿರದಲ್ಲಿ ಸೋಮವಾರ ಹಮ್ಮಿಕೊಂಡ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾನತೆಗಾಗಿ ಜಾತಿ ಪದ್ಧತಿ ನಿರಾಕರಿಸಿ ಎಲ್ಲರೂ ಸಮಾನರು ಎಂದು ಬೋಧಿಸಿದ ಮಹಾನ್ ಪುರುಷ ಭಗವಾನ್ ಮಹಾವೀರರು. ಭಗವಾನ್ ಮಹಾವೀರರು ಮನುಕುಲಕ್ಕೆ ಸಾರಿದ ಸತ್ಯ, ಅಹಿಂಸೆಯಂತಹ ಮೌಲ್ವಿಕ ತತ್ವಗಳು ಸಾರ್ವಕಾಲಿಕವಾಗಿದ್ದು, ಅವರ ಸಂದೇಶಗಳನ್ನು ಯುವಕರು ಅರ್ಥೈಸಿಕೊಂಡು ಆದರ್ಶ ಜೀವನ ನಡೆಸಬೇಕು ಎಂದರು. ಅಹಿಂಸೆಯ ಪಾಠ ಹೇಳಿಕೊಟ್ಟ ಭಗವಾನ್ ಮಹಾವೀರರು, ಅಹಿಂಸೆ ಆಚರಣೆಯ ಮಾರ್ಗದಲ್ಲಿ ಜೀವನದ ಸಾಕ್ಷಾತ್ಕಾರದ ಪಥ ತೋರಿಸಿದ ಮಹಾನ್ ಯುಗ ಪುರುಷ. ಭಗವಾನ್ ಮಹಾವೀರರು ಎಲ್ಲರಿಗೂ ಒಳಿತನ್ನು ಬಯಸುವ ಮೂಲಕ ಜಗತ್ತಿಗೆ ಉತ್ತಮ ಸಂದೇಶ ನೀಡಿದ್ದಾರೆ ಎಂದರು.

ಭಗವಾನ್ ಮಹಾವೀರರು, ನೀನು ಜೀವಿಸು, ಇತರರಿಗೂ ಜೀವಿಸಲು ಅವಕಾಶ ನೀಡು, ಸತ್ಯವನ್ನೇ ನುಡಿ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಅಹಿಂಸೆಯೇ ಪರಮೋಧರ್ಮ ಎಂಬ ವಿಚಾರಗಳನ್ನು ಪ್ರತಿಪಾದಿಸುವಮೂಲಕ, ಈಜಗತ್ತಿಗೆನೀಡಿದ ಮೌಲಿಕ



ಕೊಡುಗೆ ಅಪರವಾಗಿದೆ. ಭಗವಾನ್ ಮಹಾವೀರರು ಶಾಂತಿ ಪ್ರಿಯರಾಗಿದ್ದರು. ಅಹಿಂಸಾವಾದಿಗಳಾದ ಇವರು ತಮ್ಮ ತತ್ವ ಚಿಂತನೆಗಳ ಮೂಲಕ ಎಲ್ಲರ ಏಳಿಗೆ ಬಯಸಿದವರು ಎಂದು ಹೇಳಿದರು.

ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ ಮಾತನಾಡಿ, ಭಗವಾನ್ ಮಹಾವೀರರ ಚಿಂತನೆಗಳು ಸಾರ್ವಕಾಲಿಕವಾಗಿವೆ. ಭಾರತ ಎಂದು ಭಾರತ ದೇಶಕ್ಕೆ ನಾಮಕರಣ ಮಾಡಲು ಭರತ ಎಂಬ ಮುಖ್ಯ ಕಾರಣ. ಬಾಹುಬಲಿ ಮತ್ತು ಭರತ ನಡುವಿನ ಪ್ರತಿಷ್ಠೆಯ ಯುದ್ಧಗಳಾದ ಮುಷ್ಟಿಯುದ್ಧ, ದೃಷ್ಟಿಯುದ್ಧ ಮತ್ತು ಜಲ ಯುದ್ಧ ಮಾಡಿ ಅದರಲ್ಲಿ ಬಾಹುಬಲಿ ಜಯಶಾಲಿಯಾದರು. ಬಾಹುಬಲಿಯು 12 ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿ ಜ್ಞಾನವನ್ನು ಪಡೆದರು ಎಂದರು.

ಮುಖಂಡ ಶೀತಲ್‌ಕುಮಾರ್ ಓಘಿ ಮಾತನಾಡಿ, ಸರ್ಕಾರವು ನಮ್ಮ ಸಮುದಾಯಕ್ಕೆ ನೀಡುತ್ತಿರುವ ಸೌಲಭ್ಯವನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

> ಸಂತರು, ಸತ್ಪುರುಷರು, ದಾರ್ಶನಿಕರ ಜೀವನಾದರ್ಶಗಳು ಹಾಗೂ ಅವರು ನೀಡಿದ ಸಂದೇಶಗಳನ್ನು ಅರಿತುಕೊಳ್ಳುವ ಮೂಲಕ ಯುವಕರು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಜೀವನ ಪಾವನಗೊಳಿಸಿಕೊಳ್ಳಬೇಕು. ದಾರ್ಶನಿಕರು ನೀಡಿದ ಮೌಲಿಕ ವಿಚಾರಧಾರೆಗಳಡಿ ಸತ್ಯದ ಪಥದಲ್ಲಿ ಜೀವನ ಸಾಗಿಸಬೇಕು.
> ■ ಡಾ.ಔದ್ರಾಮ ಅಪರ ಜಿಲ್ಲಾಧಿಕಾರಿ, ವಿಜಯಪುರ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಪ್ರಶಾಂತ ಪೂಜಾರಿ, ಎಂ.ಎಂ. ವಸ್ತದ, ಮಣಿಕಂಠ ಶಹಾ, ಮೋಹನ ಕಟ್ಟಿಮನಿ ಇದ್ದರು. ಇದಕ್ಕು ಮುನ್ನ ನಗರದಲ್ಲಿ ಭಗವಾನ ಮಹಾವೀರರ ಭಾವಚಿತ್ರದ ಮೆರವಣಿಗೆ ಹಮ್ಮಿಕೊಳ್ಳಲಾಯಿತು.

ಕಾಂಗ್ರೆಸ್‌ನಿಂದ ದೇಶಕ್ಕೆ ಭವಿಷ್ಯವಿಲ್ಲ: ಛಲವಾದಿ

ಕೋಲ್ಹಾರ: ಇದೀಗ ಕೃತಕ ಉಸಿರಾಟದಲ್ಲಿರುವ ಒಡೆದಾಳುವ ನೀತಿಯಿಂದ ಕಾಂಗ್ರೆಸ್ ಪಕ್ಷ ಅಧಿಕಾರ ಅನುಭವಿಸಿದೆ ಕಾಂಗ್ರೆಸ್ ಪಕ್ಷದಿಂದ ಭಾರತ ದೇಶಕ್ಕೆ ಭವಿಷ್ಯವಿಲ್ಲ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಸ್ಥಳೀಯ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಶ್ರೀ ಯಲ್ಲಮ್ಮದೇವಿ ಸಿಬಿಎಸ್‌ಇ ಶಾಲಾ ಆವರಣದಲ್ಲಿ ಬಿಜೆಪಿ ಬಸವನಬಾಗೇವಾಡಿ ಮಂಡಲ ಮಟ್ಟದ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ನಿಮಿತ್ತ ಹಮ್ಮಿಕೊಂಡ ಮೊದಲನೆಯ ತಂಡದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಬಹುತೇಕ ರಾಜ್ಯ ಸೇರಿದಂತೆ ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದರು ಮೀಸಲಾತಿ ತೆಗೆದು ಹಾಕಿಲ್ಲ ಹೊರತು ಎಸ್ಸಿ 15ರಿಂದ 17ಕ್ಕೆ ಹಾಗೂ ಎಸ್ಟಿ 3ರಿಂದ 7ಕ್ಕೆ ಹೆಚ್ಚಿಸಲಾಗಿದೆ. ಮುಸ್ಲಿಂ ಸಮುದಾಯಕ್ಕೆ ಧಕ್ಕೆಯನ್ನುಂಟು ಮಾಡಿಲ್ಲ ಹೀಗಾಗಿ ದಲಿತ. ಅಲ್ಪಸಂಖ್ಯಾತ ಸಮುದಾಯ ಬಿಜೆಪಿ ಬೆಂಬಲಿಸುತ್ತಿದ್ದಾರೆ ಮುಸ್ಲಿಂ ಸಮುದಾಯಕ್ಕೆ ದಾವಣಗೆರೆಯಲ್ಲಿ ಬಿಫಾರಂ ನೀಡದೇ ತಾತ್ಸಾರ ಮಾಡಿದ್ದಾರೆ ಎಂದು ಕಿಡಿಕಾರಿದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರು ಮಾತನಾಡಿ, ಬಿಜೆಪಿ ಕಾರ್ಯಕರ್ತರ ಆಧಾರಿತ ಪಕ್ಷವಾಗಿದ್ದು ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಿ ಪಕ್ಷದ ಸಧೃಡತೆಗೆ ಕೊಡುಗೆ ನೀಡಬೇಕೆಂದು ಹೇಳಿದರು.

ಬಿಜೆಪಿ ಬಸವನಬಾಗೇವಾಡಿ ಮಂಡಲ ಅಧ್ಯಕ್ಷ ಸಿದ್ರಾಮ ಕಾಖಂಡಕಿ, ನಿಕಟಪೂರ್ವ ಬೆಳಗಾವಿ ವಿಭಾಗ ಪ್ರಭಾರಿ ಚಂದ್ರಶೇಖರ ಕವಟಗಿ, ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ದೇವರಮನಿ, ಪ್ರಕೋಷ್ಠ ಪ್ರಮುಖ ಚಿದಾನಂದ ಚಲವಾದಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಶಾಂತಾ ಬೀಳಗಿ, ಯುವ ಮೋರ್ಚಾ ಅಧ್ಯಕ್ಷ ಅಖಿಲಗೌಡ ಪಾಟೀಲ, ಎಸ್.ಸಿ ಮೋರ್ಚಾ ಅಧ್ಯಕ್ಷ ವಿಠ್ಠಲ ಆಸಂಗಿ. ಪದ್ಮಾವತಿ ಗುಡಿ, ಸಗರಪ್ಪ ಮುರನಾಳ, ವಿಜಯ ಪೂಜಾರಿ ಇದ್ದರು. ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಜಗದೀಶ ಸುನಗದ ಸ್ವಾಗತಿಸಿದರು, ಮಂಡಲ ಪ್ರಧಾನ ಕಾರ್ಯದರ್ಶಿ ಡಾ: ಸಂಗಮೇಶ ಗೂಗಿಹಾಳ ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ದೇವರಮನಿ ವಂದಿಸಿದರು. ಇದೇ ಸಂದರ್ಭದಲ್ಲಿ ಕೆಎಂಎಫ್ ಮಾಜಿ ನಿರ್ದೇಶಕ ಗುರು ಚಲವಾದಿ ಹಾಗೂ ಹತ್ತಾರು ಮುಖಂಡರು ಕಾಂಗ್ರೆಸ್ ತೊರೆದು ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು.



ರಾಮ ಜ್ಯೋತಿ, ಗಂಗಾಜಲದ ಪವಿತ್ರ ಜ್ಯೋತಿ ರಥಯಾತ್ರೆ ನಗರಕ್ಕೆ

ವಿಜಯಪುರ: ಸುಕ್ಷೇತ್ರ ಹನುಮಗಿರಿ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ನಡೆಯಲಿರುವ ಅಭೂತಪೂರ್ವ ಬ್ರಹ್ಮ ಕಲಶೋತ್ಸವ ನಿಮಿತ್ತ ಆಯೋಧ್ಯೆಯಿಂದ ರಾಮ ಜ್ಯೋತಿ, ಪ್ರಯಾಗ್‌ರಾಜ್‌ದಿಂದ ಪವಿತ್ರ ಗಂಗಾಜಲವನ್ನು ಹೊತ್ತ ಪವಿತ್ರ ಜ್ಯೋತಿ ರಥ ಯಾತ್ರೆ ವಿಜಯಪುರಕ್ಕೆ ತಲುಪಿತು.

ನಗರದ ಕೃಷ್ಣ ವಾದಿರಾಜ ಮಠಕ್ಕೆ ಆಗಮಿಸಿದ ಈ ಭಕ್ತಿಪೂರ್ಣ ಜ್ಯೋತಿ ಯಾತ್ರೆಯನ್ನು ರಾಮನಾಮ ಜಪದೊಂದಿಗೆ ಭಕ್ತಾದಿಗಳು ಹೃದಯಪೂರ್ವಕವಾಗಿ ಸ್ವಾಗತಿಸಿದರು. ಅಯೋಧ್ಯೆಯಿಂದ ಆಗಮಿಸಿದ ರಾಮ ಜ್ಯೋತಿ, ಗಂಗಾಜಲದ ದರ್ಶನಾಶೀರ್ವಾದ ಪಡೆದು ಪುನೀತರಾದರು. ನಂತರ ಮಠದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ವಾಸುದೇವ ಆಚಾರ್ಯ ಅಗ್ನಿಹೋತ್ರಿ ವಿಶೇಷ ಪೂಜೆ ಸಲ್ಲಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹನುಮಗಿರಿಯಲ್ಲಿರುವ ಕೋದಂಡರಾಮ ಪಂಚಮುಖಿಆಂಜನೇಯದೇವಾಲಯದಲ್ಲಿ ಬ್ರಹ್ಮ ಕಲಶೋತ್ಸವ ನಿಮಿತ್ತ ಈ ಯಾತ್ರೆ ಕಳೆದ ಹಲವು ದಿನಗಳಿಂದ ದೇಶದಾದ್ಯಂತ ಸಂಚರಿಸಿ ವಿಜಯಪುರ ತಲುಪಿತು.

ಈ ವೇಳೆ ಮಾತನಾಡಿದ ಯುವ ಮುಖಂಡ ಪ್ರಕಾಶ ಅಕ್ಕಲಕೋಟ, ರಾಮ ಜನ್ಮಭೂಮಿ ಆಯೋಧ್ಯೆ ದಿವ್ಯ ತೀರ್ಥ ಕ್ಷೇತ್ರ, ಪವಿತ್ರ ರಾಮಜನ್ಮಭೂಮಿಯ ಪ್ರತಿ ಕಣಕಣದಲ್ಲಿಯೂ ಭಕ್ತಿಯ ಸ್ವರೂಪವಿದೆ. ಆ ಸುಕ್ಷೇತ್ರದಿಂದ ಆಗಮಿಸಿರುವ ಜ್ಯೋತಿ ಯಾತ್ರೆಯ ಬೆಳಕು ಪ್ರತಿಯೊಬ್ಬರನ್ನು ಪಾವನಗೊಳಿಸಲಿದೆ, ರಾಮನ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದರು.

ಮುಖಂಡರಾದ ಗೋಪಾಲ್ ನಾಯಕ್, ಡಾಕ್ಟರ್ ಮಲಘಾಣ, ಡಾ. ಸಂಜು ಜೋಶಿ, ವಿಜಯ್ ಜೋಶಿ, ವಿಕಾಸ್ ಪದಕಿ, ವಿ. ಸಿ. ಕುಲಕರ್ಣಿ, ಪ್ರಾಣೇಶ ಕುಲಕರ್ಣಿ, ಗೋಪಾಲ್ ಜೋಶಿ, ವೆಂಕಟೇಶ್ ಗುಡಿ, ಶಂಕರ್ ಕುಲಕರ್ಣಿ, ಆದಿತ್ಯ ತಾವರಗೇರಿ, ಮಡಿವಾಳಪ್ಪ ಯಾಳವಾರ, ಗೋವಿಂದ ದೇಶಪಾಂಡೆ, ಗೋವಿಂದ್ ರಾಜ್, ಜತೀಶ ಬಲ್ಲಾಡ, ಜಯಂತ್ ಕುಂಜೂರ್ ಪಂಜ, ಜೀವನ ಆಚಾರ್ಯ, ಆನಂದ ತಿಂಗಳಾಡಿ ಇದ್ದರು.



'ಸದ್ಗುರುವಿಗೆ ಕಾವ್ಯದಿಂಚರ' ಲೋಕಾರ್ಪಣೆ

ದೇವರಹಿಪ್ಪರಗಿ : ತಾಲೂಕಿನ ಭೈರವಾಡಗಿ(ಪೋಡಗೇರಿ) ಗ್ರಾಮದ ಪ.ಪೂ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳ ಕುರಿತಾದ ಜೀವನ ದರ್ಶನವನ್ನು ಚಿತ್ರಿಸುವ ಸಂಪಾದನ ಕಾವ್ಯ ಸಂಕಲನ ದೇವರಹಿಪ್ಪರಗಿ ತಾಲೂಕು ಸಾಹಿತ್ಯ ಸಮ್ಮೇಳನದ ಮಾಜಿ ಸರ್ವಾಧ್ಯಕ್ಷರು ಹಾಗೂ ಹಿರಿಯ ಸಾಹಿತಿಗಳಾದ ಸಂಗಮೇಶ ಕೆರೆಪ್ಪಗೋಳ ವಿರಚಿತ 'ಸದ್ಗುರುವಿಗೆ ಕಾವ್ಯದಿಂಚರ' ಸಂಪಾದನ ಕಾವ್ಯ ಸಂಕಲನ 9ನೇ ಕೃತಿಯು ಹನುಮಾನ್ ಜಯಂತಿಯ ಪ್ರಯುಕ್ತ ಗ್ರಾಮದಲ್ಲಿ ಭಾನುವಾರದಂದು ಬಿಡುಗಡೆಗೊಂಡಿತು.



ಸ್ಥಳೀಯ ಮಠದ ಪ.ಪೂ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳ ಸಾನ್ನಿಧ್ಯವನ್ನು ವಹಿಸಿದ್ದರು. ಸಾನ್ನಿಧ್ಯವನ್ನು ಕಡಕೋಳ ಗ್ರಾಮದ ವೇ.ಮೂ ಮಹಾಲಿಂಗೇಶ್ವರ ಮಹಾಸ್ವಾಮಿಗಳು ವಹಿಸಿ ಭೈರವಾಡಗಿ(ಪೋಡಗೇರಿ) ಗ್ರಾಮದ ಪ.ಪೂ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳ ಕುರಿತಾದ ಜೀವನ ದರ್ಶನವನ್ನು ಚಿತ್ರಿಸುವ 'ಸದ್ಗುರುವಿಗೆ ಕಾವ್ಯದಿಂಚರ' ಸಂಪಾದನ ಕಾವ್ಯ ಸಂಕಲನ 9ನೇ ಕೃತಿಯು ಸಂಗಮೇಶ ಕೆರೆಪ್ಪಗೋಳ ವಿರಚಿತ ಕೃತಿಯನ್ನು ಅನಾವರಣಗೊಳಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾಳವಾರ ಗ್ರಾಮದ ವೇ.ಮೂ ಬಸಯ್ಯ ಮಹಾಸ್ವಾಮಿಗಳು ವಹಿಸಿದ್ದರು. ಸಂಪಾದಕರು, ಹಿರಿಯ ಕಲಾವಿದ - ವಿದ್ವಾಂಸರಾದ ಸಂಗಮೇಶ ಕೆರೆಪ್ಪಗೋಳ ಅವರ ವಿರಚಿತ 9ನೇ ಕೃತಿ ಲೋಕಾರ್ಪಣೆ ಮಾಡಲಾಯಿತು.

ಗ್ರಂಥ ಮುದ್ರಣ ಲೋಕಾರ್ಪಣಕ್ಕೆ ಗ್ರಾಮದ ಅರಕ್ಷಕರಾದ ರಾಘವೇಂದ್ರ ಗು. ದೇವೂರ ದಾಸೋಹ ಸೇವೆಯನ್ನು ನೀಡಿದ್ದರು.

ಇದೇ ಸಂದರ್ಭದಲ್ಲಿ ಗ್ರಾಮದ ಪ್ರಮುಖರು, ಗಣ್ಯರು ಹಾಗೂ ಸಾಹಿತ್ಯ ಆಸಕ್ತದಾರರು ಇದ್ದರು. ಕಾರ್ಯಕ್ರಮದ ನಿರೂಪಣೆ ಆಯ್. ಎಲ್.ಶಾಬಾದಿ ಹಾಗೂ ಸಿ.ಕೆ. ಕಿರಣಗಿ ಸ್ವಾಗತಿಸಿ, ವಂದಿಸಿದರು.

ಭಗವಾನ್ ಮಹಾವೀರ ಜಯಂತ್ಯುತ್ಸವ

ವಿಜಯಪುರ: ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಜೈನ ಧರ್ಮದ 24ನೇ ತೀರ್ಥಂಕರ ಭಗವಾನ್ ಮಹಾವೀರ ಜಯಂತಿಯನ್ನು ಆಚರಿಸಲಾಯಿತು.

ಇಲ್ಲಿನ ಡೀಮ್ಡ್ ವಿವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ ಅವರು ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾತನಾಡಿ, ಭಗವಾನ್ ಮಹಾವೀರರು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಪಂಚಮಹಾವ್ರತಗಳನ್ನು ಬೋಧಿಸಿದ್ದಾರೆ. ಈ ತತ್ವಗಳು ನಮ್ಮ ವ್ಯಕ್ತಿತ್ವವನ್ನು ಶ್ರೇಷ್ಠಗೊಳಿಸುವ ಮಾರ್ಗಸೂಚಿಗಳಾಗಿವೆ. ಎಲ್ಲರೂ ಅವರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಹೇಳಿದರು.

ವೈದ್ಯಕೀಯ ವಿಭಾಗದ ಡೀನ್ ಮತ್ತು ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ, ಸೂಪರ್ ಸ್ಪೆಷಿಯಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ಪರೀಕ್ಷೆ ನಿಯಂತ್ರಣಾಧಿಕಾರಿ ಡಾ.



ಎಸ್.ಎಸ್. ದೇವರಮನಿ, ಉಪಪ್ರಾಂಶುಪಾಲ ಡಾ. ಆನಂದ ಅಂಬಲಿ, ಆರ್ ಅ್ಯಂಡ್ ಡಿ ವಿಭಾಗದ ನಿರ್ದೇಶಕ ಡಾ. ಎಂ.ಎಂ. ಪಾಟೀಲ, ಕಾನೂನು ಶಾಲೆಯ ಪ್ರಾಚಾರ್ಯ ಡಾ. ಆರ್.ಜಿ. ಕುಲಕರ್ಣಿ, ಪೆಥಾಲಾಜಿ ವಿಭಾಗದ ಮುಖ್ಯಸ್ಥ ಡಾ. ಸುರೇಖಾ ಹಿಪ್ಪರಗಿ, ಉಸಿರಾಟ ಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಕೀರ್ತಿವರ್ಧನ ಕುಲಕರ್ಣಿ, ಡಾ. ಪ್ರಕಾಶ ಪಾಟೀಲ, ಡಾ. ಸತೀಶ ಅರಕೇರಿ, ಹಣಕಾಸು ಅಧಿಕಾರಿ ಬಿ. ಎಸ್. ಪಾಟೀಲ, ಸಹಾಯಕ ರಜಿಸ್ಟ್ರಾರ್ ಡಾ. ಶ್ರೀಧರ ಬಗಲಿ, ಆನಂದ ಪಾಟೀಲ, ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಇದ್ದರು.

ಏ.1ರಿಂದ ಜಾತ್ರಾ ಮಹೋತ್ಸವ: ವಿವಿಧ ಕಾರ್ಯಕ್ರಮ

ಇಂಡಿ: ತಾಲೂಕಿನ ಇಂಗಳಗಿ ಗ್ರಾಮದ ಶ್ರೀ ಅಲ್ಲಮಪ್ರಭು ದೇವರ, ಶ್ರೀ ಹನುಮಾನ ದೇವರ ಜಯಂತಿ ಹಾಗೂ ಶ್ರೀ ಗೈಬುಸಾಬ ದೇವರ ಜಾತ್ರಾ ಮಹೋತ್ಸವವು ಇದೇ ಏ.1 ರಿಂದ ಏ.3ರವರೆಗೆ ಅತಿ ವಿಜೃಂಭಣೆಯಿಂದ ನಡೆಯಲಿದೆ.

ಏ.1ರಂದು ಬೆಳಿಗ್ಗೆ 5 ಗಂಟೆಗೆ ಶ್ರೀ ಅಲ್ಲಮಪ್ರಭು ದೇವರ ಕತೃಗದ್ದುಗಿಗೆ ಹಾಗೂ ಶ್ರೀ ಹನುಮಾನ ದೇವರಿಗೆ ರುದ್ರಾಭಿಷೇಕ. ಬೆಳಿಗ್ಗೆ 8 ಗಂಟೆಗೆ ಐದೂರಿನ ಪಲ್ಲಕ್ಕಿಗಳ ಆಗಮನವಾಗಿ ಗಂಗಿ ಸೀತಾಳ ನೆರವೇರಿಸಿ ಗುಡಿ ಪ್ರವೇಶ ಮಾಡುವರು. ಮಧ್ಯಾಹ್ನ 12.30 ಗಂಟೆಗೆ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗುವುದು. ಭಂಥನಾಳದ ಶ್ರೀವೃಷಭಲಿಂಗೇಶ್ವರ ಮಹಾಶಿವಯೋಗಿಗಳು, ಶಿರಶ್ಯಾಡ ಹಿರೇಮಠದ ಶ್ರೀ ಅಭಿನವ ಮುರುಗೇಂದ್ರಶಿವಾಚಾರ್ಯರು, ಗೋಳಸಾರದ ಶ್ರೀ ಅಭಿನವ ಪುಂಡಲಿಂಗ ಮಹಾಶಿವಯೋಗಿಗಳು, ಇಂಡಿ ಸಿದ್ಧಾರೂಢ ಓಂಕಾರಶ್ರಮದ ಶ್ರೀ ಡಾ. ಸ್ವರೂಪಾನಂದ ಸ್ವಾಮೀಜಿ, ಚಳಕಾಪೂರ-ಆಳೂರ ಸಿದ್ಧಾರೂಢ ಮಠದ ಶ್ರೀ ಶಂಕರಾನಂದ ಸ್ವಾಮೀಜಿಗಳು ವಹಿಸುವರು. ಘನ ಉಪಸ್ಥಿತಿ ಶಾಸಕ ಯಶವಂತರಾಯಗೌಡ ಪಾಟೀಲ, ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಜೆಡಿಎಸ್ ತಾಲೂಕಾಧ್ಯಕ್ಷ ಬಿ.ಡಿ.ಪಾಟೀಲ, ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಪ್ರಭು ಹೊಸಮನಿ ಅಧ್ಯಕ್ಷತೆ ವಹಿಸುವರು.



ಅದೇ ದಿನ ರಾತ್ರಿ 9.30 ಗಂಟೆಗೆ ಶ್ರೀ ಅಲ್ಲಮಪ್ರಭು ನಾಟ್ಯ ಸಂಘದ ಸ್ಥಳೀಯ ಕಲಾವಿದರಿಂದ 'ಮಾತು ಬಿದ್ದಿತು ಮೌನ ಗೆದ್ದಿತು' ಎಂಬ ಸುಂದರ ಸಾಮಾಜಿಕ ನಾಟಕ ನಡೆಯುವುದು.

ಏ.2ರಂದು ಬೆಳಿಗ್ಗೆ 9.30 ಗಂಟೆಗೆ ಉತ್ನಾಳ ಶ್ರೀ ಭೀಮಾಶಂಕರ ಡೊಳ್ಳಿನ ಗಾಯನ ಸಂಘದ ಪರಸು ಮಾಸ್ತರ ಹಾಗೂ ಮುರಗಾನೂರ ಶ್ರೀ ಸೋಮೇಶ್ವರ ಡೊಳ್ಳಿನ ಗಾಯನ ಸಂಘದ ಚಂದ್ರು ಮಾಸ್ತರ ಸಂಗಡಿಗರಿಂದ ಸುಪ್ರಸಿದ್ಧ ಡೊಳ್ಳಿನ ಪದಗಳು ನಡೆಯುವುದು.

ಸಂಜೆ ಶ್ರೀ ಹನುಮಾನ ದೇವರ ಮೊಸರು ಗಡಿಗೆ ಒಡೆಯುವರು. ಸಂಜೆ 7 ಗಂಟೆಗೆ ಗ್ರಾಮದ ಸುಮಂಗಲಿಯರಿಂದ ಶ್ರೀ ಅಲ್ಲಮಪ್ರಭು ದೇವರ ತೊಟ್ಟಿಲೋತ್ಸವ ಹಾಗೂ ಶ್ರೀ ಗೈಬುಸಾಬ ದೇವರ ಗಂಧ ಲೇಪನ್ ಕಾರ್ಯಕ್ರಮ ಜರುಗುವುದು.

ಏ.3ರಂದು ಬೆಳಿಗ್ಗೆ 8 ಗಂಟೆಗೆ ಸಕಲ ವಾದ್ಯ ವೈಭವಗಳಿಂದ ಐದೂರಿನ ಪಲ್ಲಕ್ಕಿಗಳ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗುವುದು. ನಂತರ ಗದ್ದುಗೆ ಪೂಜಾರಿಗಳಿಂದ ನುಡಿ ಮುತ್ತುಗಳು(ಹೇಳಿಕೆ) ಹಾಗೂ ಭಕ್ತರಿಂದ ಸಿಡಗಾಯಿ ಒಡೆದು ಹರಕೆ ತೀರಿಸುವರು. ಸಂಜೆ 4 ಗಂಟೆಗೆ ಸುಪ್ರಸಿದ್ಧ ಜಂಗೀ ನಿಕಾಲಿ ಕುಸ್ತಿ ಜರುಗುವುದು. ರಾತ್ರಿ 9.30 ಗಂಟೆಗೆ ಶ್ರೀ ಅಲ್ಲಮಪ್ರಭು ನಾಟ್ಯ ಸಂಘದ ಸ್ಥಳಿಯ ಕಲಾವಿದರಿಂದ 'ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ' ಎಂಬ ಸುಂದರ ಸಾಮಾಜಿಕ ನಾಟಕ ಜರುಗುವುದು. ಮೂರು ದಿನಗಳ ಕಾಲ ಅನ್ನಪ್ರಸಾದ ಸೇವೆ ಏರ್ಪಡಿಸಲಾಗಿದೆ ಎಂದು ಉತ್ಸವ ಸಮಿತಿಯವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಚಂದ್ರಶೇಖರ ಯಾಳವಾರಗೆ ಗೆಳೆಯರ ಬಳಗದಿಂದ ಸನ್ಮಾನ

ದೇವರಹಿಪ್ಪರಗಿ: ತಾಲೂಕಿನ ಪಡಗಾನೂರ ಗ್ರಾಮದ ಶ್ರೀ ಸೋಮೇಶ್ವರ ಜಾತ್ರಾ ಅಂಗವಾಗಿ ನಡೆದ ಬಾರ ಎತ್ತುವ ಸ್ಪರ್ಧೆಯಲ್ಲಿ ಪಡಗಾನೂರ ಗ್ರಾಮದ ಚಂದ್ರಶೇಖರ ಯಾಳವಾರ ಅವರು 220 ಕೆಜಿ ತೂಕದ ಚೀಲವನ್ನು ಎತ್ತಿ ದಾಖಲೆ ಬರೆದು ಪಡಗಾನೂರ ಗ್ರಾಮದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿಜೇತ ಸ್ಪರ್ಧಾಳುವನ್ನು ಪಡಗಾನೂರ ಗ್ರಾಮದ ಗೆಳೆಯರ ಬಳಗದ ಸದಸ್ಯರು ಆತ್ಮೀಯವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬಸವರಾಜ ಹೊಸಟ್ಟಿ, ಮಾಜಿ ಸೈನಿಕ ಮಲ್ಲು ಬನಗೊಂಡ, ರಮೇಶ ಹಳ್ಳಿ, ಗ್ರಾಪಂ ಮಾಜಿ ಸದಸ್ಯ ಸುಭಾಸ ಹೊಸಟ್ಟಿ, ದಯಾನಂದ ಆಕಳವಾಡಿ, ಬೀರು ಹುಣಶ್ಯಾಳ, ಸಿದ್ದು ಹೊಸಟ್ಟಿ, ಸಾತೀರಪ್ಪ ಮುಳಸಾವಳಗಿ, ಕೆಂಚಪ್ಪ ಪೂಜಾರಿ, ಶ್ರೀಶೈಲ ಸಾತಿಹಾಳ, ಅಣ್ಣೇಶಿ ಕೋಟಾರಗಸ್ತಿ, ಯಲ್ಲಪ್ಪ ಬನಗೊಂಡ, ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದು ಹಾರ್ದಿಕವಾಗಿ ಸನ್ಮಾನಿಸಿ ಅಭಿನಂದಿಸಿದರು.



ಇಷ್ಟಾರ್ಥ ಈಡೇರಿಸುವ ಸ್ವಯಂಭೂ ಶ್ರೀ ಬಲಭೀಮ ದೇವರು

ರಾಜಶೇಖರ ಡೋಣಜಮಠ

ಚಡಚಣ: ದೇವರನಿಂಬರಗಿ ಗ್ರಾಮದ ಸ್ವಯಂಭೂ ಶ್ರೀಬಲಭೀಮ ದೇವರ ಜಾತ್ರೆ ಚೈತ್ರ ಮಾಸದ ಪಾಡ್ಯದಿಂದ ದವನದ ಹುಣ್ಣಿಮೆಯವರೆಗೆ ವಿಜೃಂಭಣೆಯಿಂದ ನಡೆಯುತ್ತಿದ್ದು, ಸಾವಿರಾರು ಭಕ್ತರನ್ನು ಆಕರ್ಷಿಸುತ್ತಿದೆ. ಜಾತ್ರೆ ಅವಧಿಯಲ್ಲಿ ರಾಮನವಮಿ, ಹನುಮ ಜಯಂತಿ, ಏಕಾದಶಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಏಕಾದಶಿ ದಿನದಂದು 'ಮೊಸರು ಗಡಿಗೆ' ಒಡೆಯುವ ಸಂಪ್ರದಾಯವು ಊರಗೌಡರ ಮನೆತನದಿಂದ ನಡೆಯುತ್ತದೆ.



ದೇವರ ಪೂಜೆ ಹೂಗಾರ ಮನೆತನದವರು ಪ್ರತಿದಿನ ಸೂರ್ಯೋದಯ ಹಾಗೂ ಸೂರ್ಯಾಸ್ತ ಸಮಯದಲ್ಲಿ ಪೂಜೆ ಸಲ್ಲಿಸುತ್ತಾರೆ. ಬ್ರಾಹ್ಮಣ ಅರ್ಚಕರು ಮಧ್ಯಾಹ್ನ, ರಾತ್ರಿ 10 ಗಂಟೆಗೆ 'ಶೇದಾರತಿ' ವಿಧಿಯೊಂದಿಗೆ ಪೂಜೆ ಸಮಾಪ್ತಿಯಾಗುತ್ತದೆ. ಸ್ವಯಂಭೂ ಶ್ರೀ ಬಲಭೀಮ (ಶ್ರೀ ಹನುಮಾನ್) ದೇವರ ದೇವಸ್ಥಾನವೆಂದು ಪ್ರಸಿದ್ಧಿಯಾಗಿರುವ ಈ ಕ್ಷೇತ್ರವು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶಕ್ತಿಸ್ಥಳವೆಂದು ಹಿಂದಿನಿಂದ ಇಂದಿನವರೆಗೆ ಅನೇಕ ಪವಾಡ ಸದೃಶ ಘಟನೆಗಳು ನಡೆಯುತ್ತಲೆ ಇವೆ. ಈ ಕ್ಷೇತ್ರವು ಉತ್ತರ ಕರ್ನಾಟಕದ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಮಹತ್ವ ಹೊಂದಿದ ಪವಿತ್ರ ಕ್ಷೇತ್ರವಾಗಿದೆ.

ಈ ದೇವಸ್ಥಾನವು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದ್ದು, ಮುಸ್ಲಿಂ ಸಮುದಾಯದವರು ಕೂಡ ಭಕ್ತಿಭಾವದಿಂದ ದೇವಾಲಯಕ್ಕೆ ಭೇಟಿ ನೀಡುತ್ತಿದ್ದು, ದೇವರ ದರ್ಶನಕ್ಕೆ ಬರುವಾಗ ಮಾಂಸಾಹಾರ ತ್ಯಜಿಸುವ ಸಂಪ್ರದಾಯವನ್ನು ಇಂದಿಗೂ ಪಾಲಿಸುತ್ತಿದ್ದಾರೆ.

ಇತಿಹಾಸ: ಶ್ರೀ ಬಲಭೀಮ ದೇವರ ದೇವಸ್ಥಾನದ ಮೂಲದಂತ ಕಥೆ, ಕುರುಬ ಗೌಡಿಕೆ ಮನೆತನದವರು ಸಾಕಿದ ಗೋವುಗಳು ಪ್ರತಿದಿನ ಹುತ್ತಕ್ಕೆ ಹಾಲುಣಿಸುತ್ತಿದ್ದವು. ಈ ಅಚ್ಚರಿಯ ಘಟನೆ ಗಮನಿಸಿದ ಗೌಡನಿಗೆ ಬಲಭೀಮ ದೇವರು ಕನಸಿನಲ್ಲಿ ಕಾಣಿಸಿಕೊಂಡು ದೇವಾಲಯ ನಿರ್ಮಾಣಕ್ಕೆ ಸೂಚನೆ ನೀಡಿ 'ನಾನು ಇಲ್ಲಿ ಉದ್ಭವವಾಗಲು ಸಮಯ ಬೇಕು, ನನಗೆ ತೊಂದರೆ ಕೊಡಬೇಡಿ' ಎಂದು ಸೂಚನೆ ನೀಡಿದನು. ಆದರೆ, ಕನಸಿನ ಆತುರ ಹೆಚ್ಚಾಗಿ ಕೇವಲ 7 ತಿಂಗಳಾಗುವಷ್ಟರಲ್ಲಿ ಬಾಗಿಲು ತೆರೆಯಲ್ಪಟ್ಟ ಕಾರಣ ಶ್ರೀಬಲಭೀಮ ದೇವರ ಮೂರ್ತಿ ಅರ್ಧ ರೂಪದಲ್ಲಿ ಸ್ವಯಂಭೂ ರೂಪದಲ್ಲಿ ಅಲ್ಲಿ ಕಾಣಿಸಿಕೊಂಡು ನೆಲೆನಿಂತಿದ್ದಾನೆ

ಜಾತ್ರೆ ಅವಧಿಯಲ್ಲಿ ಪ್ರತಿದಿನ ಕೀರ್ತನೆ, ಪುರಾಣ, ಭಜನೆ, ಸಂಗೀತ ಕಾರ್ಯಕ್ರಮಗಳು ನಡೆಯುತ್ತವೆ. ದವನದ ಹುಣ್ಣಿಮೆಯಂದು ಜಾತ್ರೆಗೆ ತೆರೆಬೀಳುತ್ತದೆ. ಶ್ರೀ ಬಲಭೀಮ ದೇವರ ಜಾತ್ರೆ ಭಕ್ತಿ, ಪರಂಪರೆ ಮತ್ತು ಸಾಮರಸ್ಯದ ಸಂಕೇತವಾಗಿ ಪ್ರತಿವರ್ಷವೂ ಭಕ್ತರ ಮನಸೆಳೆಯುತ್ತಿದೆ.

ಕಿರುಸುದ್ದಿ

ಗುವಿವಿ ಖೋಖೋ ತಂಡ ಅಂತರ್ ವಿವಿ ಪಂದ್ಯಕ್ಕೆ ಭಾಗಿ

ಕಲಬುರಗಿ: ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಏಪ್ರಿಲ್ 1 ರಿಂದ 4ರವರೆಗೆ ನಡೆಯಲಿರುವ ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ ಮಹಿಳಾ ಖೋಖೋ ಪಂದ್ಯಾಟದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ತಂಡ ಭಾಗವಹಿಸುತ್ತಿದೆ. ತಂಡದ ನಾಯಕಿಯಾಗಿ ಪ್ರೀಯಾಂಕಾ ಎಂ.ಆಯ್ಕೆಯಾಗಿದ್ದು, ಸದಸ್ಯರಾಗಿ ಅಂಕಿತಾ, ಕಾವೇರಿ, ಶಶಿಕಲಾ, ಕಾವೇರಿ, ಪ್ರೀಯಾಂಕ, ರಕೀತಾ, ರೇಣುಕಾ, ದೀಪಿಕಾ, ಭುವನೇಶ್ವರಿ, ಶಿವಲೀಲಾ ಹಾಗೂ ಪವಿತ್ರಾ ಇದ್ದಾರೆ. ತಂಡದ ವ್ಯವಸ್ಥಾಪಕ ಹಾಗೂ ತರಬೇತುದಾರರಾಗಿ ಕಲಬುರಗಿಯ ಎಸ್.ಬಿ.ಆರ್ಟ್ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಡಾ.ಮಿಲಿಂದ ಕುಮಾರ ಸುಳ್ಳದ ಕಾರ್ಯನಿರ್ವಹಿಸಲಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್.ಉಡಿಕೇರಿ, ಕುಲಸಚಿವ ಪ್ರೊ.ರಮೇಶ್ ಲಂಡನಕರ್, ಮೌಲ್ಯಮಾಪನ ಕುಲಸಚಿವ ಡಾ.ಎನ್.ಜಿ.ಕಣ್ಣೂರು, ವಿತ್ತಾಧಿಕಾರಿ ಜಯಾಂಬಿಕ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರು, ಸಂಯೋಜಕರು ಹಾಗೂ ಪ್ರಾಂಶುಪಾಲರಾದ ಡಾ.ಎಚ್.ಎಸ್.ಜಂಗೆ, ಡಾ.ಚಂದ್ರಕಾಂತ ಬಿರಾದಾರ, ಪ್ರಶಾಂತಕುಮಾರ ಡಿ. ಹಾಗೂ ಅರುಣಕುಮಾರ ಎಚ್. ಅವರು ತಂಡಕ್ಕೆ ಶುಭಾಶಯ ಕೋರಿದ್ದಾರೆ.

ಏ.1ಕ್ಕೆ ಹನುಮ ಜಯಂತಿ

ಕಲಬುರಗಿ: ನಗರದ ಹೊರವಲಯದ ಕೂಟನೂರ್ ಡಿ ಗ್ರಾಮದ ವಿಜಯವಿದ್ಯಾಲಯ ಬಡಾವಣೆಯಲ್ಲಿರುವ ಶ್ರೀಜಾಗೃತ ಹನುಮಾನ್ ಸನ್ನಿಧಿಯಲ್ಲಿ ಏ.2ರಂದು ಹನುಮ ಜಯಂತಿಯನ್ನು ಅತ್ಯಂತ ಭಕ್ತಿಭಾವದಿಂದ ಆಚರಿಸಲಾಗುವುದು ಎಂದು ಜಾಗೃತ ಹನುಮಾನ್ ಸೇವಾ ಸಮಿತಿ ತಿಳಿಸಿದೆ.



ಈ ಕುರಿತು ಪ್ರಕಟಣೆ ನೀಡಿರುವ ಸಮಿತಿ ಸದಸ್ಯ ಮಂಡಳಿಯು, ಉತ್ಸವದ ಪ್ರಯುಕ್ತ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಏಪ್ರಿಲ್ 1 ರಂದು ಸಾಯಂಕಾಲ 8 ರಿಂದ ಏಪ್ರಿಲ್ 2ರ ಬೆಳಗಿನ ಜಾವ 5 ಗಂಟೆ ವರೆಗೆ ಭಜನೆ ಕಾರ್ಯಕ್ರಮ ನಡೆಯಲಿವೆ. ಪ್ರಧಾನ ಅರ್ಚಕ ಸುರೇಶ ದೇಶಮುಖ ಅವರ ನೇತೃತ್ವದಲ್ಲಿ ಪೂಜಾ ವಿಧಿವಿಧಾನಗಳು ನೆರವೇರಲಿವೆ. ಅಂದು ಬೆಳಗ್ಗೆ 5 ಗಂಟೆಯಿಂದ ವಿಶೇಷ ಅಭಿಷೇಕ ಹಾಗೂ ಪೂಜಾ ಕಾರ್ಯಕ್ರಮಗಳ ಜತೆಗೆ ಹನುಮಂತ ದೇವರಿಗೆ ಭವ್ಯವಾದ 'ತೊಟ್ಟಿಲು ಸೇವೆ' ಜರುಗಲಿದೆ. ಬಡಾವಣೆಯ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹನುಮಂತ ದೇವರ ದರ್ಶನ ಪಡೆದು, ತೀರ್ಥ ಪ್ರಸಾದ ಸ್ವೀಕರಿಸಿ ಕೃಪೆಗೆ ಪಾತ್ರರಾಗಬೇಕೆಂದು ಸೇವಾ ಸಮಿತಿಯು ಭಕ್ತರಲ್ಲಿ ವಿನಂತಿಸಿದೆ.

ಮುಕ್ಕುಂಪಿ ಶಾಲೆಗೆ ಮಕ್ಕಳಿಂದ ಸ್ವಯಂಚಾಲಿತ ಗಂಟೆ ದೇಣಿಗೆ



ಮುನಿರಾಬಾದ್: ಗಂಗಾವತಿ ವಿಧಾನಸಭಾ ಕ್ಷೇತ್ರಕ್ಕೆ ಬರುವಂತಹ ಮುಕ್ಕುಂಪಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆರ್‌ಎಂಎಸ್ಎ ಶಾಲೆಯ 2025 26ನೇ ಸಲಿನ 10ನೇ ತರಗತಿ ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದಂತಹ ಶಾಲೆಗೆ ಏನಾದರೂ ಒಂದು ನೆನಪಿನ ಕಾಣಿಕೆ ಕೊಡಬೇಕೆಂದು ಅಂದುಕೊಂಡರು. ಅಲ್ಲಿ ಮುಂದೆ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ನಮ್ಮದೊಂದು ಚಿಕ್ಕ ಕಾಣಿಕೆ ಇರಲಿ ಹಾಗೂ ಗಂಟೆ ಬಾರಿಸಿದಾಗ ನಮ್ಮ ನೆನಪು ಮಕ್ಕಳಿಗೆ ಇರಲಿ ಎಂಬದು ನಮ್ಮ ಆಸೆ ಆದ ಕಾರಣ ಸ್ವಯಂಚಾಲಿತ ಶಾಲಾ ಗಂಟೆಯನ್ನು ಕೊಡುಗೆಯಾಗಿ ನೀಡಿದರು. ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ, ಶಾಲೆ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಕಲಬುರಗಿ: ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಏ.1 ರಿಂದ 4ರವರೆಗೆ ನಡೆಯಲಿರುವ ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ ಮಹಿಳಾ ಖೋಖೋ ಪಂದ್ಯಾಟದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ತಂಡ ಭಾಗವಹಿಸುತ್ತಿದೆ. ತಂಡದ ನಾಯಕಿಯಾಗಿ ಪ್ರೀಯಾಂಕಾ ಎಂ.ಆಯ್ಕೆಯಾಗಿದ್ದು, ಸದಸ್ಯರಾಗಿ ಅಂಕಿತಾ, ಕಾವೇರಿ, ಶಶಿಕಲಾ, ಕಾವೇರಿ, ಪ್ರೀಯಾಂಕಾ, ರಕೀತಾ, ರೇಣುಕಾ, ದೀಪಿಕಾ, ಭುವನೇಶ್ವರಿ, ಶಿವಲೀಲಾ ಹಾಗೂ ಪವಿತ್ರಾ ಇದ್ದಾರೆ.

ಫಲಾನುಭವಿಗಳಿಗೆ 8 ಕಾರುಗಳ ವಿತರಣೆ

ಸಿಂಧನೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಸಾರಥಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ 8 ಕಾರು, 2 ಟ್ರ್ಯಾಕ್ಟರ್ ಮತ್ತು 2 ಗೂಡ್ಸ್ ಬುಲೆರಾ ವಾಹನಗಳನ್ನು ಶಾಸಕ ಹಂಪನಗೌಡ ಬಾದರ್ಲಿ ಅವರು ಶನಿವಾರ ತಮ್ಮ ಶಾಸಕರ ಭವನದ ಆವರಣದಲ್ಲಿ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಯಂಕಪ್ಪ, ಮಲ್ಲಯ್ಯ ತಿಮ್ಮಾಪುರ, ಬಸಣ್ಣ ಬಾದರ್ಲಿ, ಹನುಮೇಶ ಹೆಡಗಿನಾಳ, ತಿಮ್ಮಯ್ಯ ಪುಲದಿನ್ನಿ, ಚಂದ್ರಶೇಖರ ಯಾಪಲಪರ್ವಿ, ಚೌಡಯ್ಯ ನಡ್ಡಿಕೇರಿ ಧುಮತಿ, ಎನ್.ಬಸವರಾಜ ಯದ್ದಲದೊಡ್ಡಿ, ವೆಂಕಟೇಶ ಧುಮತಿ, ಮುದಕಪ್ಪ ಯದ್ದಲದೊಡ್ಡಿ ಅವರಿಗೆ ಸಾರಥಿ ಯೋಜನೆಯಲ್ಲಿ ಕಾರುಗಳನ್ನು ವಿತರಿಸ ಲಾಗಿದೆ. ಸರ್ಕಾರದಿಂದ ಪ್ರತಿಯೊಬ್ಬರಿಗೂ 4 ಲಕ್ಷ ರೂ. ಸಬ್ಸಿಡಿ ನೀಡಲಾಗಿದ್ದು, ಕಾರನ್ನು ದುರ್ಬಳಕೆ ಮಾಡದೆ ಪ್ರತಿಯೊಬ್ಬರು ಸದ್ಬಳಕೆ ಮಾಡಿಕೊಂಡು ಪ್ರಗತಿ ಹೊಂದಬೇಕು ಎಂದರು. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಆದೇಶ, ಬ್ಲಾಕ್ ಕಾಂಗ್ರೆಸ್ ಗ್ರಾಮೀಣ ಘಟಕದ ಅಧ್ಯಕ್ಷ ಎಂ.ಲಿಂಗಪ್ಪ ದಢಸುಗೂರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅನಿಲಕುಮಾರ ವೈ., ಮುಖಂಡರಾದ ಖಾಜಿಮಲಿಕ್ ವಕೀಲ, ಅರುಣ್‌ಕುಮಾರ ಯಾಪಲಪರ್ವಿ, ಬಿ.ಎಚ್.ನಾಯಕ, ಹನುಮೇಶ ನಾಯಕ, ಅಯ್ಯಪ್ಪ ನಾಯಕ, ಮೌಲಪ್ಪ ಮಾಡ ಶಿರವಾರ, ರಾಮನಗೌಡ ಮಲ್ಕಾಪುರ ಮತ್ತಿತರರು ಉಪಸ್ಥಿತರಿದ್ದರು.



ಸಿಂಧನೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಸಾರಥಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ 8 ಕಾರು, 2 ಟ್ರ್ಯಾಕ್ಟರ್ ಮತ್ತು 2 ಗೂಡ್ಸ್ ಬುಲೆರಾ ವಾಹನಗಳನ್ನು ಶಾಸಕ ಹಂಪನಗೌಡ ಬಾದರ್ಲಿ ಅವರು ಶನಿವಾರ ತಮ್ಮ ಶಾಸಕರ ಭವನದ ಆವರಣದಲ್ಲಿ ವಿತರಿಸಿದರು.

ಕೆಕೆಆರ್‌ಡಿಬಿ, ಆರೋಗ್ಯ ಇಲಾಖೆ ಸಹಭಾಗಿತ್ವ | 15 ಕೋಟಿ ವೆಚ್ಚ

ಉಚಿತ ಎಚ್‌ಪಿವಿ ಲಸಿಕೆ ಯೋಜನೆ

ಕಲಬುರಗಿ: ದಿನೇ ದಿನೇ ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ತಂದೊಡ್ಡುತ್ತಿರುವ ಆತಂಕ ದೂರಗೊಳಿಸಲು ಸಂಕಲ್ಪ ಮಾಡಿರುವ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇದೇ ಮೊದಲ ಬಾರಿಗೆ ಆರೋಗ್ಯ ಇಲಾಖೆ ಸಹಯೋಗದಲ್ಲಿ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ 9ರಿಂದ 14 ವರ್ಷದೊಳಗಿನ ಬಾಲಕಿಯರಿಗೆ ಉಚಿತ ಎಚ್‌ಪಿವಿ ಲಸಿಕೆ ನೀಡಲು ಯೋಜನೆ ರೂಪಿಸುತ್ತಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ,ಶಾಸಕ ಡಾ.ಅಜಯ್ ಧರ್ಮಸಿಂಗ್ ತಿಳಿಸಿದರು.

ಸೋಮವಾರ ಧರ್ಮಸಿಂಗ್ ಫೌಂಡೇಶನ್, ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಕ್ಯಾನ್ಸರ್ ಕೇರ್ ಇಂಡಿಯಾ, ಚಿರಾಯು ಆಸ್ಪತ್ರೆ, ಅನುಗ್ರಹ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಜೇವರ್ಗಿಯ ಗಂವ್ಹಾರ್‌ದಲ್ಲಿ ನಡೆದ 2ನೇ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯ ಸೇವೆಗಳು ಹಳ್ಳಿಗರಿಗೆ ಅವರಿರುವ ಸ್ಥಳದಲ್ಲೇ ಲಭ್ಯವಾಗುವಂತೆ ಮಾಡುವುದೇ ತಮ್ಮ ಗುರಿಯಾಗಿದ್ದು, ಮಹಿಳೆಯರು ಇಂತಹ ಹೆಮ್ಮಾರಿಯಂತಹ ರೋಗಗಳಿಂದ ಮುಕ್ತವಾಗುವ ಮೂಲಕ ಸುರಕ್ಷಿತ ಕುಟುಂಬ ನಿರ್ವಹಣೆ ಮಾಡಬೇಕು ಎಂದರು.

ಆರೋಗ್ಯ ಇಲಾಖೆ ಸಹಯೋಗದಲ್ಲಿ ಕೆಕೆಆರ್ ಡಿಬಿ ಈ ಲಸಿಕೆ ನೀಡುವ ಯೋಜನೆ ರೂಪಿಸಲಿದೆ. ಮುಂಬರುವ ದಿನಗಳಲ್ಲಿ ಬಾಲಕಿಯರಿಗೆ ಎಚ್‌ಪಿವಿ ಲಸಿಕೆ ನೀಡುವ ಮೂಲಕ ಗರ್ಭಕಂಠದ ಕ್ಯಾನ್ಸರ್‌ಗೆ ಆರಂಭದಲ್ಲೇ ತಡೆ ಒಡ್ಡುವ ಸಂಕಲ್ಪವಾಗಿದೆ. ಇದಕ್ಕಾಗಿ ಮಂಡಳಿಯಲ್ಲಿ 15 ಕೋಟಿ ರೂ. ಮೀಸಲಿಡಲಾಗಿದೆ. ಮಾಜಿ ಸಿಎಂ ದಿ.ಧರಂಸಿಂಗ್ ಪ್ರತಿಷ್ಠಾನದ ಅಡಿಯಲ್ಲಿ ಈಗಾಗಲೇ ಅನೇಕ ಸಾಮಾಜಿಕ ಕಾರ್ಯಕ್ರಮ ಕೈಗೊಂಡು ಜೇವರ್ಗಿ ಜನರ ನೆರವಿಗೆ ಬರಲಾಗುತ್ತಿದೆ. ಇದೀಗ ವರುಷದುದ್ದಕ್ಕೂ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತ ಜೇವರ್ಗಿ ಜನರ ಸಂಪೂರ್ಣ ಆರೋಗ್ಯ ರಕ್ಷಣೆಯ ಸಂಕಲ್ಪ ಮಾಡಲಾಗಿದೆ ಎಂದರು. ಆರೋಗ್ಯ ಶಿಬಿರದಲ್ಲಿ ಗಂವ್ಹಾರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಮತ್ತು ಸಿಬ್ಬಂದಿ, ಖ್ಯಾತ ವೈದ್ಯ ಡಾ.ಕಾಮೇಶ್ವರಿ ದೇವಿ, ಡಾ.ಮಂಜುನಾಥ್ ದೋಶೆಟ್ಟಿ, ಡಾ.ಕೀರ್ತಿ, ಅನುಗ್ರಹ ಕಣ್ಣಿನ ಆಸ್ಪತ್ರೆಯ ತಂಡ ಹಾಗೂ ಸ್ಥಳೀಯ ಆಶಾ ಕಾರ್ಯಕರ್ತರ ತಂಡದವರು ಉಪಸ್ಥಿತರಿದ್ದರು.



> **ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ಇವೆಲ್ಲವೂ ಮಾರಕ. ಪಟ್ಟಣದಲ್ಲಿ ತಪಾಸಣೆಗೆ ಸವಲತ್ತಿದೆ. ಹಳ್ಳಿಗರಿಗೆ ಇದಿಲ್ಲ. ನಾವು ಹಳ್ಳಿಗಳಲ್ಲಿ ಶಿಬಿರ ನಡೆಸಿ ಅವರ ಆರೋಗ್ಯ ತಪಾಸಣೆ ಸಂಕಲ್ಪ ಮಾಡಿದ್ದೇವೆ. ಶಿಬಿರಕ್ಕೆ ಹೆಚ್ಚಿನ ಸ್ಪಂದನೆ ಸಿಗುತ್ತಿದೆ. ಜೇವರ್ಗಿಯ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಡೆಸುವ ಆರೋಗ್ಯ ಶಿಬಿರಗಳ ಸದುಪಯೋಗ ಜನ ಪಡೆಯಲಿ. ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ಉಪಚಾರಕ್ಕಿಂತ ಬೇಗ ಪತ್ತೆ ಹಚ್ಚುವುದೇ ಚಿಕಿತ್ಸೆಯಾಗಿದೆ.**
>
> ■ **ಡಾ.ಅಜಯ್ ಧರ್ಮಸಿಂಗ್, ಕೆಕೆಆರ್ ಡಿಬಿ ಅಧ್ಯಕ್ಷ,ಜೇವರ್ಗಿ ಶಾಸಕ**

ಖುದ್ದು ಚೆಕ್ ಅಪ್ ಮಾಡಿದ ಅಜಯ್ ಸಿಂಗ್

ಶಿಬಿರಕ್ಕೆ ಚಾಲನೆ ನೀಡಿದ ಬಳಿಕ ವೇದಿಕೆಯಿಂದ ಇಳಿದು ತಪಾಸಣೆಗೆ ಮಾಡಲಾಗಿದ್ದ ಪ್ರತ್ಯೇಕ ವ್ಯವಸ್ಥೆಗಳಲ್ಲಿ ಬೆರೆದು ಜನರ ಆರೋಗ್ಯ ತಪಾಸಣೆಯನ್ನು ಡಾ.ಅಜಯ್ ಸಿಂಗ್ ನಡೆಸಿದರು. ಜೊತೆ ಅನೇಕರಿಗೆ ಆರೋಗ್ಯ ಸಲಹೆ ಸೂಚನೆ ಕೊಡುತ್ತ ಸ್ಥಳೀಯ ಪರಿಣಿತ ವೈದ್ಯರೊಂದಿಗೂ ಚರ್ಚೆ ಮಾಡಿ ಸೂಕ್ತ ಮಾರ್ಗದರ್ಶನ ಮಾಡಿದರು.

ಜನಪದ ಸಾಹಿತ್ಯ ಸಮಸ್ತ ಜನರ ಜೀವಾಳ

ಯಲಬುರ್ಗಾ: ಜಾನಪದ ಕಲೆಗಳು ಕೇವಲ ಮನೋರಂಜನೆಗಾಗಿ ಅಲ್ಲ, ಅದು ನಮ್ಮ ಜನಪದರ ನಿತ್ಯ ಜೀವನದ ಬದುಕಾಗಿದ್ದು ಇತಿಹಾಸದಿಂದಲೂ ಜಾನಪದ ಪ್ರತಿಯೊಬ್ಬ ಮಾನವನ ಅವಿಭಾಜ್ಯ ಅಂಗವಾಗಿ ಜನಪದ ಕಲೆ ಸಮಸ್ತ ಜನರ ಜೀವಾಳವಾಗಿದೆ ಎಂದು ಜಾನಪದ ಅಕಾಡಮಿ ಸದಸ್ಯ ಡಾ.ಜೀವನಸಾಬ ವಾಲಿಕಾರ ಹೇಳಿದರು.

ತಾಲೂಕಿನ ಹುಣಸಿಹಾಳ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದ ಶರಣಬಸವೇಶ್ವರ ಜಾತ್ರಾ ಸಮಾರೂಪ ಸಮಾರಂಭದಲ್ಲಿ ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಇಂದಿನ ಯುವ ಜನತೆ ಕಲೆ. ಸಾಹಿತ್ಯಾ ಸಗೀತ ಮತ್ತು ನಾಡಿನ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕಿದೆ ಎಂದರು.

ಜಾನಪದ ಸಂಸ್ಕೃತಿಯು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ ಸಹಜೀವನ, ಸೋದರತ್ವ, ಸದ್ಭಾವನೆ ಬೆಳೆಸಿ, ಕೂಡಿ ಬಾಳುವ ಬೆಳೆಯುವ, ಕೂಡಿ ಉಣ್ಣುವ ಪರಂಪರೆಯನ್ನು ಜೀವಂತವಾಗಿಸಲು ಹೆಚ್ಚು ಸಹಕಾರಿಯಾಗಿದೆ ಎಂದು ಹೇಳಿದರು.

ಈ ಕಾಲದ ದ್ವಂದ್ವಾರ್ಥ, ಅಶ್ಲೀಲ ಗೀತೆಗಳನ್ನು ಜಾನಪದ ಹೆಸರಿನಲ್ಲಿ ಕೇಳುತ್ತಿರುವುದು ನಮ್ಮ ಪರಂಪರೆಗೆ ಮಾಡುವ ಅಪಚಾರ, ನಮ್ಮ ಜಾನಪದ ಪರಂಪರೆಯು ಬಹಳ ಶ್ರೀಮಂತವಾಗಿದ್ದು ಜನಪದರು ನಿರಕ್ಷರರಾಗಿದ್ದರು ಮೌಲ್ಯ, ಆದರ್ಶ, ವಿವೇಕಯುತ, ತತ್ವಧಾರಿತ ಜನಪದ ಸಾಹಿತ್ಯವನ್ನು ಕಟ್ಟಿಹಾಡಿ ಜನಪದ ಸಂಸ್ಕೃತಿಯನ್ನು ಸಮೃದ್ಧಗೊಳಿಸಿ, ಶ್ರೀಮಂತವಾಗಿಸಿದ್ದಾರೆ. ಆಧುನಿಕ ಜೀವನಶೈಲಿ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಇದಕ್ಕೆ ಪರಿಹಾರ ನಮ್ಮ ಗ್ರಾಮೀಣ ಜನಪದ ಆಹಾರ ಕ್ರಮಗಳ ಮರು ಅಳವಡಿಕೆ. ಗ್ರಾಮೀಣ ಸೊಗಡು ತನ್ನ ಮೂಲ ಸೆಲೆಯನ್ನು ಉಳಿಸಿಕೊಳ್ಳುವಲ್ಲಿ ಇಂಥಹ ಜಾತ್ರೆ, ಹಬ್ಬ, ಉತ್ಸವಗಳ ಮೂಲಕ ಸಾಧ್ಯ ಜಾನಪದ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಇಂದಿನ ಯುವ ಜನತೆಗೆ ಅರ್ಥೈಸುವಲ್ಲಿ ನಾವು ಸಫಲರಾಗಬೇಕಾಗಿದೆ ಎಂದರು.

ಕಲಾವಿದರಾದ ಮೆಹಬೂಬ್ ಕಿಲ್ಲೇದಾರ, ಮಾರುತಿ ಬಿನ್ನಾಳ, ರಾಮಚಂದ್ರಪ್ಪ ಉಪ್ಪಾರ್, ಎ.ಎಂ.ವಾಲಿಕಾರ್, ಸಂಜನ್ ಬೆಲ್ಲದ ಒಳಗೊಂಡ ಹವ್ಯಾಸಿ ಜಾನಪದ ಕಲಾತಂಡ ಮೂಲ ದಾಟಿಯ ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

ಬಸವೇಶ್ವರ ಜಾತ್ರಾ ಸಮಿತಿಯ ಪ್ರಮುಖರು, ಮಹಿಳೆಯರು, ಯುವಕರು ಹಾಗೂ ಗ್ರಾಮದ ಗುರು-ಹಿರಿಯರು ಇದ್ದರು.



ತತ್ವ ಪಾಲನೆಯಲ್ಲಿ ಜಂಗಮರ ಪಾತ್ರ ಪ್ರಮುಖ


ಲಿಂಗಸುಗೂರು: ವೀರಶೈವ- ಲಿಂಗಾಯತ ಧರ್ಮಕ್ಕೆ ತನ್ನದೇ ಆದ ಇತಿಹಾಸ ಹೊಂದಿದ್ದು, ಅದರಲ್ಲೂ ಕಾಯಕ ಮತ್ತು ದಾಸೋಹ ತತ್ವ ಪಾಲನೆಯಲ್ಲಿ ಜಂಗಮ ಮಠ-ಮಾನ್ಯಗಳು ಮತ್ತು ಜಂಗಮ ಸಮುದಾಯದ ಪಾತ್ರ ಪ್ರಮುಖವಾಗಿದೆ ಎಂದು ಪ್ರಾಧ್ಯಾಪಕ ಡಾ.ಸಿ.ಬಿ.ಚಿಲ್ಕಾರಾಗಿ ತಿಳಿಸಿದರು.

ಪಟ್ಟಣದ ವೀರಶೈವ ಜಂಗಮ ಸಮಾಜದ ಮುಖಂಡ ಮಹೇಶ ನಂದಿಕೋಲಮಠ ಅವರ ನಿವಾಸದಲ್ಲಿ ಜಂಗಮ ಸಮಾಜದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವೀರಶೈವ-ಲಿಂಗಾಯತ ಸಮುದಾಯಗಳಲ್ಲಿ ಜಂಗಮ ಸಮುದಾಯಕ್ಕೆ ಸಮಾಜದಲ್ಲಿ ಅತ್ಯಂತ ಗೌರವ ಸ್ಥಾನವಿದೆ. ಲಿಂಗಧಾರಣದಿಂದ ತಿಥಿಯ ಸಂಸ್ಕಾರದವರೆಗೂ ಜಂಗಮರ ಪಾತ್ರ ಬಹಳ ಮಹತ್ವದ್ದಾಗಿದೆ. ಜಂಗಮನ ಪಾದಕ್ಕೆ ನಮಸ್ಕರಿಸುವುದು ಪುರಾತನ ಕಾಲದಿಂದಲೂ ನಡೆದು ಬಂದ ಪದ್ಧತಿಯಾಗಿದೆ ಜಂಗಮನ ಪದ ಸ್ಪರ್ಶದಿಂದ ಭಕ್ತನ ಕಂಟಕಗಳು ದೂರವಾಗುತ್ತವೆ ಎಂಬ ನಂಬಿಕೆಯಿದೆ.

ಜಂಗಮ ಮಠ-ಮಾನ್ಯಗಳು ಜಾತಿ ಬೇಧವಿಲ್ಲದೆ ಶಿಕ್ಷಣ ವಸತಿ ಪ್ರಸಾದ ನೀಡುತ್ತ ಎಲ್ಲ ಜಾತಿ ಜನಾಂಗಳ ಮಕ್ಕಳ ಉಜ್ವಲ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಕಡು ಬಡತನದ ಕೃಷಿಕ ಕುಟುಂಬವಾಗಿದ್ದ ನಮ್ಮ ಕುಟುಂಬದಲ್ಲಿ ಶಿಕ್ಷಣ ಕಲಿಯುವುದು ತುಂಬಾ ಕಷ್ಟವಾಗಿದ್ದ ಕಾಲದಲ್ಲಿ ಜಂಗಮ ಮಠಾಧೀಶರು ತಮ್ಮ ಮಠದಲ್ಲಿರಿಸಿಕೊಂಡು ಶಿಕ್ಷಣ ವಸತಿ ಪ್ರಸಾದ ನೀಡಿ ನನ್ನನ್ನು ಶಿಕ್ಷಣವಂತನನ್ನಾಗಿ ಮಾಡಿದರು ಎಂದು ಹೇಳಿದರು.

ಜಂಗಮ ಸಮಾಜದ ಮುಖಂಡ ಮಹೇಶ ನಂದಿಕೋಲಮಠ ಮಾತನಾಡಿ, ನೂತನ ತಾಲೂಕು ಕೇಂದ್ರವಾಗಿರುವ ಕಾರಟಗಿ ನಗರದಲ್ಲಿ ಇತ್ತಿಚಿಗೆ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನೇಮಕಗೊಂಡಿರುವ ಡಾ.ಸಿ.ಬಿ.ಚಿಲ್ಕಾರಾಗಿ ಅವರು ತಾಲೂಕು ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಜಂಗಮ ಸಮಾಜದ ಅಧ್ಯಕ್ಷ ಪ್ರಭುಸ್ವಾಮಿ ಅತ್ತನೂರು, ಪ್ರಧಾನ ಕಾರ್ಯದರ್ಶಿ ವೀರಭದ್ರಯ್ಯ ಹಿರೇಮಠ, ಖಜಾಂಚಿ ಶರಣಯ್ಯ ದಾಸೋಹಮಠ, ಮುಖಂಡರಾದ ಮಹಾದೇವಯ್ಯ ಗೌಡೂರು, ಬಸಯ್ಯ ನಾಲತ್ವಾಡ, ಎಂ.ಜಿ.ಹಿರೇಮಠ, ಜಗದೀಶ ಸಾಲಿಮಠ, ಜಂಬಯ್ಯ ಹಿರೇಮಠ, ಚಂದ್ರಶೇಖರಯ್ಯ ಶಾಸ್ತ್ರಿಮಠ, ಅಮರೇಶಸ್ವಾಮಿ ಬಲ್ಲಟಗಿ, ಮಹಾಂತೇಶ ಗೌಡರ, ಅಮರೇಶ ಗಂಭೀರಮಠ, ಜಗದೀಶ ಹಿರೇಮಠ, ಪರ್ವತಯ್ಯ, ಶ್ರೀಕಾಂತ ಮಠ, ವೀರೇಶ ಜಗವತಿಮಠ, ವೀರಭದ್ರಯ್ಯ ವಸ್ತ್ರದ್, ಷಣ್ಮುಖಯ್ಯ, ಶೇಖರಯ್ಯ ಹಿರೇಮಠ ಅಮರೇಶ ಕಳಸದಗುಡಿ, ಗುರುಬಾಯಿ ಹಿರೇಮಠ, ಮಂಜುಳಾ ನಂದಿಕೋಲಮಠ ಉಪಸ್ಥಿತರಿದ್ದರು.



ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ

ಕನಕಗಿರಿ: ಡಾ.ಬಾಬು ಜಗಜೀವನರಾಮ್ ಹಾಗೂ ಡಾ.ಅಂಬೇಡ್ಕರ್ ಅವರ ಜಯಂತಿಯನ್ನು ಪಟ್ಟಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ತಹಶೀಲ್ದಾರ್ ವಿಶ್ವನಾಥ ಮುರುಡಿ ಹೇಳಿದರು.

ತಾಪಂ ಸಭಾಂಗಣದಲ್ಲಿ ಸೋಮವಾರ ತಾಲೂಕು ಆಡಳಿತ, ತಾಪಂ, ಪಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಗಂಗಾವತಿ ಸಹಯೋಗದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕೃಷಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಿ.ಕನಕಪ್ಪ ಮಾತನಾಡಿ, ಡಾ.ಬಾಬು ಜಗಜೀವನರಾಂ ಅವರ ಭವನಕ್ಕೆ ನಾಮಫಲಕ ಹಾಕುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಅವರ ಭಾವಚಿತ್ರ ಸಹ ಹಾಕಿಲ್ಲ ಜಯಂತಿ ಬಂದರೆ ಮಾತ್ರ ಅವರು ನೆನಪು ಆಗುತ್ತಾರೆ ಎಂದು ಹೇಳಿದರು.

ನಂತರ ಉಮೇಶ ಮ್ಯಾಗಡೆ ಮತ್ತು ಪಾಮಣ್ಣ ಅರಳಿಗನೂರು ಮಾತನಾಡಿ ಮಹಾನೀಯರ ಜಯಂತಿಗಳನ್ನುತಳಿರು ತೋರಣ ಹಾಗೂ ಹೂವಿನ ಹಾರಕ್ಕೆ ಮಾತ್ರ ಸೀಮಿತಗೊಳಿಸದೆ ಅರ್ಥಪೂರ್ಣವಾಗಿ ಆಚರಿಸಬೇಕು. ಈ ನಾಯಕರ ಜೀವನ ಚರಿತ್ರ ಎಲ್ಲರಿಗೂ ಗೊತ್ತಾಗುವಂತೆ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಅಂಬೇಡ್ಕರ್ ಹಾಗೂ ಜಗಜೀವನರಾಂ ಅವರು ಎಲ್ಲ ಸಮುದಾಯಕ್ಕೆ ಬೇಕಾದವರು, ಅವರ ವಿಚಾರಧಾರೆಗಳನ್ನು ತಿಳಿಸಲು ಉಪನ್ಯಾಸ ಆಯೋಜಿಸಬೇಕೆಂದರು.



ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಹುಲಗಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಯ್ಯ, ತಾಪಂ ಇಒ ಕೆ.ರಾಜಶೇಖರ್, ಪಪಂ ಮುಖ್ಯ ಅಧಿಕಾರಿ ಲಕ್ಷ್ಮಣ ಕಟ್ಟಿಮನಿ, ಪಪಂ ಉಪಾಧ್ಯಕ್ಷ ಕಂಠಿರಂಗ ನಾಯಕ, ಪಪಂ ಸದಸ್ಯ ಹನುಮಂತ ಬಸರಿಗಿಡದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪ್ರಗತಿಪರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸಭೆಯಲ್ಲಿ ಭಾಗವಯಿಸಿದ್ದರು.

ಮಹಾವೀರ ಜಯಂತಿ ಆಚರಿಸಿದ ಬಲ್ದೋಟ ವಿರೋಧಿ ವೇದಿಕೆ

ಕೊಪ್ಪಳ: ಅಹಿಂಸೆ ಪರಮಧರ್ಮ ಎಂದ ಜೈನ ಸಮುದಾಯದ ಬಲ್ದೋಟ ಮನುಷ್ಯರ ಕೊಲೆ ಮಾಡಲು ಹೊರಟಿರುವದು ಅತ್ಯಂತ ಖೇದಕರ ಮತ್ತು ವಿಷಾಧದ ಸಂಗತಿ ಎಂದು ನಿವೃತ್ತ ಪ್ರಾಂಶುಪಾಲರಾದ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

ಅವರು ನಗರಸಭೆ ಮುಂಭಾಗದಲ್ಲಿ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ಮೂಲಕ ನಡೆಸುತ್ತಿರುವ ಬಲ್ದೋಟ ಇತರೆ ಕಾರ್ಖಾನೆಗಳ ಸ್ಥಾಪನೆ ಮತ್ತು ವಿಸ್ತರಣಾ ವಿರೋಧಿಸಿ ನಡೆಸಿರುವ ಅನಿರ್ದಿಷ್ಟ ಧರಣಿಯ 151ನೇ ದಿನದ ಹೋರಾಟದ ವೇದಿಕೆಯಲ್ಲಿ ಜೈನ ತೀರ್ಥಂಕರ ಮಹಾವೀರರ ಜಯಂತಿ ಆಚರಿಸಿ ಮಾತನಾಡಿದರು.

ಬಲ್ದೋಟ ಜೈನ ಸಮುದಾಯಕ್ಕೆ ಸೇರಿದವರಾಗಿದ್ದಾರೆ, ಅವರು ಇಲ್ಲಿನ ಲಕ್ಷಾಂತರ ಜನರ ಬದುಕಿಗೆ ಕೊಳ್ಳಿ ಇಡಲು ಹೊರಟಿರುವದು ನೋವಿನ ಸಂಗತಿ. ಜಗತ್ತಿನ ಇತಿಹಾಸದಲ್ಲಿ ಸತ್ಯ, ಅಹಿಂಸೆ, ಸಂಯಮ, ತ್ಯಾಗವನ್ನು ಮನುಷ್ಯ ಅಳವಡಿಸಿಕೊಳ್ಳಬೇಕು ಎಂದು ಹೇಳಿದವರು. ಆದರೆ ನಾವು ಐದು ತಿಂಗಳಿನಿಂದ ನಿರಂತರ ಧರಣಿ ಮಾಡುತ್ತಿರುವದನ್ನು ನೋಡಿಯೂ ಆ ರೀತಿ ನಡೆದುಕೊಳ್ಳುತ್ತಿರುವದು ಅತ್ಯಂತ ಸೋಜಿಗದ ಸಂಗತಿ. ಭಾರತದ ನಾಗರಿಕತೆ ಒಂದೇ ಸಮನೆ ಬಂದಿಲ್ಲ, ಅದು ಸುಧೀರ್ಘ ಇತಿಹಾಸ. ಎಲ್ಲರನ್ನು ಹತ್ತಿರ ತರುವ ಕೆಲಸ ಮಾಡಿದ ತೀರ್ಥಂಕರರು ಬೇಗ ಬುದ್ಧಿ ಕೊಡಲಿ ಎಂದು ಕರೆ ನೀಡಿದರು.



ಕಾನೂನು ಅರಿವು, ನೆರವು ಕಾರ್ಯಕ್ರಮ



ಮಾನ್ವಿ: ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ನ್ಯಾಯವಾದಿ ಶ್ರೀದೇವಿ ಬಳಿಗಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಂವಿಧಾನದಲ್ಲಿ ಕೌಟುಂಬಿಕ ದೌರ್ಜನ್ಯ ಕಾಯ್ದೆಗಳು, ವರದಕ್ಷಿಣೆ ಕಾಯ್ದೆಗಳು, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ಸೇರಿದಂತೆ ಮಹಿಳೆಯರ ರಕ್ಷಣೆಗಾಗಿ ಅನೇಕ ಹಕ್ಕು ಮತ್ತು ಕಾನೂನುಗಳನ್ನು ನೀಡಲಾಗಿದ್ದರೂ ಕೂಡ ಮಹಿಳೆಯರು ಜಾಗೃತರಾಗದೆ ಇರುವುದರಿಂದ ಮಹಿಳಾ ಕಾನೂನುಗಳ ದುರ್ಬಳಕೆಯನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.

ಕಾಲೇಜಿನ ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ, ಮಕ್ಕಳ ತಜ್ಞ ವೈದ್ಯರಾದ ಡಾ.ಕಾವ್ಯ, ಮಂಜುಳಾ ಕಿಶೋರ್‌ಕುಮಾರ, ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾದ ಕು. ಡಾ.ಹೈಂದವಿ ಮಧುಸೂದನ್ ಗುಪ್ತಾಜೀ, ಶಾರದಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಉಮಾಮಹೇಶ್ವರಿ ಮದುಸೂಧನ ಗುಪ್ತಾಜಿ, ಕಾಲೇಜಿನ ವಿದ್ಯಾರ್ಥಿ ಸಂಘದ ನಾಯಕಿ ವರ್ಷಿತಾ, ಪ್ರಶಿಕ್ಷಣಾರ್ಥಿಗಳಾದ ಪ್ರಿಯದರ್ಶಿನಿ ಹಾಗೂ ಬಂಡೆಮ್ಮ, ಲಲಿತಾ, ವನಿತಾ ಅಂಬಿಕಾ ಇದ್ದರು.

ಭರತ್ ಕಂದಕೂರಗೆ ಪ್ರಶಸ್ತಿ

ಕೊಪ್ಪಳ: ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಆಯೋಜಿಸಿದ್ದ 'ಕರ್ನಾಟಕದ ಜಾತ್ರೆ ಮತ್ತು ಉತ್ಸವಗಳು' ಕುರಿತ ಛಾಯಾಚಿತ್ರ ಸ್ಪರ್ಧೆಯಲ್ಲಿ ಕೊಪ್ಪಳದ ಛಾಯಾಗ್ರಹಕ ಭರತ್ ಕಂದಕೂರ ಅವರಿಗೆ ಬಹುಮಾನ ಲಭಿಸಿದೆ.

ದೊಡ್ಡಬಳ್ಳಾಪುರದ ಸುಧೀರ್ ಭಜನೆ ಹಟ್ಟಿ ಅವರ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಚಿತ್ರ (ಪ್ರಥಮ ಸ್ಥಾನ), ದೊಡ್ಡಬಳ್ಳಾಪುರದ ಬಿ.ಎನ್.ಉಮಾಶಂಕರ್ ಅವರ ಗೋಕಾಕದ ಭಂಡಾರ ಜಾತ್ರೆ ಚಿತ್ರ (ದ್ವಿತೀಯ ಸ್ಥಾನ), ಕೊಪ್ಪಳ ಛಾಯಾಗ್ರಾಹಕ ಭರತ್ ಕಂದಕೂರ ಅವರ ಅಂಜನಾದ್ರಿ ಬೆಟ್ಟದ ಹನುಮ ಮಾಲೆ ಚಿತ್ರ (ತೃತೀಯ ಸ್ಥಾನ) ಪಡೆದಿವೆ.ಮುಂದಿನ ವರ್ಷದ ಛಾಯಾಚಿತ್ರ ಸ್ಪರ್ಧೆಗೆ 'ಕನಾಟಕದ ಹಬ್ಬ ಮತ್ತು ಆಚರಣೆಗಳು' ಎನ್ನುವ ವಿಷಯ ಆಯ್ಕೆ ಮಾಡಲಾಗಿದ್ದು, ಛಾಯಾಗ್ರಾಹಕರು ಭಾಗಿಯಾಗಬಹುದು ಎಂದು ಕ್ಲಬ್ ಅಧ್ಯಕ್ಷ ಟಿ.ಕೆಂಪಣ್ಣ ತಿಳಿಸಿದ್ದಾರೆ. ಪ್ರಶಸ್ತಿಯು ನಗದು ಹಾಗೂ ಪುರಸ್ಕಾರ ಒಳಗೊಂಡಿದ್ದು ಏಪ್ರಿಲ್ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.



ಹನಮಜ್ಯೋತಿ ರಥಯಾತ್ರೆಗೆ ಸ್ವಾಗತ



ಕುಷ್ಟಗಿ: ಪಟ್ಟಣದ ರಾಷ್ಟ್ರಿಯ ಹೆದ್ದಾರಿ-50ರ ಟೋಲ್ ಪ್ಲಾಜ್ (ವಣಗೇರಿ) ಹತ್ತಿರ ಶ್ರೀರಾಮ ಹನಮಜ್ಯೋತಿ ರಥಯಾತ್ರೆಯನ್ನು ಸೋಮವಾರ ಬಿಜೆಪಿ ಮುಖಂಡರು ಸ್ವಾಗತಿಸಿಕೊಂಡರು.

ಅಯೋಧ್ಯದಿಂದ ಹೊರಟ ಶ್ರೀರಾಮ ಹನಮಜ್ಯೋತಿ ರಥಯಾತ್ರೆಯು ಪಟ್ಟಣದ ಮೂಲಕ ಪುತ್ತೂರಿನ ಹನಮಗಿರಿಗೆ ಹೊರಟಿದ್ದು, ಪಟ್ಟಣದ ಬಿಜೆಪಿ ಮುಖಂಡರು ರಾಷ್ಟ್ರೀಯ ಹೆದ್ದಾರಿ-50ರ ಟೋಲ್ ಪ್ಲಾಜ್ (ವಣಗೇರಿ) ಹತ್ತಿರ ಶ್ರೀರಾಮ ಹನಮಜ್ಯೋತಿ ರಥಯಾತ್ರೆಯನ್ನು ಭವ್ಯವಾಗಿ ಸ್ವಾಗತಿಸಿಕೊಂಡರು. ನಂತರ ಅಂಜನಾದ್ರಿ ಬಿಜೆಪಿ ಕಚೇರಿಯಲ್ಲಿ ಅವರಿಗೆ ಊಟೋಪಚಾರ ಮಾಡಿಸಿ ನಂತರ ಬಿಳ್ಕೊಟ್ಟರು.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚ ಘಟಕದ ಅಧ್ಯಕ್ಷ ಉಮೇಶ ಯಾದವ್, ಜಿಪಂ ಮಾಜಿ ಸದಸ್ಯ ಕೆ.ಮಹೇಶ, ಸಂಗನಗೌಡ ಜೈನರ್, ಪ್ರಭು ಶಂಕರಗೌಡ ಪಾಟೀಲ್, ಸುಖಮುನಿಸ್ವಾಮಿ ಗುರುವೀನ್, ಬಸವರಾಜ ಗುಡದೂರು ಶೇಖರ ಅಡವಿಭಾವಿ ಇತರರಿದ್ದರು.

ಶಾಸಕ ಬಸವರಾಜ ರಾಯರೆಡ್ಡಿಗೆ ಸನ್ಮಾನ

ಕುಕನೂರ: ಗ್ರಾಮೀಣ ಪ್ರದೇಶದಲ್ಲಿ ಇನ್ನಷ್ಟು ಅಭಿವೃದ್ಧಿಯನ್ನು ಮುಂದಿನ ದಿನಮಾನಗಳಲ್ಲಿ ಮಾಡಲಾಗುವುದು ಎಂದು ಸಿಎಂ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ತಾಲೂಕಿನ ಶಿರೂರು ಗ್ರಾಮದಲ್ಲಿ ನಡೆದ ಪ್ರೌಢಶಾಲೆಯನ್ನು ಉನ್ನತಿಕರಿಸಿ ಕಾಲೇಜ ಮುಂಜೂರು ಮಾಡಿದ ನಿಮಿತ್ತ ಗ್ರಾಮಸ್ಥರು ಹಮ್ಮಿಕೊಂಡ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮುಂದಿನ ದಿನಮಾನಗಳಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಈಗಾಗಲೇ ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ. ಇನ್ನೂ ಅಭಿವೃದ್ಧಿ ವಿಚಾರಗಳು ಏನೇ ಇದ್ದರು ಪಡೆಯಲು ಮುಂದಾಗಬೇಕು ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಜಾತಿ ಅಧ್ಯಕ್ಷ ಈಶಪ್ಪ ದೊಡ್ಡಮನಿ, ಯಂಕಣ್ಣ ಯರಾಶಿ, ಹನುಮಂತಗೌಡ ಚಂಡೂರ, ಪರ್ವತಗೌಡ್ರು ಸೋಮನಗೌಡ್ರು ಶಂಕರ್ ಗೌಡ್ರ ಹಾಳ್ಕೇರಿ, ಸುಭಾಸ್ ರೆಡ್ಡಿ ಮಾದಿನೂರು, ವಿರುಪಾಕ್ಷಪ್ಪ ಹಿರೇಗೌಡ್ರು, ಹನುಮಂತ ಅಕ್ಕಶಾಲಿಗ, ರಮೇಶ್ ವಾಲ್ಮೀಕಿ, ವೀರೇಶ್ ಹುಬ್ಬಳ್ಳಿ, ಈರಪ್ಪ ಕಡೆಗತ್ತಿ, ಶ್ರೀಧರ್ ಪಂಚಾಳ್, ಈರಪ್ಪ ನಡುವಿನಮನಿ, ಈರಪ್ಪ ದೊಡ್ಮನ, ವೀರನಗೌಡರ್ ಸೋಮನಗೌಡ್ರು, ಈರಪ್ಪ ಜನತಾಮನಿ, ಮಂಜಪ್ಪ ಕಡೆಮನಿ ಇತರರಿದ್ದರು.





ಹೂವಿನಹಡಗಲಿ: ಪಟ್ಟಣದಲ್ಲಿ ಇತ್ತೀಚೆಗೆ ಜಿಬಿಆರ್ ಪದವಿ ಮಹಾವಿದ್ಯಾಲಯದಿಂದ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಜಿಬಿಆರ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿ.ಮೋಹನ ರೆಡ್ಡಿ ಮಾತನಾಡಿದರು. ಕಾಲೇಜು ಆಡಳಿತ ಮಂಡಳಿಯ ಸದಸ್ಯರಾದ ಕೆ.ಎಂ.ಉದಾಸಿ, ಮಲ್ಲಿಕಾರ್ಜುನ ಎಂ., ಎನ್‌ಎಸ್‌ಎಸ್ ಅಧಿಕಾರಿಗಳಾದ ಮಾಬು ಸಾಬ್ ಕೆ., ಡಾ.ಶರಣಪ್ಪ, ಪ್ರಿಯಾಂಕಾ, ದೈಹಿಕ ನಿರ್ದೇಶಕ ಬಡೇಸಾಬನಾಯಕ, ಉಪನ್ಯಾಸಕರಾದ ಸಂಜಯ್ ಇದ್ದರು.

ಎನ್‌ಎಸ್‌ಎಸ್‌ನಿಂದ ಕೌಶಲ್ಯ ವೃದ್ಧಿ

ಹೂವಿನಹಡಗಲಿ: ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಜೀವನಕೌಶಲ್ಯ, ಸಾಮಾಜಿಕ ಜವಾಬ್ದಾರಿ, ಶಿಸ್ತು ಹಾಗೂ ಸೇವಾಮನೋಭಾವವನ್ನು ಮೂಡಿಸುತ್ತದೆ ಎಂದು ಜಿಬಿಆರ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿ.ಮೋಹನ ರೆಡ್ಡಿ ಹೇಳಿದರು.ಪಟ್ಟಣದಲ್ಲಿ ಇತ್ತೀಚೆಗೆ ಜಿಬಿಆರ್ ಪದವಿ ಮಹಾವಿದ್ಯಾಲಯದಿಂದ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ವ್ಯಕ್ತಿತ್ವ ರೂಪಿಸಿಕೊಳ್ಳುವುದರ ಜತೆಗೆ ಬದಲಾವಣೆ ಕಾಣಲು ಶಿಬಿರ ಪೂರಕವಾಗಿವೆ. ಗ್ರಾಮೀಣ ಭಾಗದ ಜನ-ಜೀವನ, ಭಾವೈಕ್ಯ, ಸಂಸ್ಕಾರ, ಸಂಸ್ಕೃತಿಯನ್ನು ಕಾಣಬಹುದು. ಜಾತಿ, ಧರ್ಮ, ಭಾಷೆಯ ಸಂಕೋಲೆಗಳಿಂದ ದೂರವಿರಲು ಗ್ರಾಮೀಣ ಜನ ಜೀವನ ಉತ್ತಮ ನೀತಿ ಪಾಠವಾಗಿದೆ ಎಂದರು. ಪ್ರಾಚಾರ್ಯ ಎಸ್.ಎಸ್.ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜತೆಗೆ ಕುಟುಂಬ, ಸಮಾಜ ಹಾಗೂ ದೇಶಕ್ಕೆ ನೀಡುವ ಸೇವೆಯು ಅಪಾರವಾಗಿದೆ. ಕಳೆದ ಒಂದು ವಾರದಿಂದ ವಿದ್ಯಾರ್ಥಿಗಳು ಎಂ.ಪಿ.ಪ್ರಕಾಶ ನಗರ, ಬಸ್‌ನಿಲ್ದಾಣ, ತಾಲೂಕು ಕಚೇರಿ, ತಾಲೂಕು ಕ್ರೀಡಾಂಗಣ, ನ್ಯಾಯಾಲಯ ಆವರಣ ಸೇರಿದಂತೆ ಇತರೆ ಭಾಗಗಳನ್ನು ಸ್ವಚ್ಛಮಾಡುವ ಕಾರ್ಯ ಮಾಡಿದ್ದಾರೆ. ನಮ್ಮ ಮನೆಗಳಲ್ಲಿ ನಾವು ಕೆಲಸ ಮಾಡದಂತಹ ಮನೋಭಾವನೆಯನ್ನು ಹೊಂದಿರುತ್ತೇವೆ. ಸೇವೆ ಮಾಡುವ ಮನೋಭಾವ ಎಲ್ಲವನ್ನು ಕಲಿಸಿಕೊಡುತ್ತದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ವೈ.ಚಂದ್ರಬಾಬು ಹಾಗೂ ಇತರರು ಮಾತನಾಡಿದರು. ಅನ್ನದಾನದಪ್ಪ, ಕುಸುಮ, ಶ್ವೇತಾ, ವೀಣಾ, ಆಸ್ಮಾ, ಶೇಕ್ಷಾವಲಿ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಇತರರಿದ್ದರು.



ಕರೂರು: ಸಮೀಪದ ಹಾಗಲೂರಿನಲ್ಲಿ ಸುಮಾರು 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ.ನಾಗರಾಜ ಅವರು ಭೂಮಿಪೂಜೆ ನೆರವೇರಿಸಿದರು. ಗ್ರಾಮ ಪಂಚಾಯತಿ ಸದಸ್ಯರಾದ ಬಂಡೆ ದುರ್ಗಪ್ಪ, ಆಗಲೂರಿನ ಕಾಂಗ್ರೆಸ್ ಮುಖಂಡರಾದ ಬಿ.ಕೃಷ್ಣಪ್ಪ ಪೂಜಾರಿ, ಸುರೇಶ ದುರ್ಗಾ, ಶೇಷಪ್ಪ ದನ್ನೇರು, ಗಾದಿಲಿಂಗಪ್ಪ ಮತ್ತಿತರರಿದ್ದರು.

ಕಿರುಸುದ್ದಿ



ವಿಜಯನಗರ: ಹೊಸಪೇಟೆ ಸಮೀಪದ ವಿಶ್ವವಿಖ್ಯಾತ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿರುವ ತಾಯಿ, ಪಂಪಾದೇವಿಗೆ ಭಕ್ತರೊಬ್ಬರು ಸಲ್ಲಿಸಿರುವ 6 ಕೆಜಿ ತೂಕದ ನೂತನ ಬೆಳ್ಳಿ ಪ್ರಭಾವಳಿಯಿಂದ ಭಾನುವಾರ ದೇವಿಗೆ ಅಲಂಕರಿಸಲಾಗಿತ್ತು.

ಏ.1,2ರಂದು ಪ್ರಶಿಕ್ಷಣ ಮಹಾಭಿಯಾನ

ಕೊಟ್ಟೂರು: ಹಗರಿಬೊಮ್ಮನಹಳ್ಳಿ ಮಂಡಲ ಮಟ್ಟದ ಕಾರ್ಯಾಗಾರವನ್ನು ಏ.1, 2ರಂದು ಕೊಟ್ಟೂರಿನ ಉಜ್ಜಿನಿ ರಸ್ತೆಯಲ್ಲಿರುವ ಮರುಳಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಗರ ಘಟಕದ ಬಿಜೆಪಿ ಅಧ್ಯಕ್ಷ ಅಂಗಡಿ ಪಂಪಾಪತಿ ತಿಳಿಸಿದರು. ಎರಡು ದಿನಗಳ ಕಾಲ ನಡೆಯುವ ಈ ಮಂಡಲ ಮಟ್ಟದ ಪ್ರಶಿಕ್ಷಣ ಕಾರ್ಯಾಗಾರದಲ್ಲಿ



ಹಗರಿಬೊಮ್ಮನಹಳ್ಳಿ ಮಂಡಲದ ಹಾಗೂ ವಿವಿಧ ಮಹಾ ಶಕ್ತಿ ಕೇಂದ್ರಗಳ ಪಕ್ಷದ ಪದಾಧಿಕಾರಿಗಳಿಗೆ ಪಕ್ಷದ ತತ್ವ ಸಿದ್ಧಾಂತ ಮತ್ತು ಪಕ್ಷದ ಮುಂದಿರುವ ಸವಾಲುಗಳು ಅದಕ್ಕೆ ನಮ್ಮ ಕಾರ್ಯ ಚಟುವಟಿಕೆ ಕುರಿತಂತೆ ಪಕ್ಷದ ಜಿಲ್ಲಾ ಮತ್ತು ರಾಜ್ಯ ಮಟ್ಟದ ಹಿರಿಯ ನಾಯಕರಿಂದ ಭೋಧನಾ ತರಬೇತಿ ಇರುತ್ತದೆ. ಮುಂಬರುವ ಜಿಪಂ, ತಾಪಂ, ಪಪಂ, ಗ್ರಾಪಂ ಚುನಾವಣೆಗಳಿಗಾಗಿಯಾವ ರೀತಿಯಾಗಿ ಸಿದ್ಧಗೊಳ್ಳಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗುವುದು. ಬಳ್ಳಾರಿ ವಿಭಾಗದ ಸಹ ಪ್ರಭಾರಿಯಾದ ಚನ್ನಬಸವನಗೌಡ ಪಾಟೀಲ, ಬಿಜೆಪಿ ಜಿಲ್ಲಾ ಅಧ್ಯಕ್ಷ ಸಂಜೀವ್ ರೆಡ್ಡಿ, ಮಂಡಲ ಅಧ್ಯಕ್ಷ ಪ್ರಕಾಶ್ ಬೆಣಕಲ್, ರಾಜ್ಯಮಟ್ಟದ ಮತ್ತು ಜಿಲ್ಲಾಮಟ್ಟದ ಅನೇಕ ಪದಾಧಿಕಾರಿಗಳು, ಸ್ಥಳೀಯ ನಾಯಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿಲಿದ್ದಾರೆ ಎಂದು ತಿಳಿಸಿದ್ದಾರೆ.

ಎಎಸ್ಪಿ ರವಿಕುಮಾರ್ ವರ್ಗಾವಣೆ

ಬಳ್ಳಾರಿ: ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಕೆ. ಪಿ.ರವಿಕುಮಾರ್ ಅವರನ್ನು ಬೆಂಗಳೂರಿನ ಗುಪ್ತಚರ ವಾರ್ತೆ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸರ್ಕಾರ ಶುಕ್ರವಾರ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ-2 ಆಗಿದ್ದ ನವೀನ್ ಕುಮಾರ್ ಅವರ ವರ್ಗಾವಣೆಗೆ ತಡೆ



ನೀಡಲಾಗಿದ್ದು, ರವಿಕುಮಾರ್ ಅವರಿಂದ ತೆರವಾಗಿರುವ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ -1 ಹುದ್ದೆಯನ್ನು ನೀಡಲಾಗಿದೆ. ನವೀನ್ ಕುಮಾರ್ ಅವರನ್ನು ಮಂಡ್ಯ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ -1 ಹುದ್ದೆಗೆ ವರ್ಗಾಯಿಸಲಾಗಿತ್ತು ಎಂಬುದನ್ನು ಪೊಲೀಸ್ ಇಲಾಖೆಯ ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

ಮೌಂಟ್ ಕಾರ್ಮೆಲ್ ಶಾಲೆ: ಗ್ರ್ಯಾಜುವೇಶನ್ ಡೇ



ಹೂವಿನಹಡಗಲಿ: ಪಟ್ಟಣದ ಮೌಂಟ್ ಕಾರ್ಮೆಲ್ ಸಿಬಿಎಸ್‌ಇ ಶಾಲೆಯಲ್ಲಿ ಗ್ರ್ಯಾಜುವೇಶನ್ ಡೇ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲ ಫಾದರ್ ವಿಕ್ಟರ್ ವಿಜಯ ಪೈಸ್ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು, ಪರಿಶ್ರಮ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಉನ್ನತ ಸಾಧನೆ ಮಾಡಬೇಕು. ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ ಎಂದರು. ವಿದ್ಯಾರ್ಥಿಗಳು ಗ್ರ್ಯಾಜುವೇಶನ್ ಉಡುಪಿನಲ್ಲಿ ಭಾಗವಹಿಸಿ, ವಿಶೇಷ ಪ್ರಮಾಣಪತ್ರಗಳನ್ನು ಸ್ವೀಕರಿಸಿದರು. ಶಾಲೆಯ ಶಿಕ್ಷಕರು, ಸಿಬ್ಬಂದಿ, ಪೋಷಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಶಿಕ್ಷಣ ಮಹಾಅಭಿಯಾನ ಸಮಾರೋಪ | ಜನಾರ್ದನ ರೆಡ್ಡಿ ಹೇಳಿಕೆ

ಬಿಜೆಪಿ ಸರ್ಕಾರದ ಸಾಧನೆ ತಿಳಿಸಿ

ಬಳ್ಳಾರಿ: ಕಾರ್ಯಕರ್ತರೇ ಪಕ್ಷದ ಜೀವಾಳ, ಪ್ರತಿಯೊಬ್ಬರೂ ಮನೆ ಮನೆಗೆ ತೆರಳಿ ಬಿಜೆಪಿ ಸರ್ಕಾರದ ಸಾಧನೆಗಳನ್ನು ಹಾಗೂ ಅವಧಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕೆಲಸಗಳನ್ನು ತಲುಪಿಸಲು ಮುಂದಾಗಬೇಕು ಎಂದು ಮಾಜಿ ಸಚಿವ, ಗಂಗಾವತಿ ಶಾಸಕ ಗಾಲಿ ಜನಾರ್ದನ್ ರೆಡ್ಡಿ ಅವರು ಹೇಳಿದರು.

ಕುರುಗೋಡು ತಾಲೂಕಿನ ದಮ್ಮೂರು ಗ್ರಾಮದ ಶ್ರೀಸದ್ಗುರು ವೆಂಕಾವಧೂತ ಶ್ರೀಮಠದಲ್ಲಿ ಎರಡು ದಿನಗಳ ಕಾಲ ಆಯೋಜಿಸಿದ್ದ ಬಳ್ಳಾರಿ ನಗರ ಹಾಗೂ ಕಂಪ್ಲಿ ಮಂಡಲಗಳ ಪಂ.ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಅಭಿಯಾನ-2026 ಸಮಾರೋಪ ಸಮಾರಂಭದಲ್ಲಿ ಸೋಮವಾರ ಮಾತನಾಡಿದರು.

ಪಕ್ಷದ ಸಂಘಟನೆ ಬಹಳ ಮುಖ್ಯ, ನಮ್ಮ ಕೇಂದ್ರ ಸರ್ಕಾರದ ಹಾಗೂ ಈ ಹಿಂದಿನ ನಮ್ಮ ಸರ್ಕಾರದ ಅವಧಿಯ ಜನಪ್ರಿಯ ಕಾರ್ಯಕ್ರಮಗಳನ್ನು ಕಾರ್ಯಕರ್ತರು ಮನೆ ಮನೆಗೆ ತಲುಪಿಸಲು ಮುಂದಾಗಬೇಕು. ನಮ್ಮ ನಮ್ಮಲ್ಲಿ ಯಾವುದೇ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ ಎಲ್ಲವನ್ನೂ ಬದಿಗೊತ್ತಿ, ಪಕ್ಷವನ್ನು ಇನ್ನಷ್ಟು ತಳಮಟ್ಟದಿಂದ ಗಟ್ಟಿಗೊಳಿಸಲು ಶ್ರಮಿಸಬೇಕು, ಸಂಘಟನೆಯೇ ಶಕ್ತಿ, ಸಂಘಟನೆಯ ಬಲವರ್ಧನೆಯಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಬೂತ್ ಮಟ್ಟದಲ್ಲಿ ನಮ್ಮ ಕಾರ್ಯಕರ್ತರು ಸಕ್ರಿಯವಾಗಿ ಶ್ರಮಿಸಬೇಕು. ಪ್ರತಿ ಮನೆ ಮನೆಗೂ ಭೇಟಿ ನೀಡಿ ಬಿಜೆಪಿ ಸರ್ಕಾರದ ಸಾಧನೆಗಳನ್ನು ಹಾಗೂ ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳನ್ನು ತಲುಪಿಸಬೇಕು ಎಂದರು.



> ಪಕ್ಷ ಸಂಘಟನೆಗಾಗಿ ಪ್ರತಿಯೊಬ್ಬರು ಶ್ರಮಿಸಬೇಕು. ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಜನಪರ ಕಾರ್ಯಕ್ರಮಗಳು ಹಾಗೂ ನಮ್ಮ ಹಿಂದಿನ ಬಿಜೆಪಿ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಕಾರ್ಯಕರ್ತರು ಮನೆ ಮನೆಗೆ ತಲುಪಿಸುವ ಮೂಲಕ ಶ್ರಮಿಸಬೇಕು.
>
> ■ ಗಾಲಿ ಸೋಮಶೇಖರ್ ರೆಡ್ಡಿ, ಬಳ್ಳಾರಿ ನಗರ ಕ್ಷೇತ್ರದ ಮಾಜಿ ಶಾಸಕ

ತೆಲಂಗಾಣ ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ದಕ್ಷಿಣ ಭಾರತ ಪ್ರಶಿಕ್ಷಣ ವರ್ಗದ ಸಹ ಸಂಚಾಲಕ ಕಾಸಂ ವೆಂಕಟೇಶ್ವರಲು ಮಾತನಾಡಿ, ಪಕ್ಷನಮಗೇನು ಮಾಡಿದೆ ಎನ್ನುವುದು ಮುಖ್ಯವಲ್ಲ, ಪಕ್ಷಕ್ಕಾಗಿ ನಾವೇನು ಮಾಡಿದ್ದೇವೆ ಎಂಬುದು ಮುಖ್ಯವಾಗಿದೆ. ಪ್ರತಿಯೊಬ್ಬ ಕಟ್ಟಾ ಕಡೆಯ ಕಾರ್ಯಕರ್ತರನ್ನು ಗುರುತಿಸಿ ಸೂಕ್ತ ಸ್ಥಾನ ಮನಗಳನ್ನು ಕಲ್ಪಿಸುವ ಏಕೈಕ ಪಕ್ಷ ನಮ್ಮದು, ಪ್ರತಿಯೊಬ್ಬರೂ ಯಾವುದೇ ಅಪೇಕ್ಷೆಯಿಲ್ಲದೆ ಪಕ್ಷಕ್ಕಾಗಿ ಶ್ರಮಿಸಬೇಕು, ಪಕ್ಷವನ್ನು ತಳಮಟ್ಟದಿಂದ ಇನ್ನಷ್ಟು ಗಟ್ಟಿಗೊಳಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೋಕಾ ಮಾಜಿ ಶಾಸಕ, ಕೆಎಂಎಫ್ ಮಾಜಿ ಅಧ್ಯಕ್ಷ ಗಾಲಿ ಸೋಮಶೇಖರ್ ರೆಡ್ಡಿ, ಮಾಜಿ ಶಾಸಕ ಟಿ.ಎಚ್. ಸುರೇಶ್ ಬಾಬು, ರಾಜ್ಯ ಬಿಜೆಪಿ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಬಳ್ಳಾರಿ ವಿಭಾಗ ಸಹ ಪ್ರಭಾರಿ ಚನ್ನಬಸವನಗೌಡ ಪಾಟೀಲ್, ಗಣಪಾಲ್ ಐನಾಥ್ ರೆಡ್ಡಿ, ಕೆ.ರಾಮಲಿಂಗಪ್ಪ, ಎಚ್.ಹನುಮಂತಪ್ಪ, ಕೆ.ಹನುಮಂತಪ್ಪ, ಗುಡಿಗಂಟೆ ಹನುಮಂತ, ಡಾ.ಅರುಣಾ ಕಾಮಿನೇನಿ, ಎರಂಗಳಿ ತಿಮ್ಮಾರೆಡ್ಡಿ, ಸುಗುಣ, ಸುನಿಲ್, ಅಡವಿ ಸ್ವಾಮಿ, ನಗರ ಮಂಡಲ ಅಧ್ಯಕ್ಷ ಜಿ.ವೆಂಕಟರಮಣ, ಕಂಪ್ಲಿ ಮಂಡಲ ಅಧ್ಯಕ್ಷ ಸಿಡಿ ಮಹಾದೇವ, ಕುರುಗೋಡು ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಸೇರಿದಂತೆ ಇತರರಿದ್ದರು.

ಅಂತರ್ ಜಿಲ್ಲಾ ಬೈಕ್ ಕಳ್ಳನ ಬಂಧನ



ವಿಜಯನಗರ: ಹೊಸಪೇಟೆ ಪಟ್ಟಣ ಠಾಣೆ ಪೊಲೀಸರು, ಓರ್ವ ಅಂತರ್ ಜಿಲ್ಲಾ ಬೈಕ್ ಕಳ್ಳನನ್ನು ಸೋಮವಾರ ಬಂಧಿಸಿ, 12 ಲಕ್ಷ 81 ಸಾವಿರ ರೂ ಮೌಲ್ಯದ 14 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕೊಪ್ಪಳ ಜಿಲ್ಲೆಯ ಮುನಿರಾಬಾದ್ ನಿವಾಸಿ ಮೆಹಬೂಬ್ (37) ಬಂಧಿತ ಆರೋಪಿ. ಹೊಸಪೇಟೆ-3, ಮುನಿರಾಬಾದ್-1, ಬಳ್ಳಾರಿ-2, ಗದಗ-1, ಸಂಡೂರು-1, ಗಂಗಾವತಿ-1, ಕಂಪ್ಲಿ-1 ಹಾಗೂ ಮಂಡ್ಯ ಜಿಲ್ಲೆಯಲ್ಲಿ 2 ಬೈಕ್ ಗಳನ್ನು ಆರೋಪಿ ಕಳ್ಳತನ ಮಾಡಿ ಪರಾರಿಯಾಗಿದ್ದನು. 2022ರಲ್ಲಿ ಹೊಸಪೇಟೆ ಪಟ್ಟಣ ಠಾಣೆ ಹಾಗೂ ಕೊಪ್ಪಳ ಪೊಲೀಸ್ ಠಾಣೆಯಲ್ಲಿ 2008ರಲ್ಲಿ ಬೈಕ್ ಕಳ್ಳತನ ಪ್ರಕರಣಗಳು ಆರೋಪಿಯ ಮೇಲೆ ದಾಖಲಾಗಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್ ತಿಳಿಸಿದರು.



ವಿಜಯನಗರ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಮಜಹಾವೀರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿ ಆಚರಿಸಲಾಯಿತು. ಎಸಿ ವಿವೇಕ್, ಎಎಸ್ಪಿ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗಣ್ಣ ರಂಗಣ್ಣನವರ ಇದ್ದರು.

ಬಿಸಿಲಿನ ತಾಪ: ಸಾರ್ವಜನಿಕರು ಜಾಗೃತಿ ವಹಿಸಲಿ

ಬಳ್ಳಾರಿ: ಪ್ರಸಕ್ತ ವರ್ಷ ಬಿಸಿಲಿನ ಬೇಗೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಭಾರತೀಯ ಹವಮಾನ ಇಲಾಖೆಯ ಮುನ್ಸೂಚನೆಯಂತೆ ಸಾರ್ವಜನಿಕರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಮನವಿ ಮಾಡಿದ್ದಾರೆ.



ಶಾಖಾಘಾತ ಹಾಗೂ ನಿರ್ಜಲೀಕರಣದಿಂದ ರಕ್ಷಿಸಿಕೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವಂತೆ ಅವರು ತಿಳಿಸಿದ್ದಾರೆ.

ಏನು ಮಾಡಬೇಕು?: ಮನೆಯಿಂದ ಹೊರಬರುವಾಗಸಡಿಲವಾದ, ತಿಳಿಬಣ್ಣದ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಗಾಳಿಯಾಡುವ ಪಾದರಕ್ಷೆಗಳನ್ನು ಬಳಸಬೇಕು. ಸದಾ ಕುಡಿಯುವ ನೀರನ್ನು ಜೊತೆಯಲ್ಲಿಟ್ಟುಕೊಳ್ಳಿ. ಬಾಯಾರಿಕೆಯಾಗದಿದ್ದರೂ ನಿಯಮಿತವಾಗಿ ನೀರು, ಮಜ್ಜಿಗೆ, ಎಳೆನೀರು ಅಥವಾ ಹಣ್ಣಿನ ರಸ ಸೇವಿಸಿ. ಓಆರ್‌ಎಸ್ ದ್ರಾವಣ ಬಳಸುವುದು ಉತ್ತಮ. ಶುದ್ಧ ಹಾಗೂ ಮಸಾಲೆ ರಹಿತ ಆಹಾರಕ್ಕೆ ಆದ್ಯತೆ ನೀಡಿ. ಬೆರವನನ್ನು ಒರೆಸಲು ಮೆತ್ತನೆಯ ಕರವಸ್ತ್ರ ಅಥವಾ ಟಿಶ್ಯೂ ಬಳಸಬಹುದು ಎಂದು ತಿಳಿಸಿದ್ದಾರೆ.

ಏನು ಮಾಡಬಾರದು?: ಅತಿಯಾದ ಕಾಫಿ, ಟೀ, ಕಾರ್ಬೋನೇಟೆಡ್ ಸಾಫ್ಟ್ ಡ್ರಿಂಕ್ಸ್ ಹಾಗೂ ಮದ್ಯಪಾನ ತ್ಯಜಿಸಬೇಕು. ಇವು ದೇಹದಲ್ಲಿನ ನೀರಿನಂಶವನ್ನು ಕಡಿಮೆ ಮಾಡುತ್ತವೆ. ರಸ್ತೆಬದಿಯ ತೆರೆದಿಟ್ಟ ಆಹಾರ, ಮಾಂಸಾಹಾರ ಹಾಗೂ ಅತಿಯಾದ ಮಸಾಲೆ ಪದಾರ್ಥಗಳನ್ನು ಸೇವಿಸಬಾರದು.

ಬಿಸಿಲಿನಿಂದ ಸುಸ್ತಾದಾಗ ತಕ್ಷಣವೇ ಅತಿ ತಣ್ಣಗಿನ ಐಸ್ ನೀರನ್ನು ಮೈಗೆ ಹಾಕಿಕೊಳ್ಳಬೇಡಿ.ಇದರಿಂದರಕ್ತನಾಳಗಳು ಸಂಕುಚಿತಗೊಂಡು ದೇಹದ ಒಳಗಿನ ಉಷ್ಣತೆ ಏರಿಕೆಯಾಗಿ ಅಂಗಾಂಗಗಳಿಗೆ ಹಾನಿಯಾಗುವ ಸಾಧ್ಯತೆಯಿರಲಿದೆ.

ಶಾಖಾಘಾತದ ಲಕ್ಷಣಗಳು ಮತ್ತು ಚಿಕಿತ್ಸೆ: ತೊದಲು ಮಾತು, ಅರೆಪ್ರಜ್ಞೆ, ಅತಿಯಾದ ದೇಹದ ಉಷ್ಣತೆ ಮತ್ತು ಉಸಿರಾಟದ ತೊಂದರೆ ಕಂಡುಬಂದರೆ ಅದು ಶಾಖಾಘಾತದ ಲಕ್ಷಣಗಳಾಗಿವೆ. ಇಂತಹ ಸಂದರ್ಭದಲ್ಲಿ ತಕ್ಷಣ ವ್ಯಕ್ತಿಯನ್ನು ನೆರಳಿನ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಕಾಲುಗಳನ್ನು ಸ್ವಲ್ಪ ಮೇಲಕ್ಕೆ ಎತ್ತಿ ಮಲಗಿಸಿ, ಬಟ್ಟೆಗಳನ್ನು ಸಡಿಲಗೊಳಿಸಬೇಕು. ಸಾಮಾನ್ಯ ನೀರಿನಿಂದ (ಐಸ್ ನೀರಲ್ಲ) ದೇಹವನ್ನು ಒರೆಸಿ ತಂಪು ಮಾಡಬೇಕು. ಸ್ಥಿತಿ ಗಂಭೀರವಾಗಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು ಎಂದವರು ಹೇಳಿದ್ದಾರೆ.

ವಾಂತಿ-ಬೇಧಿ ತಡೆಗಟ್ಟಲು ಕ್ರಮಗಳು: ಬೇಸಿಗೆಯಲ್ಲಿ ಕಲುಷಿತ ನೀರಿನಿಂದ ವಾಂತಿ-ಬೇಧಿ ಹರಡುವ ಸಾಧ್ಯತೆ ಹೆಚ್ಚಿರುವುದರಿಂದ ಸಾರ್ವಜನಿಕರು ಶುದ್ಧೀಕರಿಸಿದ ನೀರನ್ನೇ ಕುಡಿಯಬೇಕು. ಆಹಾರ ಸೇವಿಸುವ ಮುನ್ನ ಹಾಗೂ ಶೌಚದ ನಂತರ ಕೈಗಳನ್ನು ಸಾಬೂನಿನಿಂದ ಕನಿಷ್ಠ 45 ಸೆಕೆಂಡ್‌ಗಳ ಕಾಲ ತೊಳೆಯಬೇಕು. ಮನೆಯಲ್ಲಿ ತಯಾರಿಸಿದ ತಾಜಾ ಆಹಾರವನ್ನೇ ಸೇವಿಸಬೇಕು. ತುರ್ತು ಸಂದರ್ಭದಲ್ಲಿ ನೆರವಿಗಾಗಿ ಉಚಿತ ಆರೋಗ್ಯ ಸಹಾಯವಾಣಿ 108 ಕ್ಕೆ ಕರೆ ಮಾಡಬಹುದು ಎಂದು ತಿಳಿಸಿದ್ದಾರೆ.

ಮಹಾವೀರರ ಅಹಿಂಸಾ ಪಾಲನೆ ಅವಶ್ಯ: ಅಮರೇಶ್

ಕೊಟ್ಟೂರು: ಯುದ್ಧದ ಭೀತಿಯಲ್ಲಿರುವಂತಹ ಜಗತ್ತಿಗೆ ಮಹಾವೀರರು ಬೋಧಿಸಿದಂತಹ ಅಹಿಂಸಾ ತತ್ವ ಪಾಲನೆಯು ಇಂದು ಅತ್ಯವಶ್ಯವಾಗಿದೆ ಎಂದು ತಹಶೀಲ್ದಾರ್ ಅಮರೇಶ್ ಜಿ.ಕೆ. ಹೇಳಿದರು.



ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಇಂದು ಭಗವಾನ್ ಮಹಾವೀರರ ಜಯಂತಿ ಆಚರಿಸಲಾಯಿ ತು. ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ತಹಶೀಲ್ದಾರ ರು ಜಗತ್ತು ಇಂದು ಯುದ್ಧ ಭೀತಿಯಲ್ಲಿದೆ. ಪ್ರತಿ ಕ್ಷಣ ಸಾಕಷ್ಟು ಜೀವ ಹಾನಿಯಾಗುವುದರ ಜೊತೆಗೆಸಾಮಾನ್ಯರ ಬದುಕು ದುಸ್ತರಕ್ಕೆ ತಲುಪುತ್ತಿದೆ. ಪ್ರಸ್ತುತ ಸಮಯದಲ್ಲಿ ಭಗವಾನ್ ಮಹಾವೀರರ ಅಹಿಂಸೆ ಮತ್ತು ಶಾಂತಿಯ ಸಂದೇಶ ಪಾಲನೆ ಬಹುಮುಖ್ಯವಾಗಿದೆ. ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಬದುಕುವ, ಜೀವಿಸುವ ಹಕ್ಕಿದೆ. ಅಹಿಂಸೆ ಮಾರ್ಗದ ಮೂಲಕ ನೋವು ನೀಡಬಾರದು ಎನ್ನುವ ಮೂಲಕ ಮಾನವ ಹೇಗೆ ಜೀವಿಸಬೇಕೆನ್ನುವಮಾರ್ಗದರ್ಶನವನ್ನು ನೀಡಿದ ಮಹಾನ್ ಸಂತರಾಗಿದ್ದಾರೆ ಎಂದರು.

ವಿಶೇಷಉಪನ್ಯಾಸವನ್ನು ನೀಡಿದ ಕೊಟ್ರೇಶ್ ಶಿಕ್ಷಕರು ಮನುಷ್ಯನ ಜೀವನಕ್ಕೆ ವೈಭೋಗ, ಸಂಪತ್ತು ಬೇಕಿಲ್ಲ, ಅದೂ ಇಲ್ಲದಿದ್ದರೂ ಸಂತೋಷವಾಗಿ ಬದುಕಬಹುದು ಎಂದು ಸಂದೇಶ ನೀಡಿದ ಭಗವಾನ್ ಮಹಾವೀರರರು ಜೈನ ಧರ್ಮದ 24ನೇ ತೀರ್ಥಂಕರರಾಗಿ ಜನಿಸಿದರು ಎಂದರು. ಭೂದಾಖಲೆಗಳ ಸಹಾಯಕ ನಿರ್ದೇಶಕ ಸುರೇಶ ಚಿಮ್ಮನಹಳ್ಳಿ, ತಾಲೂಕುದಿಗಂಬರಜೈನ ಸಂಘದ ಅಧ್ಯಕ್ಷ ಬ್ರಹ್ಮೇಶ್ ಕುಮಾರ್, ತಾಲೂಕು ನೌಕರರ ಸಂಘದ ಅಧ್ಯಕ್ಷ ಯೋಗೇಶ್ವರ ದಿನ್ನೆ, ಜೈನ ಸಮಾಜದ ಮುಖಂಡರಾದ ಕೊಟ್ರಪ್ಪ ಜೈನ, ಕಿರಣ್ ಕುಮಾರ್ ಜೈನ, ಪ್ರದೀಪ್ ಕುಮಾರ್ ಜೈನ ಮುಂತಾದವರು. ಕಂದಾಯ ನಿರೀಕ್ಷಕ ಶಿವಕುಮಾರ ಡಿ., ಭೂಮಾಪಕ ಭರಮಪ್ಪ, ಗ್ರಾಮ ಲೆಕ್ಕಿಗ ಹರೀಶ್ ಇತರರಿದ್ದರು. ಸಿ.ಮ. ಗುರು ಬಸವರಾಜ ಸ್ವಾಗತಿಸಿ, ನಿರೂಪಿಸಿದರು.

ಭಗೀರಥ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

ಹಗರಿಬೊಮ್ಮನಹಳ್ಳಿ: ಉಪ್ಪಾರಸಮಾಜದಕುಲ ಗುರು ರಾಜರ್ಷಿ ಶ್ರೀಭಗೀರಥ ಜಯಂತಿಯನ್ನು ಸರ್ಕಾರದ ವತಿಯಿಂದ ಏ.23ರಂದು ಆಚರಣೆ ಮಾಡುತ್ತಿದ್ದು, ತಾಲೂಕು ಉಪ್ಪಾರ ಭಗೀರಥ ಸಂಘ ಮತ್ತು ಸಮಾಜದಿಂದ ಅದ್ದೂರಿ ಜಯಂತಿ ಆಚರಣೆಗೆ ತೀರ್ಮಾನಿಸಲಾಗಿದೆ ಎಂದು ತಾಲೂಕು ಅಧ್ಯಕ್ಷ ಕನಕಪ್ಪ ತಿಳಿಸಿದರು.

ಪಟ್ಟಣದ ಭಗೀರಥ ಭವನದಲ್ಲಿ ನಡೆದ ಪೂರ್ವ ಭಾವಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿ, ಅನೇಕ ವರ್ಷಗಳಿಂದ ಕಾರಣಾಂತರಗಳಿಂದ ಭಗೀರಥ ಜಯಂತಿ ಅದ್ದೂರಿಯಾಗಿ ನಡೆದಿಲ್ಲ, ಈ ವರ್ಷ ನೂತನತಾಲೂಕು ಉಪ್ಪಾರ ಯುವಘಟಕ ಸೇರಿದಂತೆ ಸಮಾಜದ ಸಂಘಟನೆ ಉತ್ತಮವಾಗಿ ಮಾಡಲಾಗಿದ್ದು



ಭಗೀರಥ ಜಯಂತಿಯನ್ನು ಎಲ್ಲಾರೂ ಒಂದುಗೂಡಿ ಅದ್ದೂರಿಯಾಗಿ ಆಚರಿಸಲಾಗುವುದು ಎಂದರು.

ತಾಲೂಕು ಭಗೀರಥ ಉಪ್ಪಾರ ಸಮಾಜದ ಯುವ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಉಪ್ಪಾರ ಸಮಾಜದ ಯುವ ಘಟಕದ ನೂತನ ಅಧ್ಯಕ್ಷರಾಗಿ- ಬಂಡಿಹಳ್ಳಿ ಬಸವರಾಜ್, ಉಪಾಧ್ಯಕ್ಷರಾಗಿ ಮಾರುತಿ ಯು.ಬಿ. ಮತ್ತು ಪ್ರಭಾಕರ್, ಪ್ರಧಾನ ಕಾರ್ಯದರ್ಶಿಯಾಗಿ ಕಾರ್ತಿಕ್ ಹಂಪಾಪಟ್ಟಣ್ಣ, ಕಾರ್ಯಕಾರಿ ಸದಸ್ಯರಾಗಿ ಅಯ್ಯಪ್ಪಸ್ವಾಮಿ, ಗಣೇಶ್ ಮಾಲವಿ, ಪ್ರವೀಣ್, ಅಂಕಸಮುದ್ರ ಬಸವರಾಜ, ಹನುಮಂತ ಹೊಸಪೇಟೆ, ಯು.ಮಂಜುನಾಥ್, ಬಣಕಾರ್ ಆನಂದ್, ಪ್ರಸನ್ನ, ಜಂಬೂನಾಥ, ಸಂತೋಷ್ ಆಯ್ಕೆ ಮಾಡಲಾಯಿತು.

ಹಿರಿಯರಾದ ಬಂಡಿಹಳ್ಳಿ ರಾಜಣ್ಣ, ಗುಂಡ್ರು ಹನುಮಂತಪ್ಪ ಮಾತನಾಡಿ ಸಲಹೆ ನೀಡಿದರು. ವೆಂಕಟೇಶ್ ಹಬೋಹಳ್ಳಿ, ವೆಂಕಟೇಶ್ ಅಂಕ ಸಮುದ್ರ, ರಾಮಣ್ಣ ಬಂಡಿಹಳ್ಳಿ, ಉಪ್ಪಾರಗಟ್ಟಿ ದುರುಗಪ್ಪ, ಸಾಹುಕಾರ್ ಕೊಟ್ರೇಶ್, ಶಂಕ್ರಪ್ಪ, ಪರಶುರಾಮ್ ಬಿಜಿಹಳ್ಳಿ, ರವಿಕುಮಾರ್, ಹಾಲೇಶ, ಬಸಪ್ಪ ಬೆಣ್ಣೆಕಲ್ಲು ಮತ್ತಿತರರಿದ್ದರು.

ಶ್ರೀರಾಮನ ಭಾವಚಿತ್ರ ಮೆರವಣಿಗೆ



ಹಗರಿಬೊಮ್ಮನಹಳ್ಳಿ: ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ದೇಶದ ಸಂಸ್ಕೃತಿ, ಸಂಸ್ಕಾರದ ಪ್ರತೀಕವಾಗಿದ್ದಾರೆ. ಅವರ ಆದರ್ಶ ಗುಣಗಳನ್ನು ಅಳವಡಿಸಿಕೊಳ್ಳಿ ಎಂದು ಗದ್ದಿಕೇರಿ ಚರಂತೇಶ್ವರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಶ್ರೀರಾಮ ನವಮಿ ಅಂಗವಾಗಿ ಆಯೋಜಿಸಿದ್ದ ಶ್ರೀರಾಮ ಚಂದ್ರನ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು. ಶ್ರೀರಾಮನ ತಂದೆ ತಾಯಿಗಳ ಮೇಲಿನ ಭಕ್ತಿ, ಸೋದರರ ವಾತ್ಸಲ್ಯ, ಸೀತಾಮಾತೆ ಮೇಲಿದ್ದ ಪ್ರೀತಿ ಮಕ್ಕಳ ಮೇಲಿನ ಮಮಕಾರ, ಪ್ರಜೆಗಳ ಬಗ್ಗೆ ತೋರುತ್ತಿದ್ದ ಕಾಳಜಿ ಹನುಮಂತನ ಭಕ್ತಿಗೆ ಒಲಿದ ಪರಿ ರಾವಣನ ಸಂಹಾರ ಹಿರಿಯರ ಬಗ್ಗೆ ಗೌರವ ಕಿರಿಯರಲ್ಲಿ ತೋರುತಿದ್ದ ವಾತ್ಸಲ್ಯ ಪ್ರೀತಿ ಕುಟುಂಬದ ಮಹತ್ವ ಕರ್ತವ್ಯ ಪಾಲನೆ ನಿಷ್ಠೆ ಪ್ರಾಮಾಣಿಕತೆ ಶ್ರೀರಾಮನಲ್ಲಿದ್ದ ಆದರ್ಶ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನ ಅರ್ಥಪೂರ್ಣ ಎನಿಸುತ್ತದೆ ಎಂದರು.

ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತ ಆಡಿದರೆ ಆಯ್ತು ಮುತ್ತು ಒಡೆದರೆ ಹೋಯ್ತು ಎನ್ನುವಂತೆ ಶ್ರೀರಾಮಚಂದ್ರನು ಕೊಟ್ಟ ಮಾತಿಗೆ ತಪ್ಪು ನೆಡೆಯದೆ ಕೊಟ್ಟ ಮಾತು ಉಳಿಸಿಕೊಳ್ಳಲು ರಾಜ್ಯವನ್ನು ಬಿಟ್ಟು ವನವಾಸಕ್ಕೆ ಹೋದ ತ್ಯಾಗ ವಾತ್ಸಲ್ಯ ನಿಷ್ಠೆಗೆ ಹೆಸರಾದ ಶ್ರೀರಾಮನ ಆದರ್ಶ ಗುಣಗಳು ಅಮೂಲ್ಯವಾದವು ಎಂದರು.

ಮುಖಂಡರಾದ ಬಣಕಾರ ಕೊಟ್ರೇಶಪ್ಪ, ಸೊಬಟಿ ಹರೀಶ್, ಬಸವರಾಜಪ್ಪ ಗೌರಜ್ಜರ್, ತೋಟದಾರ್ಯ ಸ್ವಾಮೀಜಿ ಬಸವನಗೌಡ್ರು ತಂಬ್ರಹಳ್ಳಿ ಗ್ರಾಮದ ಹಿರಿಯ ನಾಗರಿಕರು ಯುವಕರು ಪಾಲ್ಗೊಂಡಿದ್ದರು.

ಡಿವೈಎಸ್ಪಿ ಭೇಟಿ: ಜಾತ್ರೆಗೆ ಆಹ್ವಾನ

ಬಳ್ಳಾರಿ: ಜಿಲ್ಲೆಯ ಕಕ್ಕಬೇವಿನಹಳ್ಳಿ ಗ್ರಾಮದಲ್ಲಿ ಮಾ.31 ಹಾಗೂ ಏ.1ರಂದು ನಡೆಯಲಿರುವ ಸಾಂಪ್ರದಾಯಿಕ ಊರಿನ ಜಾತ್ರೆಯನ್ನು ಅದ್ದೂರಿಯಾಗಿ ನಡೆಸಲು ಗ್ರಾಮಸ್ಥರು ಸಜ್ಜಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮದ ಕುರುಬ ಸಮುದಾಯದ ಮುಖಂಡರು ಹಾಗೂ ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಮಹಾಪ್ರಧಾನ ಕಾರ್ಯದರ್ಶಿ ಕೆ.ಅಲ್ಲಿಪುರ ಮೋಹನ್ ಅವರು, ಬಳ್ಳಾರಿ ಗ್ರಾಮಾಂತರ ಡಿವೈಎಸ್ಪಿ ಅವರನ್ನು ಭೇಟಿ ಮಾಡಿ ಜಾತ್ರೆಗೆ ಆಗಮಿಸಬೇಕು ಎಂದು ಮನವಿ ಮಾಡಿದರು.

ಬಳ್ಳಾರಿ ಜಿಲ್ಲಾ ಕುರುಬರಸಂಘದಮಹಾ ಪ್ರಧಾನ ಕಾರ್ಯದರ್ಶಿ ಕೆ.ಅಲ್ಲಿಪುರ ಮೋಹನ್ ಅವರು, ಅದ್ದೂರಿಯಾಗಿ ನಡೆಯಲಿರುವ ಜಾತ್ರೆಯ ಮಹತ್ವ ಇತಿಹಾಸದ ಕುರಿತು ವಿವರಿಸಿದರು.

ಜಾತ್ರೆ ವೇಳೆ ಸಾವಿರಾರು ಜನರು, ಭಕ್ತರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಇಲಾಖೆಯ ಸಹಕಾರ ಅತ್ಯಗತ್ಯ ಎಂದರು. ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಅಗತ್ಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಗ್ರಾಮದ ಅನೇಕ ಜನ ಗಣ್ಯರು, ಪ್ರಮುಖರು ಉಪಸ್ಥಿತರಿದ್ದರು.



ತತ್ವಪದ, ರಂಗಗೀತೆ ಜಾನಪದ ಸಂಗೀತ ಸಂಭ್ರಮ

ಬಳ್ಳಾರಿ: ನಗರದ ಬಂಡಿಹಟ್ಟಿಯ ರಾಮನಗರದ ಗಿರಿಜಪ್ಪ ಅವಧೂತರ ಮಠದಲ್ಲಿ ಶ್ರೀಮಾರುತಿ ತೊಗಲು ಗೊಂಬೆ ಕಲಾ ಟ್ರಸ್ಟ್ ಆಶ್ರಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಯಮಿ ಕೊರಲಗುಂದಿ ಬಸವನಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಜನಪದ ತತ್ವಪದಗಳು ಈಗಿನ ಆಧುನಿಕ ಕಾಲದಲ್ಲಿ ಜನ ಮನ್ನಣೆ ಗಳಿಸಿವೆ. ಕಾರಣ ಅವುಗಳಲ್ಲಿರುವ ಸಾಹಿತ್ಯಗಟ್ಟಿತನಮನುಷ್ಯನ ಬದುಕಿನ ಸಾರವನ್ನು ಮೋಕ್ಷದ ಮಾರ್ಗಗಳನ್ನು ದುಡಿಮೆ ಧಾನಧರ್ಮ ಗುರು ಶಿಷ್ಯ ಪರಂಪರೆಯನ್ನು ಬೋಧಿಸುವ ಮಾರ್ಗಗಳನ್ನು ಇವುಗಳಲ್ಲಿ ಕಾಣುತ್ತೇವೆ. ಹೀಗಾಗಿ ಎಂದಿಗೂ ಜನಪದ ತತ್ವಪದ ಜಗತ್ತು ಇರುವರೆಗೂ ಶಾಶ್ವತವಾಗಿ ಸರ್ವಕಾಲಕ್ಕೂ ಬದುಕಿನ ಸತ್ಯವನ್ನು ಹೇಳುತ್ತವೆ ಎಂದು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಎಲ್ಲನಗೌಡ ಶಂಕರ ಬಂಡೆ ಮಾತನಾಡಿ, ಶರೀಫರ ತತ್ವಪದಗಳು ಮತ್ತು ಅವರ ಗುರು ಶಿಷ್ಯ ಪರಂಪರೆ ಮೋಕ್ಷ ಮಾರ್ಗದ ಸಾರವನ್ನು ಅಂದಿನ ಕಾಲದಲ್ಲಿ ಜಾತಿ ಧರ್ಮಗಳನ್ನು ಮೀರಿ ಭಾವೈಕ್ಯತೆಯ ಭಾಗವಾಗಿ ಬೆಳೆದದ್ದು ನಮ್ಮ ಮಣ್ಣಿನ ಜನಪದ ಮತ್ತು ತತ್ವಪದಗಳಲ್ಲಿ ಅಮೋಘವಾದ ಶಕ್ತಿ ಇದೆ ಎಂದು ಹೇಳಿದರು.

ಕರ್ಚೆಡು ತಿಪ್ಪೇಸ್ವಾಮಿ, ವೈ. ಮಾರುತಿ ಸಿರುಗುಪ್ಪ, ಸಪ್ತಸ್ವರ ಸಾಂಸ್ಕೃತಿಕ ಬಯಲಾಟ ಕಲೆ ಟ್ರಸ್ಟ್‌ನ ಉಪಾಧ್ಯಕ್ಷ ಜಯಲಕ್ಷ್ಮಿ ಸುಬ್ರಮಣ್ಯಂ, ಸಿರುಗುಪ್ಪ ಬೈಲಾಟ ಹಿರಿಯ ಕಲಾವಿದ ಹನುಮವಧೂತ, ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ನ ಅಧ್ಯಕ್ಷ ಸುಬ್ಬಣ್ಣ ಉಪಸ್ಥಿತರಿದ್ದರು.

ನಂತರ ಜಡೇಶ್ ಎಮ್ಮಿಗನೂರು ಅವರಿಂದ ಜನಪದ ಸಂಗೀತ ಕೆ.ರಮೇಶ್ ತಂಡದವರಿಂದ ತತ್ವಪದ ಗಾಯನ ಹಾಗೂ ಹನುಮವಧೂತ ತಂಡದವರಿಂದ ರಂಗಗೀತೆ ಕಾರ್ಯಕ್ರಮ ಪ್ರೇಕ್ಷಕರ ಗಮನಸೆಳೆಯಿತು.